"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

09ನೇ ಫೆಬ್ರವರಿ 2017
ಗುರುವಾರ

## ವಿಷಯಾನುಕ್ರಮಣಿಕೆ

**1. ನೂತನ ಸದಸ್ಯರ ಪ್ರಮಾಣ ವಚನ**

**2. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು.**

**229 -ಕೆಂಪೇಗೌಡ ಬಡಾವಣೆಯ ನಿರ್ಮಾಣ ಹಂತದ ಬಗ್ಗೆ.**
– ಶ್ರೀ ವಿ.ಸೋಮಣ್ಣ
– ಶ್ರೀ ಕೆ.ಜೆ.ಜಾರ್ಜ್ (ಬೆಂಗಳೂರು ಅಭಿವೃದ್ಧಿ ಹಾಗೂ ನಗರ ಯೋಜನಾ ಸಚಿವರು)

**241 – ನೀರು ಸರಬರಾಜು ಮಂಡಳಿಗೆ ಬರಬೇಕಾಗಿರುವ ಬಾಕಿ ಬಗ್ಗೆ**
– ಶ್ರೀ ಕೆ.ಸಿ.ಕೊಂಡಯ್ಯ
– ಶ್ರೀ ಆರ್.ರೋಷನ್ ಬೇಗ್ (ನಗರಾಭಿವೃದ್ಧಿ ಮತ್ತು ಹಜ್ ಸಚಿವರು)

**246 – ರಾಜ್ಯದ ಇತರೆ ನಗರಗಳಲ್ಲಿ ಮಾದಕ ವಸ್ತುಗಳ ಹಾವಳಿ ಹೆಚ್ಚಾಗುತ್ತಿರುವ ಬಗ್ಗೆ.**
– ಕ್ಯಾಪ್ಟನ್ ಗಣೇಶ್ ಕಾರ್ಣಿಕ್
– ಡಾ॥ ಜಿ.ಪರಮೇಶ್ವರ್ (ಗೃಹ ಸಚಿವರು)

**286 – ವಿದ್ಯುತ್ ಚಾಲಿತ ಮಗ್ಗಗಳನ್ನು ಸ್ಥಗಿತಗೊಳಿಸುತ್ತಿರುವ ಬಗ್ಗೆ.**
– ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ (ಅಣ್ಣಯ್ಯ)
– ಶ್ರೀ ಕೆ.ಜೆ.ಜಾರ್ಜ್ (ಬೆಂಗಳೂರು ಅಭಿವೃದ್ಧಿ ಹಾಗೂ ನಗರ ಯೋಜನಾ ಸಚಿವರು)

**316 – ಆರ್ಯವೈಶ್ಯ ಮಹಾಸಭೆ ಚುನಾವಣೆ ಬಗ್ಗೆ**
– ಶ್ರೀ ಟಿ.ಎ.ಶರವಣ
– ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು)

**319 – ಅನುಕಂಪ ಆಧಾರದ ಮೇಲೆ ನೇಮಕಾತಿ ಬಗ್ಗೆ**
– ಶ್ರೀ ಬಸವರಾಜ ಎಸ್.ಹೊರಟ್ಟಿ
– ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**260 – ಗೃಹ ರಕ್ಷಕ ದಳ ಸಿಬ್ಬಂದಿ ಭತ್ಯೆ ಹಾಗೂ ಸೌಕರ್ಯಗಳ ಬಗ್ಗೆ.**
- ಶ್ರೀ ಎಂ.ಎ.ಗೋಪಾಲಸ್ವಾಮಿ
- ಡಾ॥ ಜಿ.ಪರಮೇಶ್ವರ್ (ಗೃಹ ಸಚಿವರು)

**227 – 2013 ರಿಂದ ವಿಜಯಪುರ ಮಹಾನಗರ ಪಾಲಿಕೆ ಅನುದಾನದ ಬಗ್ಗೆ**
- ಶ್ರೀ ಬಸನಗೌಡ ಆರ್.ಪಾಟೀಲ್ (ಯತ್ನಾಳ್)
- ಶ್ರೀ ಆರ್.ರೋಷನ್ ಬೇಗ್ (ನಗರಾಭಿವೃದ್ಧಿ ಮತ್ತು ಹಜ್ ಸಚಿವರು)

**276 – ಸೊಳ್ಳೆಗಳ ನಿಯಂತ್ರಣ ನೆಪದಲ್ಲಿ ಹಣ ದುರ್ಬಳಕೆ ಬಗ್ಗೆ**
- ಡಾ: ಜಯಮಾಲ ರಾಮಚಂದ್ರ
- ಶ್ರೀ ಕೆ.ಜೆ.ಜಾರ್ಜ್ (ಬೆಂಗಳೂರು ಅಭಿವೃದ್ಧಿ ಹಾಗೂ ನಗರ ಯೋಜನಾ ಸಚಿವರು)

**271 – ರಾಯಚೂರು ಜಿಲ್ಲೆಯಲ್ಲಿರುವ ಸಹಕಾರ ಸಂಘಗಳು ರೈತರಿಗೆ ನೀಡಿರುವ ಸಾಲದ ಬಗ್ಗೆ.**
- ಶ್ರೀ ಎನ್.ಎಸ್.ಬೋಸ್‌ರಾಜು
- ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು)

**234 – ಮೈಸೂರು ನಗರದಲ್ಲಿ ಅಪರಾಧಗಳ ಸಂಖ್ಯೆಯಲ್ಲಿ ಹೆಚ್ಚಳ**
- ಶ್ರೀ ಎಸ್.ನಾಗರಾಜ್ (ಸಂದೇಶ್ ನಾಗರಾಜ್)
- ಡಾ॥ ಜಿ.ಪರಮೇಶ್ವರ್ (ಗೃಹ ಸಚಿವರು)

**247 – ಎಸ್‌ಎಲ್-2 ವೈನ್ ಶಾಪ್ ತೆರೆಯಲು ಪರವಾನಗಿ ನೀಡುವ ಬಗ್ಗೆ.**
- ಶ್ರೀ ಡಿ.ಎಸ್.ವೀರಯ್ಯ
- ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು)

**ಆ) ಚುಕ್ಕೆ ರಹಿತ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.**

**3. ಸಭಾಪತಿಯವರ ಅನುಮತಿ ಮೇರೆಗೆ ಚರ್ಚಿಸಲ್ಪಟ್ಟ ವಿಷಯಗಳು.**

**ಅ) ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳಿಗೆ ವಿಶೇಷ ಪ್ಯಾಕೇಜ್ ಮೇಲೆ ನಿರಂತರ ವಿದ್ಯುತ್ ಪೂರೈಕೆ ಬಗ್ಗೆ.**
- ಶ್ರೀ ಬಸನಗೌಡ ಆರ್.ಪಾಟೀಲ್ (ಯತ್ನಾಳ್)
- ಡಾ: ಜಿ.ಪರಮೇಶ್ವರ್ (ಸಭಾನಾಯಕರು)

**ಆ) ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲ್ಲೂಕಿನ ಹೊದಗೆರೆ ಗ್ರಾಮದಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ತಂದೆ ರಾಜಾಶ್ರೀ ಷಹಜೀ ಅಕಸ್ಮಿಕವಾಗಿ ಮೃತರಾದ ಹಿನ್ನಲೆಯಲ್ಲಿ**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಅವರ ಸ್ಮರಣಾರ್ಥ ಆ ಸ್ಥಳವನ್ನು ಪ್ರವಾಸಿ ಸ್ಥಳವನ್ನಾಗಿ ಅಭಿವೃದ್ಧಿ ಪಡಿಸುವ ಬಗ್ಗೆ.**
- ಶ್ರೀ ಘೋಟ್ನೆಕರ್ ಶ್ರೀಕಾಂತ ಲಕ್ಷ್ಮಣ
- ಡಾ: ಜಿ.ಪರಮೇಶ್ವರ್ (ಸಭಾನಾಯಕರು)

**ಇ) ಅತಿಥಿ ಉಪನ್ಯಾಸಕರು ಫ್ರೀಡಂ ಪಾರ್ಕ್‌ನಲ್ಲಿ ಧರಣಿ–ನಿರಶನ ಮಾಡುತ್ತಿರುವ ಬಗ್ಗೆ**
- ಶ್ರೀ ಕೆ.ಟಿ.ಶ್ರೀಕಂಠೇಗೌಡ
- ಶ್ರೀ ಎಸ್.ವ್ಹಿ.ಸಂಕನೂರ
- ಡಾ: ಜಿ.ಪರಮೇಶ್ವರ್ (ಸಭಾನಾಯಕರು)

**ಈ) ಮಂಗಳೂರು–ಕೇರಳಕ್ಕೆ ಸಂಪರ್ಕ ಕಲ್ಪಿಸುವ ಎನ್.ಹೆಚ್. ರಸ್ತೆ–66 ಕೇರಳದ ಗಡಿಯಾದ ಕಲಂಪ್ಪಾಡಿಯಲ್ಲಿ ಹೆದ್ದಾರಿ ಶುಲ್ಕ ವಿಧಿಸುತ್ತಿರುವ ಬಗ್ಗೆ.**
- ಶ್ರೀ ಎಂ.ಪಿ.ಸುನಿಲ್ ಸುಬ್ರಮಣಿ
- ಡಾ: ಜಿ.ಪರಮೇಶ್ವರ್ (ಸಭಾನಾಯಕರು)

**ಉ) ಗದಗ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ಬಟ್ಟೂರು ಗ್ರಾಮದ ಶಿವಪ್ಪ ದುಂಡಪ್ಪ ಭದ್ರಪೂರ ದಿನಾಂಕ: 04.02.2017 ರಂದು ಲಕ್ಷ್ಮೇಶ್ವರ ಪೊಲೀಸರ ವರ್ತನೆಯಿಂದ ಅಸ್ವಸ್ಥಗೊಂಡು ಮೃತನಾಗಿರುವ ಬಗ್ಗೆ.**
- ಶ್ರೀ ಪ್ರದೀಪ ಶೆಟ್ಟರ್
- ಡಾ: ಜಿ.ಪರಮೇಶ್ವರ್ (ಸಭಾನಾಯಕರು)

**4. ವರದಿಯನ್ನೊಪ್ಪಿಸುವುದು**
- ಶ್ರೀ ಕೆ.ಅಬ್ದುಲ್ ಜಬ್ಬಾರ್

**5. ಗಮನ ಸೆಳೆಯುವ ಸೂಚನೆ**

**ಅ) ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಎನ್‌ಆರ್‌ಬಿಸಿ ಡಿಸ್ಟ್ರಿಬ್ಯೂಟರಿಗಳಿಂದ ಅಸಮರ್ಪಕ ನೀರು ಸರಬರಾಜಿನ ತೊಂದರೆ ನಿವಾರಿಸಲು ಬ್ಯಾಲೆನ್ಸಿಂಗ್ ರಿಸರ್‌ವಾಯರ್ ನಿರ್ಮಿಸಲು ಹಾಗೂ ಕಾಲುವೆಗಳ ಆಧುನೀಕರಣದ ಬಗ್ಗೆ.**
- ಶ್ರೀ ಬಸವರಾಜ ಪಾಟೀಲ್ ಇಟಗಿ
- ಶ್ರೀ ಎಂ.ಬಿ.ಪಾಟೀಲ್ (ಜಲ ಸಂಪನ್ಮೂಲ ಸಚಿವರು)

**ಆ) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯಲ್ಲಿ ದಿನಾಂಕ 04.05.2016 ರಂದು 412 ಕೋಟಿ ರೂಪಾಯಿಗಳ ಐಸಿಟಿ ಹಂತ–3 ನ್ನು ರದ್ದು ಮಾಡಿರುವ ಕಾಮಗಾರಿ ಯೋಜನೆಯನ್ನು ಪ್ರಾರಂಭಿಸುವ ಬಗ್ಗೆ.**
- ಶ್ರೀ ಬಸವರಾಜ್ ಎಸ್. ಹೊರಟ್ಟಿ
- ಶ್ರೀ ತನ್ವೀರ್ ಸೇಠ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು)
- ಶ್ರೀ ಚೌಡರೆಡ್ಡಿ ತೂಪಲ್ಲಿ
- ಕ್ಯಾಪ್ಟನ್ ಗಣೇಶ್ ಕಾರ್ಣಿಕ್

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

– ಶ್ರೀ ರಾಮಚಂದ್ರಗೌಡ
– ಶ್ರೀ ಶರಣಪ್ಪ ಮಟ್ಟೂರ
– ಶ್ರೀ ಅರುಣ ಶಹಾಪುರ
– ಶ್ರೀ ಕೆ.ಟಿ. ಶ್ರೀಕಂಠೇಗೌಡ
– ಶ್ರೀ ರಮೇಶ್ ಬಾಬು
– ಶ್ರೀ ಎಸ್.ವ್ಹಿ, ಸಂಕನೂರ

**6. ನಿಯಮ 330ರ ಮೇರೆಗೆ ಸಾರ್ವಜನಿಕ ಮಹತ್ವವುಳ್ಳ ವಿಷಯದ ಮೇಲೆ ಚರ್ಚೆ**

– ಕ್ಯಾಪ್ಟನ್ ಗಣೇಶ್ ಕಾರ್ಣಿಕ್
– ಶ್ರೀ ಕೆ.ಬಿ.ಶಾಣಪ್ಪ
– ಶ್ರೀ ಬಸವರಾಜ ಎಸ್. ಹೊರಟ್ಟಿ
– ಶ್ರೀ ಆರ್. ಪ್ರಸನ್ನಕುಮಾರ್
– ಶ್ರೀ ಬಸನಗೌಡ ಆರ್.ಪಾಟೀಲ್ (ಯತ್ನಾಳ್)
– ಶ್ರೀ ಕೋಟ ಶ್ರೀನಿವಾಸ ಪೂಜಾರಿ
– ಶ್ರೀ ಶರಣಪ್ಪ ಮಟ್ಟೂರ
– ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ
– ಶ್ರೀ ಬಿ.ಜೆ.ಪುಟ್ಟಸ್ವಾಮಿ
– ಶ್ರೀ ರಾಮಪ್ಪ ತಿಮ್ಮಾಪೂರ
– ಶ್ರೀ ಸೋಮಣ್ಣ ಮ. ಬೇವಿನಮರದ
– ಶ್ರೀ ಐವನ್ ಡಿ'ಸೋಜಾ (ಸರ್ಕಾರಿ ಮುಖ್ಯ ಸಚೇತಕರು)
– ಶ್ರೀ ಹೆಚ್. ಆಂಜನೇಯ (ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

**7. ಘನತೆವೆತ್ತ ರಾಜ್ಯಪಾಲರು ವಿಧಾನ ಮಂಡಲದ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾಡಿದ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಮುಂದುವರೆದ ಚರ್ಚೆ.**

– ಶ್ರೀ ರಾಮಚಂದ್ರಗೌಡ
– ಶ್ರೀ ಬಸವರಾಜ ಎಸ್. ಹೊರಟ್ಟಿ

– – –

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

73/09-02-2017/11-10/bkp-md

# <u>ಕರ್ನಾಟಕ ವಿಧಾನ ಪರಿಷತ್ತು</u>

ಗುರುವಾರ, 9ನೇ ಫೆಬ್ರವರಿ 2017 ರಂದು
ಸದನವು ವಿಧಾನ ಪರಿಷತ್ತಿನ ಸಭಾಂಗಣದಲ್ಲಿ
ಬೆಳಿಗ್ಗೆ 11 ಗಂಟೆ 19 ನಿಮಿಷಕ್ಕೆ
ಸಮಾವೇಶಗೊಂಡಿತು

ಸಭಾಪತಿಯವರಾದ
(ಶ್ರೀ ಡಿ.ಹೆಚ್.ಶಂಕರಮೂರ್ತಿ) ಅವರು
ಪೀಠದಲ್ಲಿ ಉಪಸ್ಥಿತರಿದ್ದರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಕರ್ನಾಟಕ ವಿಧಾನ ಪರಿಷತ್ತಿಗೆ ಮೊನ್ನೆ ಒಂದು ಉಪ ಚುನಾವಣೆ ನಡೆಯಿತು. ಆ ಉಪ ಚುನಾವಣೆಯಲ್ಲಿ ಈ ಸದನದ ಸದಸ್ಯರಾಗಿ ಯಾರು ಗೆದ್ದು, ಆಯ್ಕೆಯಾಗಿದ್ದಾರೆ, ಅವರಿಗೆ ಪ್ರಮಾಣವಚನವನ್ನು ಭೋಧಿಸುವ ಕಾರ್ಯಕ್ರಮದೊಂದಿಗೆ ಇವತ್ತಿನ ಕಾರ್ಯಕಲಾಪ ಪ್ರಾರಂಭ ಮಾಡುತ್ತಿದ್ದೇವೆ.

## 01.ನೂತನ ಸದಸ್ಯರ ಪ್ರಮಾಣ ವಚನ

**(ಈ ಹಂತದಲ್ಲಿ ವಿಧಾನ ಪರಿಷತ್ತಿನ ನೂತನ ಸದಸ್ಯರಾಗಿ ಆಯ್ಕೆಯಾದಂತಹ ಶ್ರೀಯುತ ರಮೇಶ್ ಬಾಬು ರವರು ಪ್ರಮಾಣ ವಚನವನ್ನು ಸ್ವೀಕರಿಸಿದರು)**

(74) 09–02–2017 ಎಸ್‌ಪಿಆರ್/ಎಕೆ 11.20

**ಶ್ರೀ ರಮೇಶ್ ಬಾಬು:–** "ರಮೇಶ್ ಬಾಬು ಎಂಬ ಹೆಸರಿನವನಾದ ನಾನು ವಿಧಾನ ಪರಿಷತ್ತಿನ ಸದಸ್ಯನಾಗಿ ನಿರ್ವಾಚನಾ ಹೊಂದಿದವನಾಗಿ ವಿಧಿದ್ವಾರಾ ಸ್ಥಾಪಿತವಾದ ಭಾರತದ ಸಂವಿಧಾನದ ವಿಷಯದಲ್ಲಿ ಶ್ರದ್ದೆಯಿಂದಲೂ, ನಿಷ್ಠೆಯಿಂದಲೂ ಕೂಡಿರುತ್ತೇನೆಂದೂ, ನಾನು ಭಾರತದ ಪರಮಾಧಿಕಾರವನ್ನು ಮತ್ತು ಸಮಗ್ರತೆಯನ್ನು ಸಮರ್ಥಿಸುತ್ತೇನೆಂದೂ, ನಾನು ಈಗ ಕೈಗೊಳ್ಳಲಿರುವ ಕರ್ತವ್ಯವನ್ನು ಶ್ರದ್ಧಾಪೂರ್ವಕವಾಗಿ ನಿರ್ವಹಿಸುತ್ತೇನೆಂದೂ ಭಗವಂತನ ಹೆಸರಿನ ಮೇಲೆ ಮತ್ತು ಭಾರತದ ಮಾಜಿ ಪ್ರಧಾನಿ ಶ್ರೀ ಹೆಚ್.ಡಿ.ದೇವೇಗೌಡ ರವರ ಹೆಸರಿನ ಮೇಲೆ . . ."

**ಸಭಾಪತಿಯವರು:–** ಇಲ್ಲಾ, ಹಾಗೆಲ್ಲಾ ಹೇಳಬಾರದು, ಹೇಳಬಾರದು.

**ಶ್ರೀ ರಮೇಶ್ ಬಾಬು (ಶಿಕ್ಷಕರ ಕ್ಷೇತ್ರ):–** "ಪ್ರಮಾಣ ಮಾಡುತ್ತೇನೆ."

**ಸಭಾಪತಿಯವರು:–** ಅದು ಸಂವಿಧಾನಕ್ಕೆ ವಿರುದ್ಧವಾಗಿರುತ್ತದೆ. ನಾಳೆಯ ದಿವಸ ತೊಂದರೆಯಾಗುತ್ತದೆ.

**ಶ್ರೀ ರಮೇಶ್ ಬಾಬು:–** "ಸತ್ಯ ನಿಷ್ಠೆಯಿಂದ ಪ್ರತಿಜ್ಞೆ ಮಾಡುತ್ತೇನೆ."

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಅಲ್ಲಿ ಏನಿದೆ ಅದರ ಬಗ್ಗೆ ಮಾತ್ರ ಹೇಳಬೇಕು. ಅದರ ಮೇಲೆ ಪ್ರಮಾಣ ತೆಗೆದುಕೊಳ್ಳಿ. ನಿಮ್ಮ ಶ್ರದ್ಧೆಗಳೆಲ್ಲಾ ಬೇರೆ ಇರಬಹುದು. ಹಾಗೆ ಮಾಡಬಾರದು. ಸಂವಿಧಾನದೊಳಗೆ ಏನಿದೆ ಅದಷ್ಟೆ.

(ಈ ಹಂತದಲ್ಲಿ ನೂತನ ಸದಸ್ಯರು ತಮ್ಮ ಸ್ಥಾನಕ್ಕೆ ತೆರಳಿದರು)

**ಸಭಾಪತಿಯವರು:–** ಈಗ ಪ್ರಶ್ನೋತ್ತರ ಅವಧಿ.

## 2. ಪ್ರಶ್ನೋತ್ತರಗಳು

## ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

**ಪ್ರಶ್ನೆ ಸಂ. 229**
**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ವಿ.ಸೋಮಣ್ಣ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನಾಡಪ್ರಭು ಕೆಂಪೇಗೌಡ ಬಡಾವಣೆಯು ತಮ್ಮ ಕನಸಿನ ಬಡಾವಣೆ ಎಂದು ಮಾನ್ಯ ಮುಖ್ಯ ಮಂತ್ರಿಗಳು ಅನೇಕ ಸಂದರ್ಭದಲ್ಲಿ ಮಾತನಾಡಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ನಾನು ಎರಡು–ಮೂರು ಸ್ಪಷ್ಟೀಕರಣವನ್ನು ಮಾನ್ಯ ಸಚಿವರಿಗೆ ಕೇಳಬಯಸುತ್ತೇನೆ. ನೀವು ಬಡಾವಣೆಯನ್ನು ನಿರ್ಮಾಣ ಮಾಡಿ ಈಗಾಗಲೇ 5,000 ನಿವೇಶನಗಳನ್ನು ಕೊಟ್ಟಿದ್ದೀರಿ. ಹಾಗೆಯೇ ಕೊಟ್ಟಿರತಕ್ಕಂತಹ ನಿವೇಶನಗಳ ದರವನ್ನು ನಿಗದಿ ಮಾಡಿದ್ದೀರಿ. ಸದರಿ ದರವು ಮಾರುಕಟ್ಟೆಯ ದರಕ್ಕಿಂತ ಹೆಚ್ಚಾಗಿದೆ. ಈಗಾಗಲೇ ಸದರಿ ಬಡಾವಣೆಯಲ್ಲಿ ನೂರಾರು ಎಕರೆ ಜಮೀನನ್ನು ಡಿ–ನೋಟಿಫೀಕೇಷನ್ ಮಾಡಿದೆ. ಈ ಮೊದಲು ಯಾರು 6(1) ರನ್ವಯ 16(2) ಆಗುವವರೆಗೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿರುತ್ತಾರೆ. ಹಾಗೆ ಖಾಲಿ ಬಿಟ್ಟಿರುವಂತಹ ಜಾಗದಲ್ಲಿ ಖಾಸಗಿ ವ್ಯಕ್ತಿಗಳು ನಿವೇಶನಗಳನ್ನು ರೂ.40–45 ಲಕ್ಷಗಳಿಗೆ ನೀಡುತ್ತಿದ್ದಾರೆ ಆದರೆ, ನೀವು ನಿವೇಶನಗಳಿಗೆ ರೂ.53–58 ಲಕ್ಷಗಳಿಗೆ ನಿಗದಿ ಮಾಡಿದ್ದೀರಿ. ಇದು ಎಷ್ಟರ ಮಟ್ಟಿಗೆ ಸಮಂಜಸವಾದುದು?

ಎರಡನೆಯ ವಿಚಾರವೇನೆಂದರೆ, ನಾಡಪ್ರಭು ಕೆಂಪೇಗೌಡ ಬಡಾವಣೆ ನಿರ್ಮಿಸುವಾಗ ಡಿ–ನೋಟಿಫೀಕೇಷನ್ ಮಾಡಿರುವಂತಹ ಜಾಗದಲ್ಲಿ ಎಷ್ಟು ಎಕರೆ ಪ್ರದೇಶವನ್ನು ಪ್ರಾಥಮಿಕ ಅಧಿಸೂಚನೆ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮತ್ತು 16(2) ರನ್ವಯ ಅಧಿಸೂಚನೆ ಮಾಡಿದ್ದೀರಿ? ಹಾಗೂ ಉನ್ನುಳಿದ ಜಾಗವೆಷ್ಟು? ಡಿ-ನೋಟಿಫೀಕೇಷನ್ ಮಾಡಿದಂತಹ ಜಾಗದಲ್ಲಿ ಖಾಸಗಿಯವರು ಬಿ.ಡಿ.ಎ.ಗಿಂತ ಕಡಿಮೆ ದರದಲ್ಲಿ ನಿವೇಶನಗಳನ್ನು ನೀಡುತ್ತಿದ್ದಾರೆ. ಹೀಗಾಗಿ ಗ್ರಾಹಕರು ಖಾಸಗಿಯವರಿಂದ ನಿವೇಶನವನ್ನು ಖರೀದಿ ಮಾಡುತ್ತಾರೋ ಅಥವಾ ಬಿ.ಡಿ.ಎ. ಯಿಂದ ನಿವೇಶನವನ್ನು ಖರೀದಿ ಮಾಡುತ್ತಾರೋ? ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ನಗರದ ಅಂಜನಾಪುರ, ಬನಶಂಕರಿ 6ನೇ ಹಂತ, ಸರ್ ಎಂ.ವಿಶ್ವೇಶ್ವರಯ್ಯ ಬಡಾವಣೆಗಳಲ್ಲಿ ನಿವೇಶನಗಳನ್ನು ಹಂಚಿದ್ದೀರಿ. ನೀವೇ ಅವುಗಳಿಗೆ ಶುದ್ಧ ಕ್ರಯ ಪತ್ರಗಳನ್ನು ಹತ್ತು ವರ್ಷಗಳ ನಂತರ ನೀಡಿದ್ದು, ಪ್ರಸ್ತುತ ನಿವೇಶನ ಪಡೆದುಕೊಂಡಿರುವವರಿಗೆ ಎರಡು ವರ್ಷಗಳಲ್ಲೇ ಮನೆಗಳನ್ನು ನಿರ್ಮಿಸುವಂತೆ ಹೇಳುತ್ತೀದ್ದೀರಿ. ಇದು ಯಾವ ರೀತಿಯ ಮಾನದಂಡ?

ಮೂರನೆಯ ವಿಚಾರವೇನೆಂದರೆ, ನಿವೇಶನ ದೊರೆಯದೇ ಇರುವವರೂ ಸಹ ನಿವೇಶನದ ಮೂಲ ಮೊತ್ತದ ಶೇಕಡ 12.5 ರಷ್ಟು ಹಣವನ್ನು ಠೇವಣಿ ಮಾಡಿದ್ದರು. ಆ ಪೈಕಿ ಸುಮಾರು 400 ಕೋಟಿ ರೂಪಾಯಿಗಳಿಗೂ ಮೇಲ್ಪಟ್ಟು ಠೇವಣಿಯ ಮೊತ್ತವನ್ನು ಹಿಂದಿರುಗಿಸಿ, ಇನ್ನುಳಿದ ಮೊತ್ತವನ್ನು ಹಿಂದಿರುಗಿಸಿರುವುದಿಲ್ಲ. ಠೇವಣಿದಾರರು ತಮ್ಮ ಹಣಕ್ಕೆ ಬಡ್ಡಿ ನೀಡುವಂತೆ ಕೇಳುತ್ತಿದ್ದಾರೆ. ಇದಕ್ಕೆ ಸರ್ಕಾರವು ಯಾವುದೇ ರೀತಿಯಲ್ಲಿ ಸ್ಪಂದಿಸಿರುವುದಿಲ್ಲ.

ನಾಲ್ಕನೆಯ ವಿಚಾರವೇನೆಂದರೆ, ಈ ಬಡಾವಣೆಯನ್ನು ನಿರ್ಮಾಣ ಮಾಡುವಾಗ ನಿವೇಶನ ಪಡೆದುಕೊಂಡಿರುವವರು ಎರಡು ವರ್ಷಗಳಲ್ಲೇ ಮನೆಗಳನ್ನು ನಿರ್ಮಿಸದಿದ್ದರೆ, ಅವರ ಮೇಲೆ ಕಂದಾಯ ವಿಧಿಸುವುದಾಗಿ ಗುರುತರವಾದ ಜವಾಬ್ದಾರಿಯನ್ನು ಕೊಟ್ಟಿದ್ದೀರಿ. ಮನೆಗಳನ್ನು ನಿರ್ಮಿಸಲು ಅವಶ್ಯಕವಾದ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ಒಳಚರಂಡಿ, ರಸ್ತೆ, ಬೀದಿ ದೀಪ ಹಾಗೂ ಇನ್ನಿತರೆ ಯಾವುದೇ ಸೌಲಭ್ಯಗಳನ್ನು ಯಾವುದಾದರೂ ಒಂದು ಬಡಾವಣೆಯಲ್ಲಿ ಅಂದರೆ ಇತ್ತೀಚಿನ 20 ವರ್ಷಗಳಲ್ಲಿ ಬಿ.ಡಿ.ಎ.ಯಿಂದ ನಿರ್ಮಾಣಗೊಂಡಿರುವ ಬಡಾವಣೆಗಳಲ್ಲಿ ಒದಗಿಸಿದ್ದಾರೆಯೇ? ಈ ಸಂಗತಿಯು ತಮಗೆ ಗೊತ್ತಿದ್ದರೂ ಕೂಡ ನಾಡಪ್ರಭು ಕೆಂಪೇಗೌಡ ಬಡಾವಣೆಗೆ ನೀವು ಮೇಲ್ಕಂಡಂತೆ ಇತಿ-ಮಿತಿಯನ್ನು ಹೇರುವುದು ಎಷ್ಟರಮಟ್ಟಿಗೆ ಸಮಂಜಸವಾದುದು? ಈ ಬಡಾವಣೆಯನ್ನು ನಿರ್ಮಿಸುವ ಸಂದರ್ಭದಲ್ಲಿ ಜನರಿಗೆ ವಿವಿಧ ಅಳತೆಯ ವಿಸ್ತೀರ್ಣದ ನಿವೇಶನಗಳ ಹಂಚಿಕೆಯಲ್ಲಿ ಮಾನದಂಡವನ್ನು ಇಟ್ಟುಕೊಂಡು ನಿಗದಿ ಪಡಿಸಿದ ನಿವೇಶನಗಳ ಪೈಕಿ ಶೇಕಡ 50 ರಷ್ಟು 20X30 ಅಳತೆಯ ನಿವೇಶನಗಳನ್ನು ಕೊಡುವಂತಹ ಪದ್ಧತಿಯನ್ನು ಹಿಂದಿನಿಂದಲೂ ಸರ್ಕಾರಗಳು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಡೆಸಿಕೊಂಡು ಬಂದಿವೆ. ಆ ಪದ್ಧತಿಯನ್ನು ಈಗಲೂ ಸಹ ನೀವು ಅಳವಡಿಸಿಕೊಳ್ಳುತ್ತೀರಾ? ದಯಮಾಡಿ ಮೇಲ್ಕಂಡ ಮೂರ್‍ನಾಲ್ಕು ವಿಷಯಗಳ ಬಗ್ಗೆ ಸ್ಪಷ್ಟೀಕರಣ ನೀಡುವಂತೆ ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಕೆ.ಜೆ.ಜಾರ್ಜ್:–** ಮಾನ್ಯ ಸಭಾಪತಿಯವರೆ, ಶ್ರೀ ಸೋಮಣ್ಣನವರು ಹಿರಿಯ ಸದಸ್ಯರಾಗಿದ್ದು, ಈ ಹಿಂದೆ ಬೆಂಗಳೂರು ನಗರದ ಸಚಿವರಾಗಿದ್ದರು. ಅವರು ಕೇಳಿದಂತಹ ಪ್ರಶ್ನೆಗಳಿಗೆ ನಾನು ಉತ್ತರವನ್ನು ಒದಗಿಸಿದ್ದೇನೆ. ಪ್ರಶ್ನೆಗಳಲ್ಲಿ ನಮೂದಿಸದೇ ಇರುವಂತಹ ಅಂಶಗಳೆಂದರೆ, ಎಷ್ಟು ಜಮೀನನ್ನು ಭೂಸ್ವಾಧೀನಪಡಿಸಿಕೊಂಡಿದ್ದೀರಿ?, ಆ ಪೈಕಿ ಎಷ್ಟು ಜಮೀನನ್ನು ನೋಟಿಫೈ ಮತ್ತು ಡಿ–ನೋಟಿಫೈ ಮಾಡಿದ್ದೀರಿ? ಯಾವ ಯಾವ ಹಂತಗಳಲ್ಲಿ ಮಾಡಿದ್ದೀರಿ? ಎಂಬಿತ್ಯಾದಿ ವಿಚಾರಗಳ ಬಗ್ಗೆಯೂ ಸಹ ಪ್ರಶ್ನೆಗಳನ್ನು ಕೇಳಿದ್ದಾರೆ. ಇವುಗಳ ಬಗ್ಗೆ ಸಂಪೂರ್ಣವಾಗಿ ವಿವರವನ್ನು ಒದಗಿಸಲಾಗುತ್ತದೆ. ಮಾನ್ಯ ಸದಸ್ಯರು ಕ್ರಯದ ವಿಚಾರವಾಗಿ ಮಾತನಾಡಿದ್ದಾರೆ. ವಿವಿಧ ಅಳತೆಯ ವಿಸ್ತೀರ್ಣವುಳ್ಳ ನಿವೇಶನಗಳ ದರವನ್ನು ನಿಗದಿಪಡಿಸಿಯೇ ನಾವು 5,000 ನಿವೇಶನಗಳಿಗೆ ಅರ್ಜಿಗಳನ್ನು ಆಹ್ವಾನಿಸಿದಾಗ, ಸುಮಾರು 25,000 ಅರ್ಜಿಗಳು ಬಂದಿರುತ್ತವೆ. ಜನರು ಕ್ರಯದ ಮೊತ್ತವನ್ನು ಒಪ್ಪಿಕೊಂಡೇ ಅರ್ಜಿಯನ್ನು ಸಲ್ಲಿಸಿರುತ್ತಾರೆ ಎಂಬುದು ಇದರರ್ಥ. ಹೊಸ ಭೂಸ್ವಾಧೀನ ಕಾಯ್ದೆಯನ್ವಯ ನಿವೇಶದನ ಕ್ರಯದ ಮೊತ್ತ ಜಾಸ್ತಿಯಾಗಿದೆ. ನಾವು ಜಾಗಕ್ಕೆ ಹೆಚ್ಚಿನ ಮೊತ್ತ ನೀಡಬೇಕಾಗುತ್ತದೆ. ಅದಲ್ಲದೆಯೂ ಸಹ ಅಭಿವೃದ್ಧಿಪಡಿಸಿದ ಬಡಾವಣೆಯ ಶೇಕಡ 40 ರಷ್ಟು ಜಾಗವನ್ನು ಭೂಮಾಲೀಕರಿಗೆ ಮತ್ತು ಇನ್ನುಳಿದ ಜಾಗವನ್ನು ಬಿ.ಡಿ.ಎ.ಗೆ ಕೊಡುವುದಾಗಿ ಭೂಮಾಲೀಕರೊಂದಿಗೆ ಒಪ್ಪಂದವನ್ನು ಮಾಡಿಕೊಂಡಿದ್ದೇವೆ. ಬಡಾವಣೆಯ ಅಭಿವೃದ್ಧಿಗಾಗಿ ಹಣ ಖರ್ಚಾಗುತ್ತದೆ. ಇದಲ್ಲೆವೂ ಒಳಗೊಂಡಂತೆ ನಿವೇಶಗಳ ದರವನ್ನು ನಿಗದಿಪಡಿಸಲಾಗಿದೆ. ಈಗಾಗಲೇ ಇದಕ್ಕೆ ಸಾಕಷ್ಟು ಬೇಡಿಕೆಗಳು ಸಹ ಬಂದಿದೆ.

ನಮ್ಮ ಎರಡನೆಯ ಉದ್ದೇಶವೇನೆಂದರೆ, ನಿಜವಾಗಿಯೂ ಯಾರಿಗೆ ನಿವೇಶನ ಬೇಕಾಗಿದೆ, ಅವರು ಅರ್ಜಿ ಸಲ್ಲಿಸಬೇಕು. ಕೆಲವರು ವಹಿವಾಟು ನಡೆಸುವ ಉದ್ದೇಶಕ್ಕಾಗಿ ಅರ್ಜಿ ಸಲ್ಲಿಸುತ್ತಾರೆ. ಹಳೆಯ ಬಿ.ಡಿ.ಎ. ಬಡಾವಣೆಗಳಲ್ಲಿ ಇಂದಿಗೂ ಸಹ ಅಂದರೆ ದಶಕಗಳ ನಂತರವೂ ನಿವೇಶನಗಳು ಖಾಲಿ ಉಳಿದಿದ್ದು, ಅಲ್ಲಿ ಮನೆ ಇರಲಿ, ಬೇಲಿಯನ್ನೇ ಹಾಕಿರುವುದಿಲ್ಲ. ಅಲ್ಲಿ ಕಾಡಿನ ರೀತಿಯಲ್ಲಿ ಗಿಡಗಳು ಬೆಳೆದುಬಿಟ್ಟಿದೆ. ಅಂತಹ ಖಾಲಿ ನಿವೇಶನಗಳಲ್ಲಿ ಇಂದು ಕಸವನ್ನು ಹಾಕುತ್ತಿದ್ದಾರೆ. ಇಂತಹ ಪ್ರವೃತ್ತಿಯನ್ನು ಇಂದು ನಿಲ್ಲಿಸಬೇಕಾಗಿದೆ. ಹಳೆಯ ನಿವೇಶನಗಳಲ್ಲಿ ಇನ್ನೂ ಯಾರು ಮನೆಯನ್ನು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿರ್ಮಿಸಿಲ್ಲ, ಅಂತಹ ನಿವೇಶನದ ಹಂಚಿಕೆಯನ್ನು ರದ್ದು ಮಾಡಿ, ನಿವೇಶನವನ್ನು ಹಿಂಪಡೆಯಲು ಅವಕಾಶವಿದೆ. ನೀವೆಲ್ಲಾ ಸದಸ್ಯರು ಹಾಗೂ ಸದನವು ಒಪ್ಪಿದರೆ, ನನಗನ್ನಿಸಿದ ಹಾಗೆ, ಆ ಕ್ರಮವನ್ನು ಈಗ ಜಾರಿಗೊಳಿಸಬಹುದು. ಏಕೆಂದರೆ, ಇದೇ ಕ್ರಮವನ್ನು ನಾವು ತೆಗೆದುಕೊಂಡರೆ, ನಾಳೆಲು ದಿಕ್ಕೆಟ್ಟವರಾಗಿದ್ದೇವೆಂದು ಹೇಳುತ್ತಾರೆ.

ಮತ್ತೊಂದು ವಿಚಾರವೇನೆಂದರೆ, ಎರಡು ವರ್ಷಗಳಲ್ಲಿ ಎಂದರೆ, ಮೂಲಭೂತ ಸೌಕರ್ಯಗಳನ್ನು ಒದಗಿಸಿದ ನಂತರ ಎರಡು ವರ್ಷಗಳು ಎಂಬುದಾಗಿ ಮಾಡುತ್ತೇವೆ. ಇಲ್ಲದಿದ್ದರೆ ಒಂದು ಮನೆಗೆ ಮಾತ್ರವೇ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುವುದಿಲ್ಲ. ನಾವು ಇಡೀ ಬಡಾವಣೆಗೆ ಮೂಲಭೂತ ಸೌಕರ್ಯಗಳಾದ ನೀರು, ವಿದ್ಯುಚ್ಛಕ್ತಿ, ರಸ್ತೆ ಇತ್ಯಾದಿಗಳನ್ನು ಒದಗಿಸಿದ ನಂತರ ಮನೆಗಳನ್ನು ನಿರ್ಮಾಣ ಮಾಡಬೇಕಾಗುತ್ತದೆ. ಏಕೆಂದರೆ, ಪ್ರತ್ಯೇಕವಾಗಿ ಒಂದು ಮನೆಗೆ ಮೂಲಭೂತ ಸೌಕರ್ಯ ಇಲ್ಲ ಎಂದು ಹೇಳುವುದಾದರೆ, ಒಬ್ಬರು ನಿವೇಶನ ಹಂಚಿಕೆಯಾದ ಎರಡು ವರ್ಷವಲ್ಲ ಹತ್ತು ವರ್ಷಗಳಾದರೂ ಮನೆಯನ್ನು ನಿರ್ಮಿಸುವುದೇ ಇಲ್ಲ. ಮೂಲ ಭೂತ ಸೌಕರ್ಯಗಳನ್ನು ಬಡಾವಣೆಗೆ ನೀಡುತ್ತೇವೆ. ಅದಾದ ಎರಡು ವರ್ಷಗಳಲ್ಲಿ ಮನೆಗಳನ್ನು ಕಡ್ಡಾಯವಾಗಿ ನಿರ್ಮಾಣ ಮಾಡಬೇಕಾಗುತ್ತದೆ. ನೈಜ ನಿವೇಶನದ ಮಾಲೀಕರಿಗೆ ಅನುಕೂಲ ಮಾಡಿಕೊಡಲಿಕ್ಕಾಗಿಯೇ ಈ ವ್ಯವಸ್ಥೆಯನ್ನು ಮಾಡಿದ್ದೇವೆ.

**ಶ್ರೀ ವಿ.ಸೋಮಣ್ಣ:-** ಮಾನ್ಯ ಸಭಾಪತಿಯವರೆ, ಪ್ರಸ್ತುತ ಪ್ರಶ್ನೆಯು ಬೆಂಗಳೂರು ನಗರಕ್ಕೆ ಸಂಬಂಧಿಸಿದ್ದಾಗಿದೆ ಹಾಗೂ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿದ್ದಾರೆ. ಅದಕ್ಕಾಗಿಯೇ ಕೇಳುತ್ತಿದ್ದೇನೆ. ಜಮೀನಿಗೆ ಇವರು ಬಂಡವಾಳ ಹೂಡಿಲ್ಲ. 40:60 ರ ಅನುಪಾತದಲ್ಲಿ ನೀವು ಜಮೀನನ್ನು ತೆಗೆದುಕೊಂಡಿದ್ದೀರಿ. ಒಂದು ಎಕರೆಗೆ ರೈತರಿಗೆ ಗರಿಷ್ಠವಾಗಿ ರೂ. 80 ಲಕ್ಷಗಳನ್ನು ಕೊಟ್ಟಿದ್ದೀರಿ. 40*60 ಅಳತೆಯ ವಿಸ್ತೀರ್ಣದ ನಿವೇಶನಕ್ಕೆ ನೀವು ರೂ. 53 ರಿಂದ 58 ಲಕ್ಷಗಳನ್ನು ನಿಗದಿಪಡಿಸಿದ್ದೀರಿ. ಇದಲ್ಲದೇ...

**ಸಭಾಪತಿಯವರು:-** ನಿವೇಶನಗಳಿಗೆ ನಿಗದಿಪಡಿಸಿರುವ ದರವು ಸರಿಯಾಗಿಲ್ಲ.

**ಶ್ರೀ ವಿ.ಸೋಮಣ್ಣ:-** ಮಾನ್ಯ ಸಭಾಪತಿಯವರೆ, ಇದು ಯಾವ ನ್ಯಾಯ? ಅದಲ್ಲದೇ ಡಿ-ನೋಟಿಫೀಕೆಷನ್ ಮಾಡಿ ಬಿಟ್ಟಿರುವ ಜಮೀನುಗಳಲ್ಲಿ ನಿವೇಶನಗಳನ್ನು ರೂ. 40 ಲಕ್ಷಗಳಿಗೆ ಕೊಡುತ್ತಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(75) 09.02.2017 11.30 MGN-AK

**ಶ್ರೀ ವಿ.ಸೋಮಣ್ಣ:–**

ನಾನು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿ ಮಾಡುವುದಿಷ್ಟೇ, ದಯಮಾಡಿ ಪ್ರಸ್ತುತ 50 ಲಕ್ಷವೋ, 58ಲಕ್ಷವೋ ತಾವೇನು ದರವನ್ನು ನಿಗದಿ ಮಾಡಿದ್ದೀರಿ, ಅದನ್ನು ಯಾವ ಮಾನದಂಡದ ಆಧಾರದ ಮೇಲೆ ನಿಗದಿಪಡಿಸಲಾಗಿದೆ? 80 ಲಕ್ಷ ರೂಪಾಯಿಗೆ ಒಂದು ಎಕರೆ ಜಾಗವನ್ನು ತೆಗೆದುಕೊಂಡು 40X60 ಅಡಿ ಅಳತೆಯ ನಿವೇಶನಕ್ಕೆ ನೀವು 58 ಲಕ್ಷ ರೂಪಾಯಿಗಳನ್ನು ತೆಗೆದುಕೊಂಡರೆ ಇದು ವ್ಯಾಪಾರೀಕರಣವೇ ಅಥವಾ ಮತ್ತೇನು ಎಂಬುದನ್ನು ಸ್ಪಷ್ಟಪಡಿಸಬೇಕು.

**ಸಭಾಪತಿಯವರು:–** ದರ ನಿಗದಿಯಲ್ಲಿ ಎಲ್ಲಿಯೋ ವ್ಯತ್ಯಾಸವಾಗಿರುವಂತೆ ಕಾಣುತ್ತಿದೆ. ಜಾಸ್ತಿ ಚಾರ್ಜ್ ಮಾಡುತ್ತಿದ್ದಾರೆ, ಇದನ್ನು ಗಮನಿಸಬೇಕೆಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಈ ಬಗ್ಗೆ ನಿಮ್ಮಲ್ಲಿ ಉತ್ತರ ಸಿದ್ಧವಿದ್ದರೆ ಕೊಡಿ, ಇಲ್ಲವಾದರೆ ನಂತರ ಮಾನ್ಯ ಸದಸ್ಯರಿಗೆ ಉತ್ತರವನ್ನು ಕಳುಹಿಸಿಕೊಡಿ.

**ಶ್ರೀ ಕೆ.ಜೆ.ಜಾರ್ಜ್:–** ಸನ್ಮಾನ್ಯ ಸಭಾಪತಿಯವರೇ, ಈ ದರವನ್ನು ನಾವು ಅದರ ಕಾಸ್ಟ್ ಎಷ್ಟಾಗುತ್ತದೆ ಎಂಬುದನ್ನು ಗಮನಿಸಿ ಮಾಡುತ್ತೇವೆ. ಮಾನ್ಯ ಸದಸ್ಯರು ನಮಗೇನೂ ಖರ್ಚೇ ಇಲ್ಲ, ಇನ್‌ವೆಸ್ಟ್‌ಮೆಂಟ್ ಇಲ್ಲವೇ ಇಲ್ಲ ಎನ್ನುವಂತಹ ರೀತಿಯಲ್ಲಿ ಹೇಳುತ್ತಿದ್ದಾರೆ. 40% ನಾವು ಕೊಡುತ್ತಿರುವುದು ಡೆವಲಪ್ಡ್ ಸೈಟ್‌ಗಳನ್ನು. ಅಂದರೆ ಸಿ.ಎ.ಸೈಟ್‌ಗಳಾಗಲಿ ಎಲ್ಲಕ್ಕೂ ಸಹ ನಾವೇ ಹಣವನ್ನು ವೆಚ್ಚ ಮಾಡಬೇಕಾಗುತ್ತದೆ. ಅಲ್ಲದೆ ಮೂಲಭೂತ ಸೌಕರ್ಯಗಳನ್ನೆಲ್ಲಾ ಕಲ್ಪಿಸಿಕೊಡಬೇಕಾದರೆ ಅದರ ವೆಚ್ಚವನ್ನು ಸಹ ದರವನ್ನು ನಿಗದಿಪಡಿಸುವಾಗ ಸೇರಿಸಬೇಕಾಗುತ್ತದೆ. ನಿವೇಶನಗಳ ದರವನ್ನು ಯಾವ ರೀತಿ ನಿಗದಿಪಡಿಸಲಾಗುತ್ತದೆ ಎನ್ನುವುದಕ್ಕೆ ಸಂಬಂಧಿಸಿದ ವಿವರಗಳನ್ನು ಸಹ ನಾನು ಮಾನ್ಯ ಸದಸ್ಯರಿಗೆ ಕಳುಹಿಸಿಕೊಡುತ್ತೇನೆ.

**ಸಭಾಪತಿಯವರು:–** ದರ ನಿಗದಿ ಪ್ರಕ್ರಿಯೆ ಯಾವ ರೀತಿ ನಡೆಯುತ್ತದೆ ಎಂಬುದರ ಮಾಹಿತಿಯನ್ನು ಅವರಿಗೆ ಕಳುಹಿಸಿಕೊಡಿ, ನನಗೂ ಅದರ ಪ್ರತಿಯನ್ನು ಕಳುಹಿಸಿಕೊಡಿ.

**ಶ್ರೀ ವಿ.ಸೋಮಣ್ಣ:–** ಮಾನ್ಯ ಸಭಾಪತಿಯವರೇ, ಮತ್ತೊಂದು ವಿಚಾರವೆಂದರೆ, ಇಷ್ಟು ದಿವಸದಲ್ಲಿ ಹಣವನ್ನು ಪಾವತಿಸುವಂತೆ ತಿಳಿಸುತ್ತೀರಿ.

**ಸಭಾಪತಿಯವರು:–** ಇಲ್ಲ, ಎಲ್ಲಾ ಆದಮೇಲೆ 2 ವರ್ಷ ಸಮಯ ಇರುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ವಿ.ಸೋಮಣ್ಣ:–** ಅದು ಮನೆ ಕಟ್ಟುವುದಕ್ಕೆ, ಆದರೆ ನಿವೇಶನವನ್ನು ಪಡೆದುಕೊಳ್ಳಲು ಇಷ್ಟು ದಿವಸಗಳಲ್ಲಿ ಹಣವನ್ನು ಪಾವತಿಸಬೇಕೆಂಬುದಾಗಿ ಒಂದು ಸುತ್ತೋಲೆಯನ್ನು ಕಳುಹಿಸಿರುವುದರಿಂದ ವೇತನದಾರರಿರಬಹುದು, ಮತ್ತೊಬ್ಬರಿರಬಹುದು 58 ಲಕ್ಷ ರೂಪಾಯಿಗಳನ್ನು ಏಕ್‌ದಮ್ ಒಂದು ನಿವೇಶನಕ್ಕೆ ಪಾವತಿಸಬೇಕಾದರೆ ಬಹಳ ಕಷ್ಟವಾಗುತ್ತದೆ. ಒಂದು ಎಕರೆ ಪ್ರದೇಶದಲ್ಲಿ 30X40 ಅಡಿ ನಿವೇಶನದ 20 ನಿವೇಶನಗಳಾದರೆ, 40X60 ಅಡಿ ಅಳತೆಯ ಸುಮಾರು 13 ಅಥವಾ 14 ನಿವೇಶನಗಳಾಗುತ್ತವೆ. ಪಕ್ಕದಲ್ಲಿ ನೀವು ಡಿ–ನೋಟಿಫಿಕೇಷನ್ ಮಾಡಿರುವ ಜಾಗದಲ್ಲಿ 30X40 ಅಡಿ ಅಳತೆಯ ನಿವೇಶನವನ್ನು 40 ಲಕ್ಷ ರೂಪಾಯಿಗಳಿಗೆ ಕೊಡುತ್ತಿರುವಾಗ ನೀವು 58 ಲಕ್ಷ ರೂಪಾಯಿಯಂತೆ ದರವನ್ನು ಹೇಗೆ ನಿಗದಿಪಡಿಸಿದ್ದೀರಿ?

**ಸಭಾಪತಿಯವರು:–** ಮಾನ್ಯ ಸೋಮಣ್ಣನವರೇ ತಾವು ಎತ್ತಿರುವಂತಹ ಪಾಯಿಂಟ್ ಸರಿಯಿದೆ. ನೋಟಿಸ್ ಕೊಟ್ಟ ತಕ್ಷಣ ಹಣವನ್ನು ಪಾವತಿಸುವುದಕ್ಕೆ ಕಷ್ಟವಾಗುತ್ತದೆ, ಅದಕ್ಕಾಗಿ ಸ್ವಲ್ಪ ಸಮಯವನ್ನು ಕೊಡಬೇಕೆಂಬುದನ್ನು ಅವರು ಕೇಳುತ್ತಿದ್ದಾರೆ. ಅದನ್ನು ತಾವು ಕನ್ಸಿಡರ್ ಮಾಡಬೇಕಾಗುತ್ತದೆ.

**ಶ್ರೀ ಕೆ.ಜೆ.ಜಾರ್ಜ್:–** ಮಾನ್ಯ ಸಭಾಪತಿಯವರೇ, ನಾವು land de-notification ಮಾಡಿ ಅವರಿಗೆ ಕೊಟ್ಟಮೇಲೆ ದರವನ್ನು ನಿಗದಿಪಡಿಸುವುದು ಅವರಿಗೆ ಬಿಟ್ಟಂತಹ ವಿಚಾರ. ಒಂದು ನಿವೇಶನವನ್ನು ಅವರು 30 ಲಕ್ಷ ರೂಪಾಯಿಗಳಿಗಾದರೂ ಕೊಡಬಹುದು, 40 ಲಕ್ಷ ರೂಪಾಯಿಗಳಿಗಾದರೂ ಕೊಡಬಹುದು ಅಥವಾ ಒಂದು ಕೋಟಿಗೆ ಬೇಕಾದರೂ ಕೊಡಬಹುದು. ಅದು ಅವರ ಸ್ವಾತಂತ್ರ್ಯ. ಅವರಿಗೇನಾದರೂ ತುರ್ತಾಗಿ ಹಣದ ಅವಶ್ಯಕತೆ ಇದ್ದಾಗ ಕಡಿಮೆ ದರದಲ್ಲಿ ಮಾರಾಟ ಮಾಡಿರುತ್ತಾರೆ. ಅವರ ಸ್ನೇಹಿತರಿಗೆ ಕಡಿಮೆ ದರದಲ್ಲಿ ಕೊಟ್ಟಿರುತ್ತಾರೆ. ಆದರೆ 5000 ನಿವೇಶನಗಳಿಗೇನಾದರೂ ಡಿಮಾಂಡ್ ಬರದೇ ಇದ್ದಿದ್ದರೆ, ನಿವೇಶನಕ್ಕಾಗಿ ಯಾರೂ ಅರ್ಜಿಯನ್ನೇ ಹಾಕದೆ ಇದ್ದಿದ್ದರೆ ನೀವು ಹೇಳಿದ್ದನ್ನು ನಾವು ಒಪ್ಪಿಕೊಳ್ಳಬಹುದಾಗಿತ್ತು. ಈಗ ಸಾರ್ವಜನಿಕರಿಗೆ ನಿವೇಶನಗಳು ಬೇಕಾಗಿವೆ. 5000 ನಿವೇಶನಗಳಿಗೆ 25000 ಅರ್ಜಿಗಳು ಬಂದಿವೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ರೀಫಂಡ್ ವಿಚಾರದ ಬಗ್ಗೆ ಪ್ರಸ್ತಾಪ ಮಾಡಿದ್ದು, ಮೊದಲನೆ ಬಾರಿಗೆ ಇಷ್ಟು ಬೇಗನೆ ಯಾರಿಗೆ ನಿವೇಶನ ಸಿಗಲಿಲ್ಲ, ಅಂತಹ 26000 ಜನರಿಗೆ ನಾವು ಈಗಾಗಲೇ 450 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. 500ಕ್ಕೂ ಹೆಚ್ಚು ಜನರಿಗೆ ಕೊಡಲಿಲ್ಲ, ಏನು ಎಲ್ಲಾ black and white ನಲ್ಲಿದೆ, ಎಲ್ಲಾ ವೆಬ್‌ಸೈಟ್‌ನಲ್ಲಿದೆ. 530 ಜನರಿಗೆ ಮಾತ್ರ ಹಣ ಪಾವತಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿಲ್ಲ, ಅವರು ಆರ್.ಟಿ.ಜಿ.ಎಸ್. ಡೀಟೇಲ್ಸ್ ಕೊಟ್ಟಿಲ್ಲ, ಅದನ್ನವರು ಕೊಟ್ಟ ಕೂಡಲೇ ಅವರಿಗೂ ಕೊಡುವುದಕ್ಕೆ ಸಹ ತಿಳಿಸಿದ್ದೇವೆ. ಏಕೆಂದರೆ ಅವರು ಬ್ಯಾಂಕ್ ಡೀಟೇಲ್ಸ್ ಕೊಡದಿದ್ದರೆ ನಾವೇಕೆ ಬಡ್ಡಿ ಕೊಡಬೇಕು? ಅವರು ಬ್ಯಾಂಕ್ ಡೀಟೇಲ್ಸ್ ಕೊಟ್ಟರೆ ಕೂಡಲೇ ಅವರ ಖಾತೆಗೆ ಹಣ ಹಾಕುತ್ತೇವೆ.

**ಸಭಾಪತಿಯವರು:–** ಧನ್ಯವಾದಗಳು.

**ಪ್ರಶ್ನೆ ಸಂಖ್ಯೆ: 241**
**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಕೆ.ಸಿ.ಕೊಂಡಯ್ಯ:–** ಸನ್ಮಾನ್ಯ ಸಭಾಪತಿಯವರೇ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮತ್ತು ಕರ್ನಾಟಕ ಒಳಚರಂಡಿ ವಿಭಾಗ, ಸರ್ಕಾರಿ ವಸತಿಗೃಹಗಳು, ಸರ್ಕಾರಿ ಕಛೇರಿಗಳಿಗೆ ಕುಡಿಯುವ ನೀರಿನ ಸೌಲಭ್ಯವನ್ನೇನು ಒದಗಿಸಲಾಗಿದೆ, ಅದರಲ್ಲಿ ಅವರಿಗೆ ವಿನಾಯಿತಿ ಇದೆಯೆ? ಎರಡನೆಯದಾಗಿ ಬಿ.ಡಬ್ಲ್ಯು.ಎಸ್.ಎಸ್.ಬಿ.ಗೆ 5585 ಲಕ್ಷ ಬಾಕಿ ಇದೆ, 587 ಲಕ್ಷ ವಿವಿಧ ಕಾರ್ಪೊರೇಷನ್‌ಗಳಿಂದ ಬಾಕಿ ಇದೆ ಎಂದು ಉತ್ತರದಲ್ಲೇನು ತಿಳಿಸಲಾಗಿದೆ, ಒಂದು ವೇಳೆ ಇವರಿಗೆ ವಿನಾಯಿತಿ ಇಲ್ಲ ಎಂದರೆ ಸರ್ಕಾರ ಅದನ್ನು ಯಾವ ರೀತಿ ವಸೂಲು ಮಾಡುತ್ತದೆ? ಖಾಸಗಿಯವರಿಂದ ಈ ರೀತಿಯಾಗಿದ್ದರೆ ನೀವು ನೋಟಿಸ್ ಕೊಟ್ಟು, ತಕ್ಷಣವೇ disconnect ಮಾಡುತ್ತೀರಿ. ಹಾಗಿರುವಾಗ ಇವರಿಂದ ಯಾವ ರೀತಿ ವಸೂಲಿ ಮಾಡುತ್ತೀರಿ?

**ಸಭಾಪತಿಯವರು:–** ಸರ್ಕಾರದಿಂದಲೂ ಆ ರೀತಿ ವಸೂಲು ಮಾಡಿ ಎಂದು ಹೇಳುತ್ತಿದ್ದೀರಾ, ಸರ್ಕಾರ ಒಪ್ಪುವುದಾದರೆ ನನ್ನದೇನೂ ಅಭ್ಯಂತರವಿಲ್ಲ. ಅವರು ಮಾಡುವುದಕ್ಕೆ ಸಾಧ್ಯವೇ? ಮಾಡುತ್ತಾರೆಯೇ?

**ಶ್ರೀ ಕೆ.ಸಿ.ಕೊಂಡಯ್ಯ:–** ಮಾನ್ಯ ಸಭಾಪತಿಯವರೇ, ಇದರ ಜೊತೆಗೆ ಮತ್ತೊಂದು ವಿಚಾರವೆಂದರೆ, ನೀರಿನ ಬಳಕೆ ಬಗ್ಗೆ ಸವಿಸ್ತಾರವಾಗಿ ಒಂದು ಬುಕ್‌ಲೆಟ್ ಒದಗಿಸಿದ್ದಾರೆ. ಅದಕ್ಕಾಗಿ ಅವರಿಗೆ ಧನ್ಯವಾದಗಳು. ಇದನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಸಮರ್ಪಕವಾಗಿ ನಿರ್ವಹಿಸಬೇಕಾಗುತ್ತದೆ. ಏಕೆಂದರೆ ನೀರಿನ ಅಭಾವ ಪ್ರತಿ ವರ್ಷವೂ ಹೆಚ್ಚಾಗುತ್ತಿದ್ದು, ನಿರಂತರವಾಗಿ ಬರಗಾಲವನ್ನು ಎದುರಿಸುತ್ತಿರುವುದರಿಂದ ಈ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ವಿನಂತಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್.ರೋಷನ್ ಬೇಗ್:–** ಸನ್ಮಾನ್ಯ ಸಭಾಪತಿಯವರೇ, ಸರ್ಕಾರಿ ಅಧಿಕಾರಿಗಳಿಗೆ ಯಾವುದೇ ವಿನಾಯಿತಿ ಇಲ್ಲ. ಅವರು ಹಣವನ್ನು ಪಾವತಿಸಬೇಕು. ಯಾರು ಯಾರು ಹಣವನ್ನು ಪಾವತಿಸಿಲ್ಲ ಅವರೆಲ್ಲರಿಗೂ ನೋಟಿಸ್ ಕೂಡ ಕಳುಹಿಸಿಕೊಟ್ಟಿದ್ದೇವೆ. ಸುಮಾರು 25 ಅಧಿಕಾರಿಗಳ ಮನೆಗಳ ನೀರಿನ ಸಂಪರ್ಕವನ್ನು ಕಡಿತಗೊಳಿಸಿದೆ. ಕ್ರಮ ತೆಗೆದುಕೊಂಡಿದ್ದೇವೆ. ಯಾರಿಗೂ ಯಾವುದೇ ವಿನಾಯಿತಿ ಇಲ್ಲ. ಇಂತಹ ವಿಚಾರವನ್ನು ಮಾನ್ಯ ಸದಸ್ಯರು ನಮ್ಮ ಗಮನಕ್ಕೆ ತಂದಿರುವುದರಿಂದ ಅವರಿಗೆ ಧನ್ಯವಾದಗಳನ್ನು ತಿಳಿಸುತ್ತೇನೆ. ಇನ್ನು ಮುಂದೆ ಇಂತಹ ವಿಚಾರಗಳಲ್ಲಿ ಆದಷ್ಟು ಬೇಗನೆ ಕ್ರಮ ತೆಗೆದುಕೊಳ್ಳುತ್ತೇವೆ.

**ಸಭಾಪತಿಯವರು:–** ಧನ್ಯವಾದಗಳು.

**ಪ್ರಶ್ನೆ ಸಂಖ್ಯೆ: 246**
**(ಉತ್ತರವನ್ನು ಲಗತ್ತಿಸಿದೆ)**

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಸನ್ಮಾನ್ಯ ಸಭಾಪತಿಯವರೇ, ಹಿಂದೆ ಬೆಳಗಾವಿ ಅಧಿವೇಶನದಲ್ಲಿ ಡ್ರಗ್ಸ್ ಮತ್ತು ಮಾದಕ ವಸ್ತುಗಳ ಮಾರಾಟದ ವಿಚಾರದಲ್ಲಿ ಬಹಳ ದೊಡ್ಡ ಚರ್ಚೆಯಾಗಿತ್ತು. ತಾವು ಒಂದಷ್ಟು ಕ್ರಮ ಕೈಗೊಂಡಿದ್ದರಿಂದ ಇನ್ನಷ್ಟು ಸಂಗತಿಗಳು ಬೆಳಕಿಗೆ ಬಂದಿವೆ. ಕಟ್ಟುನಿಟ್ಟಾದ ಕ್ರಮ ಕೈಗೊಂಡಿರುವ ಬಗ್ಗೆ ನಾನು ಮಾನ್ಯ ಸಚಿವರಿಗೆ ಅಭಿನಂದನೆಗಳನ್ನು ಸಲ್ಲಿಸಬಯಸುತ್ತೇನೆ. ಆದರೆ ಅದು ಕೇವಲ ಕೆಲವೇ ಕೆಲವು ಪ್ರದೇಶಕ್ಕೆ ಸೀಮಿತವಾಗಿದೆ. ಬೆಂಗಳೂರು, ಮೈಸೂರು, ಮಂಗಳೂರು, ಮಣಿಪಾಲ ಈ ರೀತಿ ಎಲ್ಲಿ ಶಿಕ್ಷಣ ಕೇಂದ್ರಗಳು ತಲೆ ಎತ್ತಿವೆ ಅಲ್ಲಿ ಇಂತಹ ವಿಚಾರದಲ್ಲಿ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಲಾಗುತ್ತಿದೆಯೇ ಎಂಬುದು ನನ್ನ ಪ್ರಶ್ನೆಯಾಗಿದೆ. ಆದರೆ ಸಚಿವರು ಕೊಟ್ಟಿರುವಂತಹ ಉತ್ತರದಲ್ಲಿ ಉಡುಪಿ, ಮಣಿಪಾಲದಲ್ಲಿ ಆ ರೀತಿಯ ಯಾವುದೇ ಪ್ರಕರಣ ದಾಖಲಾಗಿಲ್ಲ ಎಂದು ತಿಳಿಸಿದ್ದಾರೆ. ಆದರೆ ನಮಗೆಲ್ಲರಿಗೂ ತಿಳಿದಿರುವ ಪ್ರಕಾರ ಶೈಕ್ಷಣಿಕ ಕೇಂದ್ರಗಳು ಎಲ್ಲಿ ತಲೆ ಎತ್ತಿವೆಯೊ ಅಲ್ಲಿ ಈ ರೀತಿಯ ಬಹಳಷ್ಟು ಸಂಗತಿಗಳು ವರದಿಯಾಗುತ್ತಿದ್ದು, ಇದನ್ನು ತಾವು ಗಮನಿಸಿದರೆ ಬೆಂಗಳೂರು ಮಹಾನಗರಕ್ಕಿಂತಲೂ ಹೆಚ್ಚು ಸಂಖ್ಯೆಯ ಈ ರೀತಿಯ ಸಂಗತಿಗಳು ಮಂಗಳೂರಿನಲ್ಲಿ ವರದಿಯಾಗಿವೆ. ಮಂಗಳೂರಿನಲ್ಲಿ ವರದಿಯಾಗಿದೆ ಎಂದಮೇಲೆ ಮಣಿಪಾಲದಲ್ಲಿ ವರದಿಯಾಗದಿರಲಿಕ್ಕೆ ಸಾಧ್ಯವೇ ಇಲ್ಲ. ಹಾಗಿದ್ದರೆ ಮಂಗಳೂರಿನ ಅಧಿಕಾರಿಗಳು ಬಹಳ ದಕ್ಷತೆಯಿಂದ ಕೆಲಸ ಮಾಡಿ ಹೆಚ್ಚು ಪ್ರಕರಣಗಳನ್ನು ಪತ್ತೆ ಹಚ್ಚಿರಬಹುದು ಅಥವಾ ಮಣಿಪಾಲ ಭಾಗದಲ್ಲಿನ ಅಧಿಕಾರಿಗಳು ಈ ವಿಚಾರದಲ್ಲಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಮರ್ಪಕವಾಗಿ ಕೆಲಸ ನಿರ್ವಹಿಸಿಲ್ಲದಿರಬಹುದು ಎಂದು ನಾನು ಭಾವಿಸುತ್ತೇನೆ. ಹಾಗಾಗಿ ಇದನ್ನು ರಾಜ್ಯವ್ಯಾಪಿ ವಿಸ್ತರಿಸಿಕೊಂಡು ಪತ್ತೆಹಚ್ಚುವಂತಹ ಕೆಲಸ ಮಾಡಬೇಕು.

ಎರಡನೆಯದಾಗಿ ತಾವು ಕೊಟ್ಟಂತಹ ಮಾಹಿತಿ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ದಾಖಲಾದ ಒಟ್ಟು 49 ಪ್ರಕರಣಗಳಲ್ಲಿ 93 ಆರೋಪಿಗಳನ್ನು ಬಂದಿಸಿರುವುದಾಗಿ ತಿಳಿಸಲಾಗಿದೆ. ಆದರೆ ಪೂರ್ವ ವಲಯದ ಹೆಚ್ಚುವರಿ ಪೊಲೀಸ್ ಆಯುಕ್ತರು ಪತ್ರಕರ್ತರಿಗೆ ಕೊಟ್ಟ ಮಾಹಿತಿಯ ಪ್ರಕಾರ 3 ತಿಂಗಳಲ್ಲಿ 88 ಪ್ರಕರಣಗಳು ವರದಿಯಾಗಿದ್ದು 184 ಜನರನ್ನು ಬಂದಿಸಲಾಗಿದೆ ಎನ್ನುವ ವಿಚಾರ ಪತ್ರಿಕೆಯಲ್ಲಿ ವರದಿಯಾಗಿದೆ. ಅದರಲ್ಲಿ ವಿದೇಶಿ ದಂಪತಿಗಳು ಪತ್ತೆಯಾಗಿದ್ದಾರೆ, ಅದರ ಜೊತೆಗೆ ಪಬ್‌ನಲ್ಲಿ D.J. ಅಂದರೆ Disc Jockey ಎಂದು ಇರುತ್ತದೆ. ವಿದೇಶಿಯರು ಹೆಚ್ಚಾಗಿ ಹೋಗುವಂತಹ Discotheque, ಪಬ್ ಮತ್ತು ಸ್ಟಾರ್ ಹೋಟೇಲ್‌ಗಳ ಮೇಲೂ ಪೊಲೀಸರು ಹದ್ದಿನ ಕಣ್ಣಿಟ್ಟಿದ್ದಾರೆ. ಏಕೆಂದರೆ ಈ ಎಲ್ಲಾ ಪಬ್‌ಗಳಿಗೆ ಶಾಲಾ ಕಾಲೇಜಿನ ವಿದ್ಯಾರ್ಥಿಗಳು ಮತ್ತು ಯುವಕರು ಬರುವಂಥದ್ದಾಗಿದ್ದು, ಹಾಗೆಂದು ಹೇಳಿದರೆ ಎಲ್ಲಿಯೋ ಒಂದು ಕಡೆ ಪತ್ರಿಕೆಯಲ್ಲಿ ವರದಿಯಾಗಿರುವಂತೆ ಬಾರ್‌ಗಳು ಮತ್ತೆ ಮತ್ತೆ ತಲೆ ಎತ್ತಲು, ಅನಧಿಕೃತ ಚಟುವಟಿಕೆಗಳನ್ನು ನಡೆಸಲು ಅಧಿಕಾರಿಗಳೇ ಕಾರಣ ಎನ್ನುವಂತಹ ಆರೋಪ ಇದೆ ಎನ್ನುವಂಥದ್ದು ಕೂಡ ಪತ್ರಿಕೆಯಲ್ಲಿ ವರದಿಯಾಗಿದೆ.

ಪೊಲೀಸರಿಂದ 3 ಕಡೆ ದಾಳಿ ಮಾಡಿ 15 ಆರೋಪಿಗಳನ್ನು ಬಂಧನ ಮಾಡಿರುವುದು **"**ವಿದ್ಯಾಸಂಸ್ಥೆಗಳ ಸಮೀಪವೇ ತಲೆ ಎತ್ತಿದ ಕೇಂದ್ರಗಳು**"** ಎನ್ನುವಂತಹ ಶೀರ್ಷಿಕೆಗಳ ಅಡಿಯಲ್ಲಿ ಈ ವಿಚಾರ ವರದಿಯಾಗಿದೆ. ಸರ್ಕಾರದ ಉತ್ತರದಲ್ಲಿ ವಿದ್ಯಾಸಂಸ್ಥೆಗಳಿಂದ 100 ಮೀಟರ್ ವ್ಯಾಪ್ತಿಯಲ್ಲಿ ಈ ರೀತಿಯ ಮಾರಾಟ ಚಟುವಟಿಕೆಗಳಿರಬಾರದು ಎನ್ನುವಂತಹ ಕಾನೂನಿದೆ. ಕಾಲೇಜಿನ ಪಕ್ಕದಲ್ಲಿ 105 ಮೀಟರ್‌ನಲ್ಲಿ ಎಲ್ಲಾದರೂ ಈ ರೀತಿಯ ಚಟುವಟಿಕೆಗಳು ನಡೆದರೆ ಕ್ರಮ ತೆಗೆದುಕೊಳ್ಳಲು ನಿಮ್ಮ ಬಳಿ ಯಾವುದೇ ಕಾನೂನಿಲ್ಲ. ಡ್ರಗ್ ಮಾಫಿಯಾ ಮತ್ತು ಅದರ ಪರಿಣಾಮಗಳು ಯುವಕರ ಮೇಲೆ ದೊಡ್ಡ ಪರಿಣಾಮ ಬೀರುತ್ತಿರುವುದರಿಂದ ಶಾಲಾ ಕಾಲೇಜುಗಳ ಅಕ್ಕಪಕ್ಕದಲ್ಲಿ ಈ ರೀತಿಯ ದಂಧೆಗಳು ನಡೆಯುತ್ತಿರುವುದಾಗಿ ವರದಿಯಾಗಿರುವುದರಿಂದ ಈ ಬಗ್ಗೆ ಸರ್ಕಾರ ಕಾನೂನಿನಲ್ಲಿ ಮಾರ್ಪಾಡು ತಂದು ಆ 100 ಮೀಟರ್ ವ್ಯಾಪ್ತಿ ಎಂದು ಹೇಳುವುದರಲ್ಲಿ ಬದಲಾವಣೆ ತಂದು ಅದನ್ನು ಇನ್ನೂ ಸ್ವಲ್ಪ ವಿಸ್ತರಿಸುವಂತಹ ವ್ಯವಸ್ಥೆಯನ್ನು ಮಾಡಲಾಗುತ್ತದೆಯೇ ಎನ್ನುವುದು ನನ್ನ ನೇರವಾದ ಪ್ರಶ್ನೆಯಾಗಿದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎರಡನೆಯದಾಗಿ ಗೂಂಡಾ ಕಾಯಿದೆಯ ಅಡಿಯಲ್ಲಿ ಇಂಥವರ ವಿರುದ್ಧ ಯಾವ ಕ್ರಮವನ್ನು ಕೈಗೊಳ್ಳಲಾಗಿದೆ ಎಂದರೆ, ಗೂಂಡಾ ಕಾಯಿದೆಯ ಅಡಿಯಲ್ಲಿ ಅಂತಹವರನ್ನು ಬಂದಿಸುವುದಾಗಿ ತಿಳಿಸಲಾಗಿದೆ. ಈ ರೀತಿ ಎಷ್ಟು ಜನರ ಮೇಲೆ ಗೂಂಡಾ ಕಾಯಿದೆಯ ಅಡಿಯಲ್ಲಿ ಪ್ರಕರಣವನ್ನು ದಾಖಲಿಸಲಾಗಿದೆ, ಮಾದಕ ದ್ರವ್ಯ ಸಾಗಾಣಿಕೆಯಲ್ಲಿ ಸಿಕ್ಕಿಹಾಕಿಕೊಂಡಂತಹ ಎಷ್ಟು ಜನರನ್ನು ಬಂಧಿಸಲಾಗಿದೆ? ಈ ರೀತಿ ಅವರನ್ನು ಗೂಂಡಾ ಕಾಯಿದೆಯ ಅಡಿಯಲ್ಲಿ ಬಂದಿಸಿ ಅವರ ವಿರುದ್ಧ ಕಠಿಣ ಕ್ರಮವನ್ನು ಕೈಗೊಳ್ಳದಿದ್ದರೆ ಅವರು ಮತ್ತೆ ಮತ್ತೆ ಅದನ್ನು ಮುಂದುವರೆಸುತ್ತಾರೆ.

ಕೊನೆಯ ಪ್ರಶ್ನೆ ಎಂದರೆ, ಒಂದೇ ಒಂದು ದಿವಸ ಕಸ್ಟಮ್ಸ್ ಅಧಿಕಾರಿಗಳು 2016ರ ಜನವರಿ 30ರಂದು ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ದಕ್ಷಿಣ ಕೊರಿಯಾದಿಂದ ಬಂದಿರುವ 1.37 ಕೋಟಿ ಮೌಲ್ಯದ Esse Lights ಹೆಸರಿನ ಅಕ್ರಮ ಸಿಗರೇಟ್‌ಗಳನ್ನು ವಶಪಡಿಸಿಕೊಂಡಿದ್ದಾರೆ. ಅಂದರೆ, ಒಂದು ದಿವಸ ಒಂದು ದಾಳಿಯಲ್ಲಿ ಇಷ್ಟು ಮೌಲ್ಯದ ಅಕ್ರಮ ಸಿಗರೇಟ್‌ಗಳನ್ನು ವಿಮಾನ ನಿಲ್ದಾಣದಲ್ಲಿ ವಶಪಡಿಸಿಕೊಳ್ಳುತ್ತಾರೆ ಎಂದರೆ, ಈ ದಂಧೆ ಎಷ್ಟು ವ್ಯವಸ್ಥಿತವಾಗಿ ನಡೆಯುತ್ತಿದೆ ಎಂಬುದನ್ನು ಸರ್ಕಾರ ಅರ್ಥ ಮಾಡಿಕೊಳ್ಳಬೇಕಾಗಿದೆ. ಹಾಗಾಗಿ ಮತ್ತೆ ಮತ್ತೆ ಬೆಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಹೊರ ದೇಶದ ವಿದ್ಯಾರ್ಥಿಗಳಿಂದ ಈ ಅಕ್ರಮ ದಂಧೆ ನಡೆಯುತ್ತಿದೆ ಎಂಬುದು ಸ್ಪಷ್ಟವಾಗುತ್ತಿದೆ. ತಾವು ಯಾವೆಲ್ಲಾ ದಾಳಿ ನಡೆಸಿಕೊಂಡು ಬಂದನ ಮಾಡಿದ್ದೀರಿ, ಅದೆಲ್ಲವೂ ಕೂಡ ಆ ಸರಪಳಿಯ ಕೊನೆಯ ಕೊಂಡಿಯಲ್ಲಿ ಯಾರು drug peddlers ಇದ್ದಾರೆ ಅಥವಾ ಅದನ್ನು ಉಪಯೋಗಿಸುತ್ತಿದ್ದಾರೆ ಅಂತಹವರನ್ನು ಮಾತ್ರ ಬಂಧನ ಮಾಡಿದ್ದೀರಿ.

(76) 09.02.2017 11.40 SV-RN

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-**

ಆದರೆ ಇದರ ಹಿಂದೆ ಒಂದು ದೊಡ್ಡ ಮಾಫಿಯಾ ಇದ್ದು, ಇದನ್ನು ಮಾನ್ಯ ಗೃಹಸಚಿವರು ಹಿಂದಿನ ಬಾರಿ ಒಪ್ಪಿಕೊಂಡಿದ್ದಾರೆ. ಇಷ್ಟು ವರ್ಷ ನಡೆದಂತಹ ದಾಳಿಯಲ್ಲಿ ಎಲ್ಲಿಯೂ ಕೂಡ ಈ ಮಾಫಿಯಾವನ್ನು ವ್ಯವಸ್ಥಿತಗೊಳಿಸುವಂತಹ ದೊಡ್ಡ ಕುಳಗಳನ್ನು ಪತ್ತೆ ಹಚ್ಚಿರುವುದಿಲ್ಲ. ಈ ಒಂದು ಮಾದಕ ವಸ್ತುಗಳ ಮಾರಾಟ ಜಾಲದಲ್ಲಿ ಯಾರು ಕೊನೆಯಲ್ಲಿ (peddlers) ಮಾರುತ್ತಿರುವವರೋ ಅಥವಾ ಸೇವನೆ ಮಾಡುತ್ತಿರುವವರೋ, ಅವರನ್ನುಪತ್ತೆ ಹಚ್ಚುತ್ತಾರೆ. ಹಾಗಾಗಿ ಈ ಮಾಫಿಯಾದವರನ್ನು ಮಟ್ಟ ಹಾಕಲು ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ಎಂದು ತಿಳಿಸಬೇಕು.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಡಾ:ಜಿ.ಪರಮೇಶ್ವರ್:-** ಮಾನ್ಯ ಸಭಾಪತಿಯವರೆ, ಈ ವಿಷಯ ಎಷ್ಟು ಗಂಭೀರವಾಗಿದೆ ಎಂದರೆ ನಮ್ಮ ಯುವ ಪೀಳಿಗೆ ಅದರಲ್ಲಿಯೂ ವಿಶೇಷವಾಗಿ ಶಾಲಾ-ಕಾಲೇಜಿಗೆ ಹೋಗುವಂತಹ ವಿದ್ಯಾರ್ಥಿಗಳಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಇದು ಹಬ್ಬಿದೆ. ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ಅವರು 2014ರಲ್ಲಿ ಗಮನ ಸೆಳೆಯುವ ಸೂಚನೆಯ ಮೂಲಕ ಈ ವಿಷಯದ ಬಗ್ಗೆ ಸರ್ಕಾರದ ಗಮನವನ್ನು ಸೆಳೆದಿದ್ದರು. ಶ್ರೀ ಐವನ್ ಡಿ'ಸೋಜ ಅವರು 2015ರಲ್ಲಿ ಈ ಬಗ್ಗೆ ಪ್ರಶ್ನೆಯೊಂದನ್ನು ಕೇಳಿದ್ದರು. ಶ್ರೀ ಲೆಹರ್‌ಸಿಂಗ್ ಸಿರೋಯ ಅವರೂ ಸಹ ಯಾವಾಗಲೂ ಇದರ ಬಗ್ಗೆ ಕೇಳುತ್ತಿರುತ್ತಾರೆ. ಕಳೆದ ಬಾರಿಯ ಬೆಳಗಾವಿ ಅಧಿವೇಶನದಲ್ಲಿ ಶ್ರೀಮತಿ ತಾರಾಅನೂರಾಧ ಅವರೂ ಸಹ ಈ ಬಗ್ಗೆ ಕೇಳಿರುತ್ತಾರೆ.

**ಶ್ರೀ ಕೆ.ಗೋವಿಂದರಾಜು:-** ಮಾನ್ಯ ಸಭಾಪತಿಯವರೆ, ನಾವೂ ಬಹಳ ಸಲ ಕೇಳಿದ್ದೇವೆ.

**ಡಾ:ಜಿ.ಪರಮೇಶ್ವರ್:-** ಮಾನ್ಯ ಸಭಾಪತಿಯವರೆ, ಶ್ರೀ ಗೋವಿಂದರಾಜು ಅವರಿಗೂ ಸಹ ಇದರ ಬಗ್ಗೆ ಹೆಚ್ಚಿನ concern ಇದೆ. ಇದು ಬಹಳ ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಿದೆ ಎಂಬುದನ್ನು ನಾವೆಲ್ಲಾ ಗಮನಿಸಬೇಕು. ಅದಕ್ಕಾಗಿ 1985ರಲ್ಲಿ ಕೇಂದ್ರ ಸರ್ಕಾರ ಒಂದು ಕಾನೂನನ್ನು ತಂದಿದೆ. ಇದು ಬಹಳ ದೊಡ್ಡ ಪ್ರಮಾಣದಲ್ಲಿ ಇಡೀ ದೇಶದಲ್ಲಿ ಹರಡುತ್ತಿದೆ ಹಾಗೂ ಯುವ ಜನಾಂಗ ಇದಕ್ಕೆ ಸೇರುತ್ತಿದ್ದಾರೆ ಎಂದು ಹೇಳಿ NDPS (Narcotic Drugs and Psychotropic Substances) Act, 1985 ಎಂಬ ಒಂದು ಆಕ್ಟ್ ಅನ್ನು ತಂದಿದೆ. ನಾವು ಅಂಕಿ-ಅಂಶ ಕೊಡಬಹುದು. ಮಾನ್ಯ ಸದಸ್ಯರ ಕಳಕಳಿ ನನಗೆ ಅರ್ಥವಾಗುತ್ತದೆ. ಅವರು ಉಡುಪಿ, ಮಂಗಳೂರು ಬೇರೆ ಬೇರೆ ಆಗಿದೆ ಎಂದು ಹೇಳಿದ್ದಾರೆ. ಮಣಿಪಾಲ್ ಉಡುಪಿಗೆ ಸೇರಿದೆ. ನನ್ನ ಹತ್ತಿರ ಉಡುಪಿಯಲ್ಲಿ 26 ಪ್ರಕರಣಗಳು ದಾಖಲಾಗಿರುವ ಮಾಹಿತಿ ಇದೆ. ಮಂಗಳೂರು ನಗರ ಎಂದು ಹೇಳಿ ಉಡುಪಿ, ಮಂಗಳೂರು ಎರಡನ್ನೂ ಸೇರಿಸಿ ಕೊಟ್ಟಿದ್ದಾರೆ.

ಮಾನ್ಯ ಸಭಾಪತಿಯವರೆ, 2016ರಲ್ಲಿ ಮಂಗಳೂರು ನಗರದಲ್ಲಿ 239 ಪ್ರಕರಣಗಳು ದಾಖಲಾಗಿವೆ ಎಂದು ಹೇಳಿದರೆ ನಿಮಗೆ ಆಶ್ಚರ್ಯವಾಗಬಹುದು. ಬೆಂಗಳೂರಿನಲ್ಲಿ 128 ಪ್ರಕರಣಗಳು ದಾಖಲಾಗಿದ್ದರೆ, ಮಂಗಳೂರಿನಲ್ಲಿ 239 ಪ್ರಕರಣಗಳು ದಾಖಲಾಗಿದೆ. ಈ ಅಂಕಿ ಅಂಶಗಳಲ್ಲಿ ಮಣಿಪಾಲ್‌ದು ಸಹ ಸೇರಿಸಿದಾಗ ಎಂದು ಕಾಣುತ್ತದೆ. ಅಂದರೆ ಇದರ ಗಾಂಭೀರ್ಯತೆ ಬಹಳ ದೊಡ್ಡ ಪ್ರಮಾಣದಲ್ಲಿದೆ. ನಾನು ಕಳೆದ ಬಾರಿಯ ಅಧಿವೇಶನದಲ್ಲಿ ಇದನ್ನು ಹೇಳಿದ್ದೆನು. ಬೆಂಗಳೂರಿನಲ್ಲಿ ಹೊರದೇಶದಿಂದ ಬಂದಿರತಕ್ಕಂತಹ ವಿದ್ಯಾರ್ಥಿಗಳು ವಿಶೇಷವಾಗಿ ಆಫ್ರಿಕನ್ ದೇಶಗಳಿಂದ ಬಂದಂತಹ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವಿದ್ಯಾರ್ಥಿಗಳು ಏನಿದ್ದಾರೆ, ಅವರು ಅನೇಕ ಸಂದರ್ಭದಲ್ಲಿ ಈ ಒಂದು ದಂಧೆಗೆ ಇಳಿದಿದ್ದಾರೆ ಎಂಬುದನ್ನು ಇತ್ತೀಚೆಗೆ ಬಂದಂತಹ ಪತ್ರಿಕಾವರದಿಗಳಲ್ಲಿ ಕೂಡ ನೋಡುತ್ತಿರಬಹುದು. ಆದ್ದರಿಂದ ಇದನ್ನು ನಾವು ಹೇಗೆ ಹತ್ತಿಕ್ಕಬೇಕು? ನಾವು ಇಲ್ಲಿ ಯಾರು ಮಾರಾಟ ಮಾಡುತ್ತಿದ್ದಾರೆ, ಪೆಡ್ಲರ್ಸ್ ಯಾರಿದ್ದಾರೆ, ಅವರನ್ನು ಅನೇಕ ಸಂದರ್ಭದಲ್ಲಿ ಹಿಡಿದುಕೊಂಡು ಬಿಡುತ್ತೇವೆ. ಇವರೇ ನಮಗೆ ತಕ್ಷಣದಲ್ಲಿ ಸಿಗುವವರು. ಆದರೆ ಇದರ ಹಿಂದಿರುವ ದೊಡ್ಡ ಕೈಗಳು ಅಂದರೆ ಸಪ್ಲೈ ಮಾಡುವವರನ್ನು ನಾವು ಹಿಡಿಯಬೇಕಾಗಿದ್ದು, ಆ ಪ್ರಯತ್ನದಲ್ಲಿದ್ದೇವೆ. ಕಳೆದ ಬಾರಿ ಕೂಡ ಬೆಳಗಾವಿಯ ಅಧಿವೇಶನದಲ್ಲಿ ಉತ್ತರ ಕೊಡುವಾಗ ಇಡೀ ರಾಜ್ಯದಲ್ಲಿ ವಿಶೇಷವಾದ ಡ್ರೈವ್ ಮಾಡುತ್ತೇವೆ ಎಂದು ಹೇಳಿದ್ದೆನು. ಈಗ ಅದನ್ನು ನಾವು ಪ್ರಾರಂಭ ಮಾಡಿದ್ದೇವೆ. ನಮ್ಮ ಪೋಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿ ಮಂಗಳೂರು ಪೋಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿ ಎಲ್ಲೆಲ್ಲಿ ನಮಗೆ ಮಾಹಿತಿಗಳಿವೆ, ಅಲ್ಲಿ ಇದನ್ನು ಹತ್ತಿಕ್ಕುವುದಕ್ಕೆ ಒಂದು ಡ್ರೈವ್ ಪ್ರಾರಂಭ ಮಾಡಿದ್ದೇವೆ. ನಾವು ಏನೆಲ್ಲ ಮಾಡುತ್ತಿದ್ದೇವೆ ಎಂಬ ಸಂಪೂರ್ಣ ಮಾಹಿತಿಯನ್ನು ಕೊಟ್ಟಿದ್ದೇನೆ. ಮತ್ತೆ ನಾನು ಅದನ್ನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಒಂದಂತೂ ನಿಜ. ನಮ್ಮ ಸರ್ಕಾರ ಇದನ್ನು ನಿಲ್ಲಿಸುವುದಕ್ಕೆ ಮತ್ತು ಇದನ್ನು ತಡೆಯುವುದಕ್ಕೆ ಎಲ್ಲಾ ಪ್ರಯತ್ನಗಳನ್ನು ಮಾಡುತ್ತೇವೆ ಎಂದು ನಾನು ಸದನಕ್ಕೆ ಹೇಳಬಯಸುತ್ತೇನೆ.

ಶಾಲಾ ಕಾಲೇಜುಗಳ ವಿದ್ಯಾರ್ಥಿಗಳ ಮೇಲೆ ಇದರ ವ್ಯತಿರಿಕ್ತ ಪರಿಣಾಮ ಏನಾಗುತ್ತದೆ? ಕಾನೂನು ಹೇಗಿದೆ? ಕಾನೂನಿನಡಿಯಲ್ಲಿ ಅವರಿಗೆ ಏನು ಶಿಕ್ಷೆಯಾಗುತ್ತದೆ? ವಿದ್ಯಾರ್ಥಿಯ ಜೀವನ ಮತ್ತು ಅವರ ಭವಿಷ್ಯ ಹಾಳಾಗಿ ಹೋಗುತ್ತದೆ ಎಂಬುದರ ಬಗ್ಗೆ ಆಯಾ ಲಿಮಿಟ್ಸ್‌ನಲ್ಲಿರತಕ್ಕಂತಹ ಶಾಲಾ ಕಾಲೇಜುಗಳಿಗೆ ಡಿಸಿಪಿಗಳು ಮತ್ತು ಪೋಲೀಸ್ ಅಧಿಕಾರಿಗಳು ಹೋಗಿ ತಿಂಗಳಿಗೊಮ್ಮೆ ಹೇಳಿ ಬರುವ ವ್ಯವಸ್ಥೆಯನ್ನು ಮಾಡಿದ್ದೇವೆ. ಏಕೆಂದರೆ ಕೇವಲ ವಿತರಣೆ ಮಾಡುವವರನ್ನು ಹಿಡಿದುಕೊಂಡು ಬರುವುದು ಮಾತ್ರವಲ್ಲ ಜೊತೆಗೆ ಅವರಿಗೊಂದು awareness create ಮಾಡಬೇಕೆಂದು ಹೇಳಿ ಅದನ್ನೂ ಕೂಡ ಮಾಡಿದ್ದೇವೆ. ಬೆಂಗಳೂರಿನಲ್ಲಿರಬಹುದು ಅಥವಾ ನಮ್ಮ ರಾಜ್ಯದಲ್ಲಿ ಎಲ್ಲಿಯೂ ಕೂಡ ಇದನ್ನು ಬೆಳೆಯುವುದಕ್ಕೆ ಬಿಡುವುದಿಲ್ಲ ಕಠಿಣ ಕ್ರಮ ಕೈಗೊಳ್ಳುತ್ತೇವೆಂದು ಹೇಳುವುದಕ್ಕೆ ಬಯಸುತ್ತೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೆ, ಈಗ ಹೊಸದಾಗಿ ಒಂದು ದಂಧೆ ಹೇಗೆ ನಡೆಯುತ್ತಿದೆಯೆಂದರೆ....

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:–** ಹೇಗೆ ನಡೆಯುತ್ತಿದೆ ಎಂಬುದು ಬೇಡ. ಸರ್ಕಾರ ಏನು ಮಾಡಬೇಕೆಂದು ಹೇಳಿ. What does he should do?

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೆ, ವೆಬ್‌ಸೈಟ್ ಮೂಲಕ ಕೊರಿಯರ್‌ನಲ್ಲಿ ಹಸ್ತಾಂತರ ಮಾಡುವ ಒಂದು ದಂಧೆ ಪ್ರಾರಂಭವಾಗಿದೆ. ಮುಂಚಿನ ಹಾಗಲ್ಲ. ವೆಬ್‌ಸೈಟ್ ಮೂಲಕ ವ್ಯಾಪಾರ ನಡೆಸಿಕೊಂಡು ಮನೆ ಮನೆಗೆ ಮುಟ್ಟಿಸುವಂತಹ ವ್ಯವಸ್ಥೆ ಏನು ಆಗಿದೆ, ಅದಕ್ಕೆ ಸರ್ಕಾರ ಏನಾದರೂ ವಿಶೇಷ ಪ್ರಯತ್ನ ಮಾಡುವುದಕ್ಕೆ ಸಾಧ್ಯವಿದೆಯೇ? ಮುಂಚೆಯೆಲ್ಲಾ ಸಣ್ಣ ಸಣ್ಣ ಅಂಗಡಿಗಳಲ್ಲಿ ಪೆಡ್ಲರ್ಸ್ ಮೂಲಕ ಮಾರಾಟ ಮಾಡಲಾಗುತ್ತಿತ್ತು. ಈಗ ಇದನ್ನು ಡಾರ್ಕ್ ವೆಬ್‌ಸೈಟ್‌ಗಳ ಮೂಲಕ ಭಾರತದಲ್ಲಿ ನಿರ್ವಹಿಸಲ್ಪಡುತ್ತಿದೆ.

**ಸಭಾಪತಿಯವರು:–** ಅವರೂ ಸಹ ತಾಂತ್ರಿಕವಾಗಿ ಮುಂದುವರೆದುಬಿಟ್ಟಿದ್ದಾರೆ.

**ಡಾ:ಜಿ.ಪರಮೇಶ್ವರ್:–** ಮಾನ್ಯ ಸಭಾಪತಿಯವರೆ, ಮಾನ್ಯ ಕಾರ್ಣಿಕ್ ಅವರು ಹೇಳಿದಂತೆ ಡಾರ್ಕ್‌ನೆಟ್ ಇವೆಲ್ಲಾ ವೆಬ್‌ಸೈಟ್‌ಗಳ ಮೂಲಕ ಮಾರಾಟ ಮಾಡುವುದು ಎಂದರೆ ವೆಬ್‌ಸೈಟ್ ಮೂಲಕ ಮಾಹಿತಿಯನ್ನು ಕೊಡುತ್ತಾರೆ. ಇಂತಹ ಕಡೆ ಹೋಗಿ ಕಲೆಕ್ಟ್ ಮಾಡಿಕೊಳ್ಳಿ ಎಂದು ಮಾಹಿತಿ ಕೊಡುವುದು ಇವನ್ನೆಲ್ಲಾ ನಾವು ಸೈಬರ್ ಕ್ರೈಮ್‌ನಲ್ಲಿ ಮಾನಿಟರ್ ಮಾಡುತ್ತಿದ್ದೇವೆ. We are aware of that. ಇದನ್ನು ಬಹಳ ಸೀರಿಯಸ್ ಆಗಿ ತೆಗೆದುಕೊಂಡಿದ್ದೇವೆ ಎಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

**ಪ್ರಶ್ನೆ ಸಂಖ್ಯೆ: 286**

**(ಉತ್ತರ ಲಗತ್ತಿಸಲಾಗಿದೆ)**

**ಶ್ರೀ ಕೆ.ಸಿ.ಕೊಂಡಯ್ಯ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)(ಶ್ರೀ ಎಂ.ಡಿ.ಲಕ್ಷ್ಮಿನಾರಾಯಣ ಅವರ ಪರವಾಗಿ):–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿರುತ್ತಾರೆ. ಈ ಪ್ರಶ್ನೆಯನ್ನು ಶ್ರೀ ಎಂ.ಡಿ.ಲಕ್ಷ್ಮಿನಾರಾಯಣ ಅವರು ಸುಮಾರು ಮೂರು ವರ್ಷದಿಂದ ಕೇಳುತ್ತಲೇ ಇದ್ದಾರೆ. ಬೆಂಗಳೂರು ನಗರದಲ್ಲಿ ಬೆಂಗಳೂರು ನಗರ ಹುಟ್ಟುವುದಕ್ಕಿಂತ ಮುಂಚೆ ಕೈಮಗ್ಗಗಳು ಮತ್ತು ವಿದ್ಯುತ್ ಮಗ್ಗಗಳು ಇವೆ. ಬೆಂಗಳೂರಿನಲ್ಲಿರುವ ಏರಿಯಾಗಳಾದ ಕಬ್ಬನ್ ಪೇಟೆ, ದೊಮ್ಮಸಂದ್ರ, ಸಂಪಂಗಿರಾಮ ನಗರ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮುಂತಾದ ಕಡೆಗಳಲ್ಲಿ ವಿದ್ಯುತ್ ಮಗ್ಗಗಳು ಇವೆ. ಇವತ್ತು ಅಪಾರ್ಟ್‌ಮೆಂಟ್‌ಗಳನ್ನು ಕಟ್ಟಿ ಅಥವಾ ಕಾಂಪ್ಲೆಕ್ಸ್‌ಗಳನ್ನು ಕಟ್ಟಿ ಅವರೆಲ್ಲಾ ಮನೆ ಬಗಲಿಗಿರುವ ಈ ಮಗ್ಗಗಳಿಂದ ಶಬ್ದಮಾಲಿನ್ಯವಾಗುತ್ತದೆ ಎಂದು ಹೇಳುತ್ತಿದ್ದಾರೆ. ಅದೇ ಏರಿಯಾದಲ್ಲಿ ಹಿಟ್ಟಿನ ಗಿರಣಿಗಳು, ಆಟೋ ಗ್ಯಾರೇಜ್‌ಗಳು, ಮ್ಯೂಸಿಕಲ್‌ಗಳು ಎಲ್ಲಾ ಇದ್ದು ಅವುಗಳಿಗೆ ಅನುಮತಿಯನ್ನು ಕೊಟ್ಟಿದ್ದಾರೆ. ಕೈಮಗ್ಗದಿಂದ ಮತ್ತು ವಿದ್ಯುತ್ ಮಗ್ಗದಿಂದ ಬದುಕುವ ಈ ನೇಕಾರರನ್ನು ಒಕ್ಕಲೆಬ್ಬಿಸಲಾಗುತ್ತಿದೆ. ಕಳೆದ ಮೂರು ವರ್ಷಗಳಲ್ಲಿ ಎಷ್ಟು ವಿದ್ಯುತ್ ಮಗ್ಗ (ಅರೆಯಾಂತ್ರಿಕ ಕೈಮಗ್ಗಗಳು)ಗಳ ಕಾರ್ಯ ಚಟುವಟಿಕೆಗಳನ್ನು ಸೀಜ್ ಮಾಡಲಾಗಿದೆ ಅಂದರೆ ಸುಮಾರು 30 ವಿದ್ಯುತ್ ಮಗ್ಗಗಳನ್ನು ಬಂದ್ ಮಾಡಲಾಗಿದೆ. ಇವರ ಜೀವನ ಸಾಗಿಸುವುದು ಏನಾಗಬೇಕು? ಇದಕ್ಕೆ ಜವಳಿ ಇಲಾಖೆಯವರೂ ಸರ್ಕಾರಕ್ಕೆ ಪತ್ರವನ್ನು ಬರೆದಿದ್ದಾರೆ. ನನ್ನ ಪ್ರಶ್ನೆ ಏನೆಂದರೆ ಈ ವೃತ್ತಿಯನ್ನು ಯಾವ ರೀತಿಯಾಗಿ ಸರ್ಕಾರ ರೆಗ್ಯುಲೇಷನ್‌ದರಲ್ಲಿ include ಮಾಡಿದೆಯೋ, ಅದೇ ರೀತಿ ವಿದ್ಯುತ್ ಮಗ್ಗಗಳನ್ನು ಅಳವಡಿಸಬಹುದಾಗಿದೆ. ಅದಕ್ಕೊಂದು ಸಮಿತಿಯನ್ನು ರಚನೆ ಮಾಡುವುದಾಗಿ ಸರ್ಕಾರ ಹೇಳಿತ್ತು. ಇನ್ನೂ ಕೊಟ್ಟಿಲ್ಲ. ನಾಲ್ಕು ಗೋಡೆಗಳ ಮಧ್ಯೆ ಮಗ್ಗಗಳನ್ನು ಹಾಕಿಕೊಂಡು ಕೆಲಸ ಮಾಡುತ್ತಾರೆ. ಅದರಿಂದ ಶಬ್ದ ಮಾಲಿನ್ಯ ಹೊರಗೆ ಹೇಗೆ ಬರುತ್ತದೆ? ಕಿಟಕಿಗಳನ್ನು ಮುಚ್ಚಿಕೊಂಡಿರಿ, ಬಾಗಿಲನ್ನು ತೆರೆಯಬೇಡಿ ಎಂದು ಅವರಿಗೇನಾದರೂ instruction ಕೊಡಲಿ. ಅವರು ರೋಡಿನಲ್ಲಿ ಬಂದು ಶಬ್ದ ಮಾಲಿನ್ಯ ಮಾಡಿಲ್ಲ. ಆದ್ದರಿಂದ ಇದರಿಂದಲೇ ಬದುಕುವಂತಹ ಜನರನ್ನು ಒಕ್ಕಲೆಬ್ಬಿಸಬೇಡಿ. ಸೀಜ್ ಮಾಡಿರುವ 30 ಮಗ್ಗಗಳನ್ನು ರಿಲ್ಯಾಕ್ಸ್ ಮಾಡಬೇಕು. ಪುನರಾರಂಭ ಮಾಡಬೇಕು.

**ಸಭಾಪತಿಯವರು:–** ಸಚಿವರಿಗೆ ಬಡ ನೇಕಾರರ ಸಮಸ್ಯೆಯ ಅರಿವಾಗಿದೆ ಎಂದು ಕಾಣುತ್ತದೆ. ಉತ್ತರವನ್ನು ಹೇಳುತ್ತಾರೆ.

**ಶ್ರೀ ಕೆ.ಜೆ.ಜಾರ್ಜ್:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ ಅವರ ಪರವಾಗಿ ಶ್ರೀ ಕೆ.ಸಿ.ಕೊಂಡಯ್ಯನವರು ಪ್ರಶ್ನೆಯನ್ನು ಕೇಳಿದ್ದಾರೆ. ಈಗ 2002ರ ಮೊದಲು ಅಂದರೆ ಸಿಡಿಪಿ ಬರುವ ಮೊದಲು ಯಾವುದೇ ವಿದ್ಯುತ್ ಮಗ್ಗಕ್ಕೆ ಅವಕಾಶವಿರುವುದಿಲ್ಲ. ಸುಮಾರು 250 ವಿದ್ಯುತ್ ಮಗ್ಗಗಳು 2007ಕ್ಕಿಂತ ಮೊದಲು ಬಂದಿವೆ. ಇದನ್ನು ಮುಚ್ಚಿಸುವಂತಹ ಕೆಲಸವನ್ನು ಬಿ.ಬಿ.ಎಂ.ಪಿ.ಯವರು ಅವರಾಗಿಯೇ ಮಾಡಿರುವುದಿಲ್ಲ. ಯಾರಾದರೂ ದೂರು ಕೊಟ್ಟರೆ ಪೊಲ್ಯೂಷನ್ ಕಂಟ್ರೋಲ್ ಬೋರ್ಡ್ ಅವರು ಬಂದು ಪರಿಶೀಲನೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡುತ್ತಾರೆ. ಕಾನೂನು ಪ್ರಕಾರ ರೆಸಿಡೆನ್ಷಿಯಲ್ ಏರಿಯಾದಲ್ಲಿ 55–60 ಡೆಸಿಬಲ್ ಸೌಂಡ್ ಜಾಸ್ತಿ ಬಂದರೆ ಪೊಲ್ಯೂಷನ್ ಕಂಟ್ರೋಲ್ ಬೋರ್ಡ್ ಅವರು ನೋಟೀಸ್ ಕೊಡುತ್ತಾರೆ. ಅದರ ಪ್ರಕಾರ ನಾವು ಅವರ ಟ್ರೇಡ್ ಲೈಸೆನ್ಸ್ ಅನ್ನು ಕ್ಯಾನ್ಸಲ್ ಮಾಡಬೇಕಾಗುತ್ತದೆ. ಈ ಉದ್ದೇಶದಿಂದ ಮಾಡಿದ್ದೇವೆಯೇ ಹೊರತು ನಾವಾಗಲೀ ಬಿ.ಬಿ.ಎಂ.ಪಿ. ಆಗಲೀ ಅವರಿಗೆ ತೊಂದರೆ ಕೊಡುವುದಕ್ಕೆ ಹೋಗಿಲ್ಲ. ಸೌಂಡ್ ಕಡಿಮೆ ಮಾಡುವಂತಹ ಕೆಲಸವನ್ನು ನಾವು ಬಿ.ಬಿ.ಎಂ.ಪಿ.ಯವರು ಮಾಡಲೇ ಬೇಕು. ಯಾರು ವಿದ್ಯುತ್ ಮಗ್ಗ ನಡೆಸುತ್ತಾರೆಯೋ ಅವರು ಅದರ ಸೌಂಡ್ ಕಾನೂನಿನ ಮಿತಿಯೊಳಗಿರುವಂತೆ ನೋಡಿಕೊಳ್ಳಬೇಕು.

**ಸಭಾಪತಿಯವರು:–** ಪಕ್ಕದವರಿಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು.

(77) 9-02-2017/11-50/RC-RN

**ಶ್ರೀ ಕೆ.ಸಿ.ಕೊಂಡಯ್ಯ:–** ಮಾನ್ಯ ಸಭಾಪತಿಯವರೆ, ಪೊಲ್ಯೂಷನ್ ಕಂಟ್ರೋಲ್ ಬೋರ್ಡ್ ನಾರ್ಮ್ಸ್ ಪ್ರಕಾರ ನಾವು ಮಾಡುತ್ತೇವೆಂದು ಹೇಳುತ್ತಾರೆ. ಅವರು ಏನು ಹೇಳಿದ್ದು, 50 ರಿಂದ 75 ಡೆಸಿಬಲ್ ಇದ್ದರೆ ಅವರು ವರದಿ ಮಾಡುತ್ತಾರೆ. ನಾವು ನಮ್ಮ ಮನೆಯ ನಾಲ್ಕು ಗೋಡೆಗಳ ಮಧ್ಯದಲ್ಲಿ ನೇಯ್ಗೆ ಕೆಲಸವನ್ನು ಮಾಡುತ್ತಿದ್ದೇವೆ. ಹಾಗಾದರೆ ನೀವು ರಸ್ತೆಯಲ್ಲಿ ವಾಹನಗಳಿಂದಾಗಿ ಎಷ್ಟು ಶಬ್ದ ಮಾಲಿನ್ಯ ಉಂಟಾಗುತ್ತಿದೆ. ಹಾಗಾದರೆ ನೀವು ರಸ್ತೆಯನ್ನು ಸೀಜ್ ಮಾಡಿದ್ದೀರಾ ಅಥವಾ ವಾಹನಗಳನ್ನು ಸೀಜ್ ಮಾಡಿದ್ದೀರಾ?

**ಸಭಾಪತಿಯವರು:–** ಎರಡೂ ಬ್ಯಾಲೆನ್ಸ್ ಆಗಬೇಕು. ಇವರೂ ಬದುಕಬೇಕು, ಉಳಿದವರು ಬದುಕಬೇಕು.

**ಶ್ರೀ ಕೆ.ಸಿ.ಕೊಂಡಯ್ಯ:–** ಸರ್ಕಾರ ಏನಾದರು ಇವರನ್ನು ಉಳಿಸಬೇಕು ಎಂದಾದರೆ ಅವರು ಹೇಳಿದಂತೆ ಕಡಿಮೆ ವಿದ್ಯುತ್ ಉಪಯೋಗಿಸಿ, ಶಬ್ದ ಮಾಲಿನ್ಯ ಉಂಟಾಗದಂತೆ, replacement ಅನ್ನು department ಮಾಡಲಿ. ಅಲ್ಲಿಯವರೆಗೆ ಇವರನ್ನು ಒಕ್ಕಲೆಬ್ಬಿಸಬೇಡಿ ಎಂಬುದು ನನ್ನ ಆಗ್ರಹ.

**ಸಭಾಪತಿಯವರು:–** ಮಾನ್ಯ ಸಚಿವರು ಇದರ ಬಗ್ಗೆ ಹೇಳುತ್ತಾರೆ. ಮಾನವೀಯತೆ ಬಿಟ್ಟು ಮಾಡುವುದಕ್ಕೆ ಬರುವುದಿಲ್ಲ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಜೆ.ಜಾರ್ಜ್:–** ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ಒಂದು ಕಾನೂನು ಮಾಡಿದೆ. ಶಬ್ದ ಮಾಲಿನ್ಯ ಇಷ್ಟು ಡೆಸಿಬಲ್ ಒಳಗೆ ಇರಬೇಕು ಎಂದು ಮಾಡಿದೆ. ಯಾರೋ ಒಬ್ಬರು ದೂರನ್ನು ಕೊಡುತ್ತಾರೆ. ಅದಕ್ಕೆ ಪೊಲ್ಯೂಷನ್ ಕಂಟ್ರೋಲ್ ಬೋರ್ಡ್‌ನವರು ಬಂದು ಚೆಕ್ ಮಾಡಿ, ಇದರಿಂದ ಶಬ್ದ ಮಾಲಿನ್ಯ ಜಾಸ್ತಿ ಉಂಟಾಗುತ್ತಿದೆ ಆದುದರಿಂದ ಇದನ್ನು ಮುಚ್ಚಿಸಬೇಕು ಮತ್ತು ಇದರ trade license cancel ಮಾಡಿಸಬೇಕೆಂದು ನಮ್ಮ ಬಿಬಿಎಂಪಿಗೆ ನೋಟೀಸ್ ಕೊಡುತ್ತಾರೆ. ಹಾಗಾಗಿ ನಾನು ಹೇಳಿದೆ, ನಮ್ಮ ಬಿಬಿಎಂಪಿ ಯಿಂದ ಯಾವುದನ್ನು ಮಾಡಿಲ್ಲ. ಈಗ ಬೇಕಾದರೆ ಅವರು ಒಂದು ಸಲಹೆಯನ್ನು ಕೊಟ್ಟಿದ್ದಾರೆ, ಅದನ್ನು ಕಡಿಮೆ ಮಾಡುವುದಕ್ಕೆ ಮೋಟಾರ್‌ನ್ನು ವಿನ್ಯಾಸಗೊಳಿಸುವ ಬಗ್ಗೆ Textiles Minister ಗೆ ಬರೆದು ಅವರ ಕಡೆಯಿಂದ ಅವಕಾಶ ಮಾಡಿಕೊಡುವುದಕ್ಕೆ ನಾನು request ಮಾಡಿಕೊಳ್ಳುತ್ತೇನೆ.

**ಶ್ರೀ ಕೆ.ಸಿ.ಕೊಂಡಯ್ಯ:–** ಮಾನ್ಯ ಸಭಾಪತಿಯವರೆ, 30 ಮಗ್ಗಗಳನ್ನು ಬಂದ್ ಮಾಡಿಸಿದ್ದೀರಲ್ಲ, ಅದನ್ನು ಏನು ಮಾಡುತ್ತಾರೆ? ಆದುದರಿಂದ ನೀವು ಕಾರ್ಪೋರೇಶನ್ ಅವರನ್ನು ಕಳುಹಿಸಿ ಪೊಲ್ಯೂಷನ್ ಕಂಟ್ರೋಲ್ ಯಾವ ರೀತಿ ಮಾಡಬೇಕೆಂದು ಅವರಿಗೆ ಹೇಳಿ. ಒಂದೊಂದು ಮಗ್ಗ ಇಟ್ಟುಕೊಂಡಂತಹ ಬಡವರು ಇದ್ದಾರೆ.

**ಶ್ರೀ ಕೆ.ಜೆ.ಜಾರ್ಜ್:–** ಮಾನ್ಯ ಸಭಾಪತಿಯವರೆ, ಮಾನ್ಯ ಕೊಂಡಯ್ಯನವರಿಗೆ ಸಾಕಷ್ಟು ಅನುಭವ ಇದೆ. ಪೊಲ್ಯೂಷನ್ ಕಂಟ್ರೋಲ್ ಬೋರ್ಡ್‌ನವರು ಇಷ್ಟು decibel ಗಿಂತ ಕಡಿಮೆ ಇದ್ದರೆ ಮಾತ್ರ ಮಗ್ಗ ನಡೆಸಲು ಬಿಡಿ ಇಲ್ಲದಿದ್ದರೆ ಬಂದ್ ಮಾಡಿಸಿ ಎಂದು ತಿಳಿಸಿದ್ದರಿಂದ ಬಂದ್ ಮಾಡಿಸಲಾಗಿದೆ. ಮಾನ್ಯ ಸದಸ್ಯರಿಗೆ ಸಲಹೆ ನೀಡುವುದೇನೆಂದರೆ ಕಡಿಮೆ ಶಬ್ಧ ಬರುವ ಮೋಟಾರ್ ಅನ್ನು ಅಳವಡಿಸಿಕೊಂಡರೆ ಮತ್ತೆ ಮಗ್ಗಗಳನ್ನು ಪ್ರಾರಂಭ ಮಾಡಲು ಪರವಾನಗಿಯನ್ನು ಕೊಡುತ್ತೇವೆ. ಆದರೆ ಈ ನೇಕಾರರು ಬಡವರಾಗಿರುವುದರಿಂದ ಕಡಿಮೆ ಶಬ್ಧ ಬರುವ ಮೋಟಾರ್ ಅಳವಡಿಸಿಕೊಳ್ಳಲು ಸರ್ಕಾರದಿಂದ ಸಹಾಯಧನ ನೀಡಲು ಸಾಧ್ಯವೇ ಎಂದು ಮಾನ್ಯ ಸದಸ್ಯರು ಕೇಳಿರುತ್ತಾರೆ. ಇದು ನನ್ನ ವ್ಯಾಪ್ತಿಗೆ ಬರುವುದಿಲ್ಲ.

ತಿದ್ದುಪಡಿಯಾಗದ ಪ್ರತಿ: ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಂಖ್ಯೆ 316**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಟಿ.ಎ.ಶರವಣ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. 2016ರ ಮೇ 01 ರಂದು ಆರ್ಯವೈಶ್ಯ ಮಹಾಸಭಾ ಸಂಘದ ಚುನಾವಣೆ ನಡೆದಿದೆಯೇ ಎಂಬ ಪ್ರಶ್ನೆಗೆ ನಡೆದಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಬಹುಶಃ ಈ ಚುನಾವಣೆ ಪ್ರಕ್ರಿಯೆ ಏನಿದೆ, ಅದನ್ನು ಯಾವುದನ್ನು ಕೂಡ ಸರಿಯಾಗಿ ಪಾಲನೆ ಮಾಡಿಲ್ಲ. ಚುನಾವಣೆ ನಡೆಸಬೇಕಾಗಿದ್ದರೆ ಕರಡು ಪಟ್ಟಿ ಇರಬಹುದು, ಅಂತಿಮ ಪಟ್ಟಿ ಇರಬಹುದು, ಅದ್ಯಾವುದನ್ನು ಪ್ರಕಟಣೆ ಮಾಡಿಲ್ಲ. ಚುನಾವಣೆಗೆ ಆರು ತಿಂಗಳ ಮುಂಚಿತವಾಗಿ ಘೋಷಣೆ ಆಗಬೇಕಾಗಿತ್ತು, ಅದನ್ನು ಮಾಡಿಲ್ಲ. ಮಾರ್ಚ್ ತಿಂಗಳಿನಲ್ಲಿ ಚುನಾವಣೆ ಘೋಷಣೆ ಮಾಡುತ್ತಾರೆ, ಮೇ ತಿಂಗಳಿನಲ್ಲಿ ಚುನಾವಣೆಯನ್ನು ನಡೆಸಿಯೇ ಬಿಡುತ್ತಾರೆ. ಆ ಒಂದು ಚುನಾವಣೆಯ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದಂತಹ ಚುನಾವಣಾ ಅಧಿಕಾರಿ ಏನಿದ್ದಾರೆ ಅವರು **XXX** ನಾನು ನೇರವಾಗಿ ಹೇಳುವುದಕ್ಕೆ ಬಯಸುತ್ತೇನೆ. ಈ ಒಂದು ವಿಚಾರದಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಗಳು ಚುನಾವಣೆ ನಡೆದಿರುವಂತಹ ಅಭ್ಯರ್ಥಿಗಳನ್ನು ಏನು ಪ್ರಕಟಣೆ ಮಾಡಿದ್ದಾರೆ, ತಾವು ಉತ್ತರದಲ್ಲಿ ಸಂಘದ ಚುನಾವಣಾದಿಕಾರಿ ನೇಮಕ ಬೈಲಾ ಪ್ರಕಾರ ನಡೆದಿರುತ್ತದೆ ಹಾಗೂ ಸದಸ್ಯರ ಪಟ್ಟಿ ಪರಿಷ್ಕರಣೆಯು ಬೈಲಾ ಪ್ರಕಾರ ಯಥಾವತ್ತಾಗಿ ನಡೆಸಿರುವುದಿಲ್ಲವೆಂದು ಉತ್ತರದಲ್ಲಿ ತಿಳಿಸಿದ್ದಾರೆ. ಚುನಾವಣಾಧಿಕಾರಿಯನ್ನು ಯಾರು ಸಿಂಡಿಕೇಟ್ ಮೆಂಬರ್ಸ್ ಇದ್ದಾರೆ ಅವರನ್ನೇ ಅಭ್ಯರ್ಥಿಯನ್ನಾಗಿ ಮಾಡಿದ್ದಾರೆ. ಒಂದು ಪತ್ರಿಕೆಯಲ್ಲಿಯೂ ಸಹ ಇದು ಪ್ರಕಟಣೆಯಾಗಿದೆ. ಆ ವಿಷಯವನ್ನು ಸಹ ತಮ್ಮ ಗಮನಕ್ಕೆ ತರುತ್ತಿದ್ದೇನೆ. ದಯಮಾಡಿ ಇವತ್ತು ಏನು ಚುನಾವಣೆ ನಡೆದಿದೆ ಇದರ ಬಗ್ಗೆ ಸಂಪೂರ್ಣವಾಗಿ ತನಿಖೆ ಆಗಬೇಕು. ತನಿಖೆ ಆಗಿ ಆ ಚುನಾವಣಾಧಿಕಾರಿಯ ಸತ್ಯಾಸತ್ಯಯ ಹೊರಗೆ ಬರಬೇಕು. ಒಂದು ವೇಳೆ ಅವರು ತಪ್ಪಿತಸ್ಥರು ಎಂದು ಸಾಬೀತಾದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಇವತ್ತು fair and free ಆಗಿ ಚುನಾವಣೆ ನಡೆಸುವುದಕ್ಕೆ ಮತ್ತೊಮ್ಮೆ ತಾವು ಎಲ್ಲಾ ರೀತಿಯಲ್ಲಿಯೂ ಸಹಕಾರ ಕೊಡಬೇಕೆಂದು ತಮ್ಮಲ್ಲಿ ಒತ್ತಾಯ ಮಾಡುತ್ತಿದ್ದೇನೆ. ಇವತ್ತು ಕರ್ನಾಟಕ ಆರ್ಯವೈಶ್ಯ ಮಹಾಸಭಾ ಸಂಘಕ್ಕೆ ಸುಮಾರು 107 ವರ್ಷಗಳ ಇತಿಹಾಸವಿದೆ.

---

**XXX** ಮಾನ್ಯ ಸಭಾಪತಿಯವರ ಅಜ್ಞಾನುಸಾರ ಕಡತದಿಂದ ತೆಗೆದು ಹಾಕಲಾಗಿದೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾನ್ಯ ಸಭಾಪತಿಯವರೂ ಸಹ ನಮ್ಮ ಸಮಾಜಕ್ಕೆ ಸೇರಿದಂಥವರೆ. ಅವರಿಗೂ ಸಹ ಈ ವಿಷಯ ತಿಳಿದಿದೆ. ಅದರ ಬಗ್ಗೆ ತನಿಖೆ ನಡೆಸಬೇಕು ಮತ್ತು ಸತ್ಯಾಸತ್ಯೆಯು ಹೊರಗೆ ಬರಬೇಕು. ಇದರಲ್ಲಿ ಒಂದು ಪ್ರಮುಖವಾದಂತಹ ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

**ಸಭಾಪತಿಯವರು:-** ಮಾನ್ಯ ಶರವಣ ಅವರೆ, ನೀವು ಪ್ರಶ್ನೆ ಕೇಳಿದ್ದೀರಿ, ಆದರೆ ಏನೇನೊ ಹೇಳುತ್ತಿದ್ದೀರಿ.

**ಶ್ರೀ ಟಿ.ಎ.ಶರವಣ:-** ಸನ್ಮಾನ್ಯ ಸಭಾಪತಿಯವರೇ, ಇಬ್ಬರು ಅಭ್ಯರ್ಥಿಗಳನ್ನು disqualify ಮಾಡುತ್ತಾರೆ, disqualify ಮಾಡಿ ಮತ್ತೊಮ್ಮೆ ಚುನಾವಣೆಯಲ್ಲಿ ಸ್ಪರ್ಧಿಸುವುದಕ್ಕೆ ಅವಕಾಶ ಮಾಡಿಕೊಡುತ್ತಾರೆ. ಅದನ್ನು ಯಾವ ಆಧಾರದ ಮೇಲೆ ಮಾಡಿದ್ದಾರೆಂದು ತಾವು ಹೇಳಬೇಕಾಗುತ್ತದೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ನೀವು ಕೂಡ ಅದೇ ಸಮಾಜದವರೆ. ಆರ್ಯ ವೈಶ್ಯ ಮಹಾಸಭಾ. ಶ್ರೀ ಟಿ.ಎ.ಶರವಣ ಅವರು ಸಹ ಅದೇ ಸಮಾಜಕ್ಕೆ ಸೇರಿದಂಥವರು. ಸರ್ಕಾರಿ ಅಧಿಕಾರಿಯನ್ನು ಚುನಾವಣಾಧಿಕಾರಿಯನ್ನಾಗಿ ಮಾಡಿದ್ದರು ಅವರು **XXX** ಏನು ಹೇಳಿದ್ದಾರೆ ಆ ಪದವನ್ನು ತೆಗೆದುಹಾಕಿ. ಆ ಪದ ಸರಿ ಇಲ್ಲ.

**ಸಭಾಪತಿಯವರು:-** ಮಾನ್ಯ ಶರವಣ ಅವರು ಉಪಯೋಗಿಸಿರುವಂತಹ ಪದ **XXX** ಏನು ಹೇಳಿದ್ದಾರೆ **ಆ ಪದವನ್ನು ಕಡತದಿಂದ ತೆಗೆದುಹಾಕಿ.**

**ಶ್ರೀ ಸಿದ್ದರಾಮಯ್ಯ:-** ಎರಡನೆಯದಾಗಿ, Deputy Director of Co-Operative Societies, South Zone, ಬೆಂಗಳೂರು ನಗರ ಜಿಲ್ಲೆಯಲ್ಲಿ ಅವರು ಚುನಾವಣಾಧಿಕಾರಿಯಾಗಿ ಕೆಲಸ ಮಾಡಿದ್ದಾರೆ. ಈ ಸಂಘಗಳ ನೊಂದಾವಣಾಧಿಕಾರಿ ಇದ್ದಾರಲ್ಲ ಅವರು ಚುನಾವಣೆ ಮಾಡಿ ಎಂದು ರಿಕ್ವೆಸ್ಟ್ ಮಾಡಿಕೊಂಡಿದ್ದಾರೆ. ಸುಮಾರು 20 ಜಿಲ್ಲೆಗಳಲ್ಲಿ ಚುನಾವಣೆ ಆಗಿಲ್ಲ. 7 ಜಿಲ್ಲೆಗಳಲ್ಲಿ ಮಾತ್ರ ಚುನಾವಣೆ ಆಗಿದೆ. ಒಟ್ಟು 27 ಜಿಲ್ಲೆಗಳಲ್ಲಿ ಈ ಮಹಾಸಭಾದ ವ್ಯಾಪ್ತಿ ಇದೆ. ಇಲ್ಲಿ ಒಬ್ಬ ಶ್ರೀ ವೈ.ಜಿ.ರಮೇಶ್ ಬಾಬು ಎನ್ನುವಂಥವರ ನಾಮಿನೇಶನ್

---

**XXX** ಮಾನ್ಯ ಸಭಾಪತಿಯವರ ಅಜ್ಞಾನುಸಾರ ಕಡತದಿಂದ ತೆಗೆದು ಹಾಕಲಾಗಿದೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಿಜೆಕ್ಟ್ ಆಗಿರುತ್ತದೆ. ಅವರು ಹೈಕೋರ್ಟಿಗೆ ಹೋಗುತ್ತಾರೆ. ಹೈಕೋರ್ಟಿನವರು ಇವರಿಗೆ ಚುನಾವಣೆಯಲ್ಲಿ ನಿಂತುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಒಂದು ಡೈರೆಕ್ಷನ್ ಕೊಡುತ್ತಾರೆ. ಅವರು ಚುನಾವಣೆಗೆ ನಿಲ್ಲುತ್ತಾರೆ, ಸೋಲುತ್ತಾರೆ. ಪುನಃ ಅವರು ಈಗ ಸಿವಿಲ್ ಕೋರ್ಟಿಗೆ ಹೋಗಿದ್ದಾರೆ. The matter is pending before the Civil Court. ಅದು ಇನ್ನೂ ಸಹ ಇತ್ಯರ್ಥವಾಗಿಲ್ಲ. ಅವರು ಇನ್ನೂ evidence conduct ಮಾಡಿ ತೀರ್ಮ ಕೊಡಬೇಕಾದಂತಹ ಪರಿಸ್ಥಿತಿ ಇದೆ. ಇದು ಒಂದು ಭಾಗ. ಮಾನ್ಯ ಸದಸ್ಯರು ಹೇಳುವುದೇನೆಂದರೆ, ಅಲ್ಲಿ ಸರಿಯಾಗಿ ಚುನಾವಣೆ ನಡೆದಿಲ್ಲ, ಅಲ್ಲಿ ಅವ್ಯವಹಾರ ನಡೆದಿದೆ ಎಂದು ಹೇಳುತ್ತಿದ್ದಾರೆ. ಆದರೆ ಎಲ್ಲಾ ಬೈಲಾ ಪ್ರಕಾರವಾಗಿಯೇ ನೋಡಿಕೊಂಡು ಮಾಡಿದ್ದಾರೆ. ಒಂದು ವೇಳೆ aggrieved party ಯಾರಿದ್ದಾರೆ ಅವರು ಕೋರ್ಟಿಗೆ ಹೋಗಬೇಕೆ ಹೊರತು, ಈಗ ಚುನಾವಣೆಯನ್ನು ರದ್ದು ಮಾಡಿ enquiry ಮಾಡಿ ಎಂದು ಹೇಳುವುದಕ್ಕೆ ಬರುವುದಿಲ್ಲ. ಕಾನೂನಿನಲ್ಲಿ ಆ ರೀತಿಯಾದಂತಹ ಅವಕಾಶವಿಲ್ಲ. ಮೈಸೂರು ಜಿಲ್ಲೆಯಲ್ಲಿ unanimous ಆಗಿ ಚುನಾವಣೆ ನಡೆದಿದೆ. ಅಲ್ಲಿ ಶ್ರೀ ಮಂಜುನಾಥ ಶೆಟ್ಟಿ ಎಂಬುವರು ಒಂದು ಕಂಪ್ಲೇಂಟ್ ಮಾಡಿದ್ದಾರೆ. ಅದಕ್ಕೆ ಚುನಾವಣಾಧಿಕಾರಿ ಏನು ಹೇಳಿದ್ದಾರೆಂದರೆ, ನೋಡಪ್ಪ unanimous ಆಗಿ ಚುನಾವಣೆ ಆಗಿದೆ. ಈಗ ನಾವು ಪುನಃ re-conduct ಮಾಡುವುದಕ್ಕೆ ಬರುವುದಿಲ್ಲ, ಆದುದರಿಂದ ಒಂದು ವೇಳೆ ನಿಮಗೆ ಸಮಸ್ಯೆ ಇದ್ದರೆ go to the Court and challenge the election ಎಂದು ಹೇಳಿದ್ದಾರೆ.

ಎರಡನೆಯದಾಗಿ, Administrator ಏನು ಇದ್ದಾರಲ್ಲ, Administrator certify ಮಾಡಿ Voters list ಕೊಟ್ಟಿದ್ದರು ಅದರ ಪ್ರಕಾರವೇ ಚುನಾವಣೆಯನ್ನು ನಡೆಸಿದ್ದಾರೆ. ಅಲ್ಲಿ ಸುಮಾರು 32,317 ಜನ ಮತದಾರರಿದ್ದಾರೆ. ಅವರು 5 ಜಿಲ್ಲೆಗಳಲ್ಲಿ ಎಷ್ಟು ಮತದಾರರು ಬರುತ್ತಾರೆ, ಇದು ಇಡೀ ರಾಜ್ಯಕ್ಕೆ ಸೇರಿರುವಂಥದ್ದು. ಅವರು ಬೈಲಾ ಪ್ರಕಾರವಾಗಿ, ಕಾನೂನಿನ ಪ್ರಕಾರವಾಗಿ ಚುನಾವಣೆ ಮಾಡಿದ್ದಾರೆ. Voters list ಏನೆಂದರೆ, Administrator certify ಮಾಡಿ ಕೊಟ್ಟಿದ್ದಾರಲ್ಲ ಆ voters list ಮಾಡಿದ್ದಾರೆ ಎನ್ನುವುದು ಇವರ ದೂರು. ಅದನ್ನು ಆ ಸಮಯದಲ್ಲಿಯೇ ಚಾಲೆಂಜ್ ಮಾಡಬೇಕಾಗಿತ್ತು. ಅಂದರೆ ಚುನಾವಣೆ ಮುಂಚಿತವಾಗಿಯೇ ಚಾಲೆಂಜ್

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡಬೇಕಾಗಿತ್ತು. ಈಗ ಚುನಾವಣೆ ಆಗಿದೆ, ಫಲಿತಾಂಶ ಬಂದಿದೆ, ಅದೇನಿದ್ದರೂ ಚಾಲೆಂಜ್ ಮಾಡಬೇಕೆಂದರೆ ಕೋರ್ಟಿನಲ್ಲಿಯೇ ಮಾಡಬೇಕು.

**(78) 09.02.2017 ಕೆಜಿ:ವಿಕೆ 12.00**

**ಸಂಖ್ಯೆ 319**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ನನ್ನ ಪ್ರಶ್ನೆಬಹಳಪ್ರಮುಖವಾದುದು. ಕರ್ನಾಟಕ ರಾಜ್ಯ ಹಣಕಾಸು ನಿಗಮದಲ್ಲಿ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಬೇಕು ಎನ್ನುವ ಪ್ರಶ್ನೆಯನ್ನು ಮಾಡಿದ್ದೆ. ಕರ್ನಾಟಕ ರಾಜ್ಯ ಹಣಕಾಸು ನಿಗಮದಲ್ಲಿ 2012 ರಿಂದ 2017 ರವರೆಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುತ್ತೇವೆಂದು ಸುತ್ತೋಲೆ ಹೊರಡಿಸಿದ್ದರು. ಈಗ ಕರ್ನಾಟಕ ರಾಜ್ಯ ಹಣಕಾಸು ನಿಗಮಕ್ಕೆ ಲಾಭವಾದರೆ ನೇಮಕಾತಿ ಮಾಡಿಕೊಳ್ಳುತ್ತೇವೆಂದು ಹೇಳುತ್ತಿದ್ದಾರೆ. ಅನುಕಂಪದ ಆಧಾರದ ಮೇಲೆ ನೇಮಕಾತಿಗಾಗಿ 57 ಜನರು ಅರ್ಜಿಗಳನ್ನು ಸಲ್ಲಿಸಿದ್ದಾರೆ. ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳು ಇದನ್ನು ಬಹಳ ಗಂಭೀರವಾಗಿ ಚಿಂತನೆ ಮಾಡಬೇಕು. ತಾವು ಕೊಟ್ಟಿರುವಂತಹ ಲಿಖಿತ ಉತ್ತರದಲ್ಲಿನ ಅಂಕಿ-ಸಂಖ್ಯೆಗಳನ್ನು ಒಟ್ಟಾಗಿ ಲೆಕ್ಕ ಮಾಡಿದಾಗ, ರೂ.8,498,96.00 ಗಳು ಕರ್ನಾಟಕ ರಾಜ್ಯ ಹಣಕಾಸು ನಿಗಮದಲ್ಲಿ 2001-2002 ರಿಂದ 2015- 2016 ರವರೆಗೆ ಸುಮಾರು 15 ವರ್ಷಗಳಲ್ಲಿ ನಷ್ಟವಾಗಿರುತ್ತದೆ. ನಾನು ತಮ್ಮಂತೆಯೇ ಬರುತ್ತೇನೆ. ತಾವು ಇಷ್ಟೆಲ್ಲ ಇದ್ದರೆ ನೇಮಕಾತಿ ಮಾಡಿಕೊಳ್ಳುತ್ತೇವೆಂದು ಹೇಳಿದ್ದೀರಿ. 30 ಜನರನ್ನು ವಿವಿಧ ಹುದ್ದೆಗಳಿಗೆ ನೇರ ನೇಮಕಾತಿ ಮಾಡಿಕೊಂಡಿದ್ದೀರಿ. ಆದರೆ, ತಾವು ಕರ್ನಾಟಕ ರಾಜ್ಯ ಹಣಕಾಸು ನಿಗಮ ನಷ್ಟದಲ್ಲಿದೆ. ಹಾಗಾಗಿ, ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಆಗುವುದಿಲ್ಲವೆಂದು ಹೇಳಿದ್ದೀರಿ. ಶೇಕಡಾ 30 ಆದರೂ ಲಾಭ ಬಂದರೆ, ನೇಮಕಾತಿ ಮಾಡಿಕೊಳ್ಳುತ್ತೇವೆಂದು ಹೇಳಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿರುವಂತಹ ಉತ್ತರವನ್ನು ಒಮ್ಮೆ ನೋಡಲಿ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಮಾನ್ಯ ಬಸವರಾಜ ಹೊರಟ್ಟಿಯವರು ಸ್ವಲ್ಪ confusion ನಲ್ಲಿ ಇದ್ದಾರೆ. ಅವರಿಗೆ ಯಾರೋ ಸರಿಯಾದ ಮಾಹಿತಿಯನ್ನು ನೀಡಿರುವುದಿಲ್ಲ. ಅವರು ಬಹಳ ಹಿರಿಯ ಸದಸ್ಯರಿದ್ದಾರೆ. 2001-2002 ನೇ ಸಾಲಿನಲ್ಲಿ accumulated loss 469.03 ಕೋಟಿ ರೂಪಾಯಿಗಳು. ಮಾನ್ಯ ಸದಸ್ಯರು ಇವರೆಡನ್ನು ಸೇರಿಸಿ ರೂ.8,498,96.00 ಗಳು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಂದು ಹೇಳುತ್ತಿದ್ದಾರೆ. 2015-16 ರಲ್ಲಿ ಎಲ್ಲಾ ಸೇರಿ accumulated loss 437.62 ಕೋಟಿ ರೂಪಾಯಿಗಳು. ಕರ್ನಾಟಕ ರಾಜ್ಯ ಹಣಕಾಸು ನಿಗಮವು ಸತತವಾಗಿ ಮೂರು ವರ್ಷಗಳು ಲಾಭವನ್ನು ಗಳಿಸಬೇಕು ಆ ಲಾಭವು ಕ್ರೋಢಿಕೃತ ನಷ್ಟದ 30% ಗಿಂತಲೂ ಹೆಚ್ಚಾಗಿದ್ದರೆ ಮಾತ್ರ ಅನುಕಂಪ ಆಧಾರದ ಮೇಲೆ ನೇಮಕ ಮಾಡಿಕೊಳ್ಳಬಹುದೆಂದು ನಿಯಮವನ್ನು ಕರ್ನಾಟಕ ರಾಜ್ಯ ಹಣಕಾಸು ನಿಗಮದಲ್ಲಿ ಮಾಡಿಕೊಂಡಿದ್ದಾರೆ. ದಿನಾಂಕ 09-03-2009 ರಿಂದ ಮಂಡಳಿಯಲ್ಲಿ ಒಂದು ತೀರ್ಮಾನವನ್ನು ಮಾಡಿಕೊಂಡಿದ್ದಾರೆ. ಏಕೆಂದರೆ, ಕರ್ನಾಟಕ ರಾಜ್ಯ ಹಣಕಾಸು ನಿಗಮದಲ್ಲಿ 925 ಜನ ಎಂಪ್ಲಾಯಿಸ್ ಇದ್ದಾರೆ. ಅದರಲ್ಲಿ 250 ಜನರು ಅಗತ್ಯಕ್ಕಿಂತ ಹೆಚ್ಚಿಗೆ ಇದ್ದಾರೆ. ಅಲ್ಲಿ ವಹಿವಾಟು ಏನು ನಡೆಯುತ್ತಿದೆ ಆ ವಹಿವಾಟಿಗೆ ಎಷ್ಟು ಜನರು ಬೇಕೆಂದರೆ 250 ಜನರು ಕಡಿಮೆ ಇರಬೇಕಾಗಿತ್ತು. ಈ ಹಿಂದೆ ಅವರನ್ನು ನೇಮಕಾತಿ ಮಾಡಿಕೊಂಡಿದ್ದಾರೆ. ಆದರೆ, ಈಗ ನೇಮಕಾತಿ ಮಾಡಿಕೊಳ್ಳುತ್ತಿಲ್ಲ. ಇದೆಲ್ಲಾ ಬಹಳ ಹಿಂದಿನ ಕಾಲದಲ್ಲಿ ಆಗಿರುವಂತಹದ್ದು. ಈಗ 250 ಜನರು ಹೆಚ್ಚಿಗೆ ಇದ್ದಾರೆ. ಎಂಪ್ಲಾಯಿಸ್ ಹೆಚ್ಚಿಗೆ ಇದ್ದಾರೆಂದು ಅವರಲ್ಲಿ 145 ಜನರನ್ನು ಬೇರೆ ಬೇರೆ ಇಲಾಖೆಗಳಿಗೆ ಕೊಟ್ಟಿರುತ್ತೇವೆ. ಆದರೂ ಇನ್ನೂ 100 ಜನ ಅಗತ್ಯಕ್ಕಿಂತ ಹೆಚ್ಚಿಗೆ ಇದ್ದಾರೆ. ಈಗ ಕರ್ನಾಟಕ ರಾಜ್ಯ ಹಣಕಾಸು ನಿಗಮ ಲಾಭದಲ್ಲಿ ನಡೆಯುತ್ತಿದೆ. 2001-2002, 2002-2003, 2008-2009 ಈ ಮೂರು ವರ್ಷಗಳನ್ನು ಬಿಟ್ಟರೆ, ಇನ್ನೂಳಿದ ಕಾಲದಲ್ಲಿ ಸ್ವಲ್ಪ ಸ್ವಲ್ಪ ಲಾಭವಾಗಿದೆ. 2013-2014 ರಲ್ಲಿ ರೂ.11.42 ಕೋಟಿ ರೂಪಾಯಿಗಳು, 2014-2015 ರಲ್ಲಿ ರೂ.44.47 ಕೋಟಿ ರೂಪಾಯಿಗಳು ಮತ್ತು 2015-2016 ರಲ್ಲಿ 32.13 ಕೋಟಿ ರೂಪಾಯಿಗಳು ಲಾಭ ಬಂದಿರುತ್ತದೆ. ಈ ಮೂರನ್ನು ಕೂಡಿದರೆ 80 ಕೋಟಿ ರೂಪಾಯಿಗಳು ಲಾಭ ಆಗುತ್ತದೆ. ಈ ಮೂರು ವರ್ಷಗಳ ಲಾಭ 30% ಕ್ಕಿಂತ ಕಡಿಮೆ ಇದೆ. 437.62 ಕೋಟಿ ರೂಪಾಯಿಗಳು accumulated loss ಇದೆಯಲ್ಲ ಅದರಲ್ಲೂ 30% ಕ್ಕಿಂತಲೂ ಕಡಿಮೆ ಇದೆ. ಈ ಎರಡು ಷರತ್ತುಗಳು fulfil ಆಗದೆ ಇರುವುದರಿಂದ ಮಂಡಳಿಯಲ್ಲಿ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಬಾರದೆಂದು ತೀರ್ಮಾನವನ್ನು ಮಾಡಿಕೊಂಡಿದ್ದಾರೆ. ಮಾನ್ಯ ಬಸವರಾಜ ಹೊರಟ್ಟಿಯವರೆ, ಇನ್ನೂ 437.62 ಕೋಟಿ ರೂಪಾಯಿಗಳು accumulated loss ಇದೆ. ಆ ಕಾರಣದಿಂದ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಆಗುವುದಿಲ್ಲ. ಈ ತೀರ್ಮಾನ ಇವತ್ತು ಆಗಿರುವುದು ಅಲ್ಲ. 2009ನೇ ಸಾಲಿನಲ್ಲಿಯೇ ಆಗಿದೆ. ಈ ತೀರ್ಮಾನವಾಗಿ ಎಂಟು ವರ್ಷಗಳು ಆಗಿದೆ. ಮಾನ್ಯ ಬಸವರಾಜ ಹೊರಟ್ಟಿಯವರು ಇದನ್ನು ಈಗ ಕೇಳುತ್ತಿದ್ದಾರೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಬಿ.ಶಾಣಪ್ಪ:–** ಮಾನ್ಯ ಸಭಾಪತಿಯವರೆ, ಇಲಾಖೆಯಲ್ಲಿ ಸೇವೆಯಲ್ಲಿದ್ದಾಗ ಮೃತಪಟ್ಟ ಕಾರಣಕ್ಕೆ ಕುಟುಂಬ ಸದಸ್ಯರಿಗೆ ಅನುಕಂಪದ ಆಧಾರದಲ್ಲಿ ಉದ್ಯೋಗ ನೀಡಬೇಕಲ್ಲವೆ?

**ಶ್ರೀ ಸಿದ್ದರಾಮಯ್ಯ:–**ಮಾನ್ಯ ಸಭಾತಿಯವರೆ, ಕರ್ನಾಟಕ ರಾಜ್ಯ ಹಣಕಾಸು ನಿಗಮ ಸರ್ಕಾರದ್ದು ಅಲ್ಲ. ಅದು ಪ್ರತ್ಯೇಕ ಮಂಡಳಿ.

**ಶ್ರೀ ಕೆ.ಬಿ.ಶಾಣಪ್ಪ:–** ಮಾನ್ಯ ಸಭಾಪತಿಯವರೆ, ನಿಗಮ ಸರ್ಕಾರದ್ದು ಅಲ್ಲ. ಅದು ಪ್ರತ್ಯೇಕ ಮಂಡಳಿ ಎನ್ನುವುದು ಸರಿ. ಆದರೆ, You have kept the tax paid money in KSFC. You cannot segregate it.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ :–** ಮಾನ್ಯ ಸಭಾಪತಿಯವರೆ, ಸರ್ಕಾರಿ ನಿಯಮ ಅನ್ವಯವಾಗುತ್ತದೆ ಅದು ಬೇರೆ ಪ್ರಶ್ನೆ. ಆದರೆ, ಕರ್ನಾಟಕ ರಾಜ್ಯ ಹಣಕಾಸು ನಿಗಮದಲ್ಲಿ ಆ ರೀತಿಯ ತೀರ್ಮಾನ ಮಾಡಿಕೊಂಡಿದ್ದಾರೆ.

**ಸಭಾಪತಿಯವರು:–** ಮಾನ್ಯ ಸದಸ್ಯರೆ, ಮಂಡಳಿಯವರು ಆ ರೀತಿ ತೀರ್ಮಾನ ಮಾಡಿ ಕೊಂಡಿರುತ್ತಾರೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳುತ್ತಿದ್ದಾರೆ.

**(ಗೊಂದಲ)**

**ಶ್ರೀ ಕೆ.ಬಿ.ಶಾಣಪ್ಪ:–** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಯವರು ಹಣಕಾಸು ಮಂತ್ರಿಯಾಗಿದ್ದಾರೆ. ಈ 57 ಜನರನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುವುದು ಸರ್ಕಾರಕ್ಕೆ ದೊಡ್ಡ ಹೊರೆ ಆಗುವುದಿಲ್ಲ. ಆ ಕುಟುಂಬ ಸದಸ್ಯರು ಸಂಕಷ್ಟದಲ್ಲಿದ್ದಾರೆ. ನಿಗಮದಲ್ಲಿ ಕೆಲಸ ನೀಡಲು ಅವಕಾಶ ಇಲ್ಲದಿದ್ದ ಪಕ್ಷದಲ್ಲಿ ಅವರಿಗೆ ಬೇರೆ ಇಲಾಖೆಯಲ್ಲಾದರೂ ನೀಡಬೇಕು ಎಂಬುದೆ ನಮ್ಮ ಮನವಿ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಈ ತರಹ ನಿಯಮ ಎಲ್ಲೂ ಇಲ್ಲ. ಅನುಕಂಪದ ಆಧಾರದ ಮೇಲೆ ವಿಶ್ವವಿದ್ಯಾನಿಲಯಗಳಲ್ಲಿ ಮತ್ತು ಖಾಸಗಿ ಸಂಸ್ಥೆಗಳಲ್ಲಿ ನೇಮಕಾತಿ ಮಾಡಿಕೊಳ್ಳುತ್ತಾರೆ. ಆದರೆ, 30 ಮಂದಿಯನ್ನು ನೇರ ನೇಮಕಾತಿ ಮಾಡಿಕೊಂಡಿದ್ದಾರೆ ಇದು ಹೇಗೆ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿದ್ದರಾಮಯ್ಯ:-**ಮಾನ್ಯ ಸಭಾಪತಿಯವರೆ, ಈ ಹಿಂದೆ ನೇಮಕಾತಿ ಮಾಡಿಕೊಂಡಿರಬಹುದು. ಅದನ್ನು ನಾನು ಇಲ್ಲವೆಂದು ಹೇಳಲಿಕ್ಕೆ ಬರುವುದಿಲ್ಲ. ಆದರೆ, ಆ 30 ಜನರನ್ನು ಯಾವ ದಿನಾಂಕದಂದು ನೇಮಕಾತಿ ಮಾಡಿಕೊಳ್ಳಲಾಗಿದೆ ಹೇಳಿ? ದಿನಾಂಕ 09-03-2009 ರ ನಂತರ ಅವರನ್ನು ನೇಮಕಾತಿ ಮಾಡಿಕೊಂಡಿದ್ದಾರೆಯೇ?

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ಆ 30 ಜನರನ್ನು ನೇರ ನೇಮಕಾತಿ ಮಾಡಿಕೊಳ್ಳಲಾಗಿದೆ ಎಂದು ನಾನು ತಿಳಿಸಿದ್ದೇನೆ. ಆದರೆ, ನಾನು ಅವರನ್ನು ಯಾವ ದಿನಾಂಕದಂದು ನೇಮಕಾತಿ ಮಾಡಿಕೊಳ್ಳಲಾಗಿದೆ ಎಂಬುದನ್ನು ಎಲ್ಲಿಂದ ಹುಡುಕಿಕೊಂಡು ಬರಲಿ. ಮಾನ್ಯ ಮುಖ್ಯ ಮಂತ್ರಿಯವರೇ, ಅದನ್ನು ಹೇಳಬೇಕು. ನಮ್ಮ ಕಡೆ ಆ ಬಗ್ಗೆ ಮಾಹಿತಿ ಇಲ್ಲ.

**ಶ್ರೀ ಸಿದ್ದರಾಮಯ್ಯ:-**ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರ ಬಳಿ ಈ ಬಗ್ಗೆ ಮಾಹಿತಿ ಇಲ್ಲ. ದಿನಾಂಕ 09-03-2009ರ ನಂತರ ನೇಮಕಾತಿಯನ್ನು ಮಾಡಿಕೊಂಡಿಲ್ಲ. ಇದನ್ನು ಆಗಲೇ ಮಂಡಳಿಯಲ್ಲಿ ತೀರ್ಮಾನ ಮಾಡಿದ್ದಾರೆ. ಮೊದಲೇ ಅಲ್ಲಿ 250 ಜನ ಎಂಪ್ಲಾಯಿಸ್ ಹೆಚ್ಚಿಗೆ ಇದ್ದಾರೆ. 600 ಕೋಟಿ ರೂಪಾಯಿಗಳು accumulated loss ಇದೆ. ಈಗ 37 ಕೋಟಿ ರೂಪಾಯಿಗಳಿಗೆ ಬಂದಿದೆ. Accumulated loss ಎಲ್ಲ ಕಡಿಮೆ ಆಗಿ ಸ್ವಲ್ಪ ಸ್ವಲ್ಪ ಲಾಭ ಬಂದಮೇಲೆ ಅವರನ್ನು consider ಮಾಡಬಹುದು, ಈಗ ಅಂತೂ ಅವರನ್ನು consider ಮಾಡುವುದಕ್ಕೆ ಆಗುವುದಿಲ್ಲ.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೆ,ಮಾನ್ಯ ಮುಖ್ಯಮಂತ್ರಿಗಳಿಗೆ ಈ ನೇಮಕಾತಿ ಎಷ್ಟರ ಮಟ್ಟಿಗೆ ದೊಡ್ಡದು. ಆಕೆ 36 ವಯಸ್ಸಿನಲ್ಲಿಯೇ ತೀರಿಕೊಂಡಿದ್ದಾಳೆ. ಆಕೆ ಮಕ್ಕಳು ಬೀದಿಗೆ ಬಂದಿದ್ದಾರೆ. ಎಲ್ಲಾ ಕಡೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುತ್ತಾರೆ. ತಾವು ಮಾನ್ಯ ಮುಖ್ಯಮಂತ್ರಿಯವರಿಗೆ ನಿರ್ದೇಶನ ಕೊಡಿ. ಎಲ್ಲಾ ಕಡೆಯು ಲಾಭ ಇದೆಯೇ? ನಾನು ಇದನ್ನು ಮೊದಲೇ ಹೇಳಿದ್ದೇನೆ. ಇದು ತಮಗೆ ಗೊತ್ತಾಗಲಿ ಎಂದು ಹೇಳಿದ್ದೇನೆ. ನನಗೆ ಮಾನ್ಯ ಮುಖ್ಯ ಮಂತ್ರಿಗಳಿಂದ ಬರುವುದು ಇದೇ ಉತ್ತರವೆಂದು ಗೊತ್ತು. ಯಾವಾಗ ಕರ್ನಾಟಕ ರಾಜ್ಯ ಹಣಕಾಸು ನಿಗಮ ಲಾಭದಲ್ಲಿರುತ್ತದೆ. ಯಾವಾಗ ನಷ್ಟದಲ್ಲಿರುತ್ತದೆ ಎಂಬ ಪ್ರಶ್ನೆ ಇಲ್ಲಿ ಬರುವುದಿಲ್ಲ. ಅನುಕಂಪದ ಆಧಾರದಲ್ಲಿ ನೇಮಕ ಮಾಡುವಾಗ ನಿಗಮದ ಲಾಭ-ನಷ್ಟದ ಲೆಕ್ಕಾಚಾರ ಹಾಕುವುದು ಸರಿಯಲ್ಲ. ಏಕೆ ನೌಕರರನ್ನು ಹೆಚ್ಚಿಗೆ ನೇಮಕಾತಿ ಮಾಡಿಕೊಂಡರು? ಆ ರೀತಿ ಹೆಚ್ಚಿಗೆ ನೌಕರರನ್ನು ನೇಮಕಾತಿ ಮಾಡಿಕೊಂಡ ಅಧಿಕಾರಿಗಳ ವಿರುದ್ದ ಕ್ರಮ ತೆಗೆದುಕೊಳ್ಳಿ. ತಮಗೆ ಬೇಕಾದಂತಹ ಸಂಬಂಧಿಕರನ್ನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

“ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ನೇಮಕಾತಿ ಮಾಡಿಕೊಳ್ಳುತ್ತಾರೆ. ಆದರೆ, ಅನುಕಂಪದ ಆಧಾರದ ಮೇಲೆ ಅರ್ಜಿ ಹಾಕಿರುವವರನ್ನು ನೇಮಕಾತಿ ಮಾಡಿಕೊಳ್ಳುವುದಿಲ್ಲ. ಈ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುವುದು ಲಾಭ ಮತ್ತು ನಷ್ಟಕ್ಕೆ ಸಂಬಂಧ ಇಲ್ಲ. ಈ 57 ಜನರನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಿ, ಇಲ್ಲ ಅಂದರೆ ಕರ್ನಾಟಕ ರಾಜ್ಯ ಹಣಕಾಸು ನಿಗಮ ನಡೆಸುತ್ತಿರುವುದು ವ್ಯರ್ಥ್ಯ ಎನಿಸುತ್ತದೆ. ಇದಕ್ಕೆಲ್ಲ ಎಷ್ಟಾಗುತ್ತದೆ. ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳಿಗೆ ತಾವು, ಈ ಬಗ್ಗೆ ಹೇಳಿ.

**ಸಭಾಪತಿಯವರು:–** ಮಾನ್ಯ ಸದಸ್ಯರೆ, ಮುಖ್ಯ ಮಂತ್ರಿಗಳು ಉತ್ತರ ಹೇಳುತ್ತಾರೆ. ಮಾನ್ಯ ರಾಮಚಂದ್ರಗೌಡರೆ, ಪ್ರಶ್ನೋತ್ತರ ಅವಧಿ ಇದೆ ದಯಮಾಡಿ ಕುಳಿತುಕೊಳ್ಳಿ.

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನಮ್ಮ ದೇಶದಲ್ಲಿ ಅನುಕಂಪದ ಆಧಾರದ ಮೇಲೆ ಎಂ.ಎಲ್.ಎ ಮತ್ತು ಎಂ.ಎಲ್.ಸಿಗೆ ಸೀಟು ಕೊಡುತ್ತಾರೆ.

**ಶ್ರೀ ಸಿದ್ದರಾಮಯ್ಯ:–**ಮಾನ್ಯ ಸಭಾಪತಿಯವರೆ,ಈ ತರಹಅನುಕಂಪದ ಆಧಾರದ ಮೇಲೆ ಎಂ.ಎಲ್.ಎ ಮತ್ತು ಎಂ.ಎಲ್.ಸಿಗೆ ಸೀಟು ಕೊಡಬೇಕೆಂದು ಯಾವ ರೂಲ್‌ನಲ್ಲಿ ಇದೆ ಹೇಳಿ?

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೆ, ಅನುಕಂಪದ ಆಧಾರದ ಮೇಲೆ ನಮ್ಮ ದೇಶದಲ್ಲಿ ಪ್ರಧಾನ ಮಂತ್ರಿ ಆಗಿದ್ದಾರೆ. ಇಲ್ಲಿ ಏಕೆ ಈ ವಿಚಾರವನ್ನು ಪರಿಗಣಿಸುತ್ತಿಲ್ಲ.

**(79) 12.10 09-02-2017 CS.VK**

**ಶ್ರೀ ರಾಮಚಂದ್ರಗೌಡ (ಮುಂದು):**

ಬೇರೆ ಬೇರೆ ಇಲಾಖೆಗಳಲ್ಲಿ ಮತ್ತು ನಿಗಮಮಂಡಳಿಗಳಲ್ಲಿ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುತ್ತಾರೆ. ಆದರೆ ಜೀವನ ನಡೆಸಲು ಅನುಕಂಪದ ಆಧಾರದ ಮೇಲೆ ಕೆಲಸ ಕೊಡುವುದಿಲ್ಲ ಎಂದರೆ ಹೇಗೆ? ಖಂಡಿತವಾಗಿ ಆ ಹೆಣ್ಣುಮಗಳಿಗೆ ಸರ್ಕಾರ ಕೆಲಸವನ್ನು ಕೊಡಬೇಕು.

**ಶ್ರೀ ಕೆ.ಬಿ.ಶಾಣಪ್ಪ:–** ಮಾನ್ಯ ಸಿದ್ದರಾಮಯ್ಯನವರ ಅಧಿಕಾರದ ಕಾಲದಲ್ಲಿ ಈ ರೀತಿ ಆಗಬಾರದು. You have to give a direction to them that they have to be absorb.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಗಳೇ, ಖಾಸಗಿ ಸಂಸ್ಥೆಗಳಲ್ಲಿಯೇ ಅನುಕಂಪದ ಆಧಾರದ ಮೇಲೆ ಕೆಲಸ ಕೊಡುತ್ತಿದ್ದಾರೆ, ಸರ್ಕಾರಿ ಸಂಸ್ಥೆಗಳಲ್ಲಿ ಕೊಡುವುದಿಲ್ಲ ಎಂದರೆ ಹೇಗೆ?

**ಸಭಾಪತಿಯವರು:–** ಈಗ ವಿಷಯ ಇರುವುದು ಇಷ್ಟೆ, ಕೆಎಸ್‌ಎಫ್‌ಸಿ ಯಲ್ಲಿ ಕೆಲಸ ಮಾಡುತ್ತಿದ್ದು ತೀರಿಕೊಂಡ ನೌಕರರ ಕುಟುಂಬದವರಿಗೆ ಅನುಕಂಪದ ಆಧಾರದ ಮೇಲೆ ಕೆಲಸ ಕೊಡಬೇಕೆಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ, ಅದಕ್ಕೆ ಸರ್ಕಾರ ತನ್ನ ಉತ್ತರವನ್ನು ಹೇಳಿದೆ, ಪುನರ್ ಪರಿಶೀಲನೆಯನ್ನು ಮಾಡುವುದು ಅವರಿಗೆ ಬಿಟ್ಟ ವಿಚಾರ. ಅದರ ಬಗ್ಗೆ ನಾನೇನು ಹೇಳುವುದಕ್ಕೆ ಆಗುವುದಿಲ್ಲ. I cannot order it.

**ಶ್ರೀ ಬಸವರಾಜ ಎಸ್ ಹೊರಟ್ಟಿ:–** ಯಾರನ್ನು ನೇಮಕ ಮಾಡಿಕೊಂಡಿಲ್ಲ ಎನ್ನುವ ಉತ್ತರ ನೀಡಿದ್ದಾರೆ, ಆದರೆ 2001ರಲ್ಲಿ ಕಾರ್ಯ ನಿರ್ವಾಹಕ ನಿರ್ದೇಶಕರ ನೇಮಕಾತಿಯನ್ನು ಮಾಡಿಕೊಂಡಿದ್ದಾರೆ.

**ಶ್ರೀ ಸಿದ್ದರಾಮಯ್ಯ:–** ಮಾರ್ಚ್ 2009ರ ನಂತರ ನೇಮಕಾತಿ ಮಾಡಿಕೊಂಡಿದ್ದಾರೆಯೇ ಎನ್ನುವುದನ್ನು ಹೇಳಿ.

**ಸಭಾಪತಿಯವರು:–** ಹೊರಟ್ಟಿಯವರಿಗೆ ನನ್ನ ಸಲಹೆ ಏನೆಂದರೆ ಈ ವಿಚಾರವನ್ನು ಸದನದಲ್ಲಿ ಚರ್ಚೆ ಮಾಡುವುದಕ್ಕಿಂತ ಸ್ವತಃ ನೀವು ಅವರ ಬಳಿ ಹೋಗಿ ಚರ್ಚೆ ಮಾಡಿದರೆ ಸೂಕ್ತ.

**ಶ್ರೀ ಬಸವರಾಜ ಎಸ್ ಹೊರಟ್ಟಿ:–** 2009ರ ನಂತರವೂ ನೇಮಕಾತಿ ಮಾಡಿರುವ ವಿವರಗಳನ್ನು ನಾನೀಗ ಮುಖ್ಯಮಂತ್ರಿಗಳಿಗೆ ಕಳುಹಿಸಿಕೊಟ್ಟಿದ್ದೇನೆ. ದಯಮಾಡಿ ಆ ಹೆಣ್ಣುಮಗಳಿಗೆ ಅನುಕಂಪದ ಆಧಾರದ ಮೇಲೆ ಕೆಲಸವನ್ನು ನೀಡಬೇಕು. ಇದರಲ್ಲಿ ಯಾವುದೇ ರೀತಿಯ ಶಾಣೆತನವನ್ನು ತೋರಿಸಬಾರದು ಎನ್ನುವುದು ನನ್ನ ವಿನಂತಿ.

**ಶ್ರೀ ಸಿದ್ದರಾಮಯ್ಯ:–** ನಾನು ಈ ವಿಚಾರದಲ್ಲಿ ಬಹಳ ಸ್ಪಷ್ಟವಾಗಿ ಉತ್ತರವನ್ನು ನೀಡಿದ್ದೇನೆ. ಈಗ ಕೆಎಸ್‌ಎಫ್‌ಸಿಯಲ್ಲಿ 925 ಜನ ನೌಕರರಿದ್ದಾರೆ. ಅವರಲ್ಲಿಯೇ ಈಗ 250 ಜನರು ಹೆಚ್ಚಾಗಿದ್ದಾರೆ. ಅಲ್ಲಿರುವವರನ್ನೇ ನಾವು ಬೇರೆ ಬೇರೆ ಇಲಾಖೆಗಳಿಗೆ ಕಳುಹಿಸುತ್ತಿದ್ದೇವೆ. ಇವರ ಜೊತೆಗೆ ಇನ್ನು 57 ಜನರನ್ನು ತೆಗೆದುಕೊಂಡರೆ ಇನ್ನಷ್ಟು ಆ ಸಂಸ್ಥೆಗೆ ನಷ್ಟ ಆಗುತ್ತದೆ. ಇದೊಂದು Financial Institution, ಸೂಕ್ಷ್ಮವಾದ ಸಣ್ಣ ಕೈಗಾರಿಗೆಗಳಿಗೆ ಹಿಂದುಳಿದ ವರ್ಗದವರಿಗೆ ಸಾಲ ಕೊಟ್ಟು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೈಗಾರಿಕೆಗಳನ್ನು ಬೆಳೆಸಬೇಕೆನ್ನುವ ಉದ್ದೇಶ ಈ ಸಂಸ್ಥೆಯದ್ದು, ಈಗ ಆ ಸಂಸ್ಥೆಯೇ ಸಾಲದಲ್ಲಿದೆ. ಅದರ accumulated Loss 437 ಕೋಟಿ ಇದೆ, ಇದರ ಮೇಲೆ ಇನ್ನಷ್ಟು ಬರ ಹಾಕುವುದಕ್ಕೆ ಆಗುತ್ತದೆಯೇ? ಹೀಗೆ ಬರೆ ಹಾಕುವುದಕ್ಕೆ ಆಗುವುದಿಲ್ಲ, ಕಾನೂನು ಬೇರೆ, ನನಗೂ ಸಹ ಅವರ ಮೇಲೆ ಅನುಕಂಪ ಇದೆ. ಆದರೆ ಈ ಸಂಸ್ಥೆಯಲ್ಲಿ ಕೆಲಸ ಕೊಡಿಸುವುದಕ್ಕೆ ಕಷ್ಟ. ಬೇರೆ ಕಡೆ ಕೊಡಲಿಕ್ಕೆ ಸಾಧ್ಯವೇ? ಎನ್ನುವುದನ್ನು ಪರಿಶೀಲಿಸುತ್ತೇನೆ.

**ಶ್ರೀ ಬಸವರಾಜ ಎಸ್ ಹೊರಟ್ಟಿ:–** ಬೇರೆ ಕಡೆ ಕೆಲಸ ಕೊಡಿಸುವುದಕ್ಕೆ ಅವಕಾಶ ಇದ್ದಲ್ಲಿ ಪರಿಶೀಲಿಸಿ ದಯಮಾಡಿ ಆ ಹೆಣ್ಣುಮಗಳಿಗೆ ಅನುಕಂಪದ ಆಧಾರದ ಮೇಲೆ ಕೆಲಸವನ್ನು ನೀಡಬೇಕು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಗಳೇ, ಸಹಜವಾಗಿ ವಯೋ ನಿವೃತ್ತಿ ಹೊಂದಿವರಿಗೆ ಮರಣ ಹೊಂದಿದರೆ ಬೇಡ, ಆದರೆ ಸೇವೆಯಲ್ಲಿರುವಾಗಲೇ ಅಕಾಲಿಕವಾಗಿ ಮೃತ್ಯ ಹೊಂದಿದಲ್ಲಿ ಅವರ ಕುಟುಂಬದವರ ಜೀವನ ನಡೆಸಲು ಕುಟುಂಬದ ಸದಸ್ಯರಿಗೆ ಅನುಕಂಪದ ಆಧಾರದ ಮೇಲೆ ಕೆಲಸವನ್ನು ಕೊಡಲೇಬೇಕಾಗುತ್ತದೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೇ, ಇದರಲ್ಲಿ ಯಾವುದೇ ರೀತಿಯ ಗೊಂದಲವಿಲ್ಲ. ಬಹಳ ಸ್ಪಷ್ಟವಾಗಿ ಉತ್ತರ ನೀಡಿದ್ದೇನೆ, ಆದರೂ ಸಹ ಮಧ್ಯ ಮಧ್ಯೆ ಏಕೆ ಪ್ರಶ್ನೆಗಳನ್ನು ಕೇಳುತ್ತಿದ್ದಾರೆನ್ನುವುದು ನನಗೆ ಅರ್ಥವಾಗಲಿಲ್ಲ. ಕೆಎಸ್‌ಎಫ್‌ಸಿಯ ಬೋರ್ಡ್‌ನಲ್ಲಿ ಮಾರ್ಚ್ 2009ರಲ್ಲಿ ಒಂದು ತೀರ್ಮಾನವನ್ನು ಮಾಡಿದ್ದಾರೆ. ಆ ತೀರ್ಮಾನದಂತೆ 2009ರ ನಂತರ ಅನುಕಂಪದ ಆಧಾರದ ಮೇಲೆ ಯಾರಿಗೂ ಸಹ ಕೆಲಸವನ್ನು ನೀಡಿರುವುದಿಲ್ಲ. ಅಲ್ಲಿ 2006ರಲ್ಲಿಯೇ ಕೊನೆಯದಾಗಿ ನೇಮಕಾತಿಗಳನ್ನು ಮಾಡಿಕೊಂಡಿರುವುದು. ಸಂಸ್ಥೆಯೇ ನಷ್ಟದಲ್ಲಿರುವುದರಿಂದ ಆ ನಂತರ ಯಾವುದೇ ನೇಮಕಾತಿಗಳನ್ನು ಮಾಡಿಕೊಂಡಿರುವುದಿಲ್ಲ. ಅಲ್ಲಿಯೇ ಅಗತ್ಯಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ನೌಕರರು ಇರುವುದರಿಂದ ನೇಮಕಾತಿಗಳನ್ನು ಮಾಡಿಕೊಂಡಿರುವುದಿಲ್ಲ. ಹೊರಟ್ಟಿಯವರು ಹೇಳಿದ ಹಾಗೆ 2009ರ ನಂತರ ನೇಮಕಾತಿಗಳನ್ನು ಮಾಡಿಕೊಂಡರೆ ಇವರೆಲ್ಲ ಕೋರ್ಟಿಗೆ ಹೋಗುತ್ತಾರೆ, ಈಗ ಅದನ್ನೆಲ್ಲ ಮಾಡುವುದಕ್ಕೆ ಆಗುವುದಿಲ್ಲ. ಶಾಣಪ್ಪನವರು ನೀಡಿರುವ ಸಲಹೆಯಂತೆ ಬೇರೆ ಇಲಾಖೆಯಲ್ಲಿ ಕೆಲಸ ಕೊಡಿಸುವುದಕ್ಕೆ ಸಾಧ್ಯವೇ ಎನ್ನುವುದನ್ನು ಕಾನೂನಾತ್ಮಕವಾಗಿ ಪರಿಶೀಲಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 260**
**(ಉತ್ತರವನ್ನು ಲಗತ್ತಿಸಲಾಗಿದೆ)**

ಶ್ರೀ ಪ್ರಸನ್ನ ಕುಮಾರ್(ಎಂ.ಗೋಪಾಲಸ್ವಾಮಿ ಅವರ ಪರವಾಗಿ):– ಮಾನ್ಯ ಸಭಾಪತಿಗಳೇ, ಮಾನ್ಯ ಗೃಹಸಚಿವರು ನನ್ನ ಪ್ರಶ್ನೆಗೆ ಲಿಖಿತ ಉತ್ತರವನ್ನು ಒದಗಿಸಿದ್ದಾರೆ. ಅದಕ್ಕಾಗಿ ಅವರಿಗೆ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಗೃಹರಕ್ಷಕ ದಳದಲ್ಲಿ ಗೃಹರಕ್ಷಕರಾಗಿ ಕೆಲಸ ಮಾಡುವವರಿಗೆ ದಿನಭತ್ಯೆ ಹೆಚ್ಚಿಗೆ ಮಾಡಬೇಕೆನ್ನುವುದು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರೆ. ಹಾಗೂ ಕರ್ತವ್ಯದ ಸಂದರ್ಭದಲ್ಲಿ ನಿಧನರಾದಲ್ಲಿ ಅವರಲ್ಲಿ ಪರಿಹಾರವನ್ನು ಕೂಡ ನೀಡುವುದಾಗಿ ಹೇಳಿದ್ದಾರೆ. ಇಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಿರುದ್ಯೋಗಿ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದಾರೆ. ಈಗ ಅವರಿಗೆ ಏನು 220 ರೂಪಾಯಿಗಳ ದಿನಭತ್ಯೆಯನ್ನು ನೀಡಲಾಗುತ್ತಿದೆ ಅದನ್ನು ಹೆಚ್ಚು ಮಾಡುವ ಕೆಲಸವನ್ನು ಸಹಾನುಭೂತಿಯಿಂದ ಮಾಡಬೇಕಾಗುತ್ತದೆ. ಏಕೆಂದರೆ ಅವರು ಪೊಲೀಸ್ ಇಲಾಖೆಗೆ ಪೂರಕವಾಗಿ ಕೆಲಸಗಳನ್ನು ಮಾಡುತ್ತಿದ್ದಾರೆ. ಅವರು ಗೃಹ ರಕ್ಷಕದಳದಲ್ಲಿದ್ದರೂ ಸಹ ಪೊಲೀಸರಷ್ಟೆ ಕೆಲಸವನ್ನು ಅವರು ಸಹ ಮಾಡುತ್ತಿದ್ದಾರೆ. ಆದ್ದರಿಂದ ಅವರಿಗೆ ಹೆಚ್ಚಿನ ಸವಲತ್ತುಗಳನ್ನು ನೀಡುವ ಕೆಲಸವನ್ನು ಮಾಡಬೇಕಾಗುತ್ತದೆ. ಪೊಲೀಸ್ ಇಲಾಖೆಯಲ್ಲಿ ಅವರನ್ನು ನೇಮಕ ಮಾಡಿಕೊಳ್ಳುವ ಸಂದರ್ಭದಲ್ಲಿ ಅವರಿಗೆ ಮೀಸಲಾತಿ ನೀಡಬೇಕೆಂದು ಕೇಳಿದಕ್ಕೆ ಗೃಹರಕ್ಷಕರು ಸ್ವಯಂ ಸೇವಕರಾಗಿದ್ದು ಇವರ ಜೇಷ್ಠತೆಯನ್ನು ನಿರ್ವಹಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ ಎಂದು ಹೇಳಿದ್ದಾರೆ. ಆದರೆ ಸಹಾನುಭೂತಿಯ ದೃಷ್ಟಿಯಿಂದ ಗೃಹರಕ್ಷಕ ದಳದವರಿಗೆ ದಿನಭತ್ಯೆಯನ್ನು ಹೆಚ್ಚಿಗೆ ಮಾಡುವುದರ ಜೊತೆಗೆ ನೇಮಕಾತಿಯಲ್ಲಿಯೂ ಸಹ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಡಾ||ಜಿ.ಪರಮೇಶ್ವರ್:–** ಮಾನ್ಯ ಸಭಾಪತಿಗಳೇ, ಸ್ವಯಂ ಸೇವಾಸಂಸ್ಥೆಗಳ ಮೂಲಕ ಈ ಗೃಹರಕ್ಷಕದಳದವರು ಬರುತ್ತಿದ್ದು, ತುರ್ತು ಸಂದರ್ಭಗಳಲ್ಲಿ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವುದಕ್ಕೆ, ಸಮುದಾಯದ ರಕ್ಷಣೆ, ಆಸ್ತಿಯ ರಕ್ಷಣೆ ಮಾಡಲು ಸೇವಾ ಮನೋಭಾವ ಇರುವ ನಿರುದ್ಯೋಗಿ ಯುವಕರು ಬಂದು ಇಲ್ಲಿ ಕೆಲಸ ಮಾಡುತ್ತಿದ್ದಾರೆ. ಈಗ ಅವರಿಗೆ ಅವರಿಗೆ ಕರ್ತವ್ಯಕ್ಕೆ ಹಾಜರಾದ ಸಂದರ್ಭಗಳಲ್ಲಿ ಕರ್ತವ್ಯ ಭತ್ಯೆಯನ್ನು ನೀಡಲಾಗುತ್ತಿದೆ. ಅದನ್ನು ಬಿಟ್ಟು ಪೊಲೀಸಿನವರಿಗೆ ಕೊಟ್ಟ ಹಾಗೆ ಸಂಬಳ ಅಥವಾ ಇನ್ನಿತರ ಭತ್ಯೆಗಳನ್ನು ನೀಡುವುದಿಲ್ಲ. 2015ರವರೆಗೆ ಅವರು ಬೆಳಿಗ್ಗೆಯಿಂದ ಸಂಜೆಯವರೆಗೆ ಕೆಲಸ ಮಾಡಿದರೆ ಅವರಿಗೆ ನಗರಪ್ರದೇಶದಲ್ಲಿ 300 ರೂಪಾಯಿಗಳ ದಿನಭತ್ಯೆ, ಮತ್ತು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇನ್ನಿತರ ಪ್ರದೇಶಗಳಲ್ಲಿ ಕೆಲಸ ಮಾಡುವವರಿಗೆ 200 ರೂಪಾಯಿಗಳನ್ನು ನೀಡಲಾಗುತ್ತಿತ್ತು. ಇದನ್ನು ಹೆಚ್ಚಿಗೆ ಮಾಡಬೇಕೆನ್ನುವ ಮನವಿ ಬಂದ ಮೇಲೆ 2015 ರಲ್ಲಿ ಅದನ್ನು ಪರಿಷ್ಕರಿಸಿ 300 ರೂ. ಇರುವುದನ್ನು 400ರೂಪಾಯಿಗಳಿಗೆ ಹೆಚ್ಚಿಗೆ ಮಾಡಲಾಗಿದೆ. ಬೇರೆ ಪ್ರದೇಶಗಳಲ್ಲಿ 250 ರೂಪಾಯಿಗಳಿರುವುದನ್ನು ಮತ್ತೆ ಮನವಿ ಬಂದ ಮೇಲೆ 350 ರೂಪಾಯಿಗಳಿಗೆ ಹೆಚ್ಚಿಗೆ ಮಾಡಲಾಗಿದೆ. ಅದನ್ನು ಪುನಃ ಹೆಚ್ಚಿಗೆ ಮಾಡಬೇಕೆಂದು ಕೇಳುತ್ತಿದ್ದಾರೆ. ಸರ್ಕಾರದ ಮುಂದೆ ಆ ಪ್ರಸ್ತಾವನೆ ಇದೆ. ಈ ಬಗ್ಗೆ ಪರಿಶೀಲಿಸಿ ಮುಂದಿನ ದಿವಸಗಳಲ್ಲಿ ಸೂಕ್ತ ಕ್ರಮವನ್ನು ಕೈಗೊಳ್ಳಲಾಗುವುದು.

**ಪ್ರಶ್ನೆ ಸಂಖ್ಯೆ 227**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಬಸನಗೌಡ ಆರ್ ಪಾಟೀಲ್ (ಯತ್ನಾಳ್):–**ಮಾನ್ಯ ಸಭಾಪತಿಗಳೇ, ಮಾನ್ಯ ಸಚಿವರು ವಿಜಯಪುರ ಮಹಾನಗರ ಪಾಲಿಕೆಗೆ ವಿವಿಧ ಯೋಜನೆಯಡಿಯಲ್ಲಿ ಮಂಜೂರಾದ ಅನುದಾನದ ವಿವರಗಳನ್ನು ನೀಡಿದ್ದಾರೆ. ಇಲ್ಲಿ ಏನಾಗಿದೆ ಎಂದರೆ ಕೇಂದ್ರಸರ್ಕಾರದಿಂದ ಬಂದಂತಹ ಅನುದಾನವನ್ನು ಎಲ್ಲಿ ಖರ್ಚು ಮಾಡಬೇಕಾಗಿತ್ತು ಎಲ್ಲಿ ಖರ್ಚು ಮಾಡಬೇಕಾಗಿತ್ತು ಅದನ್ನು ಮಾಡುವುದನ್ನು ಬಿಟ್ಟು ಗುಂಟೆಗಳಲ್ಲಿ ಏನು ಮನೆಗಳ ನಿರ್ಮಾಣ ಮಾಡಿದ್ದಾರೆ ಅಲ್ಲಿ ರಸ್ತೆಗಳು ಹಾಗೂ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿದ್ದಾರೆ. ಆದರೆ ಯಾರು ಸರಿಯಾಗಿ ತೆರಿಗೆ ಹಾಗೂ ನೀರಿನ ತೆರಿಗೆಯನ್ನು ತುಂಬುತ್ತಾರೆ ಅಲ್ಲಿ ಅಗತ್ಯವಿರುವ ಕಾಮಗಾರಿಗಳನ್ನು ಕೈಗೊಳ್ಳದೇ ಬೇರೆ ಕಡೆ ಕೆಲಸಕಾರ್ಯಗಳನ್ನು ಮಾಡಿದ್ದಾರೆ. ಇವತ್ತು ವಿಜಯಪುರದ ವಾರ್ಡ್ 19ರಲ್ಲಿ ಈ ರೀತಿ ಸಾಕಷ್ಟು ಅವ್ಯವಹಾರಗಳು ನಡೆದಿವೆ.

**(80) 09.02.2017 ಎಂವಿ–ಜಿಆರ್ 12.20**

**ಶ್ರೀ ಬಸನಗೌಡ ಆರ್ ಪಾಟೀಲ್ (ಯತ್ನಾಳ್)(ಮುಂದು):–**

ಮಾನ್ಯ ಸಭಾಪತಿಯವರೆ, ಅಲ್ಲಿನ ಮಹಾನಗರಪಾಲಿಕೆ ಸದಸ್ಯರು ಈ ನಗರಾಭಿವೃದ್ಧಿ ಮತ್ತು ನಗರಸಭೆಯ ಆಸ್ತಿಗಳನ್ನು ತಮ್ಮ ಸ್ವಂತ ಆಸ್ತಿಗಳನ್ನಾಗಿ ಮಾಡಿಕೊಂಡು ವಾಣಿಜ್ಯ ಸಂಕೀರ್ಣಗಳನ್ನು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮತ್ತು ಮನೆಗಳನ್ನು ಕಟ್ಟಿಕೊಂಡು, ಇಂದಿನ ದಿವಸ ಸಂಪೂರ್ಣವಾಗಿ ವಿಜಯಪುರ ನಗರದಲ್ಲಿ ಕೆಲವೊಂದು ಹಳೆ ನಗರಸಭೆ ಕಟ್ಟಡದಲ್ಲಿರುವಂತಹ ಒಂದು ಕಟ್ಟಡವನ್ನು ಅತಿ ಕಡಿಮೆ ಬಾಡಿಗೆಗೆ, ಮಹಾನಗರಸಭೆಯಸದಸ್ಯರಾದಶ್ರೀ ಆನಂದ ಎನ್ನುವಂತಹವರು ಕೇವಲ ಒಂದು ಸಾವಿರ ರೂಪಾಯಿಗಳಿಗೆ ತಿಂಗಳಿಗೆ ಲೀಸನ್ನು ತೆಗೆದುಕೊಂಡು, ಈ ದಿವಸ ಅಯ್ಯಂಗಾರ್ ಬೇಕರಿ ಮಾಡಿರುವವರಿಗೆ ತಿಂಗಳಿಗೆ ಐವತ್ತು ಸಾವಿರ ರೂಪಾಯಿ ಬಾಡಿಗೆ, ಮೂವತ್ತು ಲಕ್ಷ ರೂಪಾಯಿ ಡಿಪಾಸಿಟ್ ಪಡೆದು ನೀಡಿರುತ್ತಾರೆ. ಈ ರೀತಿಯಾಗಿ ಮಹಾನಗರಪಾಲಿಕೆಯ ಒಬ್ಬ ಸದಸ್ಯ ತಮ್ಮ ಮನೆಯಲ್ಲಿರುವಂತಹ ಬೇರೆ ಹುಡುಗನ ಹೆಸರಿನಲ್ಲಿ ಕಟ್ಟಡವನ್ನು ತೆಗೆದುಕೊಂಡು, ಈ ರೀತಿಯಾದ ಅವ್ಯವಹಾರವನ್ನು ಮಾಡುತ್ತಿದ್ದಾರೆ, ಅದಕ್ಕೆ ಮಾನ್ಯ ನಗರಾಭಿವೃದ್ಧಿ ಸಚಿವರಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ವಿಜಯಪುರ ನಗರಕ್ಕೆ ಸುಮಾರು 23 ಕೋಟಿ ರೂಪಾಯಿಗಳಷ್ಟು ಕೇಂದ್ರದ ನಗರೋತ್ಥಾನ ಯೋಜನೆಯಲ್ಲಿ ಹಣ ಬಂದಿದೆ. ಇವತ್ತಿನ ದಿವಸ ಅದರಲ್ಲಿ ಶೇಕಡ 75ರಷ್ಟು ಸಂಪೂರ್ಣವಾಗಿ ಅವ್ಯವಹಾರವಾಗಿದೆ. ಇದ್ದಂತಹ ರಸ್ತೆಗೆ ಮತ್ತೊಂದು ದಿಕ್ಕಿನಿಂದ ಮತ್ತು ಇನ್ನೊಂದು ದಿಕ್ಕಿಗೆ ತೋರಿಸಿ, ಹಣವನ್ನು ಸಂಪೂರ್ಣ ಲೂಟಿ ಮಾಡಿರುವುದು ವಿಜಯಪುರ ನಗರದಲ್ಲಿ ನಡೆದಿದೆ. ಅದಕ್ಕೆ ದಯವಿಟ್ಟು ಮಾನ್ಯ ಸಚಿವರು ಈ ಗುಂಟೆಗಳನ್ನು ಸಕ್ರಮ ಮಾಡಿ. ಆದರೆ, ಸೌಲಭ್ಯ ಕೊಡಬಾರದು ಎಂದು ನಾನು ಹೇಳುವುದಿಲ್ಲ. ಅವುಗಳನ್ನು ಸಕ್ರಮ ಮಾಡಿ ಮಹಾನಗರಪಾಲಿಕೆಗೆ ಟ್ಯಾಕ್ಸ್ ಬರುವ ರೀತಿಯಲ್ಲಿ ಮಾಡಿದರೆ, ಯಾರು ಮಹಾನಗರಪಾಲಿಕೆಗೆ ಸರಿಯಾಗಿ ಟ್ಯಾಕ್ಸ್ ತುಂಬುತ್ತಾರೆ, ಯಾರು ಮಹಾನಗರಪಾಲಿಕೆ ಎಲ್ಲಾ ಕರಗಳನ್ನು ಪಾವತಿ ಮಾಡುತ್ತಾರೆ, ಅಂತಹ ಕಡೆ ಅಭಿವೃದ್ಧಿಯನ್ನು ಮಾಡಿದರೆ ಒಳ್ಳೆಯದಾಗುತ್ತದೆ. ಅದಕ್ಕೆ ಈ ಗುಂಟೆಗಳನ್ನು ಸಕ್ರಮ ಮಾಡುವುದರ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆಯೆ? ಇದ್ದರೆ ಯಾವಾಗ ಮಾಡುತ್ತೀರಿ? ಮತ್ತು ಮಹಾನಗರಪಾಲಿಕೆ ಸದಸ್ಯರು ಇಡೀ ನಗರಾಭಿವೃದ್ಧಿ ಮತ್ತು ಮಹಾನಗರಪಾಲಿಕೆಯ ಆಸ್ತಿಗಳನ್ನು ಇವತ್ತಿನ ದಿವಸ ಸಾರ್ವಜನಿಕ ಉದ್ದೇಶಕ್ಕಾಗಿ ಏನು ಖಾಲಿ ನಿವೇಶನಗಳಿವೆ, ಅವುಗಳನ್ನು ಏನು ದುರುಪಯೋಗ ಮಾಡಿಕೊಂಡಿದ್ದಾರೆ ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಾ ಎಂಬುದರ ಬಗ್ಗೆ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:–** ಮಾನ್ಯ ಸಚಿವರು ಮಾತನಾಡಿ.

**ಶ್ರೀ ಆರ್.ರೋಷನ್ ಬೇಗ್:–** ಮಾನ್ಯ ಸಭಾಪತಿಯವರೆ, ನಾನು ಆಗಲೇ ಉತ್ತರದಲ್ಲಿ ಬಹಳ ಸ್ಪಷ್ಟವಾಗಿ ಉತ್ತರ ಕೊಟ್ಟಿದ್ದೇವೆ. ಉತ್ತರದಲ್ಲಿ ಈ ಗುಂಟಾ ಬಡಾವಣೆಯೆಂದು ಏನು ಹೇಳಿದ್ದಾರೆ ಅದು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಿಜ. ಅದರಲ್ಲಿ ಸ್ವಲ್ಪ ಗುಂಟಾ ಬಡಾವಣೆ ಜಾಗ misuse ಆಗಿರುವುದು ನಿಜ. ಅದಕ್ಕೆ ನಾವು immediate ಆಗಿ, ಇಲ್ಲಿಗೆ ನಮ್ಮ ಪೌರಾಡಳಿತ ನಿರ್ದೇಶಕರು ಹಾಗೂ Director of Town Planning – ಈ ಇಬ್ಬರೂ ಹಿರಿಯ ಅಧಿಕಾರಿಗಳನ್ನು ವಿಜಯಪುರ ನಗರಪಾಲಿಕೆ ಕಳುಹಿಸುತ್ತಿದ್ದೇವೆ. ಅವರುಗಳು ನೇರವಾಗಿ ಹೋಗಿ ವಾರ್ಡ್ ನಂ.19 ಹಾಗೂ ಒಬ್ಬ ನಗರಸಭಾ ಸದಸ್ಯರ ಬಗ್ಗೆ land misuse ಆಗಿದೆಯೇ ಎಂಬ ಬಗ್ಗೆ ತನಿಖೆ ಮಾಡುತ್ತಾರೆ. ಗುಂಟಾ ಬಡಾವಣೆಯಲ್ಲಿ ನಗರೋತ್ಥಾನ ಹಣವೇನು ಇದೆ ಅದು misuse ಆಗಿ ಖರ್ಚಾಗಿದೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅದರ ಬಗ್ಗೆ ಅಧಿಕಾರಿಗಳು ಹೋಗಿ ತನಿಖೆ ಮಾಡುತ್ತಾರೆ. ಅವರು ನಗರಸಭಾ ಸದಸ್ಯರ ಬಗ್ಗೆ ಏನಾದರೂ ನಮಗೆ ವರದಿ ಕೊಟ್ಟರೆ, ಅವರ ಸದಸ್ಯತ್ವವನ್ನು ರದ್ದು ಮಾಡುವುದಕ್ಕೆ ಸರ್ಕಾರಕ್ಕೆ ಬರೆಯುತ್ತೇವೆ ಮತ್ತು ಕ್ರಮವನ್ನು ತೆಗೆದುಕೊಳ್ಳುತ್ತೇವೆ.

**ಸಭಾಪತಿಯವರು:–** ಮಾನ್ಯ ಸದಸ್ಯರು ಪ್ರಶ್ನೆ ಕೇಳಿ.

**ಶ್ರೀ ಬಸನಗೌಡ ಆರ್ ಪಾಟೀಲ್ (ಯತ್ನಾಳ್):–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಹೇಳಿರುವುದಕ್ಕೆ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ವಿಜಯಪುರ ಮಹಾನಗರ ಪಾಲಿಕೆಯಲ್ಲಿ ಏನು ಅವ್ಯವಹಾರವಾಗಿದೆ ಇದು ನಿಷ್ಪಕ್ಷಪಾತವಾಗಿ ಮತ್ತು ಸಂಪೂರ್ಣ ತನಿಖೆಯಾಗಬೇಕು ಮತ್ತು ಯಾವ ಮಹಾನಗರ ಪಾಲಿಕೆಯ ಸದಸ್ಯರು ಇದರಲ್ಲಿ involvement ಇದ್ದರೆ ಅವರ ಸದಸ್ಯತ್ವವನ್ನು ಅನರ್ಹಗೊಳಿಸಬೇಕು. ಸನ್ಮಾನ್ಯ ಸಚಿವರೇ, ಮಹಾನಗರಪಾಲಿಕೆಯ ಸರ್ವಸಾಧರಣಾ ಸಭೆಯೇ ನಡೆಯುತ್ತಿಲ್ಲ. ಇವತ್ತಿನ ದಿವಸ ಏನು ಒಂದು ರೀತಿಯ ಗೂಂಡಾಗಿರಿಯ ಪ್ರವೃತ್ತಿ ಬೆಳೆದಿದೆ, ದಯವಿಟ್ಟು ತಾವು ಇದರ ಮೇಲೆ ಲಗಾಮು ಹಾಕಬೇಕಾದರೆ, ಸದಸ್ಯತ್ವವನ್ನು ಅನರ್ಹಗೊಳಿಸುವಂಥದ್ದು ಮಾತ್ರ, ರಾಜ್ಯದಲ್ಲಿ ಮಹಾನಗರಪಾಲಿಕೆಯ ಸದಸ್ಯರಿಗೆ ಮತ್ತು ಪಂಚಾಯತಿಯ ಸದಸ್ಯರಿಗೆ ಒಂದು ರೀತಿಯ ಭಯ ಬರುತ್ತದೆ. ದಯವಿಟ್ಟು ತಾವು ಏನು ಒಂದು ಆಶ್ವಾಸನೆಯನ್ನು ಕೊಟ್ಟಿದ್ದೀರಿ ಅದಕ್ಕೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ.

**ಶ್ರೀ ಆರ್.ರೋಷನ್ ಬೇಗ್:–** ಮಾನ್ಯ ಸಭಾಪತಿಯವರೆ, ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ, ನಾವು ಕ್ರಮ ತೆಗೆದುಕೊಳ್ಳುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಧನ್ಯವಾದಗಳು. ಮುಂದಿನ ಪ್ರಶ್ನೆ ಶ್ರೀಕವಟಗಿಮಠ ಮಹಂತೇಶ ಮಲ್ಲಿಕಾರ್ಜುನರವರದ್ದು, ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಸ್ವಲ್ಪ ಸಮಯಾವಕಾಶ ಕೇಳಿದ್ದಾರೆ.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ:–**ಮಾನ್ಯ ಸಭಾಪತಿಯವರೆ, ಕಡತ ವಿಲೇವಾರಿ ಬಗ್ಗೆ ನಾನು ಪ್ರಶ್ನೆ ಕೇಳಿದ್ದೇನೆ. ನನ್ನ ಪ್ರಶ್ನೆಗೂ ವಿಲೇವಾರಿ ವಿಳಂಭವಾಗಬಾರದು.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಅದಕ್ಕೆ ಸಂಬಂಧಿಸಿದಂತೆ ಮಾಹಿತಿ ಬೇಕು. ಎಲ್ಲಾ ಮಾಹಿತಿ ಶೇಖರಣೆಯಾದ ಮೇಲೆ ಉತ್ತರವನ್ನು ಕಳುಹಿಸಿಕೊಡುತ್ತೇವೆ.

**ಸಭಾಪತಿಯವರು:–** ಧನ್ಯವಾದಗಳು. ಮುಂದಿನ ಪ್ರಶ್ನೆ ಡಾ.ಜಯಮಾಲ ರಾಮಚಂದ್ರರವರದ್ದು.

**ಪ್ರಶ್ನೆ ಸಂಖ್ಯೆ:– 276.**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಡಾ:ಜಯಮಾಲ ರಾಮಚಂದ್ರ:–** ಮಾನ್ಯ ಸಭಾಪತಿಯವರೆ, ನಾಗರಿಕರ ಪರವಾಗಿ ಅತ್ಯಂತ ಅವಶ್ಯಕವಾದಂತಹ ಒಂದು ಪ್ರಶ್ನೆಯನ್ನು ನಾನು ಕೇಳಿದ್ದೇನೆ. ಈಗ ಚಳಿಗಾಲ ಮುಗಿದು, ಬೇಸಿಗೆ ಕಾಲ ಬರುತ್ತಿದೆ. ಡೆಂಗ್ಯೂ ಕಾಯಿಲೆ ಹಾಗೂ ಚಿಕೂನ್‌ಗುನ್ಯಾ ಎಲ್ಲವೂ ಕೂಡ ಸೊಳ್ಳೆಗಳು breed ಆಗುವಂತಹ ಸಂದರ್ಭ. ಈ ಸಂದರ್ಭದಲ್ಲಿ ಅವುಗಳ ನಿಯಂತ್ರಣಕ್ಕೆ ಫಾಗಿಂಗ್ ಮಾಡುವುದಕ್ಕೆ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಹಣವನ್ನು ಮೀಸಲಾಗಿಟ್ಟಿದ್ದಾರೆ ಮತ್ತು ಎಷ್ಟು ಹಣವನ್ನು ಅದಕ್ಕಾಗಿ ಖರ್ಚು ಮಾಡಲಾಗಿದೆ ಎನ್ನುವಂತಹ ಪ್ರಶ್ನೆಯನ್ನು ಕೇಳಿದ್ದೇನೆ. ಅದಕ್ಕೆ ಮಾನ್ಯ ಸಚಿವರು ಮೂರು ವರ್ಷಗಳಲ್ಲಿ 23 ಕೋಟಿ ರೂಪಾಯಿ ಹಣವನ್ನು ಮೀಸಲಾಗಿಟ್ಟು, ಅದರಲ್ಲಿ 5.17 ಕೋಟಿ ಹಣವನ್ನು ಖರ್ಚು ಮಾಡಲಾಗಿದೆ. ಉಳಿದ ಹಣವನ್ನು ಖರ್ಚು ಮಾಡಿಲ್ಲವೆಂದು ಹೇಳಿದ್ದಾರೆ. ಏಕೆ ಅದನ್ನು ಖರ್ಚು ಮಾಡುವುದಕ್ಕೆ ಆಗಿಲ್ಲ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಮಾನ್ಯ ಸಭಾಪತಿವರೆ, ಆ ಹಣ ಏನಾಯಿತು ಎನ್ನುವುದು ಒಂದು ಪ್ರಶ್ನೆ, ಎರಡನೆಯದಾಗಿ ಈ ಫಾಗಿಂಗ್ ಕಾರ್ಯವನ್ನು ಬಡಾವಣೆಯಲ್ಲಿ ಮಾಡುವಾಗ, ಎಷ್ಟು ದಿವಸಕ್ಕೆ ಒಂದು ಸಾರಿ ಮಾಡಲಾಗುತ್ತಿದೆ ಎಂದು ಕೇಳಿದಾಗ. ಅವಶ್ಯಕತೆಗೆ ಅನುಗುಣವಾಗಿ ಫಾಗಿಂಗ್ ವ್ಯವಸ್ಥೆ ಮಾಡಲಾಗುತ್ತಿದೆ ಎನ್ನುವಂತಹ ಮಾತನ್ನು ಹೇಳುತ್ತಿದ್ದಾರೆ.ಮಾನ್ಯ ಸಭಾಪತಿವರೆ, World Health Organization ಏನು ಹೇಳುತ್ತದೆಂದರೆ. ಈ ಫಾಗಿಂಗ್ ಅನ್ನು early morning ಮತ್ತು early evening ಮಾಡಬೇಕು. ಈ ಫಾಗಿಂಗ್ ಮಾಡುವುದರಿಂದ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸೊಳ್ಳೆಗಳ ನಿಯಂತ್ರಣವಾಗುತ್ತದೆ. ಈ ಫಾಗಿಂಗ್ ಮಾಡುವುದರಿಂದ ಸಾರ್ವಜನಿಕರು ಕಡ್ಡಾಯವಾಗಿ ಎರಡು ವಿಷಯಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. ಈ ಫಾಗಿಂಗ್ ಅನ್ನು morning ಮತ್ತು evening ಮಾಡಿಕೊಂಡು ಬರುವಾಗ. ಬಾಗಿಲು ಮತ್ತು ಕಿಟಕಿಗಳನ್ನು ತೆರೆದಿಡಬೇಕು, ಈ ಸೊಳ್ಳೆಗಳು ಒಳಗೆ ಇರುತ್ತವೆ, ಅಂತಹ ಸಂದರ್ಭದಲ್ಲಿ ಅವುಗಳ ನಾಶವಾಗುತ್ತದೆ ಎನ್ನುವಂತಹ ಮಾತನ್ನು ಹೇಳಿದ್ದಾರೆ. ಆದರೆ ಈ awareness ಅನ್ನು ನಾವು ಎಲ್ಲೂ ಕೂಡ ಕಂಡಿಲ್ಲ. ಎರಡನೆಯದಾಗಿ ಈ ಫಾಗಿಂಗ್ ಅನ್ನು compulsory ಮಾಡುವಂತಹ ಕೆಲಸಗಳನ್ನು ಮಾಡಬೇಕು. ಇದಕ್ಕೆ ಹಣವನ್ನು ಏಕೆ ಖರ್ಚು ಮಾಡುತ್ತಿಲ್ಲ ಎನ್ನುವ ಪ್ರಶ್ನೆಗೆ ಮೊದಲು ನನಗೆ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಕೆ.ಜೆ.ಜಾರ್ಜ್:-** ಮಾನ್ಯ ಸಭಾಪತಿಯವರೆ, ಈ ಫಾಗಿಂಗ್ ಮಾಡುವುದನ್ನು regular ಆಗಿ ಮಾಡುವುದಿಲ್ಲ, ಏಕೆಂದರೆ, ಎಲ್ಲಿ ಡೆಂಗ್ಯೂ ಕಾಯಿಲೆಯನ್ನು ಪತ್ತೆ ಹಚ್ಚುತ್ತೇವೆ, ಎಲ್ಲಿ ಯಾರಿಗಾದರೂ ಕಾಯಿಲೆ ಇದ್ದರೆ, ಆ ಪ್ರದೇಶದಲ್ಲಿ ಮಾತ್ರ ಈ ಫಾಗಿಂಗ್ ಅನ್ನು ಮಾಡುತ್ತೇವೆ. ಫಾಗಿಂಗ್‌ಗೆ ನಾವು ಹಣ ಕೊಟ್ಟಿರುವುದು ಕೆಮಿಕಲ್ ಮತ್ತು ಮೆಡಿಸನ್ ಹಾಕಲಿಕ್ಕೆ ಮಾತ್ರ ಉಪಯೋಗಿಸುತ್ತಿದ್ದೇವೆ. ಸಿಬ್ಬಂದಿಗೆ ಸಂಬಳ ಕೊಡುವುದು ಬೇರೆ ಇದೆ. ಬಹುಶಃ ಮಾನ್ಯ ಸದಸ್ಯರು ಹೇಳುತ್ತಿರುವುದು spray ಬಗ್ಗೆ. ನಾವು spray ಮಾಡುತ್ತೇವೆ, ಅದನ್ನು regular ಆಗಿ ಎಲ್ಲೆಲ್ಲಿ ಈ ತರಹ effect ಆಗಿದೆ ಎಂದು ಅದನ್ನು ನಾವು ಮಾಡುತ್ತೇವೆ. ನಾನು ನಿಮಗೆ ಅಂಕಿ-ಅಂಶವನ್ನು ಕೊಡುತ್ತೇನೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಮಾನ್ಯ ಸಭಾಪತಿಯವರೆ, ಅಂಕಿ-ಅಂಶ ಪೇಪರ್‌ನಲ್ಲಿರುತ್ತದೆ, ನಿಜವಾಗಿ area ದಲ್ಲಿ ಯಾರು ಬರುವುದಿಲ್ಲ. ಇಲ್ಲಿ ಎಲ್ಲಾ ಶಾಸಕರು ನಾವು ಮತ್ತು ನೀವು ಎಲ್ಲರೂ ಇಲ್ಲಿ ಇದ್ದೇವೆ. ನಮ್ಮ ಡಾಲರ್ಸ್ ಕಾಲೋನಿಯಲ್ಲಿ drainage ನಲ್ಲಿ ವಿಪರೀತ ಸೊಳ್ಳೆ. ಮಾನ್ಯ ಮುಖ್ಯಮಂತ್ರಿಗಳು ಅಲ್ಲೆ ಇದ್ದರು ಅವರು ಸಹ ಒಂದು ಸಾರಿ ಹೇಳಿದರು, ಆ ಸೊಳ್ಳೆಗಳನ್ನು ತಡೆಯುವುದಕ್ಕೆ ಆಗುವುದಿಲ್ಲವೆಂದು. ಆದರೆ ಎಲ್ಲೂ ಫಾಗಿಂಗ್ ಮಾಡುತ್ತಿಲ್ಲ.

**ಶ್ರೀ ಕೆ.ಜೆ.ಜಾರ್ಜ್:-** ಮಾನ್ಯ ಸಭಾಪತಿಯವರೆ, ಫಾಗಿಂಗ್‌ನಿಂದ ಮಾತ್ರ ಸೊಳ್ಳೆಗಳನ್ನು ನಿಯಂತ್ರಣ ಮಾಡುವುದಕ್ಕೆ ಆಗುವುದಿಲ್ಲ. ಒಂದು ನಿಮಿಷ ನಾನು ಹೇಳುವುದನ್ನು ಕೇಳಿ, ಆದಾದ ಮೇಲೆ ತಾವು ಕೇಳಿ ಸಭಾಪತಿಗಳು ಅನುಮತಿ ಕೊಟ್ಟರೆ, ಅದಕ್ಕೆ ನಾನು ಉತ್ತರ ಕೊಡುತ್ತೇನೆ. ಈಗ ಏನಾಗಿದೆ ಎಂದು ಹೇಳಿದರೆ, ಇದರಿಂದ ಚಿಕೂನ್ಯಗುನ್ಯಾ ಮತ್ತು ಡೆಂಗ್ಯೂ ಬರುತ್ತದೆ. ಇದು ಒಂದು special

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

mosquito. ಅದರ ಆಯಸ್ಸು ಏಳು ದಿವಸ, ಅದು ಮೊಟ್ಟೆ ಇಡುವುದು fresh water ನಲ್ಲಿ, ಟೈರ್‌ಗಳಲ್ಲಿ ಮತ್ತು ಕ್ಯಾನ್‌ಗಳಲ್ಲಿ ಎಲ್ಲೆಲ್ಲಿ ಮಳೆಗಾಲದಲ್ಲಿ fresh water ಇರುತ್ತದೆ, ಅದು ಅಲ್ಲಿ ಹೋಗಿ ಮೊಟ್ಟೆ ಇಟ್ಟು ಏಳು ದಿವಸ ಬದುಕುತ್ತದೆ, ಆ ಸಮಯದಲ್ಲಿ ಕಚ್ಚಿದರೆ ಡೆಂಗ್ಯೂ ಮತ್ತು ಚಿಕೂನ್ಯಗುನ್ಯಾ ಬರುತ್ತದೆ. ಅದಕ್ಕೆ ನಾವು preventive ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಸಿಬ್ಬಂದಿಗಳಿಗೆ ಮಾತ್ರವಲ್ಲ ಮಾನ್ಯ ಸದಸ್ಯರು ಹೇಳಿದ ಹಾಗೆ ಎಲ್ಲರಿಗೂ ತಿಳುವಳಿಕೆ ಕೊಡುವಂತಹ ಕೆಲಸವನ್ನು ಮಾಡಬೇಕು. ಅದಕ್ಕೋಸ್ಕರವಾಗಿ ಈಗಾಗಲೇ ಟಿ.ವಿ.ಯಲ್ಲಿ ಹಾಕುತ್ತಿದ್ದೇವೆ, hand bills ಕೊಡುತ್ತಿದ್ದೇವೆ. ಎನ್.ಜಿ.ಓ ಮತ್ತು ಜನರ ಸಹಕಾರ ಸಿಗಬೇಕು, ಅದು ನಮಗೆ ಸಿಗುತ್ತಿದೆ. ಇನ್ನಷ್ಟು ಸಿಕ್ಕಿದರೆ ಒಳ್ಳೆಯದು. ಈ ರೀತಿಯಾಗಿ ಮಾಡುತ್ತೇವೆ. ಈಗ ಕಳೆದ ವರ್ಷಕ್ಕಿಂತ 2015–2016ನೇ ಸಾಲಿನ ಅಂಕಿ–ಅಂಶಗಳನ್ನು ನೋಡಬೇಕಾಗುತ್ತದೆ. ಏಕೆಂದರೆ ಅಂಕಿ–ಅಂಶಗಳನ್ನು ಕೊಟ್ಟ ಕೂಡಲೇ ಎಲ್ಲಾ ನಿಯಂತ್ರಣವಾಗಿದೆ ಎಂದು ಹೇಳಲಿಕ್ಕೆ ಬರುವುದಿಲ್ಲ. ಅದು ಸ್ವಲ್ಪ ಕಡಿಮೆಯಾಗಿದೆ, ಆದರೆ, ಇನಷ್ಟು ಕೆಲಸ ಮಾಡಬೇಕಾಗುತ್ತದೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇನ್ನಷ್ಟು ಮಾಡಲಿಕೆ ಪ್ರಯತ್ನ ಮಾಡುತ್ತೇನೆ ಮತ್ತು ಆದೇಶವನ್ನು ಸಹ ಕೊಡುತ್ತೇನೆ. ಆದಷ್ಟು ಇದನ್ನು preventive ಮಾಡಲಿಕೆ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ನಂತರ spray ಮಾಡುವುದು, ಈ larvae ಎಲ್ಲಿ ಇರುತ್ತದೆ ಅದನ್ನು spray ಮಾಡಬೇಕಾಗುತ್ತದೆ. Thereafter, as a last resort we have to do fogging. Fogging ನಿಂದಾಗಿ ಆರೋಗ್ಯಕ್ಕೆ ತೊಂದರೆಯಾಗುತ್ತದೆ. ಅದು ಸ್ವಲ್ಪ ಸರಿಯಿಲ್ಲ, ಅದಕ್ಕೋಸ್ಕರ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀ ಐವನ್ ಡಿ'ಸೋಜಾ (ಸರ್ಕಾರಿ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೆ, ಈಗ ಮಾನ್ಯ ಸಚಿವರು ಏನು ಹೇಳಿದರು ದುಡ್ಡು ಮೀಸಲಿಟ್ಟಿರುವುದು ಖರ್ಚು ಮಾಡದೆ ಇರುವಂತಹ ವಿಭಾಗದಲ್ಲಿ ಇದು ಒಂದು ದೊಡ್ಡ ಸುದ್ದಿ. ದುಡ್ಡು ಕೊಟ್ಟರು ಖರ್ಚು ಮಾಡಿಲ್ಲವೆಂದು. ಎರಡನೆಯದಾಗಿ ನಮ್ಮ ಶಾಸಕರ ಭವನಕ್ಕೆ ಬಂದರೆ ಸಾಧಾರಣ ಒಂದು ಕೆ.ಜಿ.ಯಷ್ಟು ಸೊಳ್ಳೆ ಇದೆ.

**(81)/9-2-2017/ಎಲ್ಎಂ/ಜಿಆರ್/12-30**

**ಶ್ರೀ ಐವನ್ ಡಿ'ಸೋಜಾ (ಮುಂದು):-**

ಒಂದು ಕೆ.ಜಿ ಅಷ್ಟು ಸೊಳ್ಳೆಗಳನ್ನು ಸಂಗ್ರಹ ಮಾಡಬಹುದು, ಅಷ್ಟು ಸೊಳ್ಳೆಗಳು ಇವೆ. ಹಣ ಇದ್ದರೂ ಖರ್ಚು ಮಾಡಿ ಇವರು ನಿಯಂತ್ರಣ ಮಾಡುವುದಿಲ್ಲ ಎಂದರೆ, ಇದೊಂದು ವಿಶೇಷ ಸುದ್ದಿ ಅನ್ನಿಸುತ್ತದೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಗಳೆ, ಎಲ್ಲರಿಗೂ ಸೊಳ್ಳೆ ಪರದೆ ಕೊಡುತ್ತೇವೆ, ಸೊಳ್ಳೆ ಭಾಗ್ಯ ಯೋಜನೆ ಎಂದು ಬಜೆಟ್‌ನಲ್ಲಿ ಘೋಷಣೆ ಮಾಡಿಬಿಡಲಿ.

**ಶ್ರೀ ಕೆ.ಜೆ.ಜಾರ್ಜ್:-** ಮಾನ್ಯ ಸಭಾಪತಿಗಳೆ, ಈ ಹಣ ಇರುವುದು ಕೆಮಿಕಲ್ ಖರೀದಿಗೆ ಬಳಸಿಕೊಳ್ಳಲು ಎಂದು ನಾನು ಮೊದಲೇ ಹೇಳಿದ್ದೇನೆ. ಈ ಹಣ ಖರ್ಚು ಆಗದಿದ್ದರೂ ಕೂಡಾ ಬಿಬಿಎಂಪಿ ಯಲ್ಲಿ ಈ ಹಣ ಉಳಿಯುತ್ತದೆ. ದುರುಪಯೋಗವಾಗಿದ್ದರೆ ಈ ಹಣಕ್ಕೂ ಲೆಕ್ಕ ಸಿಗುತ್ತಿರಲಿಲ್ಲ. ನಮ್ಮ ಕಾರ್ಪೋರೇಶನ್‌ನವರು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಇದನ್ನು ನಿಯಂತ್ರಣ ಮಾಡಲು preventive ಮಾಡಬೇಕಾದರೆ mosquitoes net ಮಾಡಬೇಕಾಗುತ್ತದೆ. ಶ್ರೀಮತಿ ಜಯಮಾಲರವರು ಹೇಳಿದ ಹಾಗೆ ಬೆಳಗ್ಗೆ 5 ಗಂಟೆಗೆ ಎಲ್ಲಾ ಮನೆಗಳ ಬಾಗಿಲುಗಳನ್ನು close ಮಾಡಿ ಮನೆಗಳಲ್ಲಿ ಮಾಡಬೇಕಾಗುತ್ತದೆ. ಇದನ್ನು ಮೊದಲಿನಿಂದ ಈ ಕೆಲಸವನ್ನು ಮಾಡುತ್ತಿದ್ದೇವೆ. ಸೊಳ್ಳೆಗಳು ತುಂಬಾ ಇರುವುದು ನಿಜ. ಇದನ್ನು ನಿಯಂತ್ರಿಸಲು ಕ್ರಮವನ್ನು ತೆಗೆದುಕೊಳ್ಳಲು ಆದೇಶವನ್ನು ನಾನು ಬಿಬಿಎಂಪಿ ಗೆ ಕೊಡುತ್ತೇನೆ.

**ಡಾ: ಜಯಮಾಲ ರಾಮಚಂದ್ರ:-** ಮಾನ್ಯ ಸಭಾಪತಿಗಳೆ, ಮುಂಬಯಿಯಲ್ಲಿಯು ಅಂಗಡಿಗಳಲ್ಲಿ ಕುಡಿದ ಲೋಟಗಳನ್ನು ಬಿಸಾಡುವುದರಿಂದ ಕಸ ಜಾಸ್ತಿಯಾಗಿ ಸೊಳ್ಳೆಗಳು ಜಾಸ್ತಿಯಾದಾಗ ಅಲ್ಲಿ ಇರುವ ಕಮೀಶನರ್‌ರವರು ಬಹಳ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಅವರು ಎಲ್ಲಾ ಕಾಲೇಜುಗಳಿಗೆ ಹೋಗಿ ಮಕ್ಕಳಿಗೆ ತರಬೇತಿಯನ್ನು ಕೊಟ್ಟು ಮಕ್ಕಳಲ್ಲಿ ಜಾಗೃತಿಯನ್ನು ಉಂಟು ಮಾಡಿದರು. ಆ ಮಕ್ಕಳ ಕೈಯಲ್ಲಿ ದಂಡ ರಸೀದಿಯನ್ನು ಕೊಟ್ಟು ಎಲ್ಲಿ ಕಸ ಕಾಣುತ್ತದೆ ಅದನ್ನು ಮೊದಲು ತೆಗೆದು ಹಾಕಿ ನಂತರ ಸಂಬಂಧಪಟ್ಟವರಿಗೆ ದಂಡವನ್ನು ಹಾಕಿ ಅದರ ರಸೀದಿಯನ್ನು ಅಧಿಕಾರಿಗಳಿಗೆ ತಂದು ಕೊಡುವಂತಹ ಕೆಲಸವನ್ನು ಮಕ್ಕಳಿಗೆ ಕೊಟ್ಟರು. ಇದರಿಂದ ಅಲ್ಲಿ ಜನರಲ್ಲಿ ಜಾಗೃತಿ ಉಂಟಾಯಿತು ಮತ್ತು ಮಕ್ಕಳಲ್ಲಿಯು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಮಗೂ ಒಂದು ಬದ್ಧತೆ ಇದೆ, ನಾವು ಸಮಾಜಕ್ಕೆ ಒಳ್ಳೆಯ ಕೆಲಸವನ್ನು ಮಾಡುತ್ತಿದ್ದೇವೆ ಎನ್ನುವ ಮನೋಭಾವ ಬೆಳೆಯಿತ್ತು. ಈಗ ನಮ್ಮಲ್ಲಿರುವ ಬಿಬಿಎಂಪಿ ಆಯುಕ್ತರು ತುಂಬಾ ಒಳ್ಳೆಯ ಕೆಲಸಗಳನ್ನು ಮಾಡುತ್ತಿದ್ದಾರೆ. ಅವರು ಕಾಲ್ನಡಿಗೆಯಲ್ಲಿ ಹೋಗಿ ಜನರ ಸಮಸ್ಯೆಗಳನ್ನು ಕೇಳುತ್ತಿದ್ದಾರೆ, ಅದಕ್ಕೆ ಸ್ಪಂಧಿಸುತ್ತಿದ್ದಾರೆ. ಇಂತಹ ಒಳ್ಳೆಯ ಅಧಿಕಾರಿಗಳು ಇರುವಾಗ ಇಂತಹ ಕೆಲಸಗಳನ್ನು ಮಾಡಿಸಬೇಕು ಎಂದು ಕೇಳಿಕೊಳ್ಳುತ್ತೇನೆ. ಮಾನ್ಯ ಮಂತ್ರಿಗಳು ಔಷಧಿಯಿಂದ side effect ಇದೆ ಎಂದು ಹೇಳಿದರು. ಆದರೆ World Health Organisation ಹೇಳುತ್ತದೆ, ಔಷಧಿಯಿಂದ ಖಂಡಿತವಾಗಿ side effect ಇಲ್ಲ ಎಂದು ಹೇಳಿದ್ದಾರೆ. ಹಾಗೆ ಒಂದು ಒಳ್ಳೆ ಇದ್ದರೆ organic ಬಂದಿದೆ. ಆ ಔಷಧಿಗಳನ್ನಾದರೂ ಸಿಂಪಡಿಸಬಹುದು. ಈಗ ಇರುವ ಹಣವನ್ನು ಇದಕ್ಕೆ ಖರ್ಚು ಮಾಡಿ ಮುಂದಿನ ದಿನಗಳಲ್ಲಿ ಇದನ್ನು ಅಳವಡಿಸಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಗಳೆ, ಕಳೆದ ಬೆಳಗಾವಿ ಅಧಿವೇಶನದಲ್ಲಿ ಇದೇ ಪ್ರಶ್ನೆಯನ್ನು ಕೇಳಲಾಗಿತ್ತು. ಎಚ್‌ಎಸ್‌ಆರ್ ಲೇಔಟ್‌ನ Third Sector ನಲ್ಲಿ 100 ರಿಂದ 150 ಶೆಡ್‌ಗಳನ್ನು ಹಾಕಿ Food Court ಮಾಡಿದ್ದಾರೆ. ಅಲ್ಲಿ ಈಗ ಹಾವುಗಳು, ಹಂದಿಗಳು, ಸೊಳ್ಳೆಗಳು ಬರುತ್ತಿವೆ. ಆದರೆ ಮಂತ್ರಿಗಳು ಒಳ್ಳೆಯ ಉತ್ತರವನ್ನು ಕೊಟ್ಟಿದ್ದಾರೆ ಅದರ ಬಗ್ಗೆ ಏನು ಅಭ್ಯಂತರವಿಲ್ಲ, ಅವರು ನನ್ನ ಒಳ್ಳೆಯ ಸ್ನೇಹಿತರು. ಆದರೆ down the line ಕೆಳಗೆ ಇರುವ ಅಧಿಕಾರಿಗಳು ಏನು ಕೆಲಸ ಮಾಡುತ್ತಿಲ್ಲ. ಅಲ್ಲಿ ಇರುವ ಅಂಗಡಿಗಳನ್ನು ತೆರವುಗೊಳಿಸಲು ಆಗುವುದಿಲ್ಲ, ಹಂದಿಗಳನ್ನು prevent ಮಾಡಲು ಆಗುವುದಿಲ್ಲ, ಸೊಳ್ಳೆಗಳ ಬಗ್ಗೆಯು ಏನು ಮಾಡಲು ಆಗುವುದಿಲ್ಲ ಎನ್ನುವ ಪರಿಸ್ಥಿತಿ ಇದೆ. ನಾನು ಆಯುಕ್ತರಿಗೆ, ಜಂಟಿ ಆಯುಕ್ತರಿಗೆ, ಇಂಜಿನೀಯರ್‌ಗಳಿಗೆ ಹೇಳಿದ್ದೇನೆ. ಮಂತ್ರಿಗಳು ನಾಳೆಯೇ ಆ ಸ್ಥಳಕ್ಕೆ ಬಂದು ಯಾವ ಸ್ಥಿತಿ ಇದೆ ಎನ್ನುವುದನ್ನು ಅವರು ನೋಡಲಿ. ಇನ್ನೊಂದು ವಿಚಾರ ಎಂದರೆ, ಇಡೀ ಎಚ್‌ಎಸ್‌ಆರ್ ಲೇಔಟ್‌ನಲ್ಲಿ ಎಲ್ಲಾ ಬಿಲ್ಡಿಂಗ್‌ಗಳು violations ಆಗಿದೆ. ಅದರ ಬಗ್ಗೆಯು ಹಲವಾರು ಬಾರಿ ಹೇಳಿದ್ದೇನೆ.

**ಸಭಾಪತಿಯವರು:–** ಉಗ್ರಪ್ಪನವರೆ ಬರಿ ಸೊಳ್ಳೆಗಳ ಬಗ್ಗೆ ಮಾತನಾಡಬೇಕು. ಬೇರೆ ವಿಷಯ ಬೇಡ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ವಿ.ಎಸ್.ಉಗ್ರಪ್ಪ:–** ಈ ಸೊಳ್ಳೆಗಳ ಕಾಟವನ್ನು ತಪ್ಪಿಸಲು fogging ಮಾಡುವುದಕ್ಕೆ ಬಿಬಿಎಂಪಿಯವರು ಕ್ರಮ ತೆಗೆದುಕೊಳ್ಳಲು ಸರ್ಕಾರ ಏನು ಕ್ರಮ ಜರುಗಿಸುತ್ತದೆ ಎನ್ನುವುದನ್ನು ಕೇಳಬಯಸುತ್ತೇನೆ.

**ಶ್ರೀ ಕೆ.ಜೆ.ಜಾರ್ಜ್:– ಮಾನ್ಯ ಸಭಾಪತಿಗಳೆ,** 'Awareness Campaign' ಮಾಡಬೇಕು ಎಂದು ಶ್ರೀಮತಿ ಜಯಮಾಲರವರು ಹೇಳಿದ್ದಾರೆ. ಜನರಲ್ಲಿ awareness ಬರಬೇಕು ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಶಾಲಾ–ಕಾಲೇಜುಗಳ ಮಕ್ಕಳಿಗೆ ಆ ರೀತಿ ಅಧಿಕಾರ ಕೊಡಲು ಆಗುವುದಿಲ್ಲ. ಮೊನ್ನೆ ಬಿಬಿಎಂಪಿ ಯಲ್ಲಿ ಮೂರು ಜನ retired Army ಗಳನ್ನು ನೇಮಕ ಮಾಡಿಕೊಂಡು ಮೂರು ವಾರ್ಡ್‌ಗಳಲ್ಲಿ Marshal ಗಳನ್ನಾಗಿ ನೇಮಿಸಲಾಗಿತ್ತು. ಅವರ ಕೆಲಸ ಆ ವಾರ್ಡ್‌ಗಳಲ್ಲಿ ಯಾರು ಎಲ್ಲಿ ಕಸ ಹಾಕುತ್ತಾರೆ ನೋಡುವುದು, ಅಂತವರ ಮೇಲೆ ದಂಡ ವಿಧಿಸುವಂತಹ ಅಧಿಕಾರವನ್ನು ಕೊಡಲಾಗಿತ್ತು. ಅದರ ಬಗ್ಗೆ ಸಾಕಷ್ಟು ಟೀಕೆಗಳು ಬಂದವು. ಆದ್ದರಿಂದ ಮಕ್ಕಳಿಗೆ ಅಧಿಕಾರವನ್ನು ಕೊಡಲು ಆಗುವುದಿಲ್ಲ. ಆದರೆ ಶಾಲಾ–ಕಾಲೇಜುಗಳಿಗೆ ಹೋಗಿ ಮಕ್ಕಳಲ್ಲಿ ಅದರ ಬಗ್ಗೆ ಜಾಗೃತಿಯನ್ನು ಉಂಟು ಮಾಡುವಂತಹ ಕಾರ್ಯಕ್ರಮವನ್ನು ಮಾಡುತ್ತೇವೆ. ಶ್ರೀಮತಿ ಜಯಮಾಲರವರು ಇದರ ನೇತೃತ್ವ ವಹಿಸಿಕೊಂಡರೆ ಒಳ್ಳೆಯದಾಗುತ್ತದೆ.

**ಶ್ರೀ ಕೆ.ಗೋವಿಂದರಾಜ್:–** ಶ್ರೀಮತಿ ಜಯಮಾಲಾರವರನ್ನು ಸೊಳ್ಳೆ ನಿಯಂತ್ರಣಕ್ಕೆ Brand Ambassador ಮಾಡಬೇಕು.

**ಶ್ರೀ ಬಸವರಾಜ ಹೊರಟ್ಟಿ:–** ಶ್ರೀಮತಿ ಜಯಮಾಲಾರವರನ್ನೆ ಅದಕ್ಕೆ Star Campaigner ಮಾಡಿಬಿಡಿ.

**ಶ್ರೀ ವಿ.ಎಸ್.ಉಗ್ರಪ್ಪ:–** ಸೊಳ್ಳೆಗಳ ನಿರ್ಮೂಲನೆಗೆ ಶ್ರೀಮತಿ ಜಯಮಾಲಾರವರನ್ನು ಯಂತ್ರಣಕ್ಕೆ Brand Ambassador ಮಾಡಬಹುದು.

**ಶ್ರೀ ಬಸವರಾಜ ಹೊರಟ್ಟಿ:–** ಶ್ರೀಮತಿ ಜಯಮಾಲಾರವರನ್ನು ಮತ್ತು ಶ್ರೀ ಉಗ್ರಪ್ಪನವರನ್ನು ಸೊಳ್ಳೆ ನಿರ್ಮೂಲನೆಗೆ ಯಂತ್ರಣಕ್ಕೆ Brand Ambassador ಮಾಡಿಬಿಡಿ.

**ಶ್ರೀ ವಿ.ಎಸ್.ಉಗ್ರಪ್ಪ:–** ಎಚ್‌ಎಸ್‌ಆರ್ ಲೇಔಟ್ ಬಗ್ಗೆ ಮಂತ್ರಿಗಳು ಉತ್ತರವನ್ನು ಕೊಡಲಿಲ್ಲ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಶ್ರೀಮತಿ ಜಯಮಾಲಾರವರ ಪ್ರಶ್ನೆಗೆ ಮಾತ್ರ ಉತ್ತರ ಮಂತ್ರಿಗಳು ಉತ್ತರ ಹೇಳುತ್ತಾರೆ.

**ಶ್ರೀ ಕೆ.ಜೆ.ಜಾರ್ಜ್:– ಮಾನ್ಯ ಸಭಾಪತಿಗಳೆ,** ಮಾನ್ಯ ಉಗ್ರಪ್ಪನವರಿಗೆ ತಾಳ್ಮೆ ಕಡಿಮೆ. ತಕ್ಷಣ ಆಗಬೇಕು ಅವರಿಗೆ. ಶ್ರೀಮತಿ ಜಯಮಾಲರವರ ಪ್ರಶ್ನೆಗೆ ಉತ್ತರವಾದ ಮೇಲೆ ನಿಮಗೆ ಉತ್ತರ ಕೊಡುತ್ತೇನೆ. ಎಚ್ಎಸ್ಆರ್ ಲೇಔಟ್‌ನಲ್ಲಿ ಅನಧಿಕೃತ Food Court ಗಳನ್ನು ಮಾಡಿ ಕಸ ಹಾಕುತ್ತಿದ್ದಾರೆ. ಇದರಿಂದ ಸೊಳ್ಳೆ ಕಾಟ ಜಾಸ್ತಿಯಾಗಿದೆ ಎಂದು ಅವರು ಹೇಳಿದ್ದಾರೆ. ನಾನು ಅಲ್ಲಿಗೆ ಹೋಗಿ ನೋಡುತ್ತೇನೆ. ಆದರೆ ನಾನು ಬರುವುದನ್ನು ಕಾಯುವುದು ಬೇಡ, ಅದಕ್ಕಿಂತ ಮೊದಲು ನಮ್ಮ ಆಯುಕ್ತರಿಗೆ ಹೇಳಿ ಅನಧಿಕೃತವಾಗಿ ಇದ್ದರೆ ಅವರ ವಿರುದ್ಧ ಕ್ರಮ ತೆಗೆದುಕೊಳ್ಳಲು ಹೇಳುತ್ತೇನೆ. ಸೊಳ್ಳೆ ವಿಚಾರವಾಗಿ ನಾನು ಒಂದು ಸಭೆಯನ್ನು ಮಾಡಿ ಇನ್ನಷ್ಟು ಅದನ್ನು prevent ಮಾಡಲು ಏನು ಮಾಡಬೇಕು ಅದನ್ನು ಮಾಡುತ್ತೇನೆ.

**ಪ್ರಶ್ನೆ ಸಂಖ್ಯೆ: 271**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎನ್.ಎಸ್.ಬೋಸ್‌ರಾಜು:–** ಮಾನ್ಯ ಸಭಾಪತಿಗಳೆ, ವಿವರವಾದ ಉತ್ತರವನ್ನು ಮಾನ್ಯ ಮುಖ್ಯಮಂತ್ರಿಗಳು ನೀಡಿದ್ದಾರೆ. 2016–17ನೇ ಸಾಲಿನಲ್ಲಿ ರಾಯಚೂರ ಜಿಲ್ಲೆಯಲ್ಲಿ 55,292 ರೈತರಿಗೆ 163 ಕೋಟಿ ರೂ.ಗಳನ್ನು ಶೂನ್ಯ ಬಡ್ಡಿದರದಲ್ಲಿ ಸಾಲವನ್ನು ನೀಡಿದ್ದಾರೆ. ಇಲ್ಲಿ ಹೇಳುವ ವಿಷಯ ಎಂದರೆ, ಯಾವ ರೈತರು ಹಿಂದೆ ಸಾಲವನ್ನು ತೆಗೆದುಕೊಂಡಿದ್ದಾರೆ ಅವರೇ ಪ್ರತಿ ವರ್ಷ ಸಾಲವನ್ನು ತೆಗೆದುಕೊಳ್ಳುತ್ತಿದ್ದಾರೆ. ಹೊಸ ರೈತರಿಗೆ ಅನುಕೂಲವಾಗುವಂತೆ ಸಾಲ ಕೊಡಲು ಡಿಸಿಸಿ ಬ್ಯಾಂಕ್‌ಗಳಿಗೆ ಹೆಚ್ಚಿನ ಹಣವನ್ನು ಕೊಡಲು ಪ್ರಯತ್ನ ಮಾಡಬೇಕು. ಅಲ್ಲಿ ಹೊಸ ರೈತರನ್ನು ಸದಸ್ಯರನ್ನಾಗಿ ಮಾಡಿಕೊಳ್ಳಲು ಮತ್ತು ಸಾಲ ಕೊಡುವಂತಹ ಕೆಲಸಗಳು ಆಗುತ್ತಿಲ್ಲ. ಹಳಬರನ್ನೆ ಪ್ರತಿ ವರ್ಷ ಮುಂದುವರೆಸುತ್ತಿದ್ದಾರೆ. ಹಳೆ ರೈತರಿಗೆ ಶೂನ್ಯ ಬಡ್ಡಿದರದಲ್ಲಿ ಸಾಲ ಸಿಗುತ್ತಿದೆ. ರಾಯಚೂರು ಜಿಲ್ಲೆ ಕೃಷ್ಣಾ ಮತ್ತು ತುಂಗಭದ್ರಾ ನದಿಗಳ ಅಚ್ಚುಕಟ್ಟು ಪ್ರದೇಶದಲ್ಲಿ ಇದೆ. ಭೂಮಿ ಹೊಂದಿರುವ ಸಣ್ಣ ರೈತರಾಗಿ ಎಸ್‌ಸಿ/ಎಸ್‌ಟಿ ಜನಾಂಗದವರು ತುಂಬಾ ಜನರಿದ್ದಾರೆ. ಆದ್ದರಿಂದ ಹೊಸ ರೈತರಿಗೆ ಸಾಲ ಕೊಡಲು ಪ್ರಯತ್ನ ಮಾಡಬೇಕು ಎನ್ನುವ ಮಾತನ್ನು ಹೇಳಬಯಸುತ್ತೇನೆ. ಅಲ್ಲಿ 10,230 ರೈತರಿಂದ 29.07

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೋಟಿ ರೂ.ಗಳ ಸುಸ್ತಿ ಸಾಲವಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ. ಇದು ರಾಜ್ಯದಲ್ಲಿರುವಂತಹ ಪರಿಸ್ಥಿತಿಯಾಗಿದೆ. ಇದರ ಬಗ್ಗೆ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಜೊತೆ ಮಾತನಾಡಿ ಒತ್ತಾಯ ಮಾಡಬೇಕು. ಇಲ್ಲಿ 5 ವರ್ಷಗಳಿಂದ ಬರಗಾಲ ಬಿದ್ದು ರೈತರು ಬಹಳ ಕಷ್ಟದಲ್ಲಿದ್ದಾರೆ. ಹಿಂದೆ ಇದೇ ರೀತಿಯ ಪರಿಸ್ಥಿತಿ ರಾಜ್ಯ ಮತ್ತು ರಾಷ್ಟ್ರದಲ್ಲಿ ಉಂಟಾದಾಗ ಮಾಜಿ ಪ್ರಧಾನ ಮಂತ್ರಿಗಳಾಗಿದ್ದ ಶ್ರೀ ಮನಮೋಹನ ಸಿಂಗ್‌ರವರು 72,000 ಕೋಟಿ ರೂ.ಗಳ ರೈತರ ಸಾಲ ಮನ್ನಾ ಮಾಡಿದ್ದರು. ಹಾಗೆ ಇವತ್ತು ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿ ಸಾಲ ಮನ್ನಾ ಮಾಡಲು ಅಥವಾ ಬರಗಾಲದಲ್ಲಿರುವ ರೈತನಿಗೆ ಸ್ವಲ್ಪ relief ಸಿಗುವಂತಹ ಪ್ರಯತ್ನವನ್ನು ಸರ್ಕಾರ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಾದ ಬೋಸ್‌ರಾಜುರವರು ರಾಯಚೂರ ಜಿಲ್ಲೆಯಲ್ಲಿ ಅಲ್ಪಾವಧಿ ಸಾಲವನ್ನು ಎಷ್ಟು ರೈತರಿಗೆ ಕೊಡಲಾಗಿದೆ, ಮಧ್ಯಮಾವಧಿ ಕೃಷಿ ಸಾಲವನ್ನು ಎಷ್ಟು ರೈತರಿಗೆ ಕೊಡಲಾಗಿದೆ ಎಂದು ಕೇಳಿದ್ದಾರೆ. ಸುಮಾರು 55,292 ಜನ ರೈತರಿಗೆ ಅಲ್ಪಾವಧಿ ಕೃಷಿ ಸಾಲವನ್ನು ಕೊಡಲಾಗಿದೆ. Medium Term Loan and Long Term Loan ಕಡಿಮೆ ಇರುತ್ತದೆ. ಯಾವಾಗಲೂ ಅಲ್ಪಾವಧಿ ಸಾಲ ಜಾಸ್ತಿ ಇರುತ್ತದೆ. 3 ಲಕ್ಷ ರೂ.ಗಳವರೆಗೆ ಬಡ್ಡಿ ಇಲ್ಲ. 10% ಬಡ್ಡಿಯಲ್ಲಿ 7% ರಾಜ್ಯ ಸರ್ಕಾರ ಕೊಡುತ್ತದೆ, 3% ಕೇಂದ್ರ ಸರ್ಕಾರ ಕೊಡುತ್ತದೆ.

**ಸಭಾಪತಿಯವರು:–** ಸಾಲ ತೆಗೆದುಕೊಂಡವರಿಗೆ ಬಡ್ಡಿ ಇಲ್ಲ ಅಷ್ಟೆ. ಸರ್ಕಾರ ಬಡ್ಡಿ ಕಟ್ಟುತ್ತದೆ.

**(82) 09.02.2017 12.40 LL-MD**

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೇ, ಪ್ರತಿ ವರ್ಷ ನಾವು ಸುಮಾರು 900 ಕೋಟಿ ರೂಪಾಯಿ ಬಡ್ಡಿ ಸಬ್ಸಿಡಿಯನ್ನು ಕೊಡುತ್ತಿದ್ದೇವೆ. ಈ ವರ್ಷ ಸುಮಾರು 23 ಲಕ್ಷ ಜನ ರೈತರಿಗೆ ಸಾಲ ಕೊಟ್ಟಿದ್ದೇವೆ. ಆದುದರಿಂದ, ಅವರು ಹೇಳುವುದು ಒಂದು ರೀತಿ ಸರಿಯಿದೆ. ಕೊಟ್ಟವರಿಗೆ ಸಾಲ ಸಿಗುತ್ತಿರುತ್ತದೆ. ಇಲ್ಲಿ ಕೋ–ಆಪರೇಟಿವ್‌ನವರು ಎಲ್ಲರೂ ಈ ಸದನದಲ್ಲಿ ಹಾಜರಿದ್ದಾರೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದಲೂ ಪ್ರತಿ ವರ್ಷ ಶೇಕಡ 10ರಷ್ಟು ಹೆಚ್ಚು ಮಾಡುತ್ತಿದ್ದೇವೆ. ಇದನ್ನು ಇನ್ನು ಹೆಚ್ಚು ಮಾಡಬೇಕು ಎನ್ನುವಂತಹದರಲ್ಲಿ ಎರಡನೇ ಮಾತಿಲ್ಲ. ಆದರೆ, ಅದನ್ನು ಯಾವ ರೀತಿ ಹೆಚ್ಚು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡಬೇಕು ಎನ್ನುವುದರ ಬಗ್ಗೆ ಚಿಂತನೆ ಮಾಡೋಣ. ಮೊದಲು ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಾಗ ಸುಮಾರು 14 ರಿಂದ 15 ಲಕ್ಷ ಜನಕ್ಕೆ ಸಾಲ ಸಿಗುತ್ತಿತ್ತು. ಈಗ 23 ಲಕ್ಷದವರೆಗೂ ಅದು ಹೋಗಿದೆ. ಅಂದರೆ, ಹೊಸಬರಿಗೂ ಕೂಡ ಸ್ವಲ್ಪ ಜನಕ್ಕೆ ಸಿಕ್ಕಿದೆ. ಇನ್ನು ಹೆಚ್ಚು ಜನರಿಗೆ ಸಿಗಬೇಕು. ಏಕೆಂದರೆ, ಕೊಟ್ಟವರಿಗೆ ನಾವು ಈಗ ಬಡ್ಡಿರಹಿತವಾಗಿ ಕೊಡುತ್ತಿದ್ದೇವಲ್ಲವೇ, ಅದು ಸಿಕ್ಕಿದವರಿಗೆ ಪದೇ ಪದೇ ಸಾಲ ಸಿಕ್ಕಿ ಅವರಿಗೆ ಮಾತ್ರ ಅನುಕೂಲವಾಗುತ್ತಿದೆ. ಒಂದು ವೇಳೆ ಬಡ್ಡಿ ಮನ್ನಾ ಮಾಡಿದರೆ ಮತ್ತೆ ಅವರಿಗೆ ಅನುಕೂಲವಾಗುತ್ತದೆ. ಈ ರೀತಿ defaulters ಗೆ ಬಡ್ಡಿ ಮನ್ನಾ ಮಾಡಿದರೆ ಮತ್ತೆ ಅವರಿಗೆ ಅನುಕೂಲವಾಗುತ್ತದೆ.

**ಶ್ರೀ ಹೆಚ್.ಎಂ. ರೇವಣ್ಣ:–** ಮಾನ್ಯ ಸಭಾಪತಿಯವರೆ, Renewal ಮಾಡಿದರೆ ಮತ್ತೆ ಅವರಿಗೆ ಹೋಗುತ್ತದೆಯೇ ಹೊರೆತು ಬೇರೆಯವರಿಗಲ್ಲ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಹೇಳುತ್ತಿರುವುದೆಲ್ಲವು ನಿಜ. ಇದರ ಬಗ್ಗೆ ಸ್ವಲ್ಪ ಚಿಂತನೆ ಮಾಡೋಣ. ಹೆಚ್ಚು ರೈತರಿಗೆ ಸಾಲ ಕೊಡುವುದಕ್ಕೆ ಏನು ಮಾಡಬೇಕು? ಹೊಸಬರಿಗೆ ಸಾಲ ಸಿಗುವುದಕ್ಕೆ ಏನು ಮಾಡಬೇಕು ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

**(ಗೊಂದಲ)**

**ಶ್ರೀ ರಮೇಶ್ ಬಾಬು (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳಲ್ಲಿ ನನ್ನದೊಂದು ಮನವಿ. ಅದೇನೆಂದರೆ, ಈ ವಿಚಾರ ಕೇವಲ ರಾಯಚೂರು ಜಿಲ್ಲೆಗೆ ಸೀಮಿತವಾಗಿಲ್ಲ. ಇದು ಇಡೀ ರಾಜ್ಯಕ್ಕೆ ಸೀಮಿತವಾಗಿರತಕ್ಕಂತಹ ವಿಚಾರ. ಎಲ್ಲಾ ಕಡೆ PICARD Bank ಇರಬಹುದು ಅಥವಾ ಡಿ.ಸಿ.ಸಿ. ಬ್ಯಾಂಕ್ ಇರಬಹುದು ಕೊಟ್ಟವರಿಗೆ ಸಾಲ ಕೊಡುತ್ತಿದ್ದಾರೆ. ಕೇವಲ ದಾಖಲೆಗಳಲ್ಲಿ ಸಾಲ ಹೋಗುತ್ತಿದೆ. ಆದರೆ, ನಿಜವಾದ ರೈತರಿಗೆ ಸಾಲ ಸಿಗುತ್ತಿಲ್ಲ. ಮಾನ್ಯ ಬೋಸ್‌ರಾಜ್‌ರವರು ಎತ್ತಿರುವ ಪ್ರಶ್ನೆಯನ್ನು ನಾನು ಅನುಮೋದನೆ ಮಾಡುತ್ತೇನೆ. ಆದುದರಿಂದ, ದಯಮಾಡಿ ಇದು ಪ್ರತಿ ವರ್ಷ ಹೊಸಬರಿಗೆ ಸಿಗಲಿ. ಪ್ರತಿ ಬಾರಿ ಬ್ಯಾಂಕುಗಳಲ್ಲಿ ಯಾರು ಸಬ್ಸಿಡಿ ತೆಗೆದುಕೊಳ್ಳುತ್ತಾರೆ ಮತ್ತು ಯಾರು ಬಡ್ಡಿಯನ್ನು ಕ್ಲೈಮ್ ಮಾಡುತ್ತಾರೆ ಅವರಿಗೆ ಪುನರಾವರ್ತನೆಯಾಗುತ್ತಿದೆ. ಇದು ಒಂದು ರೀತಿ ದಂಧೆಯಾಗಿ ಪರಿವರ್ತನೆಯಾಗಿದೆ. ಆದುದರಿಂದ, ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಒಂದು ಸ್ಪಷ್ಟವಾದ ಆದೇಶ ಕೊಡಬೇಕು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಹೇಳುತ್ತಿರುವುದೆಲ್ಲವೂ ಸರಿ. ಈಗ ಸರ್ಕಾರ ಸಾಲ ಕೊಟ್ಟಿರುತ್ತದೆಯಲ್ಲವೇ...

**ಸಭಾಪತಿಯವರು:-** ಸಬ್ಸಿಡಿ ಕೊಡುವುದಕ್ಕಾಗುವುದಿಲ್ಲವೆಂದು ಹೇಗೆ ಹೇಳುವುದಕ್ಕಾಗುತ್ತದೆ?

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಈ ಹಿಂದೆ ಸಾಲ ಪಡೆದವರನ್ನು ನಿಲ್ಲಿಸಿ ಹೊಸಬರಿಗೆ ಸಾಲ ಕೊಡುವುದಕ್ಕಾಗುತ್ತದೆಯೇ? ಹಾಗೆ ಮಾಡುವುದಕ್ಕೆ ಬರುವುದಿಲ್ಲ.

**ಸಭಾಪತಿಯವರು:-** ರೈತರಿಗೆ ಸಾಲ ಕೊಡುವಂತಹ ಸಂಖ್ಯೆಯನ್ನು ಹೆಚ್ಚು ಮಾಡಬೇಕಾಗುತ್ತದೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಶೇಕಡ 90ರಷ್ಟು ಜನ ಪ್ರತಿ ಬಾರಿ ಸಾಲ ಪಡೆಯುವವರಿದ್ದಾರೆ. ಇನ್ನು ಶೇಕಡ 10ರಷ್ಟು ಜನ ಮಾತ್ರ ಹೊಸದಾಗಿ ಸಾಲ ಪಡೆಯುವವರಿದ್ದಾರೆ. ಈ ಶೇಕಡ 90ರಷ್ಟು ಜನರಿಗೆ ನೀಡುವಂತಹ ಸಾಲವನ್ನು ಕೊಡುವುದನ್ನು ನಿಲ್ಲಿಸಿ, ಹೊಸದಾಗಿ, ಈ ವರ್ಷ ಹೊಸ ರೈತರಿಗೆ ಸಾಲ ನೀಡುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. Practically that is also not possible. ಆದುದರಿಂದ, ನಾವು ಪ್ರತಿ ವರ್ಷ ಹೊಸ ರೈತರಿಗೆ ಸಾಲ ಕೊಡಲಿಕ್ಕೆ ಪ್ರಯತ್ನ ಮಾಡಬೇಕಾಗುತ್ತದೆ.

**ಸಭಾಪತಿಯವರು:-** ಪ್ರಸ್ತುತ ಇರುವ ಶೇಕಡ 20ರಷ್ಟು ಪ್ರಮಾಣವನ್ನು ಇನ್ನು ಹೆಚ್ಚು ಮಾಡಬೇಕಾಗುತ್ತದೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಈಗ ಶೇಕಡ 10ರಷ್ಟು ಇದೆ. ಅದನ್ನು ಹೆಚ್ಚು ಮಾಡುವುದಕ್ಕೆ ಏನು ಮಾಡಬೇಕು ಮತ್ತು ಅದಕ್ಕೆ NABARD ನಿಂದ assistance ಬರುತ್ತದೆ. ಇವೆಲ್ಲವನ್ನೂ ಸರ್ಕಾರದವರು ನೋಡಿಕೊಂಡು ಸಾಲ ನೀಡಬೇಕಾಗುತ್ತದೆಯಲ್ಲವೇ? ಆದುದರಿಂದ, ಈ ಎಲ್ಲಾ ಕ್ರಮಗಳನ್ನು ನೋಡಿಕೊಂಡು ಒಟ್ಟಾರೆಯಾಗಿ ಪರಿಶೀಲನೆ ಮಾಡಿ ಒಂದು ತೀರ್ಮಾನ ಮಾಡುವ ಮುಖಾಂತರ ಸಾಲದ ಪ್ರಮಾಣವನ್ನು ಹೆಚ್ಚು ಮಾಡಬೇಕಾಗುತ್ತದೆ. ಇನ್ನು ಹೆಚ್ಚು ಸಾಲ ಕೊಡಬೇಕೆಂದು ಮತ್ತು ಸಾಲ ಪಡೆದವರಿಗೆ ಸಾಲ ನೀಡಬಾರದೆಂದು ನನಗೂ ಅನ್ನಿಸುತ್ತದೆ.

**Mr.CHAIRMAN:-** You are convinced.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಸಾಲ ಮನ್ನಾ ಮಾಡಬೇಕು, ಬಡ್ಡಿ ಮನ್ನಾ ಮಾಡಬೇಕೆಂದು ಇದೆಯಲ್ಲ...? ಒಟ್ಟು ರೈತರಿಗೆ ಸಾಲ ಕೊಟ್ಟಿರತಕ್ಕಂತಹದ್ದು, 52 ಸಾವಿರ ಕೋಟಿ ರೂಪಾಯಿಗಳು. ಮಾನ್ಯ ಎಸ್.ಆರ್. ಪಾಟೀಲರೇ, 52 ಸಾವಿರ ಕೋಟಿ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳು ಒಟ್ಟಾರೆಯಾಗಿ ಎಲ್ಲಾ ಬ್ಯಾಂಕುಗಳು ನೀಡಲಾದ ಮೊತ್ತವನ್ನು ಹೇಳುತ್ತಿದ್ದಾರೆಯೇ?

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಹೌದು, ಕೋ–ಆಪರೇಟಿವ್ ಮತ್ತು ರಾಷ್ಟ್ರೀಕೃತ ಬ್ಯಾಂಕುಗಳು, ಕಮರ್ಷಿಯಲ್ ಬ್ಯಾಂಕುಗಳು ಎಲ್ಲಾ ಸೇರಿ ಸುಮಾರು 52 ಸಾವಿರ ಕೋಟಿ ಸಾಲ ಕೊಟ್ಟಿದ್ದಾರೆ. ಈ 52 ಸಾವಿರ ಕೋಟಿ ಹಣದಲ್ಲಿ 42 ಸಾವಿರ ಕೋಟಿ ರಾಷ್ಟ್ರೀಕೃತ ಮತ್ತು ಕಮರ್ಷಿಯಲ್ ಬ್ಯಾಂಕುಗಳು ಕೊಟ್ಟಿರುತ್ತವೆ. ನಾವು ಕೋ–ಆಪರೇಟಿವ್ ಸಂಸ್ಥೆಗಳಿಂದ ಅಲ್ಪಾವಧಿ ಸಾಲ ಎಲ್ಲಾ ಸೇರಿ ಸುಮಾರು 12 ಸಾವಿರ ಕೋಟಿ ರೂಪಾಯಿಯಷ್ಟು ಸಾಲ ಕೊಟ್ಟಿದ್ದೇವೆ. ಅದಕ್ಕೆ ನಾನು ಏನು ಹೇಳಿದೆಯೆಂದರೆ, "ಒಮ್ಮೆ ಮಾನ್ಯ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿದಾಗ, ರಾಜ್ಯದಲ್ಲಿ ಭೀಕರ ಬರಗಾಲವಿದೆ. ಆದುದರಿಂದ, ರೈತರ ತಮ್ಮ ಸಾಲ ಮನ್ನಾ ಮಾಡಬೇಕೆಂದು ಹೇಳುತ್ತಿದ್ದಾರೆ. ಕೇಂದ್ರ ಸರ್ಕಾರದಿಂದ 42 ಸಾವಿರ ಕೋಟಿ ಸಾಲ ಕೊಟ್ಟಿದ್ದೀರಿ. ನೀವು ಅರ್ಧ ಮನ್ನಾ ಮಾಡಿ. ನಾವು ಕೊಟ್ಟಿದ್ದಂತಹ ಸಾಲದಲ್ಲಿ ಅರ್ಧ ಸಾಲವನ್ನು ಮನ್ನಾ ಮಾಡುತ್ತೇವೆಂದು ಹೇಳಿದ್ದೆನು". ಅದು ಇವತ್ತಿನವರೆಗೂ ಏನು ಆಗಿರುವುದಿಲ್ಲ. ಈಗ ನಾವು ಒಂದು ವೇಳೆ ಸಾಲ ಮನ್ನಾ ಮಾಡಿದ್ದೀವಿ... ಈ ಹಿಂದೆ ಒಂದು ಸಾರಿ ಮಾನ್ಯ ಜಗದೀಶ್ ಶೆಟ್ಟರ್‌ರವರು ಮುಖ್ಯಮಂತ್ರಿಗಳು ಇರುವಾಗ ಸುಮಾರು 25 ಸಾವಿರ ರೂಪಾಯಿಗಳವರೆಗೆ ಸಾಲ ಮನ್ನಾ ಮಾಡಿದ್ದಾರೆ. ಅದು ಸುಮಾರು 3,400 ಕೋಟಿ ಅಥವಾ 3,500 ಕೋಟಿ ಎಷ್ಟೋ ಆಗಿದೆ. ಅದರಲ್ಲಿ 930 ಕೋಟಿ ಸರ್ಕಾರ ಕೊಟ್ಟಿತ್ತು. ಮರುಪಾವತಿ ಮಾಡತಕ್ಕಂತಹದ್ದು... ಉಳಿದ 2,500 ಕೋಟಿ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಕೊಟ್ಟಿದೆ. ಮಾನ್ಯ ಬೋಸ್‌ರಾಜ್‌ರವರು ಹೇಳಿದಂತೆ, ಪದೇ ಪದೇ ಸಾಲ ತೆಗೆದುಕೊಳ್ಳುತ್ತಾರಲ್ಲ ಅವರಿಗೆನೇ ಇಷ್ಟು ಸಾಲ ಮನ್ನಾ ಆಗಿರುವುದು. ಈಗ ಎಷ್ಟು ಜನಕ್ಕೆ ಸೊಸೈಟಿಗಳಿಂದ ಸಾಲ ಕೊಡುವುದಕ್ಕೆ ಸಾಧ್ಯವಾಗುತ್ತಿದೆ.

**ಸಭಾಪತಿಯವರು:–** 21 ಲಕ್ಷ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಶೇಕಡ 20ರಷ್ಟು ಜನಕ್ಕೆ ನಮ್ಮ ಸರ್ಕಾರದಿಂದ ಸಾಲ ಕೊಟ್ಟಿದ್ದೇವೆ. ಇನ್ನು ಉಳಿದ ಶೇಕಡ 80ರಷ್ಟು ಜನರಿಗೆ ಸಾಲ ಯಾರು ಕೊಟ್ಟಿದ್ದಾರೆ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಬ್ಯಾಂಕುಗಳು ಉಳಿದ ಶೇಕಡ 80ರಷ್ಟು ಜನರಿಗೆ ಸಾಲ ನೀಡಿರುತ್ತಾರೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಹಾಗಾದರೆ, ಸಾಲ ಮನ್ನಾ ಆದರೆ ಯಾರಿಗೆ ಹೆಚ್ಚು ಅನುಕೂಲ? ಎಲ್ಲಾ ರೈತರಿಗೂ ಅನುಕೂಲವಾಗಬೇಕಲ್ಲವೇ? ಬರಗಾಲ ಬಂದಿರುವುದು ಶೇಕಡ 20ರಷ್ಟು ಜನರಿಗೆ ಮಾತ್ರವೇ?

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳು ಬರವಣಿಗೆಯಲ್ಲಿ ಕೇಂದ್ರ ಸರ್ಕಾರದವರನ್ನು ರೈತರ ಸಾಲ ಮನ್ನಾ ಮಾಡಿ ಎಂದು ಕೇಳಲಿ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಸಾಲ ಮನ್ನಾ ಮಾಡುವ ವಿಚಾರದ ಬಗ್ಗೆ ಕೇಂದ್ರ ಸರ್ಕಾರವನ್ನು ಕೇಳಿದ್ದೇನೆಂದು ಆಗಲೇ ಹೇಳಿದ್ದೇನೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಈ ಬಗ್ಗೆ ಪತ್ರ ಬರೆಯಿರಿ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಮಾನ್ಯ ಹೊರಟ್ಟಿಯವರೆ, ದಯಮಾಡಿ ತಾವು ಕುಳಿತುಕೊಳ್ಳಿ. ನಾನೇ ಈ ಬಗ್ಗೆ ನೇರವಾಗಿ ಕೇಂದ್ರ ಸರ್ಕಾರದವರಲ್ಲಿ ಕೇಳಿದ್ದೇನೆ. ಕಳೆದ ವರ್ಷ ಬರಗಾಲದಲ್ಲಿ ನನಗೆ ಮಾನ್ಯ ಪ್ರಧಾನ ಮಂತ್ರಿಗಳು One-to-One meeting ಕರೆದಿದ್ದರು. ಆ ಸಂದರ್ಭದಲ್ಲಿ ನಾನು ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೆನು. ಈ ಹಿಂದೆ ಯು.ಪಿ.ಎ. ಸರ್ಕಾರ ಇಡೀ ದೇಶದ ಎಲ್ಲಾ ಬ್ಯಾಂಕುಗಳು ಸೇರಿ ಸುಮಾರು 72 ಸಾವಿರ ಕೋಟಿ ರೂಪಾಯಿಗಳ ರೈತರ ಸಾಲ ಮನ್ನಾ ಮಾಡಿದ್ದರು. ಈಗ ರೈತರಿಗೆ ದೇಶದ ಎಲ್ಲಾ ಬ್ಯಾಂಕುಗಳಿಂದ ಸಾಲ ಕೊಟ್ಟಿರುವಂತಹದ್ದು... ನನಗಿರುವ ಮಾಹಿತಿ ಪ್ರಕಾರ I may be right or I may be wrong. 1 ಲಕ್ಷ ಕೋಟಿ ರೂಪಾಯಿ ಇರಬಹುದು. ಅದಕ್ಕಿಂತಲೂ ಜಾಸ್ತಿಯಿದೆಯೇ? 1 ಲಕ್ಷ ಕೋಟಿ ಅಷ್ಟಿರಬಹುದೆಂಬ ಒಂದು ಅಂದಾಜು. ಇನ್ನು ಜಾಸ್ತಿ ಇದ್ದರೂ ಇರಬಹುದು. ಅದು ನನಗೆ ಗೊತ್ತಿಲ್ಲ. ಒಂದು ಸಾರಿ ಸಾಲ ಮನ್ನಾ ಮಾಡಿದರೆ ಎಲ್ಲರಿಗೂ ಅನುಕೂಲವಾಗುತ್ತದೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳು ಸಾಲ ಮನ್ನಾ ಮಾಡಬೇಕೆಂದು ಕೇಂದ್ರ ಸರ್ಕಾರಕ್ಕೆ ಹೇಳಲಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಕೇವಲ ಸರ್ಕಾರದ ಕಡೆ ಬೆರಳು ಮಾಡಿ ತೋರಿಸುವ ಬದಲಾಗಿ, ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಲು ಅವರಿಗೂ ಕೂಡ ಅಧಿಕಾರವಿದೆ.

**(ಗೊಂದಲ)**

ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರುಗಳೆಲ್ಲರೂ ಬಹಳ ಬುದ್ಧಿವಂತರು, ಏನು ರೈತರ ಬಗ್ಗೆ ಮೊಸಳೆ ಕಣ್ಣೀರು ಸುರಿಸಿದ್ದೇ, ಸುರಿಸಿದ್ದು. ಸಾಲ ಮನ್ನಾ ಮಾಡಬೇಕೆಂದು ಕೇಂದ್ರ ಸರ್ಕಾರದವರನ್ನು ಕೇಳಿ ಒಂದು ವರ್ಷವಾಯಿತು. ಅವರು ಕೂಡ ಪ್ರಯತ್ನ ಮಾಡಲಿ. ಸುಮ್ಮನೆ ರೈತರ ಬಗ್ಗೆ ಮಾತನಾಡುತ್ತಾರೆ. ಮಾನ್ಯ ಸದಸ್ಯರುಗಳಿಗೆ ರೈತರ ಬಗ್ಗೆ ಮಾತನಾಡುವುದಕ್ಕೆ ಯಾವುದೇ ನೈತಿಕ ಹಕ್ಕು ಇಲ್ಲ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಿದ್ದಾರೆ. ಆಯಿತು, ದಯಮಾಡಿ ಎಲ್ಲಾ ಸದಸ್ಯರು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಈ ಸದನದಲ್ಲಿ ಎದ್ದು ನಿಂತು ಮಾತನಾಡುವ ಎಲ್ಲಾ ಸದಸ್ಯರುಗಳು ಹೋಗಿ ಕೇಂದ್ರ ಸರ್ಕಾರವನ್ನು ರೈತರ ಸಾಲ ಮನ್ನಾ ಮಾಡಬೇಕೆಂದು ಕೇಳಲಿ. **(ಗೊಂದಲ)** ರೈತರ ಸಾಲ ಮನ್ನಾ ಮಾಡುಬೇಕೆಂದು ರಾಜ್ಯ ಸರ್ಕಾರದ ನಿಯೋಗದಿಂದ ಮಾನ್ಯ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಲು ಹೋದಾಗ, ನಿಯೋಗದಲ್ಲಿರುವ ಬಿ.ಜೆ.ಪಿ. ಮುಖಂಡರುಗಳು ಈ ಬಗ್ಗೆ ಬಾಯಿಯನ್ನೇ ಬಿಡುವುದಿಲ್ಲ. **(ಸದನದಲ್ಲಿ ನಗುವಿನ ಅಲೆ)** ಸಾಲ ಮನ್ನಾ ಮಾಡುವ ಬಗ್ಗೆ ಕೇಳುವುದೇ ಇಲ್ಲ. ಸುಮ್ಮನೆ ಏನೇನು ಹೇಳುತ್ತಾರೆ. ಏ, ಸುಮ್ಮನೆ ಕುಳಿತುಕೊಳ್ಳಿ. ಮಾನ್ಯ ಸದಸ್ಯರು ಅಲ್ಲಿಗೆ ಬಂದಿರಲಿಲ್ಲ.

**ಶ್ರೀ ಅರುಣ ಶಹಾಪುರ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಈ ಬಗ್ಗೆ ಲೋಕಸಭೆಯಲ್ಲಿರುವ ವಿರೋಧ ಪಕ್ಷದ ನಾಯಕರು ಬಾಯಿ ಬಿಟ್ಟು ಮಾತನಾಡಲಿ. ಮಾನ್ಯ ಮುಖ್ಯಮಂತ್ರಿಗಳು ಅವರಿಗೆ ಬಾಯಿ ಬಿಟ್ಟು ಮಾತನಾಡುವುದಕ್ಕೆ ಹೇಳಲಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ....

**(ಗೊಂದಲ)**

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಲೋಕಸಭೆಯಲ್ಲಿರುವ ವಿರೋಧ ಪಕ್ಷದ ನಾಯಕರು ಬಾಯಿ ಬಿಟ್ಟು ಮಾತನಾಡಿದಷ್ಟು ಬೇರೆ ಪಕ್ಷದ ನಾಯಕರು ಮಾತನಾಡಿರುವುದಿಲ್ಲ. ಮಾನ್ಯ ಸದಸ್ಯರುಗಳು ಸುಮ್ಮನೆ ಏತಕ್ಕೆ ಮಾತನಾಡುತ್ತಾರೆ?

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, Even today I stand by my statement. ಮಾನ್ಯ ಸದಸ್ಯರುಗಳೆಲ್ಲ ಹೋಗಿ ಕೇಂದ್ರ ಸರ್ಕಾರವನ್ನು ಕೇಳಲಿ. ಕರ್ನಾಟಕದಲ್ಲಿ ಸುಮಾರು 6 ವರ್ಷಗಳಿಂದ ಬರಗಾಲವಿದೆ. ಕಳೆದ ವರ್ಷಕ್ಕಿಂತಲೂ ಈ ವರ್ಷ ಭೀಕರವಾದ ಬರಗಾಲವಿದೆ. This year there is extreme severe drought. ಕಳೆದ 50 ವರ್ಷಗಳಲ್ಲಿ ಬರಗಾಲವಿರಲಿಲ್ಲ.

**ಶ್ರೀ ಬಸನಗೌಡ ಆರ್. ಪಾಟೀಲ್(ಯತ್ನಾಳ್)(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ....

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಪಾಪ, ನಾನು ಮಾನ್ಯ ಸದಸ್ಯರುಗಳ ವಿರುದ್ಧ ಆರೋಪ ಮಾಡುತ್ತಿಲ್ಲ. ನಿಮಗೆ ಸ್ವಲ್ಪ ಕಳಕಳಿಯಿದ್ದರೆ, ಕೇಂದ್ರ ಸರ್ಕಾರವನ್ನು ಸಾಲ ಮನ್ನಾ ಮಾಡಬೇಕೆಂದು ಕೇಳಲಿ ಎಂದು ಹೇಳುತ್ತಿದ್ದೇನೆ ಅಷ್ಟೇ. ಇಲ್ಲಿ, ನೀವು ಮಾಡಿ, ನೀವು ಮಾಡಿ. ಶೇಕಡ 20ರಷ್ಟು ಜನರಿಗೆ ಹಿಂದಿನ ಸರ್ಕಾರ ನೀಡಿದಂತಹ ಸಾಲವನ್ನು ನಮ್ಮ ಸರ್ಕಾರ ಮನ್ನಾ ಮಾಡಿದೆ. ಮಾನ್ಯ ಸದಸ್ಯರುಗಳು ಕೇಂದ್ರ ಸರ್ಕಾರದವರ ಬಳಿ ಹೋಗಿ ಶೇಕಡ 80ರಷ್ಟು ಸಾಲವನ್ನು ರೈತರಿಗೆ ವಾಣಿಜ್ಯ ಬ್ಯಾಂಕ್‌ಗಳಿಂದ ನೀಡಿದ್ದು, ಅದನ್ನು ಮನ್ನಾ ಮಾಡಬೇಕೆಂದು ಹೇಳುವುದನ್ನು ಬಿಟ್ಟು, ರಾಜ್ಯ ಸರ್ಕಾರ ಮೊದಲು ರೈತರ ಸಾಲ ಮನ್ನಾ ಮಾಡಿ ನಂತರ ನಮ್ಮನ್ನು ಕೇಳಲಿ, ಅವರು ಮಾಡಿ, ಆ ನಂತರ ನಮ್ಮನ್ನು ಕೇಳಲಿ. ಆಹಾ! ಮಹಾ ಬುದ್ಧಿವಂತರುಗಳು ಮಾನ್ಯ ಸದಸ್ಯರುಗಳು. ಸುಮ್ಮನೆ ಕುಳಿತುಕೊಳ್ಳಿ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಆಯಿತು. ಈಗ ಹಳೆಯ ವಿಚಾರಗಳನ್ನು ಪ್ರಸ್ತಾಪಿಸಬೇಡಿ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಯಾವ ಯಡಿಯೂರಪ್ಪನವರು ಇಲ್ಲ, ಯಾರು ಇಲ್ಲ. ಕುಳಿತುಕೊಳ್ಳಿ. ಸುಮ್ಮನೇ ಏನೇನೋ ಹೇಳುವುದಕ್ಕೆ ಹೋಗಬೇಡಿ.

**ಶ್ರೀ ರಾಮಚಂದ್ರಗೌಡ(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಯಾವುದೇ ರಾಜ್ಯದಲ್ಲಿ ರೈತರ ಸಾಲ ಮನ್ನಾ ಮಾಡುವಂತಹ ಸ್ಥಿತಿ ಬಂದದ್ದು, ಸನ್ಮಾನ್ಯ ಯಡಿಯೂರಪ್ಪನವರು ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದಾಗಲೇ ರೈತರ ಸಾಲ ಮೊದಲು ಮನ್ನಾ ಮಾಡಿದ್ದು.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಈ ರೀತಿ ಹೊಗಳಿ, ಹೊಗಳಿಯೇ ರೈತರನ್ನು..... **(ಗೊಂದಲ)** ಮಾನ್ಯ ರಾಮಚಂದ್ರಗೌಡರೇ, ಕೇಳಿರಿ ಇಲ್ಲಿ. **(ಗೊಂದಲ)** 2012–13ರಲ್ಲಿ 3,500 ಸಾವಿರ ಕೋಟಿ ಸಾಲ ಮನ್ನಾ ಮಾಡಿದ್ದಾರೆ. ಮಾನ್ಯ ಸದಸ್ಯರು ಹೇಳುತ್ತಾರಲ್ಲ? ಯಡಿಯೂರಪ್ಪನವರು ರೈತರ ಸಾಲ ಮನ್ನಾ ಮಾಡಿಬಿಟ್ಟರು. ಆಯಿತು, ಆಗಲೂ ಮಿಸ್ಟರ್ ರಾಮಚಂದ್ರಗೌಡರೇ, ಶೇಕಡ 20ರಷ್ಟೇ ಜನರಿಗೆ ಮಾತ್ರವೇ ಅನುಕೂಲವಾಗಿದ್ದು.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೆ, ಎಷ್ಟೋ... ಪ್ರಾರಂಭ ಮಾಡಿದ್ದು ಮಾನ್ಯ ಯಡಿಯೂರಪ್ಪನವರಲ್ಲವೇ?

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಉಳಿದಂತಹ 80 ಜನಕ್ಕೆ ಅನುಕೂಲವಾಗಬೇಕೋ ಅಥವಾ ಬೇಡವೋ?

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೆ, ಆಗಿದೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಹಾಗಾದರೆ, ಮಾನ್ಯ ಸದಸ್ಯರುಗಳು ಕೇಂದ್ರ ಸರ್ಕಾರದವರಿಂದ ರೈತರ ಸಾಲ ಮನ್ನಾ ಮಾಡಿಸಲಿ. ಅದನ್ನು ಮಾಡುವುದಿಲ್ಲ. ಎಲ್ಲಾ ಉತ್ತರನ ಪೌರುಷ ಇಲ್ಲಿ ಮಾತ್ರ ತೋರಿಸುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೆ, ಮೊದಲು ರಾಜ್ಯ ಸರ್ಕಾರದವರು ರೈತರ ಸಾಲ ಮನ್ನಾ ಮಾಡಲಿ.

**(083) 09-02-2017(12-50)BSD-MD**

(ಗೊಂದಲ)

**ಶ್ರೀ ಸಿದ್ದರಾಮಯ್ಯ:–** ನಾನು ಮಾನ್ಯ ಪ್ರಧಾನ ಮಂತ್ರಿಯವರಿಗೂ ವಿನಂತಿ ಮಾಡಿದ್ದೇನೆ, ಬೇಕಾದರೆ ಪತ್ರವನ್ನು ಬರೆಯೋಣ.

**ಶ್ರೀ ಹೆಚ್.ಎಂ. ರೇವಣ್ಣ:–** 72 ಸಾವಿರ ಕೋಟಿ ಮಾಡಿರಲಿಲ್ಲವೇ?

**(ಗೊಂದಲ)**

**ಶ್ರೀ ಬಿ.ಜೆ. ಪುಟ್ಟಸ್ವಾಮಿ:–** ಕೇಂದ್ರ ಸರ್ಕಾರವನ್ನು ಕೇಳದೇ ಮಾನ್ಯ ಯಡಿಯೂರಪ್ಪನವರು ಸಾಲ ಮನ್ನಾ ಮಾಡಿದರು, ಅವರು 50% ಮಾಡಲಿ.

**ಶ್ರೀ ಸಿದ್ದರಾಮಯ್ಯ:–** ನೂರಕ್ಕೆ ನೂರರಷ್ಟು ರೈತರಿಗೆ ಅನುಕೂಲವಾಗಬೇಕು. ಎಲ್ಲರಿಗೂ ಅನುಕೂಲವಾಗಬೇಕೋ ಬೇಡವೋ, ಮಾನ್ಯ ಪುಟ್ಟಸ್ವಾಮಿಯವರು ಹೇಳಬೇಕು.

**ಶ್ರೀ ಬಿ.ಜೆ. ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೆ,

**ಶ್ರೀ ಸಿದ್ದರಾಮಯ್ಯ:–** ಆಗಬೇಕೋ, ಬೇಡವೋ ಅಷ್ಟು ಹೇಳಿಲಿ, ಆಗಬೇಕು ಎನ್ನುವುದಾದರೆ ಕುಳಿತುಕೊಳ್ಳಲಿ. ನಾವು 20% ಜನರಿಗೆ ಸಾಲ ಮನ್ನಾ ಮಾಡಿದರೆ ಎಷ್ಟು ಜನರಿಗೆ ಅನುಕೂಲವಾಗುತ್ತದೆ? ಉಳಿದ 80% ಜನರಿಗೆ ಯಾರು ಸಾಲ ಮನ್ನಾ ಮಾಡುವುದು? ಅವರೇ ಬಹಳ ಬುದ್ಧಿವಂತರು. ಮಾನ್ಯ ಸಭಾಪತಿಯವರೇ, ನೂರಕ್ಕೆ ನೂರರಷ್ಟು ರೈತರಿಗೆ ಅನುಕೂಲವಾಗಬೇಕು. ಇವತ್ತು ಬೆಳೆ ನಷ್ಟವಾಗಿದ್ದು, ಕೇವಲ 20% ರೈತರಿಗೆ ಮಾತ್ರ ಬೆಳೆ ನಷ್ಟವಾಗಿದೆಯೇ? ಇಲ್ಲ, ಎಲ್ಲರಿಗೂ ಆಗಿದೆ. ನಾವು ರೈತರ ಪರವಾಗಿದ್ದೇವೆ. ಬರೀ ಮೊಸಳೆ ಕಣ್ಣೀರು ಸುರಿಸುವುದಿಲ್ಲ. ಇವತ್ತು ರೂ. 3 ಲಕ್ಷಗಳವರೆಗೆ ಬಡ್ಡಿರಹಿತವಾಗಿ ಸಾಲ ಕೊಡುತ್ತಿರುವವರು ಯಾರು?

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಎಲ್ಲರಿಗೂ ಸಾಲ ಮನ್ನಾ ಮಾಡಿ.

**ಶ್ರೀ ರಾಮಚಂದ್ರಗೌಡ:–** ಎಲ್ಲರೂ ರೈತರ ಮಕ್ಕಳೇ ಆಗಿರುವುದರಿಂದ ಎಲ್ಲರಿಗೂ ಸಾಲ ಮನ್ನಾ ಮಾಡಬೇಕು.

**ಶ್ರೀ ಸಿದ್ದರಾಮಯ್ಯ:–** ಹಿಂದಿನ ಸರ್ಕಾರದವರು ಕೇವಲ ರೂ. 1 ಲಕ್ಷದವರೆಗೆ ಬಡ್ಡಿ ರಹಿತ ಸಾಲ ಕೊಡುತ್ತಿದ್ದರು, ನಾವು ರೂ.3 ಲಕ್ಷಗಳವರೆಗೆ ಬಡ್ಡಿರಹಿತವಾಗಿ ಸಾಲ ಕೊಡುತ್ತಿದ್ದೇವೆ. ಆದ್ದರಿಂದ ನಾವು ನೂರಕ್ಕೆ ನೂರು ರೈತರ ಪರವಾಗಿದ್ದೇವೆ.

**ಶ್ರೀ ಬಿ.ಜೆ. ಪುಟ್ಟಸ್ವಾಮಿ:–** ಅವರು ರೂ. 3 ಲಕ್ಷ ಕೊಟ್ಟರೆ........

**ಶ್ರೀ ಸಿದ್ದರಾಮಯ್ಯ:–** ಸುಮ್ಮನೆ ಎದ್ದೆದ್ದು ಮಾತನಾಡುವುದು ಬೇಡ, ಆದ್ದರಿಂದ ಅವರಿಗೆ ರೈತರ ಬಗ್ಗೆ ಮಾತನಾಡಲು ಯಾವುದೇ ರೀತಿಯ ನೈತಿಕ ಹಕ್ಕಿಲ್ಲ.

**ಶ್ರೀ ಸೋಮಣ್ಣ ಮ. ಬೇವಿನಮರದ:–** ಮಾನ್ಯ ಸಭಾಪತಿಯವರೆ, ರೂ.3 ಲಕ್ಷ ಸಾಲ ಕೊಡುತ್ತೇವೆ ಎಂದು ಹೇಳುತ್ತಿದ್ದು, ಎಷ್ಟು ಜನರಿಗೆ ಸಾಲವನ್ನು ಕೊಟ್ಟಿದ್ದಾರೆ?

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** 23 ಲಕ್ಷ ರೈತರಿಗೆ ಕೊಟ್ಟಿದ್ದೇವೆ.

**(ಗೊಂದಲ)**

**ಶ್ರೀ ಸೋಮಣ್ಣ ಮ. ಬೇವಿನಮರದ:–** ಉತ್ತರದಲ್ಲಿ ಒಂದು ಜಿಲ್ಲೆಗೆ ಎಷ್ಟು ಕೊಟ್ಟಿದ್ದಾರೆ ಎಂಬುದನ್ನು ನೋಡಲಿ.

**ಸಭಾಪತಿಯವರು:–** ಎಲ್ಲರೂ ಕುಳಿತುಕೊಳ್ಳಿ, ಇದು ಪ್ರಶ್ನೋತ್ತರ ಅವಧಿ, ನಾವು ರೈತರ ಬಗ್ಗೆ ಚರ್ಚೆ ಮಾಡುತ್ತಿಲ್ಲ. ಅವರ ಪ್ರಶ್ನೆಗೆ ಉತ್ತರ ಹೇಳಿದ್ದಾರೆ, ನಾನು ಮುಂದಿನ ಪ್ರಶ್ನೆಗೆ ಹೋಗುತ್ತೇನೆ.

**ಶ್ರೀ ಸಿದ್ದರಾಮಯ್ಯ:–** ನಾವು ಬಂದಮೇಲೆ ಹಿಂದೆ ಕೊಡುತ್ತಿದ್ದ ರೈತರ ಸಂಖ್ಯೆಗಿಂತ ಸುಮಾರು ಆರೂವರೆ ಲಕ್ಷ ರೈತರಿಗೆ ಹೆಚ್ಚು ಮಾಡಿದ್ದೇವೆ. ಈಗ 23 ಲಕ್ಷ ರೈತರಿಗೆ ಸಾಲ ಕೊಡುತ್ತಿದ್ದು, ಒಟ್ಟು 78

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಲಕ್ಷಕ್ಕೂ ಹೆಚ್ಚು ರೈತರಿದ್ದಾರೆ. ಅವರೆಲ್ಲರಿಗೂ ಸಾಲ ಮನ್ನಾ ಆಗಬೇಕೆಂದು ನನ್ನ ಆಸೆ. ನಾವು ಮಾಡುವ ಸವಲತ್ತುಗಳು ಎಲ್ಲರಿಗೂ ಸಿಗಬೇಕು. ಸಾಲ ಮನ್ನಾ ಮಾಡಿದರೆ ಎಲ್ಲರಿಗೂ ಸಿಗಬೇಕು. ಆ ಹಿನ್ನಲೆಯಲ್ಲಿ ಹೇಳುತ್ತಿದ್ದೇನೆಯೇ ಹೊರತು, ಟೀಕೆ ಮಾಡುವ ಉದ್ದೇಶದಿಂದ ಹೇಳುತ್ತಿಲ್ಲ. ಇದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರಲ್ಲವೇ? ಅದನ್ನು ಎಲ್ಲರೂ ದಯಮಾಡಿ ಹೇಳಬೇಕು. ನಾವು ಹೆಚ್ಚು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

**(ಗೊಂದಲ)**

**ಪ್ರಶ್ನೆ ಸಂಖ್ಯೆ: 231**

**ಸಭಾಪತಿಯವರು:–** ಶ್ರೀಯುತ ನಾರಾಯಣಸ್ವಾಮಿಯವರ ಪ್ರಶ್ನೆಗೆ ಮಾನ್ಯ ಗೃಹ ಸಚಿವರು ಕಾಲಾವಕಾಶ ಕೇಳಿದ್ದು, ನಂತರದ ಮಾನ್ಯ ರಾಮಚಂದ್ರಗೌಡರ ಪ್ರಶ್ನೆ ವರ್ಗಾವಣೆಯಾಗಿದೆ ಎಂದು ಮಾನ್ಯ ಮುಖ್ಯಮಂತ್ರಿಯವರ ಕಛೇರಿಯಿಂದ ಸುದ್ದಿ ಬಂದಿದೆ.

**ಶ್ರೀ ರಾಮಚಂದ್ರಗೌಡ:–** ಅದು ಹಣಕಾಸಿನ ವಿಷಯ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೇ, ಅದು ವರ್ಗಾವಣೆಯಾಗಿದ್ದು, ಹಣಕಾಸಿನ ಮಂತ್ರಿ ನಾನೇ ಆದರೂ ಎಲ್ಲಾ ಇಲಾಖೆಗಳಿಗೂ ನಾನೇ ಮಂತ್ರಿಯಾಗುವುದಿಲ್ಲ. ಅದು ಉನ್ನತ ಶಿಕ್ಷಣ ಇಲಾಖೆಗೆ ವರ್ಗಾವಣೆಯಾಗಿದೆ. ಅದಕ್ಕೆ ಮಾನ್ಯ ಉನ್ನತ ಶಿಕ್ಷಣ ಸಚಿವರು ಉತ್ತರ ಕೊಡುತ್ತಾರೆ.

**ಪ್ರಶ್ನೆ ಸಂಖ್ಯೆ: 234**

**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್):–** ಮಾನ್ಯ ಸಭಾಪತಿಯವರೆ, ಕಳೆದ ಐದಾರು ವರ್ಷಗಳಿಂದ ಮೈಸೂರು ನಗರದಲ್ಲಿ ಪೊಲೀಸ್ ಠಾಣೆಗಳನ್ನು ಹೆಚ್ಚಿಸಬೇಕೆಂದು ಕೇಳಿದ್ದು, ಮೈಸೂರಿಗೆ ಹೊಸದಾಗಿ ಎರಡು ಠಾಣೆಗಳನ್ನು ಕೊಟ್ಟಿದ್ದಾರೆ. ಆಲನಹಳ್ಳಿ ಮತ್ತು ಹೆಬ್ಬಾಳದಲ್ಲಿ ಠಾಣೆ ಮಂಜೂರು ಮಾಡಿರುವುದಕ್ಕಾಗಿ ನನ್ನ ಅಭಿನಂದನೆಗಳು. ಅದೇರೀತಿ ಶ್ರೀರಾಂಪುರದಲ್ಲಿ ಠಾಣೆಯನ್ನು ಕೇಳಿದ್ದು, ಇನ್ನೂ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಂಜೂರಾಗಿರುವುದಿಲ್ಲ. ಅದನ್ನು ಆದಷ್ಟು ಬೇಗ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ. ನಾನು ಕೇಳದ ಪ್ರಶ್ನೆಗಳಿಗೆ ಕೂಲಂಕಶವಾಗಿ ಉತ್ತರಗಳನ್ನು ಕೊಟ್ಟಿದ್ದಾರೆ. ಆದರೆ ಮೈಸೂರು ನಗರದಲ್ಲಿ ನಡೆಯುವ ದರೋಡೆ, ಸರಗಳ್ಳತನ ಅಥವಾ ರಾಬರಿಗಳಿಗೆ ಸಂಬಂಧಪಟ್ಟಂತೆ ಉತ್ತರವನ್ನು ಕೊಟ್ಟಿದ್ದಾರೆ, ಅಂಕಿ ಅಂಶಗಳನ್ನು ಕೊಟ್ಟಿದ್ದು, ಅದು ನನಗೆ ಒಪ್ಪಿಗೆ ಆಗಿದೆ. ಆದರೆ ಇದನ್ನು ತಪ್ಪಿಸಲು ಸಿಬ್ಬಂದಿ ಕೊರತೆ ಇದ್ದು, ಆದಷ್ಟು ಬೇಗ ಸಿಬ್ಬಂದಿಯನ್ನು ನೇಮಕ ಮಾಡಿಕೊಡಬೇಕು ಎಂದು ವಿನಂತಿಸುತ್ತೇನೆ.

ಇನ್ನು ಕಳೆದ ಬೆಳಗಾವಿ ಅಧಿವೇಶನದಲ್ಲಿ ಮೈಸೂರು ಮಹಲು ಮತ್ತು ಮೃಗಾಲಯದ ಮುಂಭಾಗದಲ್ಲಿ ಟ್ರಾಫಿಕ್ ಜಾಸ್ತಿಯಿದ್ದು, ಆ ಏರಿಯಾದ ಮನೆಗಳಲ್ಲಿ ವಾಸ ಮಾಡುವುದಿಕ್ಕೆ ಆಗುತ್ತಿಲ್ಲ. ಎಲ್ಲಾ ಮನೆಗಳ ಮುಂಭಾಗದಲ್ಲಿ ಕಾರು, ಸ್ಕೂಟರ್‌ಗಳನ್ನು ಪಾರ್ಕಿಂಗ್ ಮಾಡುತ್ತಿದ್ದು, ಬಹಳ ತೊಂದರೆ ಅನುಭವಿಸುತ್ತಿದ್ದಾರೆ. ಹಿಂದೆ ಮೈಸೂರು ನಗರ ಕಾರ್ಪೊರೇಷನ್ ಮತ್ತು Zoological Gardens of Mysoreನವರು ಮೃಗಾಲಯದ ಎದುರಿನ ಜಾಗದಲ್ಲಿMulti Level Parking ಮಾಡಬೇಕೆಂದು ಇಬ್ಬರು ಸೇರಿ ಒಂದು ಅಗ್ರಿಮೆಂಟ್ ಆಗಿತ್ತು. ಕೊನೆಗೆ Zoological Gardensನವರು ಜಂಟಿಯಾಗಿ ಮಾಡದೇ ಅವರೇ ಮಾಡುತ್ತೇವೆಂದು ಹೇಳಿದ್ದು, ಆ ಕೆಲಸ ಸಹ ಆಗದೇ ನಿಂತುಹೋಗಿದೆ. ನಾನು ಮನವಿ ಮಾಡುವುದೇನೆಂದರೆ ಕಳೆದ ಅಧಿವೇಶನದಲ್ಲಿ ಮಾನ್ಯ ಸಚಿವರು ‘ ನಾನು ಮೈಸೂರಿಗೆ ಬರುತ್ತಿದ್ದು, ಒಂದು ವಾರದಲ್ಲಿ ಸೆಟಲ್ ಮಾಡುತ್ತೇನೆ, ಪಾರ್ಕಿಂಗ್ ಅನ್ನು ಆದಷ್ಟು avoid ಮಾಡುತ್ತೇನೆ’ ಎಂದು ಹೇಳಿದ್ದು, ಇವತ್ತಿನವರೆಗೂ ಮಾಡಿಲ್ಲ. ನಾನು ಇಲ್ಲಿ ಪ್ರಶ್ನೆ ಕೇಳಿದ ಮೇಲೆ ಇನ್ನೂ ಜಾಸ್ತಿಯಾಗಿದೆ. ಅಲ್ಲಿ ಯಾರು ಕೇಳುವವರೂ ಇಲ್ಲ. ಮನೆ ಮುಂದೆ ತಿರುಗಾಡಲು ಆಗದ ಪರಿಸ್ಥಿತಿ ಇದೆ. ಪಾರ್ಕಿಂಗ್ ವ್ಯವಸ್ಥೆಯನ್ನು ಎಕ್ಸಿಬಿಷನ್‌ನಲ್ಲಿ ಮಾಡಿದ್ದಾರೆ. ಆದರೆ ಅಲ್ಲಿ ಯಾವುದೇ ಪಾರ್ಕಿಂಗ್ ವ್ಯವಸ್ಥೆ ಇಲ್ಲದೇ ಇರುವುದರಿಂದ ಮನೆಗಳ ಮುಂದೆ ವಾಹನಗಳನ್ನು ನಿಲ್ಲಿಸುತ್ತಿದ್ದಾರೆ. ದಯವಿಟ್ಟು ಆದಷ್ಟು ಬೇಗ ಪಾರ್ಕಿಂಗ್ ವ್ಯವಸ್ಥೆಯನ್ನು ಬಗೆಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಡಾ:ಜಿ.ಪರಮೇಶ್ವರ್:–** ಮಾನ್ಯ ಸಭಾಪತಿಯವರೆ, ಅವರು multi-level parking ಮತ್ತು ಸಿಬ್ಬಂದಿ ಕೊರತೆ ಬಗ್ಗೆ ಮೂಲ ಪ್ರಶ್ನೆಗಳನ್ನು ಕೇಳಿದ್ದಾರೆ. ನಮ್ಮ ಸರ್ಕಾರ ಬಂದಮೇಲೆ ಪೊಲೀಸ್ ಇಲಾಖೆಯಲ್ಲಿ 25 ಸಾವಿರ ಸಿಬ್ಬಂದಿ ಖಾಲಿಯಿದ್ದು, ಈಗಾಗಲೇ 20 ಸಾವಿರ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ತೆಗೆದುಕೊಂಡಿದ್ದು, ಮೊದಲು 16 ಸಾವಿರ ಹುದ್ದೆಗಳನ್ನು ಭರ್ತಿ ಮಾಡಿ, ಅವರು

ತರಬೇತಿ ಪಡೆದ ನಂತರ ಇಲಾಖೆಗೆ ಬಂದಿದ್ದಾರೆ. ಇನ್ನೂ 8 ಸಾವಿರ ಹುದ್ದೆಗಳನ್ನು ಭರ್ತಿ ಮಾಡಲು ಪ್ರಕ್ರಿಯೆ ನಡೆಯುತ್ತಿದೆ. ಮೈಸೂರಿನಲ್ಲಿ ಕೊರತೆ ಇರುವ ಸಿಬ್ಬಂದಿಯನ್ನು ತುಂಬಿಕೊಡುವ ಕೆಲಸವನ್ನು, ಕಮಿಷನರೇಟ್‌ಗೆ ತುಂಬಿಕೊಡುವ ಕೆಲಸವನ್ನು ಬರುವ ದಿನಗಳಲ್ಲಿ ಮಾಡುತ್ತೇವೆ. ಜೊತೆಗೆ ಪಾರ್ಕಿಂಗ್‌ಗೆ, ಟ್ರಾಫಿಕ್ ನಿರ್ವಹಣೆಗೆ ಬೆಂಗಳೂರಿನಲ್ಲಿ B-TRAC ಎಂದು ಮಾಡಿರುವಂತೆ ಮೈಸೂರಿನಲ್ಲಿ M-TRAC ಎಂದು ಮಾಡಿದ್ದೇವೆ. 2015–16ರಲ್ಲಿ ಸುಮಾರು ರೂ.5 ಕೋಟಿಗಳನ್ನು intersections ನಲ್ಲಿ signal light ವ್ಯವಸ್ಥೆಗೆ, markers fix ಮಾಡಲು, ಸಿಸಿ ಟಿವಿ ಕ್ಯಾಮರಾ ಇತ್ಯಾದಿಗಳಿಗೆ ಖರ್ಚು ಮಾಡಿದ್ದು, 2016ರಲ್ಲಿ ಅಂದರೆ ಈ ವರ್ಷ ರೂ.4 ಕೋಟಿಗಳನ್ನು ಕೊಡಲಾಗಿದ್ದು, ಇದರಲ್ಲಿ ರೂ.1.50 ಕೋಟಿ ಖರ್ಚಾಗಿದ್ದು, ಇನ್ನೂ ಕೆಲಸ ನಡೆಯುತ್ತಿದೆ. ಒಟ್ಟಾರೆ traffic regulate ಮಾಡಲು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಮಾನ್ಯ ಸದಸ್ಯರ ಮೂಲ ಪ್ರಶ್ನೆಯಂತೆ ಮೈಸೂರು ಮಹಲ್ ಮತ್ತು ಮೃಗಾಲಯಗಳ ಮುಂಭಾಗದಲ್ಲಿ ಮನೆಗಳ ಮುಂದೆ ವಾಹನಗಳನ್ನು ನಿಲ್ಲಿಸುವ ಬಗ್ಗೆ ಹೇಳಿದ್ದು, ಇದಕ್ಕೆ ನಾವು ಪರ್ಯಾಯವಾಗಿ ವಸ್ತುಪ್ರದರ್ಶನ ಆವರಣದಲ್ಲಿ ಪಾರ್ಕಿಂಗ್ ಮಾಡಬಹುದೆಂದು ಅನುಮತಿ ಕೊಡಿಸಿದ್ದರೂ ಯಾರೂ ಹೋಗುತ್ತಿಲ್ಲ. ಅದನ್ನೂ ರೆಗ್ಯುಲೇಟ್ ಮಾಡಲು ನಮ್ಮ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ಕೊಡುತ್ತೇನೆ. Multi-level parking ವ್ಯವಸ್ಥೆಯನ್ನು ಬರೀ ಪೊಲೀಸ್ ಇಲಾಖೆ ಮಾಡಲು ಆಗುವುದಿಲ್ಲ, ಇದನ್ನು ಕಾರ್ಪೊರೇಷನ್‌ನವರು ಮಾಡಬೇಕು.

(**84**) **09.02.2017/ವೈಎಲ್‌-ಎಕೆ/1.00**

**ಡಾ:ಜಿ.ಪರಮೇಶ್ವರ್ (ಮುಂದು) :**

ನಮ್ಮ influence ನ್ನು ಉಪಯೋಗ ಮಾಡಿಸಿ ಕಾರ್ಪೋರೇಷನ್‌ನವರು ಆದಷ್ಟು ಶೀಘ್ರವಾಗಿ multilevel parking ಮಾಡುವುದಕ್ಕೆ ಕ್ರಮ ತೆಗೆದುಕೊಂಡು ಈ ಸಮಸ್ಯೆಯನ್ನು ಆದಷ್ಟು ಬೇಗ ಬಗೆಹರಿಯುವಂತೆ ಮಾಡುತ್ತೇವೆ. ಅದಕ್ಕೆ ನಮ್ಮಿಂದ ಹಾಗೂ ಪೊಲೀಸ್ ಇಲಾಖೆಯಿಂದ ಏನು ಸಹಕಾರಬೇಕು ಖಂಡಿತವಾಗಿ ನಾವು ಕೊಡುತ್ತೇವೆ.

**ಶ್ರೀ ಎಸ್.ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಅಲ್ಲಿ P.C. ಗಳ ಹಾಗೂ ಟ್ರಾಫಿಕ್ ಪೊಲೀಸ್‌ನವರ ಕೊರತೆ ಇದೆ. ಅಲ್ಲಿ ಯಾರು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಹ ಪಾರ್ಕಿಂಗ್ ಮಾಡುವುದಕ್ಕೆ ಹೋಗುವುದಿಲ್ಲ. ಆದ್ದರಿಂದ ಆಯುಕ್ತರಿಗೆ ತಿಳಿಸಿ ಆದಷ್ಟು ಜಾಗ್ರತೆ ಪಾರ್ಕಿಂಗ್‌ನಲ್ಲಿಯೇ ವಾಹನಗಳನ್ನು ನಿಲ್ಲಿಸುವಂತಹ ವ್ಯವಸ್ಥೆಯನ್ನು ಮಾಡಿದರೆ ಸಾಕಾಗುತ್ತದೆ. Multilevel parking ಪೊಲೀಸ್ ಸಿಬ್ಬಂದಿಗಳಿಗೆ ಮಾತ್ರವಲ್ಲ. ಕಾರ್ಪೋರೇಷನ್‌ರವರಿಗೆ Zoological Gardens ರವರಿಗೆ agreement ಆಗಿದೆ. ಆದರೆ ಕೊನೆಯಲ್ಲಿ Zoological Gardens ರವರು ನಾವು ಒಬ್ಬರೇ ಮಾಡುತ್ತೇವೆ. ಕಾರ್ಪೋರೇಷನ್‌ರವರ ಜೊತೆ ಮಾಡುವುದಿಲ್ಲವೆಂದು ಹೇಳುತ್ತಿದ್ದಾರೆ. ಇದನ್ನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೂ ತರುತ್ತಿದ್ದೇನೆ. ದಯವಿಟ್ಟು ಕಾರ್ಪೋರೇಷನ್ ಮತ್ತು Zoological Gardens ರವರು ಇಬ್ಬರೂ ಸೇರಿ multilevel parking ಮಾಡುವುದಕ್ಕೆ ಆದೇಶ ಮಾಡಬೇಕೆಂದು ಈ ಮೂಲಕ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:-** ಆಯ್ತು, ಅವರು ಗಮನಿಸುತ್ತಾರೆ.

**ಡಾ: ಜಿ.ಪರಮೇಶ್ವರ್ (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಇದರ ಬಗ್ಗೆ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

**ಚುಕ್ಕೆ ಗುರುತಿನ ಪ್ರಶ್ನೆ 247**

**ಉತ್ತರವನ್ನು ಒದಗಿಸಲಾಗಿದೆ**

**ಶ್ರೀ ಡಿ.ಎಸ್.ವೀರಯ್ಯ:-** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಒದಗಿಸಿದ್ದಾರೆ. ಆದರೆ ಹೀಗಿರುವಂತಹ ಸಿಎಲ್-2 ಲೈಸೆನ್ಸ್‌ನಲ್ಲಿ 1% ಕೂಡ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳಿಗೆ ಮೀಸಲಾತಿ ಇಲ್ಲದಂತಾಗಿದೆ. ಸಾವಿರಾರು ವರ್ಷಗಳಿಂದ ಕುಡಿಸಿದ್ದಾರೆ. ನಮಗೂ ಸಹ ಕುಡಿಸುವುದಕ್ಕೆ ಅವಕಾಶ ಕೊಡಿ ಎನ್ನುವುದು ನನ್ನ ಪ್ರಶ್ನೆಯಾಗಿದೆ.

**ಶ್ರೀ ಸಿದ್ದರಾಮಯ್ಯ:-** ಮೊತ್ತೊಮ್ಮೆ ಹೇಳಿ.

**ಶ್ರೀ ಡಿ.ಎಸ್.ವೀರಯ್ಯ:-** ಸಿಎಲ್-2 ನಲ್ಲಿ ವೈನ್ ಶಾಪ್ ತೆರೆಯಲು 1% ಕೂಡ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಲೈಸೆನ್ಸ್ ಕೊಟ್ಟಿಲ್ಲ. ನನ್ನ ಪ್ರಶ್ನೆ ಏನೆಂದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗದವರಿಗೆ ಮೀಸಲಾತಿ ಕೊಡಿ ಎನ್ನುವುದಾಗಿದೆ. ಶ್ರೀಯುತ ಸತೀಶ್ ಜಾರಕಿ ಹೊಳಿ ರವರು

ಮಂತ್ರಿಗಳಾಗಿದ್ದಾಗ ಸಹ ಒಂದು ಸಾವಿರ ವೈನ್‌ಶಾಪ್‌ಗಳನ್ನು ತೆರೆಯಲು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಪ್ರತ್ಯೇಕವಾಗಿ ಕೊಡಬೇಕು ಎಂದು ಶಿಫಾರಸ್ಸು ಮಾಡಿದ್ದಾರೆ. ಮರಳಲು ನಮಗೆ ಅವಕಾಶವಿರಲಿಲ್ಲ. ಆದರೆ ಈಗ ನಿಮ್ಮ ಸರ್ಕಾರ ಮರಳಲು ಮತ್ತು ಗಣಿಯಲ್ಲಿಯೂ ಕೂಡ ಮೀಸಲಾತಿಯನ್ನು ತಂದಿದೆ. ಆದರೆ ಸಿಎಲ್–2 ವೈನ್ ಶಾಪ್‌ನಲ್ಲಿ ಏತಕ್ಕಾಗಿ ಮೀಸಲಾತಿಯನ್ನು ಕೊಟ್ಟಿಲ್ಲ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಗುತ್ತಿಗೆಯನ್ನು ಕೊಡುವುದರಲ್ಲಿ ಮೀಸಲಾತಿಯನ್ನು ತಂದಿದ್ದೇವೆ.

**ಶ್ರೀ ಡಿ.ಎಸ್.ವೀರಯ್ಯ:–** ಮಾನ್ಯ ಸಭಾಪತಿಯವರೆ, ರೂಪಾಯಿ 50.00 ಲಕ್ಷಕ್ಕೆ ಮಾತ್ರ ಸೀಮಿತಗೊಳಿಸಿದ್ದೀರಿ. ಏಕೆ ಎನ್ನುವುದು ಗೊತ್ತಾಗುತ್ತಿಲ್ಲ.

**ಸಭಾಪತಿಯವರು:–** ಈಗ ಅದರ ಬಗ್ಗೆ ಮಾತನಾಡುವುದು ಬೇಡ.

**ಶ್ರೀ ಡಿ.ಎಸ್.ವೀರಯ್ಯ:–** ಮಾನ್ಯ ಸಭಾಪತಿಯವರೆ, ನಮ್ಮನ್ನು ರೂಪಾಯಿ 50.00 ಲಕ್ಷಕ್ಕೆ ಸೀಮಿತಗೊಳಿಸಿದ್ದಾರೆ. ಸಿಎಲ್–2 ನಲ್ಲಿಯೂ ಸಹ ಪೂರ್ಣವಾಗಿ ಮೀಸಲಾತಿಯನ್ನು ಕೊಡಿ ಎಂದು ಕೇಳುತ್ತಿದ್ದೇನೆ. ಸಿಎಲ್–2 ನ್ನು ಬೇರೆಯವರಿಗೆ ಕೊಡುವ ಮೊದಲು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳಿಗೆ ಮೀಸಲಾತಿ ಕೊಡಬಾರದು ಎನ್ನುವಂತಹದು ಏನಿಲ್ಲ. ಆದ್ದರಿಂದ 1% ಕೂಡ ಇಲ್ಲದೇ ಇರುವಂತಹ ಸಂದರ್ಭದಲ್ಲಿ ವಿಶೇಷವಾಗಿ ಇವರಿಗೆ ಹಿಂಬಾಕಿ ಕೊಡುವ ರೀತಿಯಲ್ಲಿ 1000 ವೈನ್ ಶಾಪ್‌ಗಳನ್ನು ತೆರೆಯಲು ಎಸ್‌ಸಿ/ಎಸ್‌ಟಿ ಯವರಿಗೆ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇದು ಆರ್ಥಿಕ ಸ್ವಾವಲಂಬನೆಯೇ ಅಥವಾ ಆರ್ಥಿಕ ಸಮಾನತೆಯೇ ಎಂಬುದನ್ನು ಡಾ:ಬಿ.ಆರ್.ಅಂಬೇಡ್ಕರ್‌ರವರು ಏನು ಪ್ರತಿಪಾದಿಸಿದ್ದಾರೆ, ಅದೇ ರೀತಿ ಸಂವಿಧಾನ ಹೇಳುತ್ತದೆಯೋ ಅದಕ್ಕೆ ಪೂರಕವಾದಂತಹ ಮೀಸಲಾತಿಯನ್ನು ಕೊಡಿ. ಇದನ್ನು ನೀವು ಅಲ್ಲದೇ ಬೇರೆ ಯಾರು ಮಾಡುವುದಕ್ಕಾಗುವುದಿಲ್ಲ.

**(ಗೊಂದಲ)**

ಮಾನ್ಯ ಸಭಾಪತಿಯವರೆ, ದಯವಿಟ್ಟು ಇದನ್ನು ಒಪ್ಪಿಕೊಂಡು ಒಂದು ತೀರ್ಮಾನಕ್ಕೆ ಬನ್ನಿ. ಕೇವಲ ಪರಿಶೀಲಿಸಲಾಗುವುದು ಎಂದರೆ ಹೇಗೆ. ನಮ್ಮನ್ನು ಪರೀಕ್ಷೆಗೆ ತೆಗೆದುಕೊಳ್ಳುತ್ತಾರೆ. ಪರೀಕ್ಷೆಗೆ ತೆಗೆದುಕೊಂಡ ಮೇಲೆ ಅನುತ್ತೀರ್ಣರಾಗಿ ಮಾಡುತ್ತಾರೆ. ಆದ್ದರಿಂದ ಇದರ ಬಗ್ಗೆ ಪರಿಶೀಲಿಸುವುದು ಬೇಡ. ಮಾಡಿಕೊಡುತ್ತೇವೆಂದು ಹೇಳಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಶ್ರೀ ಡಿ.ಎಸ್.ವೀರಯ್ಯನವರಿಗೆ ಗೊತ್ತಿಲ್ಲವೇ, ಡಾ: ಬಿ.ಆರ್.ಅಂಬೇಡ್ಕರ್‌ರವರು ಎಲ್ಲಿಯೂ ಅನುತ್ತೀರ್ಣರಾಗಿಲ್ಲ. ಮತ್ತೆ ಅವರು ಏಕೆ ಅನುತ್ತೀರ್ಣರಾಗಿದ್ದಾರೆ?

**ಶ್ರೀ ಡಿ.ಎಸ್.ವೀರಯ್ಯ:–** ಮಾನ್ಯ ಸಭಾಪತಿಯವರೆ, ಹೌದು ಅವರಿಗೆ ಸೋಲು ಎನ್ನುವುದು ಗೊತ್ತೇ ಇರಲಿಲ್ಲ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ರಾಜಕೀಯದಲ್ಲಿ ಮಾತ್ರ ಅವರು ಮೇಲಕ್ಕೆ ಬರಬಾರದೆಂಬ ದೃಷ್ಟಿಯಿಂದ ಅವರನ್ನು ಸೋಲಿಸುತ್ತಿದ್ದರು.

**ಶ್ರೀ ಡಿ.ಎಸ್.ವೀರಯ್ಯ:–** ಮಾನ್ಯ ಸಭಾಪತಿಯವರೆ, ಅವರ ಪಕ್ಷದವರೇ ಸೋಲಿಸಿದ್ದಾರೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಅವರಲ್ಲಿತಕ್ಕಂಥವರೆ ಅವರನ್ನು ಸೋಲಿಸಿದ್ದಾರೆ.

**ಶ್ರೀ ಡಿ.ಎಸ್.ವೀರಯ್ಯ:–** ಮಾನ್ಯ ಸಭಾಪತಿಯವರೆ, ಕಾಂಗ್ರೆಸ್ ಅಭ್ಯರ್ಥಿಯವರೆ ಅವರನ್ನು ಸೋಲಿಸಿದ್ದಾರೆ. ಒಂದು ಸಾರಿ ಬೋರ್‌ಕರ್ ಎಂದು ಇನ್ನೊಂದು ಸಾರಿ ಕಜ್ರೋಳ್ಕರ್‌ರೆಂದು. ಒಂದು ಸಾರಿ 1900 ಮತಗಳಿಂದ, ಇನ್ನೊಂದು ಸಾರಿ 4600 ಮತಗಳಿಂದ ಸೋತಿದ್ದಾರೆ. ಆದ್ದರಿಂದ ಕಾಂಗ್ರೆಸ್ ಪಕ್ಷದವರೆ ಡಾ: ಬಿ.ಆರ್.ಅಂಬೇಡ್ಕರವರನ್ನು ಸೋಲಿಸಿದ್ದಾರೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಶ್ರೀ ಡಿ.ಎಸ್.ವೀರಯ್ಯನವರೆ ಹೇಳಿದ್ದಾರೆ ನಮ್ಮಿಂದ ಮಾತ್ರ ಇದು ಸಾಧ್ಯವೆಂದು, ಅವರಿಗೂ ಸಹ ಗೊತ್ತಿದೆ ಈ ಕೆಲಸವು ಅವರಿಂದ ಆಗುವುದಿಲ್ಲವೆಂಬುದು.

**ಶ್ರೀ ಡಿ.ಎಸ್.ವೀರಯ್ಯ:–** ಮಾನ್ಯ ಸಭಾಪತಿಯವರೆ, ಆ ರೀತಿ ಏನೂ ಇಲ್ಲ. ಅವರು ಮಾಡದೇ ಇದ್ದರೆ ನಾವೇ ಮಾಡುತ್ತೇವೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಅವರು ಎಲ್ಲಿ ಮಾಡಿದ್ದಾರೆ? You are a right person in the wrong party.

**(ಗೊಂದಲ)**

**Sri KAVATAGIMATH MAHANTESH MALLIKARJUN:** A good man in a wrong party…

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಡಿ.ಎಸ್.ವೀರಯ್ಯ:–**ಮಾನ್ಯ ಸಭಾಪತಿಯವರೆ, ಅವರ ಬಗ್ಗೆಯೂ ಹಾಗೆಯೇ ಮಾತನಾಡುತ್ತಾರೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ವೀರಯ್ಯನವರೆ, ನೀವು ಡಿ.ಎಸ್.ಎಸ್ ನಲ್ಲಿರುವವರು ಏನು ಹೇಳಿದ್ದಾರೆ ಎನ್ನುವುದನ್ನು ಸ್ವಲ್ಪ ನೆನಪಿಸಿಕೊಳ್ಳಿ. ಅದನ್ನು ನೆನಪಿಸಿಕೊಂಡರೆ ನೀವು ವಿರೋಧ ಪಕ್ಷದಲ್ಲಿ ಇರುವುದಿಲ್ಲ.

**ಶ್ರೀ ಡಿ.ಎಸ್.ವೀರಯ್ಯ:–** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಯವರ ಬಗ್ಗೆ ಕೂಡ ನಾಡಿನ ಜನ ಅದೇ ರೀತಿ ಹೇಳುತ್ತಿದ್ದಾರೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಅವರದು ಹಾಗೆ ಆಗಿರುವುದು. ಅವರು ಅಪ್ಪಿ, ತಪ್ಪಿ ಅಲ್ಲಿ ಹೋಗಿ ಸೇರಿಕೊಂಡಿದ್ದಾರೆ. ಮೀಸಲಾತಿ ಕೊಡಬೇಕೆಂದು ಹೇಳುತ್ತಿದ್ದಾರೆ. ಸಿಎಲ್–2 ವೈನ್ ಶಾಪ್ ತೆರೆಯಲು ಅನುಮತಿ ಕೊಡುವುದನ್ನು ನಿಲ್ಲಿಸಿ ಬಿಟ್ಟಿದ್ದೇವೆ. ಆದ್ದರಿಂದ ಆ ಪ್ರಶ್ನೆ ಉದ್ಭವಿಸುವುದಿಲ್ಲ. ಇವರು ಹೇಳುವ ಪ್ರಕಾರ ಇಲ್ಲಿಯವರೆಗೆ ಸುಮಾರು ಒಟ್ಟು ಸಿಎಲ್–2 ಇರುವುದು 3947. ಇದು ಮೀಸಲಾತಿಯಿಂದ ಬಂದಿರತಕ್ಕಂಥದ್ದು ಅಲ್ಲ. 3947 ರಲ್ಲಿ ಎಸ್‌ಸಿ ಜನಾಂಗಕ್ಕೆ 52 ಸನ್ನದ್ಧಿಗಳಿದ್ದಾವೆ ಹಾಗೂ ಎಸ್‌ಟಿ ಜನಾಂಗಕ್ಕೆ 47 ಇದೆ. ಇಷ್ಟು ಇರುವುದು ಕಡಿಮೆಯೇ, ಆದರೆ ಇದು ಮೀಸಲಾತಿಯಿಂದ ಬಂದಿರತಕ್ಕಂಥದ್ದು ಅಲ್ಲ, ತಾನಾಗಿಯೇ ಬಂದಿರುವುದು. ಆದಕಾರಣ ಕಾನೂನಿನ ಅಭಿಪ್ರಾಯವನ್ನು ತೆಗೆದುಕೊಳ್ಳುತ್ತಿದ್ದೇವೆ. ಕೊಡಬೇಕಾದರೆ ಪರಿಶೀಲನೆ ಮಾಡೋಣ. ಬಹಳ ವರ್ಷಗಳಿಂದ ಹೊಸದಾಗಿ ಸಿಎಲ್–2 ವೈನ್‌ಶಾಪ್ ತೆರೆಯಲು ಅವಕಾಶ ಕೊಟ್ಟಿಲ್ಲ ನಿಲ್ಲಿಸಿದ್ದೇವೆ. ಈಗ ಕೊಡಬೇಕೆಂದು ಹೇಳುತ್ತಿರುವುದರಿಂದ ಕೊಡಬೇಕಾಗುತ್ತದೆ. ಹಿಂದೆ ಸಮ್ಮಿಶ್ರ ಸರ್ಕಾರ ಇದ್ದಾಗ ಶ್ರೀ ಬಿ.ಎಸ್.ಯಡಿಯೂರಪ್ಪನವರು ಹಣಕಾಸಿನ ಮಂತ್ರಿಯಾಗಿದ್ದಾಗ ಹಾಗೂ ಶ್ರೀ ಹೆಚ್.ಡಿ.ಕುಮಾರ್‌ಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದಾಗ ವೈನ್ ಶಾಪ್ ತೆರೆಯುವುದು ಬೇಡವೆಂದು ನಿಲ್ಲಿಸಿದ್ದಾರೆ. ಅವತ್ತಿನಿಂದ ಎಲ್ಲೂ ಹಳ್ಳಿಗಳಲ್ಲಿ ನಾವು ತೆರೆಯಲು ಅವಕಾಶ ಕೊಟ್ಟಿಲ್ಲ. ಕೆಲವು ಕಡೆ ಮಾತ್ರ ಎಂಎಸ್‌ಐಎಲ್ ರವರು ಕೊಟ್ಟಿದ್ದಾರೆ. ಎಂಎಸ್‌ಐಎಲ್ ರವರು ಕೊಟ್ಟಿರುವುದು ಕೂಡ ಸಿಎಲ್–2 ಅಲ್ಲ. ಸಿಎಲ್–11 ಎಂದು ಬರುತ್ತದೆ. ಸಿಎಲ್–2 ನಲ್ಲಿ ಕೊಟ್ಟಿಲ್ಲ ಕೊಡುವುದು ಅಗತ್ಯ ಇದೆ. ಆದರೆ ನಾವೇನಾದರೂ ಕೊಟ್ಟರೆ ಸಿದ್ದರಾಮಯ್ಯನವರ ಸರ್ಕಾರ ಹಳ್ಳಿ ಹಳ್ಳಿಗಳಲ್ಲಿ ಮದ್ಯ ಕುಡಿಸುವುದಕ್ಕೆ ಪ್ರಾರಂಭ ಮಾಡಿ ಬಿಟ್ಟಿದೆ ಎಂದು ಧೂಳು ಎಬ್ಬಿಸಿ ಬಿಡುತ್ತಾರೆ. ಈ ರೀತಿಯ ಒಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಮಸ್ಯೆ ಉದ್ಭವಿಸುತ್ತದೆ. ಅದನ್ನು ವಿರೋಧ ಪಕ್ಷದ ಸದಸ್ಯರೆ ಹೇಳುವುದು ಬೇರೆ ಯಾರು ಹೇಳುವುದಿಲ್ಲ.

**(ಗೊಂದಲ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೆ, ಎಂ.ಎಸ್.ಐ.ಎಲ್ ನಿಂದ ಮಾಡುತ್ತಾರೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಅದಕ್ಕೆ ನಮಗೆ ಭಯವಾಗುತ್ತದೆ. ಅವರ ಹತ್ತಿರ ಟೀಕೆ ಮಾಡಿಸಿಕೊಳ್ಳುವುದು ಬೇಡವೆಂದು ನಾವು ಸುಮ್ಮನಾಗಿದ್ದೇವೆ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಆಮೇಲೆ ಕುಡಿಯುವುದಕ್ಕೆ ನೀರು ಕೊಡುವುದನ್ನು ಬಿಟ್ಟು beer ಕೊಟ್ಟಿದ್ದಾರೆ ಎಂದು ಇವರೇ ದೂಳು ಎಬ್ಬಿಸುವುದು. ಮಾನ್ಯ ಡಿ.ಎಸ್.ವೀರಯ್ಯನವರೆ, ನೀವು ಬಿಜೆಪಿ ಯಿಂದ resolution ಮಾಡಿಸಿ. ಜೆಡಿಎಸ್‌ನಿಂದ ಒಂದು resolution ಮಾಡಲಿ. ಆಮೇಲೆ ನೀವು ಹೇಳಿದ್ದ ಹಾಗೆ ವಿಚಾರಣೆ ಮಾಡಿ, ಪರಿಶೀಲನೆ ಮಾಡುತ್ತೇವೆ.

**ಸಭಾಪತಿಯವರು:-** ಧನ್ಯವಾದಗಳು.

**ಆ) <u>ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು</u>**

**ಡಾ॥ಜಿ.ಪರಮೇಶ್ವರ್ (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಸಮೂಹ 4ರಲ್ಲಿನ ಮೂರನೇ ಪಟ್ಟಿಯ 84 ಪ್ರಶ್ನೆಗಳ ಪೈಕಿ 51 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

(ಲಿಖಿತ ಉತ್ತರಗಳನ್ನು ಲಗತ್ತಿಸಲಾಗಿದೆ)

**ಸಭಾಪತಿಯವರು:-**ಮಂಡಿಸಲಾಯಿತು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

3. **ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

**ಅ) ವಿಷಯ:–** ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳಿಗೆ ವಿಶೇಷ ಪ್ಯಾಕೇಜ್ ನೀಡಿ ದಿನದ 24 ಗಂಟೆಗಳ ಕಾಲ ನಿರಂತರ ವಿದ್ಯುತ್ ಪೂರೈಕೆ ಮಾಡಬೇಕೆಂಬ ಬಗ್ಗೆ.

*****

**ಶ್ರೀ ಬಸನಗೌಡ ಆರ್.ಪಾಟೀಲ್ (ಯತ್ನಾಳ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ವಿಜಯಪುರ ಬಾಗಲಕೋಟೆ ಆಲಮಟ್ಟಿ ಆಣೆಕಟ್ಟು ನಿರ್ಮಾಣ ಮಾಡಲು ಈ ಜಿಲ್ಲೆಗಳ ರೈತರ ಸುಮಾರು 3ಲಕ್ಷ ಎಕರೆ ಭೂಮಿ ಆಣೆಕಟ್ಟು ನಿರ್ಮಾಣಕ್ಕಾಗಿ ನೀಡಿರುತ್ತಾರೆ. ಇದಾದ ನಂತರ ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲೂಕಿನ ಕೂಡಗಿ ಗ್ರಾಮದಲ್ಲಿ ಉಷ್ಣ ವಿದ್ಯುತ್ ಸ್ಥಾವರ ನಿರ್ಮಾಣ ಮಾಡಲು ಸರ್ಕಾರ ತೀರ್ಮಾನ ತೆಗೆದುಕೊಂಡಾಗ ಆ ಭಾಗದ ರೈತರು ಮತ್ತೆ 1 ಲಕ್ಷ ಎಕರೆ ಭೂಮಿಯನ್ನು ಈ ದೇಶಕ್ಕಾಗಿ ತ್ಯಾಗ ಮಾಡಿರುತ್ತಾರೆ. ರಾಜ್ಯ ಮತ್ತು ರಾಷ್ಟ್ರದ ಹಿತ ಸುಮಾರು ಐದು ಲಕ್ಷಕ್ಕೂ ಅಧಿಕ ಎಕರೆ ಭೂಮಿಯನ್ನು ರೈತರು ಕಳೆದುಕೊಂಡಿರುತ್ತಾರೆ. ಉಷ್ಣ ವಿದ್ಯುತ್ ಸ್ಥಾವರ ಸಂದರ್ಭದಲ್ಲಿ ಈ ಭಾಗದ ಜನರಿಗೆ ಉದ್ಯೋಗ ನೀಡುವ ಭರವಸೆ ನೀಡಿರುತ್ತಾರೆ. ನೀಡಿರುವ ಭರವಸೆಯಂತೆ ಉದ್ಯೋಗ ನೀಡಿರುವುದಿಲ್ಲ. ಹಾಗೂ ಸ್ಥಳೀಯರಿಗೆ ಆದ್ಯತೆ ನೀಡಿ ಉದ್ಯೋಗ ನೀಡಬೇಕು. ಹಾಗೂ ಇಷ್ಟೊಂದು ಅಪಾರ ಪ್ರಮಾಣದ ಭೂಮಿ ಕಳೆದುಕೊಂಡ ರೈತರಿಗೆ ಉಳಿದ ಜಮೀನಿನಲ್ಲಿ ವ್ಯವಸಾಯ ಮಾಡಲು ವಿದ್ಯುತ್ ಸರಬರಾಜು ಸರಿಯಾಗಿ ಮಾಡುತ್ತಿಲ್ಲ. ರಾತ್ರಿ ವೇಳೆಯಲ್ಲಿ ಮಾತ್ರ ವಿದ್ಯುತ್ ಸರಬರಾಜು ಮಾಡುತ್ತಾರೆ. ನಿರ್ದಿಷ್ಟ ಸಮಯದಲ್ಲಿ ಸರಿಯಾಗಿ ಮಾಡುತ್ತಿಲ್ಲ. ಇದರಿಂದ ರಾತ್ರಿ ಇಡೀ ರೈತರು ಯಾವಾಗ ವಿದ್ಯುತ್ ಸರಬರಾಜು ಮಾಡುತ್ತಾರೆ. ಆ ಸಮಯದಲ್ಲಿ ರೈತರು ಎಷ್ಟು ಪ್ರಮಾಣದಲ್ಲಿ ಬೆಳೆಗಳಿಗೆ ನೀರು ಬಿಡಲು ಸಾಧ್ಯ? ಇದರಿಂದ ರೈತರಿಗೆ ತೀವ್ರ ತೊಂದರೆಯಾಗಿ ರೈತ ಕಂಗಾಲಾಗಿ ಸಾಲದ ಸಮಸ್ಯೆಯಿಂದ ಆತ್ಮಹತ್ಯೆ ಮಾಡಿಕೊಳ್ಳುವಂತಹ ಪರಿಸ್ಥಿತಿ ಉಂಟಾಗುತ್ತಿದೆ.

ಇಂತಹ ಸಂದರ್ಭದಲ್ಲಿ ರಾಜ್ಯ ಮತ್ತು ರಾಷ್ಟ್ರದ ಹಿತವನ್ನು ಕಾಪಾಡಲು ತನ್ನ ಜಮೀನನ್ನೇ ಕಳೆದುಕೊಂಡ ತ್ಯಾಗಮಯಿ ಮತ್ತು ಕರುಣಾಮಯಿ ನಮ್ಮ ರೈತರ ಸಮಸ್ಯೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ, ಈ ಭಾಗದ ರೈತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಒಂದು ವಿಶೇಷ ಪ್ಯಾಕೇಜನ್ನು ಜಾರಿಗೆ ತಂದು ಎರಡೂ ಜಿಲ್ಲೆಯ ಜನರಿಗೆ ಮತ್ತು ರೈತರಿಗೆ ದಿನದ 24 ಗಂಟೆಗಳ ಕಾಲ ನಿರಂತರ ವಿದ್ಯುತ್

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರಬರಾಜು ಮಾಡಬೇಕು. ಮತ್ತು 3 ಪೇಸ್ ಲೈನ್‌ಗಳನ್ನು ರಾತ್ರಿ ಬದಲು ಹಗಲು ಹೊತ್ತಿನಲ್ಲಿ ಸರಬರಾಜು ಮಾಡಿ ನ್ಯಾಯ ದೊರಕಿಸಿಕೊಡಬೇಕೆಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸುತ್ತಿದ್ದೇನೆ.

**ಡಾ: ಜಿ.ಪರಮೇಶ್ವರ (ಸಭಾನಾಯಕರು):–** ಮಾನ್ಯ ಸಭಾಪತಿಗಳೆ, ಮಾನ್ಯ ಇಂಧನ ಸಚಿವರಿಂದ ಉತ್ತರವನ್ನು ಒದಗಿಸಿಕೊಡಲಾಗುತ್ತದೆ.

**ಸಭಾಪತಿಯವರು:–** ಧನ್ಯವಾದಗಳು.

85/09.02.2017/1.10/hv.ak

**ಆ) ವಿಷಯ: ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲ್ಲೂಕಿನ ಹೊದಗೆರೆ ಗ್ರಾಮದಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ತಂದೆ ರಾಜಾಶ್ರೀಷಹಜೀ ಆಕಸ್ಮಿಕವಾಗಿ ಮೃತರಾದ ಹಿನ್ನಲೆಯಲ್ಲಿ ಅವರ ಸ್ಮರಣಾರ್ಥ ಆ ಸ್ಥಳವನ್ನು ಪ್ರವಾಸಿ ಸ್ಥಳವನ್ನಾಗಿ ಅಭಿವೃದ್ಧಿ ಪಡಿಸುವ ಕುರಿತು.**

– – –

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ದಾವಣಗೇರಿ ಜಿಲ್ಲೆಯ ಚನ್ನಗೇರಿ ತಾಲ್ಲೂಕಿನ ಹೊದಗೆರೆಯಲ್ಲಿ 1964ನೇ ಇಸವಿ ಜನವರಿ 23ನೇ ತಾರೀಖಿನ ದಿವಸ ಛತ್ರಪತಿ ಶಿವಾಜಿ ಮಹಾರಾಜರ ತಂದೆಯವರಾದ ರಾಜಾಶ್ರೀ ಷಹಜೀಯವರು ಬೇಟೆಯಾಡಲು ಹೋದ ಸಂದರ್ಭದಲ್ಲಿ ಆಕಸ್ಮಿಕವಾಗಿ ಅಪಘಾತ ಹೊಂದಿ ಮರಣ ಹೊಂದಿರುತ್ತಾರೆ. ಅವರು ಮರಣ ಹೊಂದಿರುವ ಸ್ಮರಣಾರ್ಥ ಅವರ ಚಿತಾ ಭಸ್ಮವನ್ನು ತಂದು ಹೊದಗೇರೆಯಲ್ಲಿ ಸಮಾಧಿ ಮಾಡಿರುತ್ತಾರೆ, ಈ ರೀತಿ ಛತ್ರಪತಿ ಶಿವಾಜಿ ಮಹಾರಾಜರ ತಂದೆಯವರಾದ ರಾಜಾಶ್ರೀ ಷಹಜೀ ಇವರ ಸಮಾಧಿ ಸ್ಥಳವು ಯ್ಯಾವುದೇ ರೀತಿಯಲ್ಲಿ ಕಟ್ಟಡ ವಗ್ಯೆರೆ ಇರದೇ ಇರುವುದರಿಂದ ರಕ್ಷಣೆ ಇಲ್ಲದಂತೆ ಅನಾಥವಾಗಿರುವ ಇಂತಹ ಮಹಾತ್ಮರ ಸಮಾಧಿ ಸ್ಥಳ ಕೇಳುವವರಿಲ್ಲದಂತೆ ಆಗಿರುತ್ತದೆ. ಜಾತಿ, ಮತ, ಧರ್ಮದ ಭೇದ–ಭಾವ ಮಾಡದೇ ಎಲ್ಲ ಜನಾಂಗದವರಿಗೂ ಬೇಕಾದಂತಹ ಹುತಾತ್ಮರಾಗಿರುವ ಈ ಪವಿತ್ರವಾದ ಸಮಾಧಿ ಸ್ಥಳವು ಇಲ್ಲಿಯವರೆಗೆ ರಾಜ್ಯದ ಬಹಳಷ್ಟು ಜನರಿಗೆ ತಿಳಿಯದೇ ಇರುವುದು ಬೇಸರದ ಸಂಗತಿ. ಈಗಲಾದರೂ ಈ ಪವಿತ್ರ ಸಮಾಧಿ ಸ್ಥಳವನ್ನು ಸರ್ಕಾರದ ವತಿಯಿಂದ ಅಭಿವೃದ್ಧಿ ಮಾಡಬೇಕು ಹಾಗೂ ಪ್ರವಾಸೋದ್ಯ ಇಲಾಖೆಯಿಂದ ಈ ಸ್ಥಳ ಪ್ರವಾಸಿ ತಾಣವನ್ನಾಗಿ ಮಾಡಿ ಮಹಾತ್ಮರ ನೆನಪು ಅಚ್ಚಳಿಯದೇ ಉಳಿಯುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ|| ಜಿ.ಪರಮೇಶ್ವರ್(ಸಭಾ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಪ್ರವಾಸೋದ್ಯಮ, ಐ.ಟಿ. ಮತ್ತು ಬಿ.ಟಿ. ಸಚಿವರಿಂದ ಉತ್ತರವನ್ನು ಕೊಡಿಸಲಾಗುತ್ತದೆ.

**ಸಭಾಪತಿಯವರು:–** ಮುಂದಿನ ಶೂನ್ಯವೇಳೆಯ ಪ್ರಸ್ತಾವದಲ್ಲಿ ಇಬ್ಬರು ಸದಸ್ಯರುಗಳಾದ ಮಾನ್ಯ ಕೆ.ಟಿ.ಶ್ರೀಕಂಠೇಗೌಡರು ಮತ್ತು ಶ್ರೀ ಎಸ್.ವ್ಹಿ.ಸಂಕನೂರ್‌ರವರು ಒಂದೇ ವಿಚಾರದ ಬಗ್ಗೆ ನೋಟಿಸ್ ಕೊಟ್ಟಿದ್ದಾರೆ. ಈ ಇಬ್ಬರಲ್ಲಿ ಒಬ್ಬರು ವಿಚಾರವನ್ನು ಪ್ರಸ್ತಾಪಿಸಬಹುದು. ನಿಮ್ಮಿಬ್ಬರಲ್ಲಿ ಯಾರು ಓದಬೇಕು ಎನ್ನುವುದನ್ನು ತೀರ್ಮಾನ ಮಾಡಿ ಓದಿ.

**ಶ್ರೀ ಎಸ್.ವ್ಹಿ.ಸಂಕನೂರ(ಪದವೀಧರರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಶೂನ್ಯವೇಳೆಯ ಪ್ರಸ್ತಾವವನ್ನು ಮಂಡನೆ ಮಾಡುವುದಕ್ಕೆ ಇಲ್ಲಿಯವರೆಗೆ ನನಗೆ ಅವಕಾಶ ಸಿಕ್ಕಿಲ್ಲ, ದಯಮಾಡಿ ತಾವು ನನಗೆ ಅವಕಾಶ ಮಾಡಿಕೊಡಬೇಕು.

**ಸಭಾಪತಿಯವರು:–** ಅದನ್ನು ಮಾನ್ಯ ಶ್ರೀಕಂಠೇಗೌಡರಲ್ಲಿ ಕೇಳಿಕೊಳ್ಳಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಶಿಕ್ಷಕರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಅವರ ಹೆಸರನ್ನು ಉಲ್ಲೇಖ ಮಾಡಿ ನಾನು ಪ್ರಸ್ತಾವವನ್ನು ಓದುತ್ತೇನೆ.

**ಶ್ರೀ ಎಸ್.ವ್ಹಿ.ಸಂಕನೂರ:–** ಸನ್ಮಾನ್ಯ ಸಭಾಪತಿಯವರೇ, ಅವರು ದೊಡ್ಡವರು ಸಣ್ಣವರಿಗೆ ಅವಕಾಶ ಮಾಡಿಕೊಡಬೇಕು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಸನ್ಮಾನ್ಯ ಸಭಾಪತಿಯವರೇ, ನಾನು ಸಂಘಟನೆಗೆ ಸಂಬಂಧಪಟ್ಟಿರುವ ವ್ಯಕ್ತಿಯಾದ್ದರಿಂದ ನಾನು ಪ್ರಸ್ತಾವವನ್ನು ಓದುತ್ತೇನೆ.

**ಇ) ವಿಷಯ: ಅತಿಥಿ ಉಪನ್ಯಾಸಕರು ಫ್ರೀಡಂ ಪಾರ್ಕ್‌ನಲ್ಲಿ ಧರಣಿ–**
**ನಿರಶನ ಮಾಡುತ್ತಿರುವ ಕುರಿತು.**

– – –

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಶಿಕ್ಷಕರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಕಳೆದ 10–15 ವರ್ಷಗಳಿಂದ ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 12,500ಕ್ಕೂ ಹೆಚ್ಚು ಮಂದಿ ಅತಿಥಿ ಉಪನ್ಯಾಸಕರು 'ಫ್ರೀಡಂ ಪಾರ್ಕ್'ನಲ್ಲಿ ನಿನ್ನೆಯಿಂದ ಧರಣಿ ನಿರಶನವನ್ನು ನಡೆಸುತ್ತಿದ್ದಾರೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

1. ಸೇವಾ ಹಿರಿತನ ಹಾಗೂ ವಯೋಮಿತಿ ಅಧಾರದ ಮೇಲೆ ಅತಿಥಿ ಉಪನ್ಯಾಸಕರ ಸೇವೆಯನ್ನು ವಿಲೀನ ಮಾಡಬೇಕು.
2. ಸೇವೆಯ ವಿಲೀನ ಸಂಬಂಧ ತಜ್ಞರ ಸಮಿತಿ ರಚನೆ ಮಾಡಬೇಕು.
3. ವೇತನವನ್ನು ಮಾಸಿಕ 25,000 ರೂ.ಗಳಿಗೆ ಹೆಚ್ಚಿಸಿ ವರ್ಷದ 12 ತಿಂಗಳು ನೀಡಬೇಕು.
4. ಪ್ರತಿ ತಿಂಗಳು ವೇತನ ಪಾವತಿ ಮಾಡಬೇಕು.
5. ಮಹಿಳಾ ಅತಿಥಿ ಉಪನ್ಯಾಸಕಿಯರಿಗೆ ವೇತನ ಸಹಿತ ಮೂರು ತಿಂಗಳು ಹೆರಿಗೆ ರಜೆ ನೀಡಬೇಕು.
6. ಪಿಹೆಚ್‌ಡಿ, ನೆಟ್, ಸ್ಲೆಟ್ ಗಳಿಗೆ ಸಮಾನವಾಗಿ ಎಂ.ಫಿಲ್ ಪದವಿ ಪರಿಗಣಿಸಿ, ವೇತನ ನೀಡಬೇಕು.

ಇತ್ಯಾದಿ ಬೇಡಿಕೆಗಳನ್ನಿಟ್ಟು ಧರಣಿ ನಡೆಸುತ್ತಿದ್ದಾರೆ. ಅಲ್ಲದೇ ಇವರಿಗೆ ಕಳೆದ ಆರು ತಿಂಗಳಿಂದ ವೇತನ ನೀಡಿಲ್ಲ. ಈ ಹಿಂದೆ ಉನ್ನತ ಶಿಕ್ಷಣ ಸಚಿವರುಗಳು ಇವರ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಿ ಬಗೆಹರಿಸುವುದಾಗಿ ಭರವಸೆ ನೀಡಿದ್ದರು. ಅವರ ಯಾವುದೇ ಭರವಸೆ ಈಡೇರಿಲ್ಲ.

ಉನ್ನತ ಶಿಕ್ಷಣ ಸಚಿವರು ಅತಿಥಿ ಉಪನ್ಯಾಸಕರ ಸಂಘಟನೆಯ ಪದಾಧಿಕಾರಿಗಳನ್ನು ಶಿಕ್ಷಕ–ಪದವೀಧರರ ಜಂಟಿ ಸಭೆಯನ್ನು ಕರೆದು ಇವರ ಸಮಸ್ಯೆಗಳಿಗೆ ಪರಿಹಾರ ಕೊಡಿಸಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಡಾ॥ ಜಿ.ಪರಮೇಶ್ವರ್(ಸಭಾ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ಉತ್ತರವನ್ನು ಕೊಡಿಸಲಾಗುತ್ತದೆ.

**ಈ) ವಿಷಯ: ಮಂಗಳೂರು–ಕೇರಳಕ್ಕೆ ಸಂಪರ್ಕ ಕಲ್ಪಿಸುವ ಎನ್.ಹೆಚ್–66 ಕೇರಳದ ಗಡಿಯಾದ ಕಲಂಪ್ಪಾಡಿಯಲ್ಲಿ ಹೆದ್ದಾರಿ ಶುಲ್ಕ ವಿಧಿಸುತ್ತಿರುವ ಕುರಿತು.**

– – –

**ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು):–** ಸನ್ಮಾನ್ಯ ಸಭಾಪತಿಯವರೇ, ಮಂಗಳೂರು ಮೂಲಕ ಕೇರಳಕ್ಕೆ ಸಂಪರ್ಕ ಕಲ್ಪಿಸಿರುವ ರಾಷ್ಟ್ರೀಯ ಹೆದ್ದಾರಿ(ಎನ್.ಹೆಚ್–66)ಯಲ್ಲಿ ರಸ್ತೆ ಅಗಲೀಕರಣದ ಕಾಮಗಾರಿ ನಡೆಯುತ್ತಿದ್ದು, ಕೇರಳದ ಗಡಿಯಾದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಲಂಪ್ಪಾಡಿಯಲ್ಲಿ ಚತುಷ್ಪತ ರಸ್ತೆ ಕಾಮಗಾರಿ ಪೂರ್ಣಗೊಳ್ಳುವ ಮುನ್ನವೇ ಹೆದ್ದಾರಿ ಶುಲ್ಕ ಕೇಂದ್ರಗಳನ್ನು ಸ್ಥಾಪಿಸಿದ್ದು, ದಿಢೀರ್ ಆಗಿ ಪೊಲೀಸ್ ಕಣ್ಗಾವಲಿನಲ್ಲಿ ಶುಲ್ಕ ಸಂಗ್ರಹ ಪ್ರಾರಂಭಿಸಲಾಗಿದೆ. ಚತುಷ್ಪತ ನಿರ್ಮಾಣದ ಕೆಲಸ ಇನ್ನೂ ಪೂರ್ಣಗೊಂಡಿರುವುದಿಲ್ಲ. ನಗರದ ಪಂಪ್‌ವೆಲ್ ಸರ್ಕಲ್ ಹಾಗೂ ತೊಕ್ಕಡ್ಯ ಜಂಕ್ಷನ್‌ನಲ್ಲಿ ನಡೆಯುತ್ತಿರುವ ಮೇಲ್ಸೇತುವೆ ಕಾಮಗಾರಿಯಿಂದಾಗಿ ದಿನನಿತ್ಯ ಪ್ರಯಾಣಿಕರು ಓಡಾಡಲು ತೊಂದರೆ ಅನುಭವಿಸುತ್ತಿದ್ದಾರೆ.

ರಸ್ತೆ ಶುಲ್ಕ ಸಂಗ್ರಹ ಮಾಡಲು ರಾಷ್ಟ್ರೀಯ ಹೆದ್ದಾರಿ ಕಾನೂನಿನಂತೆ ಅಗತ್ಯವಾಗಿ ನಿರ್ಮಿಸಬೇಕಾಗಿರುವ ಸರ್ವಿಸ್ ರಸ್ತೆಗಳ ಕಾಮಗಾರಿ ಇನ್ನೂ ಆರಂಭಿಸಿರುವುದಿಲ್ಲ, ಇನ್ನೂ ವಿಚಿತ್ರವೆಂದರೆ ಶುಲ್ಕ ಸಂಗ್ರಹ ಕೇಂದ್ರಗಳಲ್ಲಿ ರಸ್ತೆ ಸಾರಿಗೆ ಸಂಸ್ಥೆಯವರು ಶುಲ್ಕ ಕೊಡುವುದನ್ನು ನೆಪವಾಗಿಟ್ಟುಕೊಂಡು ಬಸ್ ಪ್ರಯಾಣಿಕರಿಂದ 2 ರೂ.ಗಳನ್ನು ಸಂಗ್ರಹಿಸಲು ಪ್ರಾರಂಭಿಸಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಗುರಿಯಾಗಿದೆ.

ಇದರಿಂದಾಗಿ ಸಾರ್ವಜನಿಕರು ಆತಂಕಗೊಂಡಿದ್ದು ರಾಷ್ಟ್ರೀಯ ಹೆದ್ದಾರಿ ಅಗಲೀಕರಣ ಕಾಮಗಾರಿ ಪೂರ್ಣಗೊಳ್ಳುವ ಮುನ್ನವೇ ಸ್ಥಳೀಯ ಗುತ್ತಿಗೆದಾರರಿಗೆ ಪೊಲೀಸ್ ಕಾವಲಿನಲ್ಲಿ ಶುಲ್ಕ ಸಂಗ್ರಹ ಮಾಡಲು ಅವಕಾಶ ನೀಡಿರುವುದು ಹಾಗೂ ರಸ್ತೆ ಸಾರಿಗೆ ಸಂಸ್ಥೆಯವರು ಪ್ರತಿ ಪ್ರಯಾಣಿಕರಿಂದ 2 ರೂ. ಹೆಚ್ಚುವರಿ ಸಂಗ್ರಹಿಸುತ್ತಿರುವುದು ಕಾನೂನು ಬಾಹಿರವಾಗಿದ್ದು ಮಾನ್ಯ ರಸ್ತೆ ಸಾರಿಗೆ ಸಚಿವರು ಮತ್ತು ಲೋಕೋಪಯೋಗಿ ಸಚಿವರು ಗಮನಹರಿಸಿ ಸಾರ್ವಜನಿಕರಿಗೆ ನ್ಯಾಯ ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಡಾ॥ಜಿ.ಪರಮೇಶ್ವರ್(ಸಭಾ ನಾಯಕರು)॥–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಲೋಕೋಪಯೋಗಿ ಸಚಿವರಿಂದ ಉತ್ತರವನ್ನು ಕೊಡಿಸಲಾಗುತ್ತದೆ.

**ಉ) ವಿಷಯ: ಗದಗ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ಬಟ್ಟೂರು ಗ್ರಾಮದ ಶಿವಪ್ಪ ದುಂಡಪ್ಪ ಭದ್ರಪೂರರವರು ಪೊಲೀಸ್‌ರ ವರ್ತನೆಯಿಂದ ಅಸ್ವಸ್ಥಗೊಂಡು ಮೃತಗೊಂಡಿರುವ ಬಗ್ಗೆ**

– – –

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪ್ರದೀಪ ಶೆಟ್ಟರ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಗದಗ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ಬಟ್ಟೂರ ಗ್ರಾಮದ ಶಿವಪ್ಪ ದುಂಡಪ್ಪ ಭದ್ರಾಪೂರ ಎಂಬ ಸುಮಾರು 21 ವರ್ಷದ ವ್ಯಕ್ತಿ ದಿನಂಕಃ04.02.2017ರ ಶನಿವಾರ ಮಧ್ಯರಾತ್ರಿ ಲಾರಿಯಲ್ಲಿ ಮರಳು ತುಂಬಿಕೊಂಡು ಹುಬ್ಬಳ್ಳಿ ಕಡೆಗೆ ಹೊರಟಿದ್ದರು. ಈ ಸಂದರ್ಭದಲ್ಲಿ ಧಾರವಾಡ ಜಿಲ್ಲೆಯ ಸಂಶಿ ಬಳಿ ಲಾರಿ ತಡೆದ ಲಕ್ಷ್ಮೇಶ್ವರ ಪೊಲೀಸರು ಆತನಿಗೆ ಥಳಿಸಿದ್ದಾರೆ. ಅಸ್ವಸ್ಥಗೊಂಡ ಶಿವಪ್ಪನ ಕುಟುಂಬದವರು ಆಸ್ಪತ್ರೆಗೆ ಕರೆದೊಯ್ಯುವಾಗ ದಾರಿಯಲ್ಲಿಯೇ ಮೃತಪಟ್ಟಿದ್ದಾನೆ. ಇದರಿಂದ ರೊಚ್ಚಿಗೆದ್ದ ಕುಟುಂಬದವರು ಮತ್ತು ಗ್ರಾಮಸ್ಥರು ಲಕ್ಷ್ಮೇಶ್ವರ ಪೊಲೀಸ್ ಠಾಣೆಯನ್ನು ಧ್ವಂಸಗೊಳಿಸಿ ಠಾಣೆಯ ವಾಹನಗಳಿಗೆ ಬೆಂಕಿ ಹಚ್ಚಿದ್ದು, ಠಾಣೆಯಲ್ಲಿದ್ದ ಸಿಬ್ಬಂದಿಗಳು ಓಡಿ ಹೋಗಿದ್ದಾರೆ. ಪ್ರಕರಣವನ್ನು ನಿಭಾಯಿಸುವಲ್ಲಿ ಪೊಲೀಸರ ವೈಫಲ್ಯವು ಎದ್ದು ಕಾಣುತ್ತಿದ್ದು, ಗಲಭೆಯನ್ನು ನಿಯಂತ್ರಣಕ್ಕೆ ತರುವಲ್ಲಿ ಪೊಲೀಸ್ ಇಲಾಖೆ ವಿಫಲವಾಗಿದೆ. ಈ ವ್ಯಕ್ತಿಯ ಸಾವು ಸಂಶಯಾಸ್ಪದವಾಗಿದ್ದು, ಇಡೀ ರಾಜ್ಯವೇ ಬೆಚ್ಚಿ ಬೀಳಿಸುವ ಪ್ರಕರಣವಾಗಿದೆ. ಕಾನೂನು ಸುವ್ಯವಸ್ಥೆಯ ವಿಫಲತೆಯು ಇಲ್ಲಿ ಎದ್ದು ಕಾಣುತ್ತಿದ್ದು, ಇದೊಂದು ಸಾರ್ವಜನಿಕ ಮಹತ್ವದ ಗಂಭೀರ ವಿಷಯವಾಗಿರುವುದರಿಂದ ಇದಕ್ಕೆ ಸೂಕ್ತ ನ್ಯಾಯ ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಡಾ|| ಜಿ.ಪರಮೇಶ್ವರ್(ಗೃಹ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಇದೊಂದು ಬಹಳ ಗಂಭೀರವಾಗಿರುವ ವಿಷಯವಾಗಿದೆ. ಮೇಲ್ನೋಟಕ್ಕೆ ಒಂದು ಸಾವಾಗಿದೆ ಮತ್ತು ಪೊಲೀಸ್‌ನವರ ವೈಫಲ್ಯ ಎದ್ದು ಕಾಣಿಸುತ್ತಿದೆ. ಕಳೆದ ಮೂರ್‍ನಾಲ್ಕು ವರ್ಷಗಳಿಂದ ಇತ್ತೀಚೆಗೆ ಇಡೀ ರಾಜ್ಯದಲ್ಲಿ ಅಲ್ಲಲ್ಲಿ ಇಂತಹ ಘಟನೆಗಳು ಕಂಡು ಬರುತ್ತಿವೆ. ಮರಳು ಸಾಗಾಣಿಕೆ ಎನ್ನುವುದು ಒಂದು ದೊಡ್ಡ ಪ್ರಶ್ನೆಯಾಗಿ ಪರಿಣಮಿಸಿದೆ. ಒಂದು ಲಾರಿಗೆ ಒಂದು ಲೈಸನ್ಸ್ ಕೊಟ್ಟರೆ ಅಥವಾ ಒಂದು ಬ್ಲಾಕ್ ನಿಗದಿ ಮಾಡಿ ಅಲ್ಲಿಂದ ಮರಳನ್ನು ತೆಗೆದುಕೊಂಡು ಹೋಗಬಹುದು ಎಂದು ಅಧಿಕೃತವಾಗಿ ಪರವಾನಗಿಯನ್ನು ಕೊಟ್ಟರೆ, ಹತ್ತಾರು ಲಾರಿಗಳು ಅನಧಿಕೃತವಾಗಿ ಮರಳನ್ನು ಸಾಗಾಣಿಕೆ ಮಾಡುತ್ತವೆ. ಈ ದಂಧೆಯಲ್ಲಿ ಪೊಲೀಸ್‌ನವರು, ಇಂಜಿನಿಯರ್‌ಗಳು, ಕಂದಾಯ ಇಲಾಖೆಯವರು ಸೇರಿಕೊಂಡಿದ್ದಾರೆ. ಒಂದಲ್ಲ ಒಂದು ರೀತಿಯಲ್ಲಿ ಅವರುಗಳ ಮೇಲೆ ದೂರುಗಳು ಬರುತ್ತಿವೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಉಲ್ಲೇಖ ಮಾಡಿರುವ ಘಟನೆ ಒಂದು ಆಕಸ್ಮಿಕ ಘಟನೆಯಾಗಿದೆ. ಈ ಪ್ರಕರಣದಲ್ಲಿ ಅನಧಿಕೃತವಾಗಿ ಲಾರಿಯಲ್ಲಿ ಮರಳನ್ನು ಸಾಗಾಣಿಕೆ ಮಾಡಲಾಗುತ್ತಿತ್ತು. ಸಂಬಂಧಪಟ್ಟ ಸಬ್ ಇನ್ಸ್‌ಪೆಕ್ಟರ್ ಹೋಗಿ ರಾತ್ರಿ 1.30 ಗಂಟೆ ಈ ಲಾರಿಯನ್ನು ತಡೆಯುತ್ತಾರೆ. ಆದರೆ,

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಆ ಲಾರಿಯ ಡ್ರೈವರ್ ವಾಹನವನ್ನು ನಿಲ್ಲಿಸುವುದಿಲ್ಲ. ಸಬ್ ಇನ್ಸ್‌ಪೆಕ್ಟರ್ ಆ ವಾಹನವನ್ನು ಬೆನ್ನತ್ತಿ ಹೋಗಿ ನಿಲ್ಲಿಸುತ್ತಾರೆ. ಆ ಲಾರಿಯನ್ನು ನಿಲ್ಲಿಸಿ ಆ ಡ್ರೈವರ್‌ಗೆ ಒಂದೆರಡು ಏಟು ಹೊಡೆದಿರುತ್ತಾರೆ. ತಕ್ಷಣ ಆ ಡ್ರೈವರ್ ಲಾರಿ ಇಳಿದು ಓಡಿ ಹೋಗಿದ್ದಾನೆ. ನಂತರ ಬೆಳಗಿನ ಜಾವ 6.30 ಗಂಟೆಗೆ ಆತ ಮೃತಪಟ್ಟಿದ್ದಾನೆ ಎನ್ನುವ ಮಾಹಿತಿ ನಮಗೆ ದೊರೆಯಿತು. ಆತನ ಕುಟುಂಬದವರು ಪೊಲೀಸ್ ಠಾಣೆಯ ಮುಂದೆ ಆತನ ಶವವನ್ನು ತಂದಿಟ್ಟು ಗಲಾಟೆ ಮಾಡುವುದಕ್ಕೆ ಪ್ರಾರಂಭ ಮಾಡಿದಾಗಲೇ ನಮಗೆ ಈ ವಿಷಯ ಗೊತ್ತಾಯಿತು. ಆ ಮರಳನ್ನು ಸಾಗಿಸುತ್ತಿದ್ದವರು ಮತ್ತು ಅದರಲ್ಲಿ ಭಾಗಿಗಳಾಗಿದ್ದವರು ಎಲ್ಲರೂ ಸೇರಿ ಪೊಲೀಸ್ ಠಾಣೆಗೆ ನುಗ್ಗಿ ಪೊಲೀಸ್ ಜೀಪ್‌ಗೆ ಬೆಂಕಿ ಹಚ್ಚಿ ಅಲ್ಲಿದ್ದ ಪೊಲೀಸ್‌ನವರಿಗೆ ಹೊಡೆದಿದ್ದಾರೆ. ಅನಂತರ ಅಲ್ಲಿದ್ದ ಪೊಲೀಸ್‌ನವರೆಲ್ಲ ಓಡಿ ಹೋಗಿದ್ದಾರೆ. ನಂತರ ಪೊಲೀಸ್‌ಠಾಣೆಗೆ ಬೆಂಕಿ ಹಚ್ಚಿದ್ದಾರೆ. ನಮ್ಮ ರಾಜ್ಯದಲ್ಲಿ ಇಷ್ಟರ ಮಟ್ಟಿಗೆ ಅರಾಜುಕತೆ ಇದೆ ಎನ್ನುವುದನ್ನು ನಾವು ಹೇಗೆ ಒಪ್ಪಿಕೊಳ್ಳುವುದು? ಪೊಲೀಸ್‌ನವರನ್ನು ಹೊಡೆಯುವುದು, ಪೊಲೀಸ್ ಠಾಣೆಗೆ ಬೆಂಕಿ ಹಚ್ಚುವಂತಹ ರೀತಿಯಲ್ಲಿ ಇವತ್ತು ಮರಳಿನ ಮಾಫಿಯಾ ಬೆಳೆಯುತ್ತಿರುವುದನ್ನು ನಾವು ನೋಡಿಕೊಂಡು ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ.

**(86) 09-02-2017 SK-RN 1.20**

**ಶ್ರೀ ಪ್ರದೀಪ್ ಶೆಟ್ಟರ್:–** ಮಾನ್ಯ ಸಭಾಪತಿಯವರೇ, ಪೊಲೀಸ್ ಇಲಾಖೆಯವರು ಒಂದು ಲಾರಿಗೆ ತಿಂಗಳಿಗೆ ಸುಮಾರು50 ಸಾವಿರ ರೂಪಾಯಿಗಳನ್ನು ಮಾಮುಲಾಗಿ ಲಂಚವನ್ನು ಪಡೆಯುತ್ತಾರೆ.

**ಸಭಾಪತಿಯವರು:–** ಈ ಘಟನೆ ಬೇರೆ ಅದು ಬೇರೆ

**ಶ್ರೀ ಪ್ರದೀಪ್ ಶೆಟ್ಟರ್:–** ಸುಮಾರು 100ಬಂದರು ಲಾರಿಗಳುಹುಬ್ಬಳ್ಳಿಗೆ ಬರುತ್ತವೆ. ಜಿಲ್ಲಾಧಿಕಾರಿಗಳ ಅನುಮತಿ ಪಡೆದುಕೊಂಡು 8,000 ರೂಪಾಯಿಗಳನ್ನು ಕೊಟ್ಟು ಮರಳನ್ನು ತೆಗೆದುಕೊಳ್ಳುತ್ತಾರೆ. ಹುಬ್ಬಳ್ಳಿಯ ಸುತ್ತಮುತ್ತಲ್ಲೂ ನಗರಗಳಿಗೆ 32,000 ರೂಪಾಯಿಗಳಿಗೆ ಮಾರುತ್ತಾರೆ. ಇದೊಂದು ದೊಡ್ಡ ಹಗರಣವಾಗಿದೆ. ಇವತ್ತು 'ಮರಳು ಮಾಫಿಯಾ' ಏನು ಇದೆಯಲ್ಲ ಇದೊಂದು ದೊಡ್ಡ ಹಗರಣವಾಗಿದೆ. ಇದನ್ನು ಚರ್ಚೆ ಮಾಡಿಬಿಡಿ.

**(ಗೊಂದಲ)**

**ಶ್ರೀ ಶರಣಪ್ಪ ಮಟ್ಟೂರ:–** ಗೃಹ ಸಚಿವರು ಸ್ಪಷ್ಟವಾಗಿ ಹೇಳುತ್ತಿದ್ದಾರೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಸಚಿವರು ಹೇಳುತ್ತಾರೆ. ಶ್ರೀ ಶರಣಪ್ಪ ಮಟ್ಟೂರ್‌ರವರೇ ಸಚಿವರು ಹೇಳುತ್ತಾರೆ ನೀವು ಹೇಳಬಾರದು.

**ಡಾ॥ ಜಿ ಪರಮೇಶ್ವರ್ (ಗೃಹ ಸಚಿವರು):–** ಮಾನ್ಯ ಸಭಾಪತಿಯವರೇ ಇದು ಬಹಳ ಗಂಭೀರವಾಗಿದೆ. ಪೊಲೀಸ್‌ನವರು ಹಣ ಕೇಳುತ್ತಾರೆ. ತಹಶೀಲ್ದಾರ್‌ರು, ರೆವಿನ್ಯೂ ಅಧಿಕಾರಿಗಳು, ಆರ್‌ಟಿಓ ಮತ್ತು ಪಿಡಬ್ಲ್ಯೂಡಿ ಇಲಾಖೆಯವರು ಮತ್ತು ಎಲ್ಲಾ ಕಡೆಗಳಲ್ಲಿ ಹಣ ಕೇಳುತ್ತಾರೆ. ಇದು ಯಾವುದು ಈ ರೀತಿ ಇಲ್ಲ ಎಂದು ಹೇಳುವುದಕ್ಕೆ ಹೋಗುವುದಿಲ್ಲ ಮತ್ತು ಮುಚ್ಚಿಡುವುದಕ್ಕೆ ಹೋಗುವುದಿಲ್ಲ. ಈ ಘಟನೆಯಲ್ಲಿ ಸಬ್‌ಇನ್ಸ್‌ಪೆಕ್ಟರ್‌ರವರು ಸುಮಾರು 40,000 ರೂಪಾಯಿಗಳನ್ನು ಲಂಚವನ್ನು ಕೇಳಿದ್ದಾರೆಂಬ ಮಾಹಿತಿ ಬಂದಿದೆ. ನಾವು ಅವರನ್ನು ತಕ್ಷಣವೇ ಅಮಾನತ್ತು ಮಾಡಿದ್ದೇವೆ. ಸಬ್‌ಇನ್ಸ್‌ಪೆಕ್ಟರ್‌ರವರಾದ ಶ್ರೀ ದಯಾನಂದ್ ಮತ್ತು ಡ್ರೈವರ್ ಎ.ಎಸ್ ಪೂಜಾರ್‌ವರನ್ನು ತತ್‌ಕ್ಷಣವೇ ಅಮಾನತ್ತು ಮಾಡಿದ್ದೇವೆ. ನಾವು ಅವರನ್ನು ಡಿಸ್‌ಮಿಸ್ ಮಾಡುವವರೆಗೂ ಕೂಡ ಬಿಡುವುದಿಲ್ಲ. ಆದರೆ ಅದು prove ಆಗಬೇಕು.

**(ಗೊಂದಲ)**

**ಸಭಾಪತಿಯವರು:–** ಅವರು ಹೇಳಲಿ ಬಿಡಿ. ಇದು ಯಾವ ತರಹವಿದು. ಇದು ಏನು ಕಥೆ. ಅವರು statement ಮಾಡುತ್ತಿದ್ದಾರೆ. ಬೇಡ ಬಿಟ್ಟು ಬಿಡಿ. ಅವರು ಹೇಳುವುದೇ ಬೇಡವೇ?

**ಶ್ರೀ ಎಸ್.ವಿ. ಸಂಕನೂರ:–** ಯಾರನ್ನು suspend ಮಾಡಬೇಕಾಗಿತ್ತೋ ಅವರನ್ನೇ ಮಾಡಿಲ್ಲ.

**ಸಭಾಪತಿಯವರು:–**ಹೇಳುತ್ತಾರೆ. ಆಮೇಲೆ ಹೇಳಿ. ಮಧ್ಯೆದಲ್ಲಿ ಬಾಯಿ ಹಾಕುತ್ತೀರಿ ಇದು ಒಳ್ಳೆಯ ಪದ್ಧತಿ ಅಲ್ಲ. Allow him to speak.

**ಡಾ॥ ಜಿ ಪರಮೇಶ್ವರ್ (ಗೃಹ ಸಚಿವರು):–** ಮಾನ್ಯ ಸಭಾಪತಿಯವರೇ, ನಾನು ಹೇಳುವುದಕ್ಕೆ ಅವಕಾಶ ಮಾಡಿಕೊಟ್ಟರೆ ಕೊನೆಗೆ ನಿಮಗೆ ಉತ್ತರ ಸಿಗುತ್ತದೆ. ಇದನ್ನು ಕೂಡ ನಾವು ಬಹಳ ಗಂಭೀರವಾಗಿ ತೆಗೆದುಕೊಂಡಿದ್ದೇವೆ. ಜನರು ಪೊಲೀಸ್ ಸ್ಟೇಷನ್‌ಗೆ ಹೋಗಿ ಬೆಂಕಿ ಹಚ್ಚುತ್ತಾರೆ ಎಂದರೆ ಅಲ್ಲಿ fire arms ಇತ್ತು. Fortunately, ಬಂದೂಕಗಳನ್ನು ಎತ್ತಿಕೊಂಡು ಹೋಗಲಿಲ್ಲ. ಅವರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಂದು ವೇಳೆ ಆ ಬಂದೂಕುಗಳನ್ನು ಎತ್ತಿಕೊಂಡು ಹೋಗಿದಿದ್ದರೆ ಎಷ್ಟು ಅನಾಹುತಗಳು ಆಗಬಹುದಾಗಿತ್ತಲ್ಲವೇ? ಸಮಾಜವನ್ನು ರಕ್ಷಣೆ ಮಾಡುವುದಕ್ಕೆ ಪೊಲೀಸ್ ಇಲಾಖೆ ಮತ್ತು ಗೃಹ ಇಲಾಖೆಯಿದೆ ಎಂದು ಹೇಳಿದರೆ ಪೊಲೀಸ್ ಸ್ಟೇಷನ್‌ಗೆ ಹೋಗಿ ಜನರು ಬೆಂಕಿ ಹಚ್ಚುವ ಪರಿಸ್ಥಿತಿಯ ಮಟ್ಟಕ್ಕೆ ಬಂದು ಬಿಟ್ಟರೆ ಸಮಾಜದಲ್ಲಿ ತುಂಬಾ ಕಷ್ಟವಾಗುತ್ತದೆ. ಮಾನ್ಯ ಸಭಾಪತಿಯವರೇ, ನಾವು ಈ ಒಂದು ಪ್ರಕರಣವನ್ನು ಸಿಐಡಿಗೆ ವಹಿಸಿದ್ದೇವೆ. ಸಿಐಡಿಯಿಂದ ತನಿಖೆಯಾದ ತಕ್ಷಣವೇ ಯಾರು ತಪ್ಪಿತಸ್ಥರು ಇದ್ದಾರೆ ಮತ್ತು ತಾವು ಹೇಳಿದ ಹಾಗೆ ಯಾರು ಲಂಚವನ್ನು ತೆಗೆದುಕೊಳ್ಳುತ್ತಿದ್ದಾರೆ, ಯಾರು ಅನಧಿಕೃತವಾಗಿ ಪರವಾನಿಗೆ ಇಲ್ಲದೇ ಲಾರಿಯನ್ನು ನಡೆಸುತ್ತಿರುವ ಲಾರಿಯ ಮಾಲೀಕ ಎನ್ನುವುದನ್ನು follow ಮಾಡಿಕೊಂಡು ಹೋಗುತ್ತಿದ್ದಾನೆ. ಅವನು ಸಬ್‌ಇನ್ಸ್‌ಪೆಕ್ಟರ್‌ಗೆ ಹೇಳಿದ್ದಾನೆ ನಾನು ನಿಮಗೆ ಬೆಳಗ್ಗೆ ಹಣವನ್ನು ಕಳುಹಿಸಿಕೊಡುತ್ತೇನೆ. ನಿಮಗೆ ಏನು ತೊಂದರೆಯಿಲ್ಲ ಬಿಟ್ಟುಬಿಡಿ ಎಂದು ಮನವಿ ಮಾಡಿದ್ದಾನೆ. ಇದೆಲ್ಲಾ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ. ತಾವೇ ಹೇಳಿದ ಹಾಗೆ ಹುಬ್ಬಳ್ಳಿಯಲ್ಲಿ ನೂರಾರು ವಾಹನಗಳು ಅನಧಿಕೃತವಾಗಿ ಸಂಚರಿಸುತ್ತವೆ.

ಮಾನ್ಯ ಸಭಾಪತಿಯವರೇ, ಇದು ಬಹಳ ದೊಡ್ಡ ದಂಧೆಯಾಗಿ ಬಿಟ್ಟಿದೆ. ನಾವು ಈ ಪ್ರಕರಣವನ್ನು ಸಿಐಡಿಗೆ ವಹಿಸಿದ್ದೇವೆ. ತನಿಖೆಯಾಗಿ ಸಂಪೂರ್ಣ ವರದಿ ಬಂದಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಸಬ್‌ಇನ್ಸ್‌ಪೆಕ್ಟರ್‌ರವರಾದ ಶ್ರೀ ದಯಾನಂದ್ ಮತ್ತು ಡ್ರೈವರ್ ಎ.ಎಸ್ ಪೂಜಾರ್‌ವರ involvement prove ಆದರೆ ಅವರಿಬ್ಬರನ್ನು ಕೂಡ ನಾವು ಕೆಲಸದಿಂದ ನಿವೃತ್ತಿ ಅಥವಾ ಡಿಸ್‌ಮಿಸ್ ಮಾಡುವಂತಹ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

**(ಗೊಂದಲ)**

**ಸಭಾಪತಿಯವರು:–** ಚರ್ಚೆಯಿಲ್ಲ. ಇದು ಶೂನ್ಯ ವೇಳೆ ವರದಿಯನ್ನು ಒಪ್ಪಿಸುವುದು. ಶ್ರೀ ಕೆ. ಅಬ್ದುಲ್ ಜಬ್ಬಾರ್ ರವರು ತಮ್ಮ ವರದಿಯನ್ನು ಒಪ್ಪಿಸುವುದು. ಪ್ರಶ್ನೆ ಇಲ್ಲ. ಕುಳಿತುಕೊಳ್ಳಿ.

## 4. ವರದಿಯನ್ನೊಪ್ಪಿಸುವುದು

**ಶ್ರೀ ಕೆ. ಅಬ್ದುಲ್ ಜಬ್ಬಾರ್:–** ಸನ್ಮಾನ್ಯ ಸಭಾಪತಿಯವರೇ, ಸದಸ್ಯರು, ಕರ್ನಾಟಕ ವಿಧಾನ ಮಂಡಲದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿ ಸದಸ್ಯನಾದ ನಾನು2016–

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

17ನೇ ಕರ್ನಾಟಕ ವಿಧಾನ ಮಂಡಲದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಯ ಆರನೇಯ ವರದಿಯನ್ನು ಒಪ್ಪಿಸುತ್ತೇನೆ.

**ಸಭಾಪತಿಯವರು:–** ಒಪ್ಪಿಸಲಾಯಿತು.

## 5. ಗಮನ ಸೆಳೆಯುವ ಸೂಚನೆಗಳು

ಅ)**ವಿಷಯ:** ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಎನ್.ಆರ್.ಬಿ.ಸಿ ಡಿಸ್ಟ್ರಿಬ್ಯೂಟರಿಗಳಿಂದ ಅಸಮರ್ಪಕ ನೀರು ಸರಬರಾಜಿನ ತೊಂದರೆ ನಿವಾರಿಸಲು ಬ್ಯಾಲೆನ್ಸಿ ರಿಸರ್ವಾಯರ್ ನಿರ್ಮಿಸಲು ಹಾಗೂ ಕಾಲುವೆಗಳ ಆಧುನೀಕರಣದ ಬಗ್ಗೆ.

–

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಎನ್.ಆರ್.ಬಿ.ಸಿ ಡಿಸ್ಟ್ರಿಬ್ಯೂಟರಿಗಳಿಂದ ಅಸಮರ್ಪಕ ನೀರು ಸರಬರಾಜಿನ ತೊಂದರೆ ನಿವಾರಿಸಲು ಬ್ಯಾಲೆನ್ಸಿ ರಿಸರ್ವಾಯರ್ ನಿರ್ಮಿಸಲು ಹಾಗೂ ಕಾಲುವೆಗಳ ಆಧುನೀಕರಣದ ಬಗ್ಗೆ ಕ್ರಮ ಕೈಗೊಳ್ಳುವಂತೆ ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರ ಗಮನವನ್ನು ಸೆಳೆಯುತ್ತೇನೆ.

**ಶ್ರೀ ಎಂ.ಬಿ. ಪಾಟೀಲ್(ಜಲ ಸಂಪನ್ಮೂಲ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ನಾನು ಸುಧೀರ್ಘವಾದಂತಹ ಉತ್ತರವನ್ನು ಕೊಟ್ಟಿದ್ದೇನೆ. ಸಮರ್ಪಕವಾಗಿ ನೀರು ಪೂರೈಕೆಯಾಗದೇ ಇರುವುದಕ್ಕೆ ಕಾರಣವೇನು ಎನ್ನುವುದಕ್ಕೆ ಉತ್ತರವನ್ನು ಕೊಟ್ಟಿದ್ದೇನೆ. ಆಮೇಲೆ ನಾವು ಏನೇನು ಕ್ರಮಗಳನ್ನು ಕೈಗೊಂಡಿದ್ದೇವೆ.

**ಸಭಾಪತಿಯವರು:–** ನಿಮ್ಮ ಉತ್ತರದ ಪ್ರತಿಗಳನ್ನು ಕೊಡಲಿಲ್ಲ. ಉತ್ತರದ ಪ್ರತಿಗಳು ಬಂದಿದೆಯೇ? ಮೊದಲನೇಯದಾಗಿ ಅವರಿಗೆ ಕೊಡಿ.

**ಶ್ರೀ ಎಂ.ಬಿ. ಪಾಟೀಲ್(ಜಲ ಸಂಪನ್ಮೂಲ ಸಚಿವರು):–**ಸನ್ಮಾನ್ಯ ಸಭಾಪತಿಯವರೇ, ಬಹಳ detailed ಇದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಎಷ್ಟು ಬೇಕು ಅಷ್ಟನ್ನು ಓದಿ. Important pointsನ್ನಾದರೂ ಓದಿ ಬಿಡಿ

**ಶ್ರೀ ಎಂ.ಬಿ. ಪಾಟೀಲ್(ಜಲ ಸಂಪನ್ಮೂಲ ಸಚಿವರು):–**ಅವರು ಓದಿದ್ದರೆ, ಅವರು ಪಾಪ ಕೇಳಿಬಿಡುತ್ತಿದ್ದರು.

**ಸಭಾಪತಿಯವರು:–** ಅವರು ಓದಿಲ್ಲ. ಅವರಿಗೆ ಸ್ವಲ್ಪ ಸಮಯಬೇಕು. ನೀವೇ ಓದಿಬಿಡಿ.

**ಶ್ರೀ ಎಂ.ಬಿ. ಪಾಟೀಲ್(ಜಲ ಸಂಪನ್ಮೂಲ ಸಚಿವರು):–** ಸನ್ಮಾನ್ಯ ಸಭಾಪತಿಯವರೇ,

(ಸಚಿವರ ಹೇಳಿಕೆಯನ್ನು ಲಗತ್ತಿಸಲಾಗಿದೆ)

**(87) 9.2.2017 1.30 ಪಿಕೆ:ಆರ್ಎನ್**

**ಶ್ರೀ ಬಸವರಾಜ ಪಾಟೀಲ್ ಇಟಗಿ:–**ಮಾನ್ಯ ಸಭಾಪತಿಗಳೆ, ಮಾನ್ಯ ಸಚಿವರು ಸರಿಯಾಗಿ ಉತ್ತರ ಕೊಟ್ಟಿದ್ದಾರೆ. ನಾನು ಕೆಲವು ಅಂಶಗಳ ಬಗ್ಗೆ ಅವರ ಗಮನಸೆಳೆಯಬಯಸುತ್ತೇನೆ. ಎನ್ಆರ್ಬಿಸಿ ಕಾಲುವೆಗಳಾಗಿ ಸುಮಾರು 15 ವರ್ಷಗಳಾಯಿತು. 0–18 ಡಿಸ್ಟ್ರಿಬ್ಯೂಟರಿಸ್ ಆಗಿ 15 ವರ್ಷವಾಯಿತು. ಇದರಲ್ಲಿ 15, 16, 17 ಮತ್ತು 18 ಡಿಸ್ಟ್ರಿಬ್ಯೂಟರಿ ವ್ಯಾಪ್ತಿಗೆ ಸುಮಾರು 63805 ಹೆಕ್ಟೇರ್ ಬರುತ್ತದೆ. ಉಳಿದ ಬೇರೆ ಡಿಸ್ಟ್ರಿಬ್ಯೂಟರಿಗಳ ವ್ಯಾಪ್ತಿಗೆ 12 ಸಾವಿರ ಹೆಕ್ಟೇರ್ ಬರುತ್ತದೆ. 4 ಡಿಸ್ಟ್ರಿಬ್ಯೂಟರಿಗಳಲ್ಲಿ ಸುಮಾರು ಶೇಕಡ 70 ಭಾಗ ಅಚ್ಚುಕಟ್ಟು ಪ್ರದೇಶ ಇದೆ. ನಾನೂ ಕೂಡ ಆ ಭಾಗದಿಂದ ಬರುತ್ತೇನೆ. ನಮ್ಮ ಊರಿಗೆ ಕಾಲುವೆ ನಿರ್ಮಾಣವಾಗಿ 15 ವಷಗಳಾಗಿವೆ. ಇವತ್ತಿನವರೆಗೂ ಅಲ್ಲಿರುವ ಹೊಲಗಳಿಗೆ ಒಂದು ತೊಟ್ಟು ನೀರು ಬಂದಿಲ್ಲ, ಒಂದು ಹನಿ ನೀರು ಕೂಡ ಹರಿದಿಲ್ಲ. ಇಲ್ಲೇನಾಗುತ್ತಿದೆ ಎಂದರೆ, ಮೊದಲನೆದಾಗಿ ಗೇಟ್ಗಳಿಲ್ಲ. ಗೇಟ್ ಇಲ್ಲದೇ ಇರುವುದಕ್ಕೆ ನೀರು ಲೋಪ ಆಗುವ ಕೆಲಸವಾಗುತ್ತದೆ. ನಮ್ಮ ಬೀದರ್ ಜಿಲ್ಲೆಯಲ್ಲಿರುವ ಅಪ್ಪರ್ಮುಲ್ಲಾಮಾರಿ, ಲೋಯರ್ ಮುಲ್ಲಾಮಾರಿ ಕಾರಂಜಗಳ ನದಿ ಏನಿದೆ ಅದರಷ್ಟು ವ್ಯಾಪ್ತಿಯನ್ನು ನಮ್ಮ ನಾಲೆಗಳೇ ಹೊಂದಿವೆ. ಮದುರ್ಕಲ್ ನಾಲೆ ಮತ್ತು ಬೇರೆ ಇತರ ನಾಲೆಗಳಿಗೆ ನೀರು ಬಿಟ್ಟಾಗ ನದಿಯಲ್ಲಿ ಹೋಗುವಷ್ಟು ನೀರು ಈ ನಾಲೆಗಳಲ್ಲೇ ಹರಿದು ಹೋಗುತ್ತದೆ. ಇದಕ್ಕೆ ಕಾರಣ ಎಂದರೆ ಇದುವರೆಗೂ ಗೇಟ್ ಅಳವಡಿಸದೇ ಇರುವುದು. ಮಾನ್ಯ ಸಚಿವರಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ. ಮುಂದೆ ಏನೇ ಯೋಜನೆಗಳನ್ನು ಕೈಗೆತ್ತಿಕೊಂಡಾಗ ಕಾಲುವೆಗಳ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜೊತೆಯೇ ಗೇಟ್‌ಗಳ ನಿರ್ಮಾಣ ಮಾಡುವಂತಹ ಕೆಲಸ ಮಾಡಬೇಕು. ಇಲ್ಲದೇ ಇದ್ದರೆ ಸಮರ್ಪಕವಾಗಿ ನಿರ್ದಿಷ್ಟ ಅಚ್ಚುಕಟ್ಟಿಗೆ ನೀರು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಮಾನ್ಯ ಸಚಿವರು ವಾರಾಬಂದಿ ಸಿಸ್ಟಮ್ ಬಗ್ಗೆ ಹೇಳಿದರು. ನಮ್ಮ ಅಧಿಕಾರಿಗಳಿಗೆ ಯಾವರೀತಿ ಕರ್ತವ್ಯ ನಿರ್ವಹಿಸಬೇಕು ಎನ್ನುವುದು ಗೊತ್ತಾಗುತ್ತದೆಯೋ ಇಲ್ಲವೋ ನನಗೂ ಗೊತ್ತಿಲ್ಲ. 16ನೇ ಡಿಸ್ಟ್ರಿಬ್ಯೂಟರಿಯನ್ನು ಉದಾಹರಣೆಯಾಗಿ ಕೊಡುತ್ತೇನೆ. ಮುಖ್ಯ ಡಿಸ್ಟ್ರಿಬ್ಯೂಟರಿಯಿಂದ ಬಿಡಿ–1, ಬಿಡಿ–2 ಎಂದು 2 ಬೈಫರ್ಕೇಷನ್ ಆಗುತ್ತದೆ. ಇದರಿಂದ ಮತ್ತೆ ಎಸ್‌ಬಿಡಿ–1 ಮತ್ತು ಎಸ್‌ಬಿಡಿ–2 ಎಂದು ಬೈಫರ್ಕೇಷನ್ ಆಗುತ್ತದೆ. ಮುಖ್ಯ ಕಾಲುವೆಗೆ 8–10 ದಿವಸ ವಾರಾಬಂದಿ ಎಂದು ಮಾಡುತ್ತಾರೆ, ಅದನ್ನು ಒಪ್ಪಿಕೊಳ್ಳುತ್ತೇನೆ. ಇದು ಸುಮಾರು 40 ಕಿ.ಮಿ. ಸ್ಟ್ರೆಚ್ ಇದೆ. ಬಿಡಿ–1 15 ಕಿ.ಮಿ ಇರುತ್ತದೆ. ಅದಾದಮೇಲೆ ಎಸ್‌ಬಿಡಿ–1 ಮೂವತ್ತು ಕಿ.ಮಿ ಇರುತ್ತದೆ. ನೀರು ಚಾಲು ಮಾಡಿದ ಮೇಲೆ ಕೆನಾಲ್‌ಗೆ ಮುಟ್ಟಲು 3 ದಿವಸ ಬೇಕು. ಆ ನೀರು ಕೊನೆಯ ಹಂತಕ್ಕೆ ಮುಟ್ಟಬೇಕಾದರೆ 8–10 ದಿವಸ ಆಗುತ್ತದೆ. ಅಷ್ಟು ಹೊತ್ತಿಗೆ ವಾರಾಬಂದಿ ಮುಗಿದಿರುತ್ತದೆ. ವಾರಾಬಂದಿ ಮಾಡಬೇಕಾದರೆ ಯಾವ ಕಾಲುವೆಗೆ ಎಷ್ಟು ಅಚ್ಚುಕಟ್ಟು ಪ್ರದೇಶ ಇದೆ, ಯಾವುದು ಮಾಡಬೇಕು, ಎಷ್ಟು ಪ್ರಮಾಣದಲ್ಲಿ ಮಾಡಬೇಕು ಎನ್ನುವುದು ಗೊತ್ತೇ ಇರುವುದಿಲ್ಲ. 9, 10, 11, 12, 13 ಮತ್ತು 14 ಡಿಸ್ಟ್ರಿಬ್ಯೂಟರಿಗಳಲ್ಲಿ ಸುಮಾರು ಕೇವಲ 9 ಸಾವಿರ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶ ಬರುತ್ತದೆ. 15, 16, 17 ಮತ್ತು 18 ಈ ನಾಲ್ಕು ಡಿಸ್ಟ್ರಿಬ್ಯೂಟರಿಗಳಿಗೆ 66 ಸಾವಿರ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶ ವ್ಯಾಪ್ತಿ ಬರುತ್ತದೆ. ಇವೆರಡಕ್ಕೂ ಒಂದೇ ರೀತಿಯಲ್ಲಿ ವಾರಾಬಂದಿ ಮಾಡುತ್ತಾರೆ. ಇದನ್ನು ಸಾಕಷ್ಟು ಬಾರಿ ಎಂಡಿ ಅವರ ಗಮನಕ್ಕೆ ತಂದಿದ್ದೇನೆ, ಚೀಫ್ ಇಂಜಿನಿಯರ್‌ಗಳ ಗಮನಕ್ಕೆ ತಂದಿದ್ದೇನೆ. ಯಾವುದಾದರೂ ಒಂದು ಕೆಲಸವನ್ನು ಮಾಡಬೇಕಾದರೆ ವೈಜ್ಞಾನಿಕವಾಗಿ ಯೋಚನೆ ಮಾಡಿ ಮಾಡಬೇಕಾಗುತ್ತದೆ. 16ನೇ ಡಿಸ್ಟ್ರಿಬ್ಯೂಟರಿಗೆ ಸುಮಾರು 22 ಸಾವಿರ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶ ಬರುತ್ತದೆ. ಅಲ್ಲಿ ಸುಮಾರು 50 ಸಾವಿರ ಎಕರೆ ನೀರಾವರಿಗೆ ಒಳಪಡುತ್ತದೆ. ನಾನು ಮಾನ್ಯ ಸಚಿವರ ಗಮನಕ್ಕೆ ತರುವುದೇನೆಂದರೆ, ಯಾವುದೇ ವಾರಾಬಂದಿ ಮಾಡಬೇಕಾದರೆ ಸಂಬಂಧಪಟ್ಟ ಅಧಿಕಾರಿಗಳು ಯಾವ ಯಾವ ಡಿಸ್ಟ್ರಿಬ್ಯೂಟರಿ ವ್ಯಾಪ್ತಿಗೆ ಎಷ್ಟು ಅಚ್ಚುಕಟ್ಟು ಪ್ರದೇಶ ಬರುತ್ತದೆ ಎಂಬುದನ್ನು ನೋಡಬೇಕಾಗುತ್ತದೆ. ಕೊನೆಯ ಭಾಗದ ರೈತರಿಗೆ ನೀರು ಮುಟ್ಟುತ್ತಿದೆಯೇ ಎನ್ನುವುದನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ರೀತಿಯಲ್ಲಿ ಕಾರ್ಯನಿರ್ವಹಿಸಬೇಕಾಗುತ್ತದೆ. ಇವತ್ತು 66 ಸಾವಿರ ಹೆಕ್ಟೇರ್ ಪ್ರದೇಶದ ಪೈಕಿ 40 ಸಾವಿರ ಹೆಕ್ಟೇರ್ ಪ್ರದೇಶಕ್ಕೆ ನೀರಂತೂ ಮುಟ್ಟುತ್ತಿಲ್ಲ. ಮಾನ್ಯ ಸಚಿವರು ಗುಗಲ್‌ಗೆ ಬಂದಿದ್ದಾಗ ಅವರ ಗಮನಕ್ಕೆ ತಂದಿದ್ದೆ. ಅವರಿಗೂ ಅದು ಮನವರಿಕೆಯಾಗಿ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅವರ ಭಾಷಣದಲ್ಲಿ ಅದನ್ನು ಪ್ರಸ್ತಾಪ ಮಾಡಿದರು. ನಾವು ಅವರಿಗೆ ಮನವಿ ಮಾಡಿರುವಂತೆ, balancing reservoir ಮಾಡುವುದಕ್ಕೆ ಈಗಾಗಲೇ ಅವರ ಎಂ.ಡಿ.ಯನ್ನು ಕಳುಹಿಸಿ ಸರ್ವೆ ಕಾರ್ಯ ಮಾಡಿಸುತ್ತಿದ್ದಾರೆ. 0 ದಿಂದ 18 ಡಿಸ್ಟ್ರಿಬ್ಯೂಟರಿಗಳು ಏನು ಬರುತ್ತವೆಯೋ ಅಲ್ಲಿ ಸುಮಾರು 30–40 ಟ್ಯಾಂಕುಗಳಿವೆ. ಉದಾಹರಣೆಗೆ, ಬಾರಾಪುರ ಕೆರೆ ಇದೆ, ಮಸರ್ಕಲ್ ಕೆರೆ ಇದೆ, ಜಿನ್ನಾಪುರ ಕೆರೆ ಇದೆ, ರಾಮದುರ್ಗ ಕೆರೆ ಇದೆ, ಸುಂಕೇಶ್ವರ ಕೆರೆ ಇದೆ, ಖಾನಾಪುರ ಕೆರೆ ಇದೆ, ಆಲಂಖಾನ್ ಕೆರೆ ಇದೆ, ಗಳಗ ಕೆರೆ ಇದೆ. ಇವೆಲ್ಲವೂ 0.2, 0.3, 0.1, 0.6, 0.4, 0.25 ಈ ತರಹ ಕೆಪ್ಯಾಸಿಟಿ ಇರತಕ್ಕಂಥದ್ದು. ರಾಮದುರ್ಗದ ಕೆರೆ 1 ಸಾವಿರ ಎಕರೆಯಲ್ಲಿದೆ. ಇಂತಹ ಕೆರೆಗಳನ್ನು ಬಂದೋಬಸ್ತ್ ಮಾಡಬೇಕು. ಅಲ್ಲಿ ನೀರನ್ನು ಎಷ್ಟು ಸಂಗ್ರಹಣೆ ಮಾಡಬೇಕೆಂದು ಇದೆ. ಕೃಷ್ಣ ಮೇಲ್ದಂಡೆ ಅಡಿ ಬರುವ ಸಾಕಷ್ಟು ಜನ ರೈತರು ಭತ್ತ ಬೆಳೆಯುತ್ತಿದ್ದಾರೆ. ನಾವು ಇವತ್ತು ಅವರಿಗೆ ಯಾವುದೇ ರೀತಿಯಲ್ಲಿ ಏನನ್ನೂ ಹೇಳುವುದಕ್ಕೆ ಆಗುವುದಿಲ್ಲ. ನಮ್ಮ ಪ್ರಾಜೆಕ್ಟ್ ಮೀಡಿಯಂ ಇರಿಗೇಷನ್‌ಗೆ ಇದ್ದರೂ ಕೂಡ ಭತ್ತವನ್ನು ಬೆಳೆಯುತ್ತಾರೆ. ಈ ಕುರಿತು ರೈತರ ಜೊತೆ ರಾಜಕಾರಣಿಗಳಾಗಲಿ ಅಥವಾ ಬೇರೆಯವರಾಗಲಿ ಏನೂ ಮಾತನಾಡದೇ ಇರುವಂತಹ ಸ್ಥಿತಿ ಇದೆ. ರೈತರ ಸ್ಥಿತಿ ಗಂಭೀರವಾಗಿರುವುದರಿಂದ ಆತ ಏನನ್ನಾದರೂ ಬೆಳೆದುಕೊಂಡು ಸುಖವಾಗಿರಲಿ ಎನ್ನುವುದು ಎಲ್ಲರ ಉದ್ದೇಶವಾಗಿರುತ್ತದೆ. 40–45 ಕೆರೆಗಳೇನಿವೆ ಅವುಗಳನ್ನು ದುರಸ್ತಿ ಮಾಡಬೇಕು, valve create ಮಾಡಿ ನೀರು ಸಂಗ್ರಹಣೆ ಆಗುವುದಕ್ಕೆ ತೊಂದರೆ ಆಗದ ಹಾಗೆ ವ್ಯವಸ್ಥೆ ಮಾಡಬೇಕು. ಜೂನ್, ಜುಲೈ, ಆಗಸ್ಟ್ ಮತ್ತು ಸೆಪ್ಟೆಂಬರ್ ಈ ನಾಲ್ಕು ತಿಂಗಳಲ್ಲಿ ಮಳೆ ಬರುತ್ತದೆ. ನವೆಂಬರ್ ತಿಂಗಳ ನಂತರ ನಮಗೆ ನೀರಿನ ಅವಶ್ಯಕೆ ಬಹಳ ಇರುತ್ತದೆ. ಅಚಾನಕ್ ಮಳೆ ಬಂದರೆ ನೀರಿನ ಅವಶ್ಯಕತೆ ಇರುವುದಿಲ್ಲ. ಅಂತಹ ಸಂದರ್ಭಗಳಲ್ಲಿ ಕೆರೆಗಳನ್ನು ತುಂಬಿಸಿ ಕನಿಷ್ಠ 5–6 ಟಿಎಂಸಿ ನೀರನ್ನು ತಡೆಹಿಡಿದು, ನಂತರ ಅಲ್ಲಿರುವ ಡಿಸ್ಟ್ರಿಬ್ಯೂಟರಿಗಳಿಗೆ . . . .ರಾಮದುರ್ಗ ಕೆರೆಗೆ 17ನೇ ಡಿಸ್ಟ್ರಿಬ್ಯೂಟರಿ ಕನೆಕ್ಟ್ ಆಗುತ್ತದೆ. ನೀರು by gravity ಬರುವುದಕ್ಕೆ ಅವಕಾಶ ಇದೆ. ಅದರಿಂದಲೇ ಕನೆಕ್ಟ್ ಮಾಡಬಹುದು. ನೀರು ಇರದಂತಹ ಸಂದರ್ಭದಲ್ಲಿ ಗೇಜ್ ಮೈಂಟೇನ್ ಮಾಡುವುದಕ್ಕೆ ಎಷ್ಟು ನೀರು ಬೇಕೋ ಅಷ್ಟು ನೀರನ್ನು ಕೆರೆಯ ಮುಖಾಂತರ ಹರಿಸಬಹುದು. ಜನವರಿ, ಫೆಬ್ರವರಿ, ಮಾರ್ಚ್ ತಿಂಗಳುಗಳಲ್ಲಿ ಕನಿಷ್ಠ 4 ಬಾರಿಯಾದರೂ ನೀರು ಹರಿಸುವ ಕೆಲಸ ಮಾಡಬೇಕು. ಸದನದ ಗಮನಕ್ಕೆ ಒಂದು ಮಾಹಿತಿ ನೀಡಬಯಸುತ್ತೇನೆ. ರಾಯಚೂರಿನಲ್ಲಿ ಹತ್ತಿ ಬೆಳೆಯುತ್ತಾರೆ. ಪ್ರಪಂಚದಲ್ಲೇ No.1 Black Cotton Soil ಇರುವುದು ರಾಯಚೂರು ಜಿಲ್ಲೆಯಲ್ಲಿ ಮಾತ್ರ. ಇಡೀ ಜಗತ್ತಿನಲ್ಲೇ deep black cotton soil ಒಂದು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಎಕರೆಗೆ ಹತ್ತಿ ಹಾಕಿದರೆ, 15 ರಿಂದ ಸುಮಾರು 22 ಕ್ವಿಂಟಾಲ್ ಬೆಳೆ ತೆಗೆಯುತ್ತಾರೆ, ಇದು ರೈತರ ಪರಿಶ್ರಮದ ಮೇಲೂ ಅವಲಂಬಿತವಾಗಿರುತ್ತದೆ. ಸುಮಾರು ರೂ. 1 ಲಕ್ಷ 10 ಸಾವಿರದಿಂದ ರೂ. 1 ಲಕ್ಷ 30 ಸಾವಿರದ ತನಕ ಒಂದು ಎಕರೆಗೆ ಬರುತ್ತದೆ. ಇದಕ್ಕೆ ಸುಮಾರು ರೂ. 40 ರಿಂದ 45 ಸಾವಿರದವರೆಗೆ ಖರ್ಚಾಗುತ್ತದೆ. ಒಬ್ಬ ರೈತನಿಗೆ ಒಂದು ಎಕರೆಯಿಂದ ರೂ. 50 ಸಾವಿರದಿಂದ ರೂ. 70 ಸಾವಿರದ ಉಳಿತಾಯ ಆಗುತ್ತದೆ. ಮೆಣಸಿಕಾಯಿಯನ್ನು ಹಿಂದೆ ಕೇವಲ ಬ್ಯಾಡಗಿ ಮತ್ತು ಧಾರವಾಡ ಪ್ರದೇಶಗಳಲ್ಲಿ ಮಾತ್ರ ಬೆಳೆಯಲಾಗುತ್ತಿತ್ತು. ಆದರೆ ರಾಯಚೂರು ಜಿಲ್ಲೆಯಲ್ಲಿ ಕಳೆದ 7–8 ಜಿಲ್ಲೆಗಳಿಂದ ಬ್ಯಾಡಗಿ ಮೆಣಸಿನಕಾಯಿ ಬೆಳೆಯುತ್ತಿದ್ದೇವೆ. ಒಂದು ಎಕರೆಗೆ 20 ರಿಂದ 22 ಕ್ವಿಂಟಾಲ್ ಮೆಣಸಿಕಾಯಿ ಬೆಳೆಯುತ್ತಿದ್ದೇವೆ. ಒಂದು ಕ್ವಿಂಟಾಲ್‌ಗೆ ರೂ. 12 ಸಾವಿರ ಬೆಲೆ ಇದೆ. ಅಂದರೆ ಸುಮಾರು 20 ಕ್ವಿಂಟಾಲ್‌ಗೆ ರೂ. 2.50 ಲಕ್ಷ ಆಗುತ್ತದೆ. ಇದಕ್ಕೆ ರೂ. 70–80 ಸಾವಿರ ಖರ್ಚು ಬಂದರೂ ಸುಮಾರು ರೂ. 1 ಲಕ್ಷಕ್ಕೂ ಮೇಲ್ಪಟ್ಟು ಉಳಿತಾಯವಾಗುತ್ತದೆ. . . .

**ಸಭಾಪತಿಯವರು:–** ಜಲಸಂಪನ್ಮೂಲ ಸಚಿವರಿಂದ ನಿಮಗೇನಾಗಬೇಕೋ ಅದನ್ನು ಕೇಳಿ. ಅವರಿಗೂ ಮೆಣಸಿಕಾಯಿ ಬೆಳೆಗೂ ಸಂಬಂಧ ಇಲ್ಲ. ನೀರು, ಜಲಾಶಯ, ಕಾಲುವೆ ಈ ಕುರಿತು ಕೇಳಿ.

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ನಾನು ಈಗಾಗಲೇ ಕೊಟ್ಟಿರುವ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಅವೆಲ್ಲವನ್ನೂ ಮಾಡುತ್ತಾರೆ ಎನ್ನುವ ನಂಬಿಕೆ ನನಗೆ ಇದೆ.

**ಶ್ರೀ ಎಂ.ಬಿ.ಪಾಟೀಲ್:–**ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಹೇಳಿದ್ದರಲ್ಲಿ ಸತ್ಯ ಇದೆ. ಮೊದಲಿನ ಡಿಸ್ಟ್ರಿಬ್ಯೂಟರಿಯಲ್ಲಿ 12 ಸಾವಿರ ಹೆಕ್ಟೇರ್ ಅಚ್ಚುಕಟ್ಟು ಬರುತ್ತದೆ ಮತ್ತು ಈ ನಾಲ್ಕು ಡಿಸ್ಟ್ರಿಬ್ಯೂಟರಿ ವ್ಯಾಪ್ತಿಯಲ್ಲಿ ಸುಮಾರು 66 ಸಾವಿಕರ ಹೆಕ್ಟೇರ್ ಬರುತ್ತದೆ. ನಾನೂ ಕೂಡ ಅಲ್ಲಿಗೆ ಭೇಟಿ ಕೊಟ್ಟಿದ್ದೇನೆ ಮತ್ತು ಅಲ್ಲಿನ ಪರಿಸ್ಥಿತಿಯ ಅರಿವಿದೆ. ಮಾನ್ಯ ಸದಸ್ಯರು, ಗೇಟನ್ನು ಬದಲಾವಣೆ ಮಾಡಬೇಕು, 15 ವರ್ಷದ ಹಿಂದೆ ಮಾಡಿದಾಗ ಗೇಟನ್ನು ಹಾಕಿಲ್ಲ ಎನ್ನುವ ಮಾತನ್ನು ಹೇಳಿದರು. ಈಗ ಗೇಟ್ ಅಳವಡಿಕೆಯ ಕಾರ್ಯಕ್ಕೆ ಟೆಂಡರ್ ಕರೆಯುವ ಪ್ರಕ್ರಿಯೆ ಜಾರಿಯಲ್ಲಿದ್ದು ಶೀಘ್ರವಾಗಿ ಆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುತ್ತೇವೆ. ಮಾನ್ಯ ಸಭಾಪತಿಗಳೆ, ಹಲವಾರು ಸಲ ಮಾಧ್ಯಮಗಳು ನೀರಾವರಿ ಇಲಾಖೆಯ ಇಂಜಿನಿಯರ್‌ಗಳ ಮೇಲೆ, ನಮ್ಮ ಮೇಲೆ ಆಪಾದನೆ ಮಾಡುತ್ತವೆ. ನಾವು ನೀರಾವರಿ ಯೋಜನೆಗಳನ್ನೇನು ಸಿದ್ಧಪಡಿಸುತ್ತೇವೆಯೋ ಅದು supportive irrigation ಸಲುವಾಗಿ ಆಗಿರುತ್ತವೆ. Light and semi dry crops ಬೆಳೆಯುವುದಕ್ಕೆಯೇ ಆಗಿರುತ್ತದೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಎಲ್ಲಿಯೂ ಕೂಡ heavy crops, water consuming sugarcane, ಭತ್ತ, ಇಂಥದ್ದನ್ನು ಬೆಳೆಸುವುದಕ್ಕೆ ಮಾಡುವುದಲ್ಲ. ಮೊದಲನೆಯ ಹಂತದಲ್ಲಿ ಭತ್ತ, ಕಬ್ಬು ಈ ರೀತಿಯ ಬೆಳೆಗಳನ್ನು ಬೆಳೆದರೆ ಸ್ವಾಭಾವಿಕವಾಗಿ tail-end ಗೆ ನೀರು ಹೋಗುವುದಿಲ್ಲ. ಇದು ಪ್ರಮುಖ ಕಾರಣವಾಗಿದೆ. ಇದರ ಜೊತೆ ಗೇಟ್ ಹಾಕದೇ ಇರುವುದು, ಕಾಲುವೆ ದುಸ್ಥಿತಿಯಲ್ಲಿ ಇಲ್ಲದೇ ಇರುವುದು ಮತ್ತು ಇನ್ನಿತರ ಕಾರಣಗಳೂ ಇರಬಹುದು, ಇಲ್ಲ ಎಂದು ಹೇಳುತ್ತಿಲ್ಲ. ಮಾನ್ಯ ಸದಸ್ಯರು ಹೇಳಿದ ಹಾಗೆ, ನಾವು ರೈತರಿಗೆ ಸ್ಪಂದಿಸದೇ ಇರುವುದಕ್ಕೆ ಆಗುವುದಿಲ್ಲ, ನೀರನ್ನು ನಿಲ್ಲಿಸುವುದಕ್ಕೆ ಆಗುವುದಿಲ್ಲ.

**(88)09.02.2017 ಟಿಸಿಹೆಚ್:ವಿಕೆ 1.40**

**ಶ್ರೀ ಎಂ.ಬಿ.ಪಾಟೀಲ್ (ಮುಂದು):–**

ಇವತ್ತಿನ ದಿವಸ ನೀರಾವರಿ ಇಲಾಖೆ ಮೇಲೆ ಹಾಗೂ ಇಂಜಿನಿಯರ್ ಮೇಲೆ tail-endಗೆ ನೀರು ಹೋಗುವುದಿಲ್ಲವೆಂದು ಆಪಾದನೆ ಇದೆ. ಯೋಜನೆ ವಿಫಲವೆಂಬ ಆಪಾದನೆ ಬಂದುಬಿಡುತ್ತದೆ. ಅದಕ್ಕೆ ಕಾರಣ ಬಹಳಷ್ಟಿರುತ್ತದೆ. ಮುಖ್ಯವಾಗಿ ನಮ್ಮ ಇಲಾಖೆಯಲ್ಲಿ water discipline ಇಲ್ಲ, crop violation ಬಹಳ ವ್ಯಾಪಕವಾಗಿದೆ. ಹೀಗಾಗಿ, ಇವತ್ತಿನ ದಿವಸ ಮಾನ್ಯ ಸದಸ್ಯರು ಏನೇನು ಹೇಳಿದ್ದಾರೆ ಅದರ ಬಗ್ಗೆ ನಾವು ಕ್ರಮ ಕೈಗೊಂಡಿದ್ದೇವೆ. ಎಂ.ಡಿ ರವರು ಸಹ ಅವರ ಜೊತೆಯಲ್ಲಿಯೇ ಹೋಗಿ, ಅಲ್ಲಿನ ಪರಿಸ್ಥಿತಿಯನ್ನು ನೋಡಿದ್ದಾರೆ. ಮಾನ್ಯ ಸದಸ್ಯರು ಹೇಳಿರುವ ಬಗ್ಗೆ ನಾವು ಕ್ರಮವನ್ನು ಇಲಾಖೆಯಲ್ಲಿ ಕೈಗೊಳ್ಳುತ್ತಿದ್ದೇವೆ. ಈಗ ಅವರು ಕೆರೆಗಳಿಗೆ ನೀರನ್ನು ತುಂಬಿಸುವ ಬಗ್ಗೆ ಹೇಳಿದರು. ನಾರಾಯಣಪುರ ಬಲದಂಡೆ ಕಾಲುವೆಯ ಬಗ್ಗೆ ತಮ್ಮ ಗಮನಕ್ಕೆ ತರಬಯಸುತ್ತೇನೆ. ವಿಸ್ತರಣಾ ಕಾಲುವೆಯಡಿ 8 ಕೆರೆಗಳಿಗಳಿವೆ. ಇವತ್ತಿನ ದಿವಸ ನಾವು ಒಂದು ನಿರ್ಧಾರವನ್ನು ಮಾಡಿದ್ದೇವೆ. ನಮ್ಮ ನೀರಾವರಿ ಇಲಾಖೆಯಲ್ಲಿ ಹಳೆ ಯೋಜನೆಗಳು ಇರಬಹುದು ಅಥವಾ ನಡೆಯುತ್ತಿರುವಂತಹ ಯೋಜನೆಗಳು ಇರಬಹುದು ಅಥವಾ ಮುಂಬರುವಂತಹ ಯೋಜನೆಗಳು ಇರಬಹುದು. ಎಲ್ಲಿ ನಾವು gravity ಮೂಲಕ ಕೆರೆಗಳಿಗೆ ನೀರನ್ನು ಕೊಡಲು ಸಾಧ್ಯವಾಗುತ್ತದೆ. ಸ್ವಲ್ಪ feasibility ಇದೆ, ಸ್ವಲ್ಪ minimum financial implication ನಲ್ಲಿ ಏನು ಆಗುತ್ತದೆ ಆ ಎಲ್ಲಾ ಕೆರೆಗಳನ್ನು, it's a policy matter in the irrigation department which we have taken. ಆ ಪ್ರಕಾರ ನಾವು ಕೆಲಸ ಮಾಡುತ್ತಿದ್ದೇವೆ. ಈಗ ಎನ್.ಆರ್.ಬಿ.ಸಿಯಲ್ಲಿಯೂ ಸಹ ಈ ತರಹದ 8

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೆರೆಗಳನ್ನು ಗುರುತಿಸಿದ್ದಾರೆ. ನಾವು ನಮ್ಮ ಇಲಾಖೆಯವರನ್ನು ಕೇಳಿದ್ದೇವೆ. ಅಲ್ಲಿ ಮನ್‌ಸ್ಲಾಪೂರ್, ಮರ್ಚ್‌ಡ, ಯಾಗ್ನೂರು, ಗಣಮೂರು, ...

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೆ, all these places comes under Raichur Taluk only. ಎನ್.ಆರ್.ಬಿ.ಸಿ ನಮಗೆ ಬರುವುದು ಲಿಂಗಸೂರು, ದೇವದುರ್ಗ ಮತ್ತು ರಾಯಚೂರು ಬರುತ್ತದೆ. ಅಲ್ಲಿ 40 ಇದೆ. ಇದು 18 ಇದೆ.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೆ, ಅದನ್ನೂ ಕೂಡ ಇವತ್ತಿನ ದಿವಸ ಅದನ್ನು ಮಾಡಲು ನಾವು ಸ್ವಂತ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಅದರಲ್ಲಿ ನಿಮ್ಮದು ಕೂಡ apply ಆಗುತ್ತದೆ. ಇಡೀ ರಾಜ್ಯದಲ್ಲಿ ಎಲ್ಲೆಲ್ಲಿ possibility ಇದೆಯೋ ಅಲ್ಲಲ್ಲಿ ಕೆರೆಗಳನ್ನು ತುಂಬಿಸುವಂತಹ ನಿರ್ಧಾರವನ್ನು ಇವತ್ತಿನ ದಿವಸ ಸರ್ಕಾರ ತೆಗೆದುಕೊಂಡಿದೆ. 8 ಕೆರೆಗಳನ್ನು ಅಲ್ಲಿ ತೆಗೆದುಕೊಂಡಿದ್ದೇವೆ. ರಾಯಚೂರು ತಾಲ್ಲೂಕಿನಲ್ಲಿ ಕೆರೆಗಳಿಗೆ ನೀರನ್ನು ತುಂಬಿಸುವ ಬಗ್ಗೆ ನಿರ್ಧಾರವನ್ನು ಸರ್ಕಾರ ಮಾಡಿ, ಈಗಾಗಲೇ ಟೆಂಡರ್ ಅನ್ನು ಕರೆದು ಅನುಮೋದನೆ ನೀಡಲಾಗಿದೆ. ಮಾನ್ಯ ಸದಸ್ಯರು ಹೇಳುವಂತಹ ಕೆರೆಗಳು ಏನಿವೆ ಅವುಗಳನ್ನು ಸಹ ಎಂ.ಐ ಕೆರೆಗಳು ಇದ್ದರೆ ಮಾತ್ರ ಪರಿಗಣಿಸುತ್ತೇವೆ. ಜಡ್.ಪಿ ಕೆರೆಗಳು ಇದ್ದರೆ ನಾವು ಎರಡನೇ ಹಂತದಲ್ಲಿ ಪರಿಗಣಿಸಲಾಗುವುದು. ಎಂ.ಐ ಕೆರೆಗಳು ಯಾವುವು ಇವೆ ಅವುಗಳಿಗೆ ನೀರನ್ನು ತುಂಬಿಸುವಂತಹ ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಆ ನಿರ್ಧಾರವನ್ನು ಪರಿಗಣಿಸಿ, ಆ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

**ಸಭಾಪತಿಯವರು:-** ಶ್ರೀ ಬಸವರಾಜ ಪಾಟೀಲ್ ಇಟಗಿಯವರೇ ತಾವು ಇನ್ನೇನಾದರೂ ಸಚಿವರಿಂದ ಕೇಳುವುದಾದರೆ, ಕೇಳಿ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೆ, ನನಗೆ ಸದನದಲ್ಲಿ ಮಾತನಾಡಲು ಇನ್ನೂ 5 ನಿಮಿಷಗಳ ಕಾಲಾವಕಾಶ ಕೊಡಬೇಕು.

**ಸಭಾಪತಿಯವರು:-** ಶ್ರೀ ಬಸವರಾಜ ಪಾಟೀಲ್ ಇಟಗಿಯವರೇ, ನೀವು ಮಾನ್ಯ ಸಚಿವರಿಗೆ ಪ್ರಶ್ನೆ ಕೇಳಿ. ನಿಮಗೆ ಏನು ಉತ್ತರ ಬೇಕಾಗಿದೆ ಕೇಳಿ. ಸಚಿವರು ಉತ್ತರ ಕೊಡುತ್ತಾರೆ. ನೀವು ಕೇಳಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೆ, ಈಗ ಸಾಕಷ್ಟು ಕ್ರಮಗಳ ಬಗ್ಗೆ ಮಾನ್ಯ ಸಚಿವರು ಈಗಾಗಲೇ ಹೇಳಿದ್ದಾರೆ. ಅವರೂ ಸಹ ನಮ್ಮ ಪ್ರದೇಶಕ್ಕೆ ಬಂದು ನೋಡಿರುವುದರಿಂದ ಆ ಬಗ್ಗೆ ಮನವರಿಕೆ ಇದೆ. ಮೊಟ್ಟಮೊದಲನೆಯದಾಗಿ ನಾನು ಅವರನ್ನು ಕೇಳುವುದೇನೆಂದರೆ ಈ re-modernisation of canalsಆಗಬೇಕು. ಇವತ್ತಿನ ದಿವಸ ಎನ್.ಆರ್.ಬಿ.ಸಿ 3600 ಕ್ಯೂಸೆಕ್ಸ್ discharge ಇದೆ. 9ಎ ಕೆನಾಲ್ ಅನ್ನು ಪ್ರಾರಂಭ ಮಾಡಿದ್ದಾರೆ ಅದಾದನಂತರ 8ಎ, 7ಎ ಈ ರೀತಿ 3-4 ಅಧಿಕೃತವಾಗಿ ಹೆಚ್ಚಿಗೆ ಡಿಸೈನ್‌ನಲ್ಲಿ ಬಂದಿದೆ. ಅದಕ್ಕಾಗಿ ಮಾನ್ಯ ಸಭಾಪತಿಯವರೆ ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ಮನವಿ ಮಾಡುವುದೇನೆಂದರೆ, ಈ ಎನ್.ಆರ್.ಬಿ.ಸಿ ಕೆನಾಲ್ ಏನಿದೆ ಅದು ಶೇಕಡ 60-70 ಪ್ರದೇಶ ಆ ಕಟಿಂಗ್‌ನಲ್ಲಿ ಬಂದಿದೆ. Embankment ಇಲ್ಲ ಅಲ್ಲಿ.

**ಸಭಾಪತಿಯವರು:-** ಮಾನ್ಯ ಸಚಿವರು ಬಹಳ ಪ್ರಮುಖವಾದ ವಿಷಯ ಹೇಳುತ್ತಾರೆ. ಅವರ ಬಗ್ಗೆ ಗಮನಹರಿಸಿದರೆ ಅದರ ಸಮಸ್ಯೆ ಪರಿಹಾರವಾಗುತ್ತದೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೆ, ಒಂದು ನಿಮಿಷ ನಾನು ಮಾತನಾಡಿ ಮುಗಿಸುತ್ತೇನೆ. ಆ ಪ್ರದೇಶ ಕಟ್ಟಿಂಗ್‌ನಲ್ಲಿ ಬಂದಿದೆ. ನನ್ನ ಮನವಿ ಏನೆಂದರೆ, 0-54 ಇವತ್ತಿನ ದಿವಸ 3600 ಕ್ಯೂಸೆಕ್ಸ್ ಇರುವುದನ್ನು ಇನ್ನೂ 1000 ಕ್ಯೂಸೆಕ್ಸ್ ನೀರನ್ನು ಹೆಚ್ಚು ಮಾಡಿ, ಆ ಕಟ್ಟಿಂಗ್‌ನಲ್ಲಿ ಇರತಕ್ಕಂತಹ ಕಾಲುವೆಯನ್ನು ಅಗಲೀಕರಣ ಮಾಡಬೇಕು. ಅದಾದನಂತರ, 9ಎ, 8ಎ ಮತ್ತು 7ಎ ಗೆ ಎಷ್ಟು ಬೇಕು ಅವೆಲ್ಲವನ್ನೂ ಸಹ ಹೆಚ್ಚಿಗೆ ನೀರಿನ ಪ್ರಮಾಣ ಆಗುತ್ತದೆ ಅದನ್ನು ಮಾಡಬೇಕು ಎನ್ನುವುದನ್ನು ಮಾನ್ಯ ಸಚಿವರಲ್ಲಿ ಮನವಿ ಮಾಡುತ್ತೇನೆ. ಅದೂ ಅಲ್ಲದೇ, ಇವತ್ತಿನ ದಿವಸ ಅಚ್ಚುಕಟ್ಟು ಪ್ರದೇಶ ಏನಿದೆ, ಅದು ಸುಮಾರು 0-95 ಕಿ.ಲೋನಲ್ಲಿ, first phase ನಲ್ಲಿ ಸುಮಾರು 82 ಸಾವಿರ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶವಿದೆ. ಆದರೆ ವಾಸ್ತವಿಕವಾಗಿ ಇವತ್ತಿನ ದಿವಸ ಅದು 1 ಲಕ್ಷ ಹೆಕ್ಟೇರ್‌ಗೂ ಮೀರತಕ್ಕಂತಹ ಅಚ್ಚುಕಟ್ಟು ಇದೆ. ಮೊದಲು ಅವರು proposal build up ಮಾಡುವಂತಹ ಕಾಲಕ್ಕೆ ಎಷ್ಟೋ ಗ್ರಾಮಗಳಲ್ಲಿ 400 ಎಕರೆ, 300 ಎಕರೆ, 500 ಎಕರೆ ಮತ್ತು 1000 ಎಕರೆ ಬಿಟ್ಟುಹೋಗುವಂತದ್ದಿದೆ. ಅವತ್ತಿನ ದಿವಸ ಅಚ್ಚುಕಟ್ಟಿನಲ್ಲಿ ಅವರು ಸೇರಿಸಿಲ್ಲ. ಆದರೆ ಇವತ್ತಿನ ದಿವಸ ಏನೆಂದರೆ, ಪ್ರತಿ ಊರಿನಲ್ಲಿ ತಾವು 600 ಎಕರೆ ಅಚ್ಚುಕಟ್ಟು ಮೊದಲು ನೋಟಿಫೈ ಮಾಡಿದ್ದೀರಿ. ಈಗ ಅಲ್ಲಿ 1000 ಎಕರೆ gravity ಮುಖಾಂತರ ನೀರಾವರಿ ಆಗತಕ್ಕಂತಹ ಸನ್ನಿವೇಶವಿದೆ. ಅದಕ್ಕೆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅದನ್ನೂ ಕೂಡ ಪರಿಗಣಿಸಿ, 1000 ಕ್ಯೂಸೆಕ್ಸ್ ನೀರನ್ನು ಹೆಚ್ಚಿಗೆ ಮಾಡಿ, ಎನ್.ಆರ್.ಬಿ.ಸಿ ಮುಖಾಂತರ ಅದನ್ನು ಮಾರ್ಡನೈಜೇಷನ್ ಮಾಡಬೇಕಾದರೆ, ಇವೆಲ್ಲ ಕೆಲಸಗಳನ್ನು ಕೈಗೆತ್ತಿಕೊಳ್ಳುವಂತಹ ಕೆಲಸ ಆಗಬೇಕು. ಅದೂ ಅಲ್ಲದೇ rehabilitation. ಮಾನ್ಯ ಸಭಾಪತಿಯವರೆ, ಇವತ್ತಿನ ದಿವಸ land compensation ತಮ್ಮ ಗಮನಕ್ಕೆ ಹೇಳಬಯಸುತ್ತೇನೆ. ಇವತ್ತು ಕಾಲುವೆಯಾಗಿ 15 ವರ್ಷಗಳಾಗಿದೆ. ಇವತ್ತಿನವರೆಗೂ ಜೆ.ಎಂ.ಸಿ ಆಗಿಲ್ಲ. ಅದಕ್ಕೆ ಏನು ಮಾಡಬೇಕು ನಾವು. ಎಷ್ಟೋ ಕಾಲುವೆಗಳು joint measurement ಆಗಿಯೇ ಇಲ್ಲ. ಸುಮಾರು. . .

**ಸಭಾಪತಿಯವರು:–** ಅವರು ಹೇಳುತ್ತಿರುವುದು ನಿಜವೇ ಮಾನ್ಯ ಸಚಿವರೇ? ಅವರು ಹೇಳುತ್ತಿರುವುದು ಸತ್ಯವಿದ್ದರೆ ಬಹಳ ಗಂಭೀರವಾದುದು.

**ಶ್ರೀ ಎಂ.ಬಿ.ಪಾಟೀಲ್:–** ಮಾನ್ಯ ಸಭಾಪತಿಯವರೆ, ಅವರು ಏನು ಕೇಳಿದ್ದಾರೆ, ಅದರ ಬಗ್ಗೆ ಆಗಿಲ್ಲವೆಂದು ಹೇಳಿದ್ದರೆ, ಅದಕ್ಕೆ ನಾನು ಉತ್ತರ ಕೊಡುತ್ತಿದ್ದೆನು. ಇದಾದರೂ ಕೂಡ ಅವರು ಹೇಳುತ್ತಿದ್ದಾರೆಂದರೆ ಅದನ್ನು ನಾನು ನಂಬುತ್ತೇನೆ. ಇವತ್ತಿನ ದಿವಸ ಆ ರೀತಿ ಆಗಿರುವುದನ್ನು R & R Commissioner ರವರಿಗೆ ಸೂಚನೆಯನ್ನು ಕೊಡುತ್ತೇವೆ. ಜೆ.ಎಂ.ಸಿ ಮಾಡದಿದ್ದರೆ ಮತ್ತು ಇತರೆ ಏನೂ ಆಗಿಲ್ಲದಿದ್ದರೆ ಆ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ. ಎರಡನೆಯದಾಗಿ, ಗೌರವಾನ್ವಿತ ಸದಸ್ಯರು ಈಗ modernisation ಬಗ್ಗೆ ಎಲ್ಲಾ ಕಡೆಯಲ್ಲೂ ಇದೆ. ಘಟಪ್ರಭ ಇದೆ. ಮಲಪ್ರಭ ಇದೆ. ಕಾವೇರಿಯಲ್ಲಿದೆ ಎನ್.ಎಲ್.ಬಿ.ಸಿಯಲ್ಲೂ ಸಹ ನಾವು ಇವತ್ತಿನ ದಿವಸ ಮಾಡಿದ್ದೇವೆ. ಒಂದು ಬಾರಿ ನಾವು ಕೆನಾಲ್ ಅನ್ನು ಮಾಡಿದ ಮೇಲೆ Central Water Commission norms ಸಹ ಇವೆ. ಕನಿಷ್ಠ ಪಕ್ಷ ಮಾನ್ಯ ಇಟಗಿಯವರೆ, ಅದು 20–25ವರ್ಷವಾದರೂ ಬರಬೇಕು. 15 ವರ್ಷ ಅಂದಮೇಲೆ, 10–15ವರ್ಷಕ್ಕೆ ಅದನ್ನು ನಾವು re-modernisation ಮಾಡುತ್ತಾ ಹೋದರೆ ಯಾವುದೇ ರಾಜ್ಯದ ಆರ್ಥಿಕ ಪರಿಸ್ಥಿತಿ ಮೇಲೆ ಇವತ್ತಿನ ದಿವಸ ಅದು ಸಾಧ್ಯವಾಗುವುದಿಲ್ಲ. ಅದು ಆದರೂ ಸಹ 0–95 ಕಿಲೋ ಮೀಟರ್‌ಗಳಷ್ಟು ಈಗಾಗಲೇ ನಾವು ಆಧುನಿಕರಣದ ಬಗ್ಗೆ ಸರ್ವೆ ಕಾರ್ಯವನ್ನು ಪ್ರಾರಂಭಿಸಿದ್ದೇವೆ. ಇವತ್ತಿನ ದಿವಸ ಅಂದಾಜು ಪತ್ರಿಕೆಗಳೂ ತಯಾರಾಗುತ್ತಿದೆ. ಈಗ ಅವರು 0–64 ಕಿಲೋಮೀಟರ್‌ಗಳು ಬಗ್ಗೆ ಪ್ರಸ್ತಾಪ ಮಾಡಿದರು. ಅದನ್ನು 1000ಕ್ಯೂಸೆಕ್ಸ್‌ಗೆ ಹೆಚ್ಚುವರಿ ಮಾಡಬೇಕು ಮತ್ತು ಅದನ್ನು ಅಗಲೀಕರಿಸಬೇಕು ಎನ್ನುವಂತಹ ಮಾತನ್ನು ಹೇಳಿದ್ದಾರೆ. ನಾನು ಅದನ್ನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪರಿಶೀಲಿಸುತ್ತೇನೆ. ಏಕೆಂದರೆ, ಅದನ್ನು ಅನುಷ್ಠಾನ ಮಾಡಿದ ಮೇಲೆ, ಮುಂದೆ ಅದರ ಪರಿಣಾಮ further effect ಸಹ ಏನಾಗುತ್ತದೆ ಎಂಬುದನ್ನು ನೋಡಬೇಕಾಗಿರುತ್ತದೆ. ಇವರ ನಂತರ ಒಂದು tail-end ಇರುತ್ತದೆ. ಇದು ಇವರಿಗೆ ಮತ್ತು ಮತ್ತೊಬ್ಬರಿಗೆ, ಮತ್ತೊಬ್ಬರಿಗೆ effect ಆಗುತ್ತದೆ. ಅದೆಲ್ಲವನ್ನೂ ಇವತ್ತಿನ ದಿವಸ ಪರಿಗಣನೆಗೆ ಇಟ್ಟುಕೊಂಡು ನಾವು ಸೂಕ್ತ ನಿರ್ಧಾರವನ್ನು ತೆಗೆದುಕೊಳ್ಳುತ್ತೇವೆ. ಮಾನ್ಯ ಸದಸ್ಯರು ಏನು ಉಪಯುಕ್ತವಾದಂತಹ ಸಲಹೆಗಳನ್ನು ಕೊಟ್ಟಿದ್ದಾರೆ. ಕೆಲವು ವಿಚಾರಗಳನ್ನು ಹೇಳಿದ್ದಾರೆ ಇವುಗಳ ಬಗ್ಗೆ ನಾವು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಅದಕ್ಕೆ ಈಗಲೇ ಉತ್ತರವನ್ನು ಕೊಡಬೇಕೆಂದು ನಾನು ಬಯಸುವುದಿಲ್ಲ. ಅವರ ಗಮನಕ್ಕೆ ತಂದರೆ, ಅದನ್ನು ಮಾಡುತ್ತಾರೆಂದು ನನಗೆ ಸಂಪೂರ್ಣ ನಂಬಿಕೆ ಇದೆ. ಇವತ್ತಿನ ದಿವಸ land compensation ಅನ್ನು 15 ವರ್ಷವಾದರೂ ಸಹ ಎಷ್ಟೋ laterals and sub-laterals ಗಳ joint measurement ಆಗಿಲ್ಲ. ಇವತ್ತು ಯಾವುದಾದರೂ ಕೆಲಸ ಪ್ರಾರಂಭ ಮಾಡಬೇಕಾರೆ, ಮೊದಲು joint measurement ಆದ ನಂತರವೇ ಟೆಂಡರ್ ಅನ್ನು ಕರೆದು, ಆಗತಕ್ಕಂತಹ ಕೆಲಸ ಆಗಬೇಕು. ಆದರೆ ಕಾಲುವೆ ಆಗಿ 15 ವರ್ಷ ಆದರೂ ಸಹ ಇವತ್ತಿನವರೆಗೂ joint measurement ಆಗಿಲ್ಲ. ಆ ರೈತರಿಗೆ compensation ಸಿಕ್ಕಿಲ್ಲ. ಈ ಒಂದು ಸಂದರ್ಭದಲ್ಲಿ ಎನ್.ಆರ್.ಬಿ.ಸಿಯಲ್ಲಿ ಅದರ ಬಗ್ಗೆಯೂ ಕೂಡ ಗಮನ..

**ಸಭಾಪತಿಯವರು:-** ಶ್ರೀ ಬಸವರಾಜ ಪಾಟೀಲ್ ಇಟಗಿರವರೆ, ಮಾನ್ಯ ಸಚಿವರು ಇದರ ಬಗ್ಗೆ ಗಮನಹರಿಸಲಾಗುವುದೆಂದು ಹೇಳಿದ್ದಾರೆ. ಬೇರೆ ವಿಷಯವನ್ನು ಇದರಲ್ಲಿ ಹೇಳಬೇಡಿ. ಬಹಳ ಮುಖ್ಯವಾದ ವಿಷಯವನ್ನು ಸದನದಲ್ಲಿ ಎತ್ತಿದ್ದೀರಿ. ಅದಕ್ಕೆ ನೀವು ಮಾನ್ಯ ಸಚಿವರಿಂದ ಉತ್ತವನ್ನು ತೆಗೆದುಕೊಳ್ಳದಿದ್ದರೆ ಹೇಗೆ.

**ಶ್ರೀ ಎಂ.ಬಿ.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೆ, ಇದು15 ವರ್ಷದಿಂದಲೂ ಜೆ.ಎಂ.ಸಿ ಆಗಿಲ್ಲ. ರೈತರಿಗೆ compensation ಅನ್ನು ಕೊಟ್ಟಿಲ್ಲ ಎನ್ನುವ ವಿಚಾರ ಬಹಳ ಗಂಭೀರವಾದುದು. ರೈತರಿಗೆ compensation ಅನ್ನು ಕೊಡಲೇಬೇಕಾಗಿರುತ್ತದೆ. ಇವೆಲ್ಲವನ್ನೂ ಸಹ ಮಾಡಲೇಬೇಕಾಗಿರುತ್ತದೆ. ನಾನು ಆರ್ & ಆರ್ ಕಮೀಷನರ್‌ರವರಿಗೆ ಖುದ್ದಾಗಿ ಅಲ್ಲಿಗೆ ಹೋಗಿ, ಆವೊತ್ತಿನ ದಿನ ಗೌರವಾನ್ವಿತ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸದಸ್ಯರನ್ನು ಸಹ ಕರೆದುಕೊಂಡು ಹೋಗಿ, ಅಲ್ಲಿ ಸ್ಥಳ ಪರಿಶೀಲನೆ ಮಾಡಿ, ಆ ಎಲ್ಲಾ ದಾಖಲೆಗಳನ್ನು ಪರಿಶೀಲನೆ ಮಾಡಿ, ಆ ರೀತಿ ಏನಾದರೂ ತಪ್ಪಾಗಿದ್ದರೆ ಇವತ್ತಿನ ದಿನ ನಾವು ಅದನ್ನು ಸರಿಪಡಿಸುವಂತಹ ಕೆಲಸವನ್ನು ಮಾಡುತ್ತೇವೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಮಾನ್ಯ ಸಭಾಪತಿಯವರೆ, ಧನ್ಯವಾದಗಳು. ಇದಾದ ನಂತರ, ಮಾನ್ಯ ಸಚಿವರು ನಮ್ಮ ಕಡೆ ಬಂದಾಗ Google Bridge cum Barrage ಗೆ ಬಂದಿದ್ದರು.

**ಶ್ರೀ ಎಂ.ಬಿ.ಪಾಟೀಲ್:–** ನಾನು ಕೂಡ ಆ Google Bridge cum Barrage ಗೆ ಭೇಟಿ ನೀಡಿದ್ದೆ. ಅದರಿಂದ ಅಲ್ಲಿನ ಭಾಗದ ಜನರಿಗೆ ಬಹಳ ಅನುಕೂಲವಾಗಿದೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:–**ಆ ಬ್ಯಾರೇಜ್‌ಗೆ ಮಾನ್ಯ ಸಚಿವರು ಭೇಟಿ ನೀಡಿದ್ದರು, ಆಗ ಅಲ್ಲಿ ಸೇರಿದ್ದಂತ ರೈತರೆಲ್ಲರೂ ಮನವಿ ಮಾಡಿ, ಆಲಮಟ್ಟಿಯಲ್ಲಿ ಎಲ್ಲವನ್ನೂ beautification ಮಾಡಿದ್ದಾರೆ. ಆ ಬ್ಯಾರೇಜ್ ಚೆನ್ನಾಗಿದೆ. ಆ ಬ್ಯಾರೇಜ್ ಇವತ್ತಿನ ದಿನ ಏನಾದರೂ ಬೆಂಗಳೂರಿಗೆ ವಿದ್ಯುತ್ ಬಂದಿರುತ್ತದೆಂದರೆ, ಆ ಗೂಗಲ್ ಬ್ಯಾರೇಜ್‌ನಿಂದಲೇ. ಏಕೆಂದರೆ, ಅಲ್ಲಿ ನೀರು ಸಂಗ್ರಹಣೆ ಆಗಿ, ಆ ಮೂರು ಟಿ.ಎಂ.ಸಿ ನೀರನ್ನು ಆರ್.ಟಿ.ಪಿ.ಎಸ್‌ಗೆ ಯಾವಾಗ ಯಾವಾಗ ಬೇಕೋ ಅಲ್ಲಿಗೆ ನೀರನ್ನು ಹರಿಸುವಂತಹ ಕೆಲಸ ಆಗುತ್ತಿದೆ. ಆದರೆ ಮೊದಲು ಆ ಉದ್ದೇಶವಿರಲಿಲ್ಲ. ಕುಡಿಯುವ ನೀರಿನ ಉದ್ದೇಶಕ್ಕಾಗಿ ಕಟ್ಟಿರತಕ್ಕಂತಹ ಬ್ಯಾರೇಜು ಆಗಿರುತ್ತದೆ. ಇವತ್ತಿನ ದಿವಸ ವಿದ್ಯುತ್ ಉತ್ಪಾದನೆಗೆ ಸಂಪೂರ್ಣ ಬೆಂಬಲ ಕೊಡತಕ್ಕಂತಹ ಬ್ಯಾರೇಜ್ ಆಗಿದೆ. ಅಲ್ಲಿ ಮಾನ್ಯ ಸಚಿವರಿಗೆ ಜನರೆಲ್ಲರೂ ಮನವಿ ಮಾಡಿದ್ದಾರೆ. 2 ಕೋಟಿ ರೂಪಾಯಿಗಳನ್ನು beautification ಅನ್ನು ಮಾಡುವುದಕ್ಕೆ ಅವರು ಸಹಿಯನ್ನು ಸಹ ಮಾಡಿದ್ದಾರೆ. ಟೆಂಡರ್‌ಗೆ ಬುಕ್‌ಲೆಟ್ ಎಲ್ಲವೂ ಆಗಿದೆ. ಅದು ಕಛೇರಿಯಲ್ಲಿ ಇದೆ. ನಾವು ಎಂ.ಡಿಯವರ ಹತ್ತಿರ ಹೋಗಿ ಕೇಳಿದೆವು. ಸಾಹೇಬ್ರು ಹೇಳಿದ್ದಾರೆ ರೀ. ಸಾಹೇಬ್ರು ಹೇಳಿದ ಮೇಲೆ ಮಾಡಿರಿ ಎಂದು ಹೇಳಿದರೂ ಸಹ ಅದು ಹಾಗೆಯೇ ಅಲ್ಲಿಯೇ ಇದೆ. ಅವರು ಯಾವುದೋ ಸಬೂಬನ್ನು ಹೇಳಿಕೊಂಡು ಕುಳಿತಿದ್ದಾರೆ.

**ಸಭಾಪತಿಯವರು:–** ಮಾನ್ಯ ಸಚಿವರು ಆ ವಿಷಯದ ಬಗ್ಗೆ ಹೇಳುತ್ತಾರೆ. ತಾವು ಕುಳಿತುಕೊಳ್ಳಿ.

ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(89) 09.02.2017 1.50 DS(MGN)-VK**

**ಶ್ರೀ ಎಂ.ಬಿ.ಪಾಟೀಲ್(ಜಲಸಂಪನ್ಮೂಲ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಅಲ್ಲಿಗೆ ಭೇಟಿ ಕೊಟ್ಟಂತಹ ಸಂದರ್ಭದಲ್ಲಿ ಮಾನ್ಯ ಸದಸ್ಯರು ನನಗೆ ಮನವಿ ಕೊಟ್ಟಿದ್ದಾರೆ. ಅದರ ಬಗ್ಗೆ ಕ್ರಮ ಕೈಗೊಳ್ಳುವುದಕ್ಕೆ ಇಲಾಖೆಯವರಿಗೆತಿಳಿಸಿದ್ದೇನೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಸನ್ಮಾನ್ಯ ಸಭಾಪತಿಯವರೇ, ಟೆಂಡರ್ ಸಹಿತವಾಗಿ ಎಲ್ಲವೂ ಸಿದ್ಧವಾಗಿದೆ. ಇವರು ಎಂ.ಡಿ. ಅವರಿಗೆ ಆದೇಶ ಕೊಟ್ಟರೆ ಸಾಕು.

**ಶ್ರೀ ಎಂ.ಬಿ.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಮ್ಮ priority ಇರುವುದು beautification ಮಾಡುವುದಲ್ಲ, ನಮ್ಮcore areaಏನಿರುತ್ತದೆ, ಅದಕ್ಕೆ ನೀರನ್ನು ಕೊಡುವುದಿರುತ್ತದೆ. Beautification ನಂತಹ ವಿಚಾರಗಳಲ್ಲಿ ಹಣಕಾಸನ್ನು ಖರ್ಚು ಮಾಡುವುದಕ್ಕೆ ನಮ್ಮ ಮುಖ್ಯಮಂತ್ರಿಗಳು ಸ್ವಲ್ಪಮಟ್ಟಿಗೆ ಬಿಗುವಿನಿಂದ ನಡೆದುಕೊಳ್ಳುತ್ತಾರೆ. ನೀರಾವರಿ potential create ಮಾಡುವುದಕ್ಕೆ ಅವರು ಹೆಚ್ಚಿನ ಆದ್ಯತೆಯನ್ನು ನೀಡುತ್ತಾರೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಆಲಮಟ್ಟಿ ಅಣೆಕಟ್ಟೆಯ beautificationಗೆ ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡಿದಿರಿ, ಸುಮಾರು 100 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿರಬಹುದು. ಆ ಸಂದರ್ಭದಲ್ಲಿ ನಾವೇನೂ ಬೇಡವೆಂದು ಹೇಳಿದ್ದೇವೆಯೇ? ನಮಗೆ ಈ ಉದ್ದೇಶಕ್ಕಾಗಿ ಕೇವಲ 2 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದರೂ ಸಾಕು.

**ಶ್ರೀ ರಘುನಾಥರಾವ್ ಮಲ್ಕಾಪೂರೆ:–** ಮಾನ್ಯ ಸಭಾಪತಿಯವರೇ, ಆಲಮಟ್ಟಿ ಜಲಾಶಯ ಮಾನ್ಯ ಸಚಿವರ ಜಿಲ್ಲೆಯಲ್ಲಿದೆಯಲ್ಲವೆ, ಅದಕ್ಕಾಗಿ ಅವರು ಸುಮ್ಮನಿದ್ದಾರೆ.

**ಶ್ರೀ ಎಂ.ಬಿ.ಪಾಟೀಲ್(ಜಲಸಂಪನ್ಮೂಲ ಸಚಿವರು):–** ಮಾನ್ಯ ಸಭಾಪತಿಯವರೇ, ಇಲ್ಲ, ತಾವು ಹಾಗೆಂದು ತಿಳಿದುಕೊಳ್ಳಬೇಡಿ. ಕೃಷ್ಣರಾಜ ಸಾಗರ ಅಣೆಕಟ್ಟೆಯ ಆಧುನೀಕರಣ ಕಾಮಗಾರಿಗಾಗಿಯೂ ನಾವು ಬಹಳ ದೊಡ್ಡ ಪ್ರಮಾಣದಲ್ಲಿ ಹಣವನ್ನು ಖರ್ಚು ಮಾಡುತ್ತಿದ್ದೇವೆ. ಮೈಸೂರಿನ ಅರಸರು ಅರಮನೆಯಲ್ಲಿದ್ದ ಒಡವೆಗಳನ್ನೆಲ್ಲಾ ಒತ್ತೆ ಇಟ್ಟು ತಂದಂತಹ ಹಣದಿಂದ ಕೆ.ಆರ್.ಎಸ್. ಅಣೆಕಟ್ಟೆಯನ್ನೇನು ನಿರ್ಮಾಣ ಮಾಡಿದ್ದಾರೆ, ಅವರ ನೆನಪಿಗಾಗಿ ಆ ಅಣೆಕಟ್ಟೆ ನಿರ್ಮಾಣವಾದಂದಿನಿಂದ ಇಲ್ಲಿಯವರೆಗೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅವರ ಪ್ರತಿಮೆಯನ್ನು ಸಹ ಸ್ಥಾಪಿಸಿರಲಿಲ್ಲ. ಅಣೆಕಟ್ಟೆಯ ರೂಪುರೇಷೆಗಳನ್ನು ನಿರ್ಮಿಸಿದ ಸರ್.ಎಂ.ವಿಶ್ವೇಶ್ವರಯ್ಯನವರ ಪ್ರತಿಮೆ ಕೂಡ ಅಲ್ಲಿರಲಿಲ್ಲ. ಅದಕ್ಕಾಗಿ ಸುಮಾರು 8.5 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಅಲ್ಲಿ ಅವರ ಪ್ರತಿಮೆಗಳನ್ನು ಅಳವಡಿಸುವಂತಹ ವ್ಯವಸ್ಥೆಯನ್ನು ನಾವು ಮಾಡುತ್ತಿದ್ದೇವೆ. ಅಷ್ಟೇ ಅಲ್ಲದೆ ಕೆ.ಆರ್.ಎಸ್.ನ ಸಮಗ್ರವಾದಂತಹ ಆಧುನೀಕರಣ ಕಾಮಗಾರಿಗಳನ್ನು ಸಹ ಕೈಗೊಳ್ಳುತ್ತಿದ್ದೇವೆ. ಹೀಗಾಗಿ ಅದು ಆಲಮಟ್ಟಿ ಇರಬಹುದು, ಕೆ.ಆರ್.ಎಸ್. ಇರಬಹುದು, Gugal bridge-com-barrageಇರಬಹುದು ಇಂತಹ ಯಾವುದೇ ಜಲಾಶಯಗಳ ವಿಚಾರದಲ್ಲಿ ನಾವೇನು ಬೇರೆ ಬೇರೆ ಎನ್ನುವಂತಹ ಭಾವನೆಯನ್ನು ಹೊಂದಿಲ್ಲ. ಮಾನ್ಯ ಸಚಿವರು ಪ್ರಸ್ತಾಪಿಸಿರುವ Gugal bridge-com-barrageವಿಚಾರದಲ್ಲಿ ಸಹ ನಾವು ಸೂಕ್ತವಾದ ಕ್ರಮವನ್ನು ಕೈಗೊಳ್ಳುತ್ತೇವೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ಒಂದು ಅಂಶವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ತಾವೇನು 2 ಕೋಟಿ ರೂಪಾಯಿಗಳನ್ನು ನಮ್ಮ ಮನವಿಯ ಮೇಲೆ ಮಂಜೂರು ಮಾಡಿದ್ದೀರಿ, ಅರಣ್ಯ ಇಲಾಖೆಯವರು ಈಗಾಗಲೇ ಒಂದು ಕೋಟಿ ರೂಪಾಯಿಗಳಷ್ಟು ಹಣವನ್ನು ತೆಗೆದಿರಿಸಿ ಆ ಪ್ರದೇಶವನ್ನು ಹಸಿರೀಕರಣ ಮಾಡುವುದಕ್ಕೆ ಎಲ್ಲ ಸಿದ್ಧತೆಗಳನ್ನೂ ನಡೆಸಿದ್ದಾರೆ. ಪ್ರವಾಸೋದ್ಯಮ ಇಲಾಖೆಯಿಂದ ಅಲ್ಲಿಗೆ ಎರಡು ಬೋಟ್‌ಗಳನ್ನು ಕೂಡ ಒದಗಿಸುವುದಾಗಿ ಇವತ್ತಿನ ದಿವಸ ತಿಳಿಸಿದ್ದಾರೆ. ಏಕೆಂದರೆ ಅದು picnic spot ಆಗಿದೆ. ನಾವು ದುಬೈ, ಬ್ಯಾಂಕಾಕ್, ಸಿಂಗಪೂರ್, ಲಂಡನ್ ಮುಂತಾದ ಪ್ರದೇಶಗಳಿಗೆಲ್ಲಾ ಪ್ರವಾಸ ಹೋಗಿಬರುತ್ತೇವೆ. 100 ಕೋಟಿ ರೂಪಾಯಿಗಳಷ್ಟು ಮೌಲ್ಯದ ಸುಮಾರು ಒಂದು ಕಿಲೋ ಮೀಟರ್ ಇರುವಂತಹ ಆ ಬ್ಯಾರೇಜ್ ಅತ್ಯಂತ ಸುಂದರವಾಗಿದ್ದು, ಸುಮಾರು 40,000 ಎಕರೆಗೆ ನೀರಾವರಿ ಆಗುತ್ತದೆ. ಸುಮಾರು 100 ರಿಂದ 150 ಗ್ರಾಮಗಳಿಗೆ ಕುಡಿಯುವ ನೀರನ ಸೌಲಭ್ಯವನ್ನು ಕಲ್ಪಿಸುತ್ತಿದ್ದು, ಶಹಾಪುರ, ಸುರಪುರ, ಯಾದಗಿರಿ ಮತ್ತು ದೇವದುರ್ಗ ಈ 4 ತಾಲ್ಲೂಕುಗಳಿಗೆ ಒಳಪಟ್ಟಿದ್ದು, ಅವುಗಳ ಅಂತರವನ್ನು ಕಡಿಮೆ ಮಾಡಿ, ಆ ಭಾಗದ ರೈತರು ಮತ್ತಿತರರು ಲಗ್ನ–ಮುಹೂರ್ತ ಮುಂತಾದುವುಗಳನ್ನು ಮಾಡುವಂತಹ ಒಂದು ಒಳ್ಳೆಯ ಪ್ರದೇಶವಾಗಿದ್ದು, ಬಹಳ ಅನುಕೂಲಕರವಾಗಿದೆ. ಮಾನ್ಯ ಸಚಿವರು ಕೂಡ ಅಲ್ಲಿಗೆ ಭೇಟಿ ಕೊಟ್ಟಂತಹ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ಗಮನಿಸಿದ್ದಾರೆ. ಜೊತೆಗೆ ಅಲ್ಲಿ ಸಿಗುವಂತಹ ಸೂಸ್ಲಾ ಒಗ್ಗರಣೆಯನ್ನು ಸಹ ಸವಿದಿದ್ದಾರೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ಬಿ.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಸಲಹೆಗಳನ್ನು ನಾವು ಸಕಾರಾತ್ಮಕವಾಗಿ ಪರಿಗಣಿಸುತ್ತೇವೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಟೆಂಡರ್ ಕರೆದು ಸಿದ್ಧತೆಗಳೆಲ್ಲಾ ಆಗಿವೆ, ಮಾನ್ಯ ಸಚಿವರು ಎಂ.ಡಿ. ಅವರಿಗೆ ಒಂದು ಮಾತನ್ನು ಹೇಳಿದರೆ ಸಾಕು ಆ Gugal bridge-com-barrageನ beautification ಕಾಮಗಾರಿಯನ್ನು ಅವರು ಪ್ರಾರಂಭಿಸಿಬಿಡುತ್ತಾರೆ. ಇವತ್ತು ನಮ್ಮ ರಾಜ್ಯದ ಬಹಳಷ್ಟು ಕಡೆಗಳಲ್ಲಿ ಕೆನಾಲ್ ಪ್ರಾಜೆಕ್ಟ್‌ಗಳನ್ನು ಕೈಗೊಳ್ಳಲಾಗಿದೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಇಷ್ಟೆಲ್ಲಾ ಆಗಿರುವುದರಿಂದ ಅಲ್ಲಿ ಇವತ್ತು ಎಂ.ಬಿ.ಪಾಟೀಲ್‌ರವರ ಪ್ರತಿಮೆಯನ್ನು ಸ್ಥಾಪನೆ ಮಾಡಲೇಬೇಕಾಗುತ್ತದೆ.

**ಸಭಾಪತಿಯವರು:–** ಅವರು ಬದುಕಿರುವಾಗಲೇ ನೀವು ಅವರ ಪ್ರತಿಮೆಯನ್ನು ಸ್ಥಾಪನೆ ಮಾಡಬೇಕೆನ್ನುತ್ತೀರೇನು?

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಚಿವರು ಇವತ್ತು ಬಹಳ ಖುಷಿಯಾಗಿದ್ದಾರೆ, ಪ್ರತಿಮೆಯನ್ನು ಸ್ಥಾಪಿಸಲು ಅವರು ಒಂದು ಒಳ್ಳೆಯ ಫೋಟೋ ಕೊಟ್ಟರೆ ಮಾನ್ಯ ಬಸವರಾಜ ಪಾಟೀಲ್ ಇಟಗಿಯವರು ಅಲ್ಲಿ ಅವರ ಪ್ರತಿಮೆಯನ್ನು ಹಾಕಿಸಬಹುದಾಗಿದೆ.

**ಶ್ರೀ ಎಂ.ಬಿ.ಪಾಟೀಲ್:–** ಮಾನ್ಯ ಸಭಾಪತಿಯವರೇ, ಎಲ್ಲಿಯೂ ನನ್ನ ಪ್ರತಿಮೆ ಸ್ಥಾಪಿಸುವುದೇನೂ ಬೇಕಾಗಿಲ್ಲ. ಬಹುಶಃ ಮಾನ್ಯ ಉಗ್ರಪ್ಪನವರಿಗೆ ಅವರ ಪ್ರತಿಮೆಯನ್ನು ಸ್ಥಾಪಿಸಿಕೊಳ್ಳಬೇಕೆಂಬ ಬಯಕೆ ಇರುವಂತಿದೆ. ಅದನ್ನು ತಾವು ಪರಿಗಣಿಸಬೇಕಾಗುತ್ತದೆ.

**ಶ್ರೀ ರಘುನಾಥರಾವ್ ಮಲ್ಕಾಪೂರೆ:–** ಮಾನ್ಯ ಸಭಾಪತಿಯವರೇ, ಮಂತ್ರಿಗಳು propose ಮಾಡಿದರೆ ನಾನು ಅನುಮೋದನೆ ಮಾಡುತ್ತೇನೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಮಾನ್ಯ ಸಭಾಪತಿಯವರೇ, ಜಲಸಂಪನ್ಮೂಲ ಇಲಾಖೆ ವತಿಯಿಂದ ರಾಜ್ಯದಲ್ಲಿ ಸಾಕಷ್ಟು ಪ್ರಾಜೆಕ್ಟ್‌ಗಳನ್ನು ಕೈಗೊಂಡಿದೆ. ಆದರೆ ಸರ್ವಿಸ್ ರೋಡ್‌ಗಳ ವ್ಯವಸ್ಥೆ ಇಲ್ಲದ ಕಾರಣದಿಂದಾಗಿ ದೊಡ್ಡ ದೊಡ್ಡ ಕಾಲುವೆಗಳಿರುವಲ್ಲಿಗೆ ಹೋಗುವುದಕ್ಕೆ ಸಾಧ್ಯವಾಗದಂತಹ ಪರಿಸ್ಥಿತಿಯಿಂದಾಗಿ ಬಹಳ ದೊಡ್ಡ ಸಮಸ್ಯೆ ಆಗುತ್ತಿದೆ. ಎಂ.ಡಿ. ಅವರು ಇನ್ಸ್‌ಪೆಕ್ಷನ್‌ಗೆ ಬರುತ್ತಾರೆ ಎಂದ ಕೂಡಲೇ ಅಲ್ಲಲ್ಲಿ morrum ಹಾಕಿ ಅವತ್ತಿನ ದಿನಕ್ಕಷ್ಟೇ ಆ ರಸ್ತೆಯನ್ನು ಸರಿಪಡಿಸುತ್ತಾರೆ. ಮಾನ್ಯ ಸಚಿವರು ಪ್ರತಿ ವರ್ಷ ಕೂಡ 100 ರಿಂದ 200 ಕೋಟಿ ರೂಪಾಯಿಗಳನ್ನು ಈ ಎಲ್ಲ ಪ್ರಾಜೆಕ್ಟ್‌ಗಳಲ್ಲಿನ ಸರ್ವಿಸ್ ರೋಡ್‌ಗಳಿಗಾಗಿ ತೆಗೆದಿರಿಸುವಂತಹ ಕೆಲಸ ಆಗಬೇಕು. ಏಕೆಂದರೆ ನೀವು ನಿರ್ವಹಣೆಗೆ ಇದು

ಬಹಳ ಅವಶ್ಯಕವಾಗುತ್ತದೆ. ಏಕೆಂದರೆ ಮುಂದಿನ ದಿನಗಳಲ್ಲಿ ಅಲ್ಲಿ ಗೇಟ್‌ಗಳನ್ನು ಅಳವಡಿಸಿದ ನಂತರ ಅಲ್ಲಿ ಸಮರ್ಪಕವಾದ ಸರ್ವಿಸ್ ರಸ್ತೆ ಇಲ್ಲವೆಂದರೆ ಸಮಯಕ್ಕೆ ಸರಿಯಾಗಿ ಸಿಬ್ಬಂದಿ ಅಲ್ಲಿಗೆ ಹೇಗೆ ಹೋಗಿ ತಲುಪಲು ಸಾಧ್ಯ? ಅಷ್ಟೇ ಅಲ್ಲದೆ ಆ ಸರ್ವಿಸ್ ರಸ್ತೆಗಳು ಎಷ್ಟು ಸಹಾಯಕವಾಗುತ್ತವೆ ಎಂದರೆ, ನೀರಾವರಿ ವ್ಯಾಪ್ತಿಗೆ ಒಳಪಟ್ಟ ಪ್ರದೇಶದಲ್ಲಿ ಮೊದಲೇ ಸರಿಯಾದ internal ರಸ್ತೆಗಳಿಲ್ಲ. ಇವರು ಆ ಸರ್ವಿಸ್ ರೋಡ್ ಮಾಡಿಕೊಟ್ಟರೆ ರೈತರು ಸಹ ತಮ್ಮ ಉತ್ಪನ್ನಗಳನ್ನು ಜಮೀನಿನಿಂದ ಮಾರುಕಟ್ಟೆಗೆ ಸಾಗಿಸಲು ಬಹಳ ಅನುಕೂಲವಾಗುತ್ತದೆ.

**ಶ್ರೀ ಎನ್.ಎಸ್.ಬೋಸರಾಜ್:–** ಮಾನ್ಯ ಸಭಾಪತಿಯವರೇ, ಇದು ಬಹಳ ಅವಶ್ಯಕವಾಗಿದ್ದು, ಈ ಬಗ್ಗೆ ಪ್ರಶ್ನಿಸಿದರೆ ಅಧಿಕಾರಿಗಳು ಆ ಕಾಮಗಾರಿಗಳನ್ನು ಕೈಗೊಳ್ಳಲು ಇಲಾಖೆಯಲ್ಲಿ ಹಣವಿಲ್ಲ ಎಂದು ಉತ್ತರ ಕೊಡುತ್ತಾರೆ.

**ಸಭಾಪತಿಯವರು:–** ಸಚಿವರು ಉತ್ತರ ಕೊಡುತ್ತಾರೆ, ತಾವು ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಎಂ.ಬಿ.ಪಾಟೀಲ್:–** ಮಾನ್ಯ ಸಭಾಪತಿಯವರೇ, ಈ ನೀರಾವರಿ ಕಮಾಂಡ್ ಏರಿಯಾದಲ್ಲಿ ಬರುವಂತಹ ಅಚ್ಚುಕಟ್ಟು ಪ್ರದೇಶದಲ್ಲಿ ಈಗಾಗಲೇ ಮಾನ್ಯ ಸದಸ್ಯರು ತಿಳಿಸಿರುವಂತೆ ಸಾಕಷ್ಟು ಸಮಸ್ಯೆಗಳಿವೆ. ಈ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾವು ಕಳೆದ ಎರಡು ವರ್ಷಗಳಿಂದಲೂ ಮನವಿ ಮಾಡುತ್ತಿದ್ದು, ವಿಶೇಷವಾಗಿ ಅಚ್ಚುಕಟ್ಟು ಪ್ರದೇಶದ ಇಂಟರ್ನಲ್ ರಸ್ತೆಗಳಿಗಾಗಿಯೇ ಸುಮಾರು 200 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿಕೊಡಬೇಕೆಂದು ವಿನಂತಿಸಿದ್ದೆವು. ಈಗ ಆ ಕಾಮಗಾರಿಗೆ ತಗಲುವ ವೆಚ್ಚ ಸ್ವಲ್ಪ ಜಾಸ್ತಿಯಾಗುವುದರಿಂದ ಸುಮಾರು 300 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಈ ಬಗ್ಗೆ ಮುಖ್ಯಮಂತ್ರಿಗಳ ಬಳಿ ಚರ್ಚೆ ಮಾಡಿ, ಇಡೀ ರಾಜ್ಯದಲ್ಲಿನ ಕೆನಾಲ್‌ಗಳು ಮತ್ತು ಜಲಾಶಯಗಳ ಅಚ್ಚುಕಟ್ಟು ಪ್ರದೇಶದಲ್ಲಿನ ಇಂಟರ್ನಲ್ ರಸ್ತೆಗಳನ್ನು ಸುಧಾರಿಸುವಂತಹ ಕೆಲಸವನ್ನು ಮಾಡುತ್ತೇವೆ. ಏಕೆಂದರೆ ಈ ರಸ್ತೆಗಳು ನಮ್ಮ ಇಂಜಿನಿಯರ್ಸ್ ಮತ್ತು ರೈತರಿಗೂ ಸಹ ಬಹಳ ಅವಶ್ಯಕವಾಗಿದ್ದು, ಸರ್ವಿಸ್ ಮತ್ತು ಮೇಂಟೆನೆನ್ಸ್ ಮಾಡುವುದಕ್ಕಾಗಿ ಹಣಕಾಸಿನ ಲಭ್ಯತೆಯ ಅಗತ್ಯತೆ ಇರುವುದಾಗಿ ಸನ್ಮಾನ್ಯ ಮುಖ್ಯಮಂತ್ರಿಯವರಿಗೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಅವರ ಜೊತೆಯಲ್ಲಿ ಚರ್ಚಿಸಿದ ನಂತರ ಆ ಬಗ್ಗೆ ನಿರ್ಣಯವನ್ನು ಕೈಗೊಳ್ಳುತ್ತೇವೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಇವತ್ತು ಅಚ್ಚುಕಟ್ಟು ಪ್ರದೇಶದಲ್ಲಿರುವಂತಹ ನಾಲೆಗಳ ದಂಡೆಯಲ್ಲಿನ ಸಾಕಷ್ಟು ರೈತರು ತಮ್ಮ ಜಮೀನುಗಳಿಗೆ ನೀರು ಹರಿಸುವುದು, ಅಲ್ಲಿ ಕೃಷಿ ಚಟುವಟಿಕೆಗಳನ್ನು ನಡೆಸುವುದನ್ನು ನಾವು ನೋಡಿದ್ದೇವೆ. ಮಾನ್ಯ ಸಚಿವರಲ್ಲಿ ನನ್ನ ವಿನಂತಿ ಏನೆಂದರೆ,

“ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಈ ನಾಲೆಗಳಿಗೆ ಎಸ್ಕೇಪ್ ಗೇಟ್‌ಗಳನ್ನು ಅಳವಡಿಸಬೇಕು. ಏಕೆಂದರೆ ಮಾರ್ಚ್–ಏಪ್ರಿಲ್ ತಿಂಗಳ ನಂತರ ಜನ/ಜಾನುವಾರುಗಳು, ಪ್ರಾಣಿ–ಪಕ್ಷಿಗಳು ಈ ರೀತಿ ಎಲ್ಲ ಜೀವರಾಶಿಗಳಿಗೂ ಕುಡಿಯುವ ನೀರಿನ ತೊಂದರೆ ಇರುತ್ತದೆ. ಅಂತಹ ಸಂದರ್ಭಗಳಲ್ಲಿ ನಾಲೆಗಳಲ್ಲಿ ಸ್ವಲ್ಪಮಟ್ಟಿಗೆ ನೀರನ್ನು ಬಿಟ್ಟಾಗ ಏಪ್ರಿಲ್, ಮೇ ಮತ್ತು ಜೂನ್ ತಿಂಗಳವರೆಗಿನ ಬೇಸಿಗೆ ಕಾಲದಲ್ಲಿ ಅಂದರೆ, ಮತ್ತೆ ಮಳೆಗಾಲ ಪ್ರಾರಂಭವಾಗುವವರೆಗೆ ಆ ನಾಲೆಗಳಲ್ಲಿ ಸ್ವಲ್ಪ ಮಟ್ಟಿಗೆ ನೀರನ್ನು ಹಿಡಿದಿಟ್ಟುಕೊಂಡಾಗ ಮಾತ್ರ ಎಲ್ಲರಿಗೂ ಅನುಕೂಲವಾಗುತ್ತದೆ. ಈ ಬಗ್ಗೆ ಸಹ ಮಾನ್ಯ ಸಚಿವರು ಗಮನ ಹರಿಸಬೇಕು.

ಎನ್.ಆರ್.ಬಿ.ಸಿ. ಯಲ್ಲಿ ಲಿಂಗಸಗೂರು, ದೇವದುರ್ಗ, ರಾಯಚೂರು ಮತ್ತು ಮಾನ್ವಿ ಈ 4 ತಾಲ್ಲೂಕುಗಳ ಸುಮಾರು 500 ರಿಂದ 600 ಹಳ್ಳಿಗಳಿಗೆ ಎನ್.ಆರ್.ಬಿ.ಸಿ. ಯಿಂದ ಕುಡಿಯುವ ನೀರಿನ ಅನುಕೂಲವಾಗುವಂತಹ ವ್ಯವಸ್ಥೆ ಆಗಿದೆ. ಈ ಮೊದಲು ಅಲ್ಲೆಲ್ಲಾ ಕುಡಿಯುವ ನೀರಿಗೆ ಬಹಳ ಕಷ್ಟದ ಪರಿಸ್ಥಿತಿ ಇತ್ತು. ಇನ್ನು ಹತ್ತಿಪ್ಪತ್ತು ವರ್ಷಗಳ ನಂತರ ಇವತ್ತೇನು ತುಂಗಭದ್ರಾ ನದಿ ನೀರನ್ನು ಯಾವ ರೀತಿ ಬೇಸಾಯಕ್ಕೆ ಸ್ಥಗಿತಗೊಳಿಸಿ ಕುಡಿಯುವ ನೀರಿಗಷ್ಟೇ ಸೀಮಿತಗೊಳಿಸಿದ್ದಾರೆ, ಅಂತಹ ಒಂದು ಸಂದರ್ಭ ನಮ್ಮಲ್ಲಿಯೂ ಬರಬಹುದು ಎನ್ನುವುದು ನನ್ನ ಒಂದು ಅನಿಸಿಕೆಯಾಗಿದೆ. ಆದಕಾರಣ ಮಾನ್ಯ ಸಚಿವರು ನಮ್ಮ ಜಿಲ್ಲೆಯವ್ಯಾಪ್ತಿಯಲ್ಲಿ ಬರುವಂತಹ ಎಲ್ಲ ಕೆರೆಗಳನ್ನೂ ಕೃಷ್ಣಭಾಗ್ಯ ಜಲ ನಿಗಮದವರು ಹ್ಯಾಂಡ್ ಓವರ್ ಮಾಡಿಕೊಳ್ಳಬೇಕು. ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿನ ಕೆರೆಗಳಿರಲಿ, ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವಂತಹ ಕೆರೆಗಳಾಗಲಿ ಅವುಗಳನ್ನೆಲ್ಲಾ ಹ್ಯಾಂಡ್ ಓವರ್ ಮಾಡಿಕೊಂಡು ಆ ಕೆರೆಗಳನ್ನು ತುಂಬಿಸುವಂತಹ ಕೆಲಸವನ್ನು ಮಾಡುವ ಮೂಲಕ ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ನಿವಾರಿಸಬೇಕು. ಇದರಿಂದ ರಾಯಚೂರು ಜಿಲ್ಲೆಯಲ್ಲಿನ ಬಹುತೇಕ ಗ್ರಾಮಗಳಿಗೆ ಅನುಕೂಲವಾಗುತ್ತದೆ ಎನ್ನುವಂತಹ ಮಾತನ್ನು ಹೇಳುತ್ತಾ, ಅಮಾವಾಸ್ಯೆಗೋ–ಹುಣ್ಣಿಮೆಗೋ ಒಮ್ಮೆ ಮಾತನಾಡುವಂತಹ ನಮಗೆ ತಾವು ಈ ದಿನ ಬಹಳಷ್ಟು ಸಮಯಾವಕಾಶವನ್ನು ಕೊಟ್ಟಿದ್ದೀರಿ. ಅದಕ್ಕಾಗಿ ತಮಗೆ ಎರಡೂ ಕೈಮುಗಿದು ನಮಸ್ಕರಿಸುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಎಂ.ಬಿ.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಎಸ್ಕೇಪ್‌ಗಳನ್ನು ಕೆನಾಲ್‌ಗಳಿಗೆ ಅಳವಡಿಸಿದರೆ ಆ ಭಾಗದ ಜನರಿಗೆ ಬೇಸಿಗೆ ಕಾಲದಲ್ಲಿ ಬಹಳ ಅನುಕೂಲವಾಗುತ್ತದೆ ಎನ್ನುವಂತಹ ಮಾತನ್ನು ತಿಳಿಸಿದ್ದಾರೆ. ಇದರಿಂದ ಅನುಕೂಲವಾಗುವುದರ ಜೊತೆಗೆ ಕೆಲವೊಮ್ಮೆ ದುರುಪಯೋಗವೂ ಆಗುವ ಸಾಧ್ಯತೆಗಳಿವೆ. ಅದಕ್ಕಾಗಿ ಆ ಬಗ್ಗೆ ನಾವು ಬಹಳ ಯೋಚಿಸಿ ನಿರ್ಣಯವನ್ನು ಕೈಗೊಳ್ಳಬೇಕಾಗುತ್ತದೆ. ಆ ದೃಷ್ಟಿಯಿಂದ ಅದನ್ನು ನಾವು ಮಾಡುತ್ತೇವೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎರಡನೆಯದಾಗಿ ಆ ಭಾಗದಲ್ಲಿ ಬರುವಂತಹ ಎಲ್ಲ ಕೆರೆಗಳನ್ನು ಸಹ ಕೆ.ಬಿ.ಜೆ.ಎನ್.ಎಲ್. ವ್ಯಾಪ್ತಿಗೆ ತೆಗೆದುಕೊಂಡು ಆ ಕೆರೆಗಳನ್ನು ತುಂಬಿಸುವಂತಹ ಕೆಲಸ ಮಾಡಬೇಕೆಂದು ಮಾನ್ಯ ಸದಸ್ಯರು ವಿನಂತಿಸಿದ್ದಾರೆ. ತಮ್ಮ ಗಮನಕ್ಕೆ ತರಬಯಸುವುದೇನೆಂದರೆ, ಕೆಲವು ಕೆರೆಗಳನ್ನು ತುಂಬಿಸುವಂತಹ ಕೆಲಸ ಸಣ್ಣ ನೀರಾವರಿ ಇಲಾಖೆಯಿಂದ ಆಗಬೇಕಾಗಿತ್ತು. ಆದರೂ ಸಹ ಇದು ಬಹಳ ಪ್ರಮುಖವಾಗಿರುವಂತಹ ಯೋಜನೆ ಎಂಬ ಕಾರಣಕ್ಕಾಗಿ ನಾವು ಇಲ್ಲಿಯವರೆಗೆ ಸುಮಾರು ನಾಲ್ಕರಿಂದ ಐದು ಸಾವಿರ ಕೋಟಿ ರೂಪಾಯಿಗಳಷ್ಟು ವೆಚ್ಚದಲ್ಲಿ ಬೇರೆ ಬೇರೆ ಕೆರೆಗಳನ್ನು ತುಂಬಿಸುವಂತಹ ಯೋಜನೆಗಳನ್ನು ನಮ್ಮ ಇಲಾಖೆಯಿಂದ ಕೈಗೊಂಡಿದ್ದೇವೆ. ಬಹುಶಃ ಬಹಳ ದೊಡ್ಡ ಪ್ರಮಾಣದಲ್ಲಿ ಈ ಕೆಲಸ ಆಗಿದೆ. ಈಗಾಗಲೇ ಸುಮಾರು 1300 ಕೆರೆಗಳನ್ನು ತುಂಬಿಸಲಾಗಿದೆ. ಈ ಮೊದಲು ಇಂತಹ 63 ಯೋಜನೆಗಳಿದ್ದು, ಇತ್ತೀಚೆಗೆ ಅವುಗಳ ಸಂಖ್ಯೆ 70 ಆಗಿದ್ದು, ಇಷ್ಟೂ ಯೋಜನೆಗಳನ್ನು ನಮ್ಮ ಇಲಾಖೆಯಿಂದ ಕೈಗೊಳ್ಳಲಾಗಿದೆ. ಅವುಗಳಲ್ಲಿ 15 ಯೋಜನೆಗಳ ಕಾಮಗಾರಿಗಳು ಸಂಪೂರ್ಣಗೊಂಡಿವೆ. ಬಹಳ ದೊಡ್ಡ ಪ್ರಮಾಣದಲ್ಲಿ ಕೈಗೊಳ್ಳುತ್ತಿರುವ ಈ ಕೆರೆ ತುಂಬಿಸುವ ಯೋಜನೆಗಾಗಿ ನಮಗೆ ಪ್ರತ್ಯೇಕವಾದ ಅನುದಾನವೇನೂ ಲಭ್ಯವಾಗುವುದಿಲ್ಲ. ಸಣ್ಣ ನೀರಾವರಿ ಇಲಾಖೆ ಮುಖಾಂತರ ಮಾಡಬೇಕಾಗಿದ್ದ ಕೆಲಸವನ್ನು ಭಾರಿ ನೀರಾವರಿ ಇಲಾಖೆ ಮುಖಾಂತರ ನಾವು ಮಾಡುತ್ತಿದ್ದೇವೆ. ಅದಕ್ಕಾಗಿ ಮಾನ್ಯ ಸದಸ್ಯರು ತಿಳಿಸಿರುವಂತೆ ಜಿಲ್ಲಾ ಪಂಚಾಯತ್ ಕೆರೆಗಳು, ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಗೆ ಬರುವ ಕೆರೆಗಳನ್ನೆಲ್ಲಾ ಹ್ಯಾಂಡ್ ಓವರ್ ಮಾಡಿಕೊಂಡು ಆ ಕೆರೆಗಳನ್ನು ತುಂಬಿಸುವಂತಹ ಕೆಲಸ ಮಾಡುವುದು ಬಹಳ ಕಷ್ಟವಾಗುತ್ತದೆ. Unless and until, ನಮಗೆ ಸ್ವಲ್ಪಮಟ್ಟಿಗೆ sufficient ಆಗಿ separate allocation ಬಂದರೆ ಆ ವ್ಯವಸ್ಥೆಯನ್ನು ಮಾಡಬಹುದಾಗಿದೆ. ಈ ಬಗ್ಗೆ ಸಹ ನಾನು ಸನ್ಮಾನ್ಯ ಮುಖ್ಯಮಂತ್ರಿಗಳ ಬಳಿ ಮನವಿ ಮಾಡಿಕೊಂಡಿದ್ದೇನೆ. ಏಕೆಂದರೆ ಕಳೆದ ಏಳೆಂಟು ವರ್ಷಗಳಿಂದ ಕೂಡ ನಾವು ಇದನ್ನು ಮಾಡಿಕೊಂಡು ಬಂದಿದ್ದೇವೆ, ಅದಕ್ಕೆ ಪ್ರತ್ಯೇಕವಾದ ಅಲೋಕೇಷನ್ ಬೇಕು. ಈ ಕಾಮಗಾರಿಗಳನ್ನು ಸಣ್ಣ ನೀರಾವರಿ ಇಲಾಖೆಯ ಮುಖಾಂತರ ಕೈಗೆತ್ತಿಕೊಳ್ಳುವುದಾದರೂ ಆ ವಿಚಾರದಲ್ಲಿ ನಮ್ಮ ಅಭ್ಯಂತರವೇನೂ ಇಲ್ಲ ಎನ್ನುವಂತಹ ಮಾತನ್ನು ಸಹ ತಿಳಿಸಿದ್ದೇವೆ. ಆದಾಗ್ಯೂ ಸಹ ಕೆರೆಗಳನ್ನು ತುಂಬಿಸುವ ಯೋಜನೆ ಬಹಳ ಪ್ರಮುಖವಾಗಿದ್ದು, ಅದರಿಂದ ಅಂತರ್ಜಲದ ಮಟ್ಟ ಏರಿಕೆಯಾಗುತ್ತದೆ, ಜನ/ಜಾನುವಾರುಗಳಿಗೆ ಕುಡಿಯುವ ನೀರಿನ ಅನುಕೂಲವಾಗುತ್ತದೆ ಎನ್ನುವ ದೃಷ್ಟಿಯಿಂದ ಇಷ್ಟು ಕಾಮಗಾರಿಗಳನ್ನು ನಾವು ಕೈಗೊಂಡಿದ್ದೇವೆ. ಆದರೆ ಜಿಲ್ಲಾ ಪಂಚಾಯತಿ ಕೆರೆಗಳು, ಸಣ್ಣ ನೀರಾವರಿ ವ್ಯಾಪ್ತಿಯಲ್ಲಿ ಬರುವಂತಹ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೆರೆಗಳನ್ನೆಲ್ಲಾ ತೆಗೆದುಕೊಳ್ಳುವುದು ಕಷ್ಟವಾಗುವುದರಿಂದ ಅದನ್ನು ಯಾವ ಸಂದರ್ಭಗಳಲ್ಲಿ ಕೆರೆ ತುಂಬುವ ಯೋಜನೆಗಳಿದ್ದವು ಅದಷ್ಟನ್ನು ಮಾತ್ರ ನಾವು ನಮ್ಮ ಜಲಸಂಪನ್ಮೂಲ ಇಲಾಖೆಯ ಮುಖಾಂತರ ಕೈಗೆತ್ತಿಕೊಂಡಿದ್ದೇವೆ ಎನ್ನುವಂತಹ ವಿಚಾರವನ್ನು ಈ ಸಂದರ್ಭದಲ್ಲಿ ನಾನು ತಮ್ಮ ಮುಖಾಂತರ ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

**ಸಭಾಪತಿಯವರು:–** ಧನ್ಯವಾದಗಳು, ಈಗ ಸದನವನ್ನು ಮಧ್ಯಾಹ್ನ 3:30 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(90) 09-02-2017 ಎಸ್‌ಪಿಆರ್/ಎಂಡಿ 3.50**

**(ಮಧ್ಯಾಹ್ನ 1 ಗಂಟೆ 59 ನಿಮಿಷಕ್ಕೆ ಭೋಜನ ವಿರಾಮಕ್ಕೆ ಮುಂದೂಡಲ್ಪಟ್ಟ ಸದನವು ಪುನಃ 3 ಗಂಟೆ 52 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಮಾನ್ಯ ಉಪ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**<u>ಗಮನ ಸೆಳೆಯುವ ಸೂಚನೆಗಳು</u>**

**ಆ) ವಿಷಯ: ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯಲ್ಲಿ ದಿನಾಂಕ 04/05/2016 ರಂದು 412 ಕೋಟಿ ರೂಪಾಯಿಗಳ ಐಸಿಟಿ ಹಂತ–3 ನ್ನು ರದ್ದು ಮಾಡಿರುವ ಕಾಮಗಾರಿ ಯೋಜನೆಯನ್ನು ಪಾರಂಭಿಸುವ ಬಗ್ಗೆ**

– – –

**ಶ್ರೀ ಬಸವರಾಜ್ ಎಸ್.ಹೊರಟ್ಟಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯಲ್ಲಿ ದಿನಾಂಕ 04/05/2016 ರಂದು 412 ಕೋಟಿ ರೂಪಾಯಿಗಳ ಐಸಿಟಿ ಹಂತ–3 ನ್ನು ರದ್ದು ಮಾಡಿರುವ ಕಾಮಗಾರಿ ಯೋಜನೆಯನ್ನು ಪ್ರಾರಂಭಿಸುವ ಬಗ್ಗೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರ ಗಮನ ಸೆಳೆಯುತ್ತೇನೆ.

**ಶ್ರೀ ತನ್ವೀರ್ ಸೇಠ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು):–** ಮಾನ್ಯ ಸಭಾಪತಿಯವರೆ,

**(ಸಚಿವರ ಲಿಖಿತ ಉತ್ತರವನ್ನು ಲಗತ್ತಿಸಲಾಗಿದೆ.)**

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಬಸವರಾಜ್ ಎಸ್.ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ನಮ್ಮ ಮೂಲ ಪ್ರಶ್ನೆ ದಿನಾಂಕ 04/05/2016 ರಂದು 412 ಕೋಟಿ ರೂಪಾಯಿಗಳ ಐಸಿಟಿ–3 ನೇ ಹಂತದ ಯೋಜನೆಯನ್ನು ಮಾಡಿ, ಇ–ಟೆಂಡರ್ ಕರೆದು, ಈಗಾಗಲೇ 40 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಮುಂದುವರೆದು, 145 ಕೋಟಿ ರೂಪಾಯಿಗಳ ಹಣವನ್ನು ಬಿಡುಗಡೆ ಮಾಡಿ ನಂತರದಲ್ಲಿ ಏಕೆ ಈ ಯೋಜನೆಯನ್ನು ತಕ್ಷಣ ನಿಲ್ಲಿಸಿದರು? ಟೆಂಡರ್ ಕರೆಯುವ ಮುನ್ನ ಇದರ ಸಾಧಕ–ಬಾಧಕಗಳನ್ನು ಏಕೆ ನೋಡಲಿಲ್ಲ. ಇದರಲ್ಲಿ ಸರಿ ತಪ್ಪು ಯಾವುದು? ಇನ್ನುಳಿದ ವಿಚಾರವನ್ನು ನಾನು ಹೇಳುವುದಿಲ್ಲ. ಯಾವುದೇ ಒಂದು ಇಲಾಖೆಯಲ್ಲಿ ಟೆಂಡರ್ ಕರೆಯುವ ಮುನ್ನ ಯೋಜನೆಯ ಸಾಧಕ–ಬಾಧಕಗಳನ್ನು ಅಧ್ಯಯನ ಮಾಡಬೇಕಾಗುತ್ತದೆ. ಇದನ್ನು ಮಾಡದೇ, ಇ–ಟೆಂಡರ್ ಮೂಲಕ 40 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಹಾಗೂ ನಂತರದಲ್ಲಿ 145 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ ಯೋಜನೆಯನ್ನು ನಿಲ್ಲಿಸುವುದಕ್ಕೆ ಕಾರಣವೇನು ಎಂಬುದನ್ನು ಸ್ಪಷ್ಟವಾಗಿ ತಿಳಿಸಿ. 2011 ನೇ ಸಾಲಿನಲ್ಲಿ ಯೋಜನೆಯ ಕಾರ್ಯಾದೇಶವನ್ನು ನೀಡಲಾಗಿತ್ತು. ಆದರೆ ಹಲವಾರು ಕಾರಣಗಳಿಂದಾಗಿ ಅದನ್ನು ಅನುಷ್ಠಾನಗೊಳಿಸಿರುವುದಿಲ್ಲ ಎಂದು ಹೇಳಿದ್ದೀರಿ ಇದಕ್ಕೆ ಕಾರಣವೇನು? ಹಲವಾರು ಕಾರಣಗಳಿಂದ ಎಂದು ಹೇಳಿದರೆ, ರಾಜಕೀಯ ಕಾರಣಗಳಿಂದ ಎಂದು ನಾನು ತಿಳಿದುಕೊಳ್ಳಬೇಕೇ? ಅಥವಾ ಅದಕ್ಕೆ ಏನಾದರೂ ನ್ಯೂನ್ಯತೆಗಳಿದೆ ಎಂದು ತಿಳಿದುಕೊಳ್ಳಬೇಕೇ? ಅಥವಾ ಯೋಜನೆಯಲ್ಲಿ ತಪ್ಪುಗಳಾಗಿವೆ ಎಂದು ತಿಳಿದುಕೊಳ್ಳಬೇಕೇ, ತಪ್ಪುಗಳಾಗಿದ್ದರೆ, ತಪ್ಪು ಮಾಡಿದವರು ಯಾರು? ಹಲವಾರು ಕಾರಣಗಳಿಂದ ಯೋಜನೆಯನ್ನು ನಿಲ್ಲಿಸಿರುವುದಾಗಿ ಎಂದು ಹೇಳಿದ್ದು, ಈ ಬಗ್ಗೆ ಸ್ಪಷ್ಟತೆ ನೀಡಿ.

ನೆರೆಯ ಕೇರಳ ರಾಜ್ಯಕ್ಕೆ ಒಂದು ತಂಡವನ್ನು ಕಳುಹಿಸಿದ್ದೀರಿ ಎಂದು ಲಿಖಿತ ಉತ್ತರದಲ್ಲಿ ಹೇಳಿದ್ದಿರಿ. ಮಾನ್ಯ ಸಚಿವರಿಗೆ ನಾನು ಒಂದು ಸರಳ ಪ್ರಶ್ನೆಯನ್ನು ಕೇಳಬಯಸುತ್ತೇನೆ. ಟೆಂಡರ್ ಕರೆಯುವ ಮುನ್ನ ಯೋಜನೆಯ ಸಾಧಕ–ಬಾಧಕಗಳನ್ನು, ಸರಿ–ತಪ್ಪುಗಳನ್ನು ನೋಡಬೇಕು. ಹಾಗೆಯೇ ಯೋಜನೆಯ ಮೊದಲನೇಯ ಹಾಗೂ ಎರಡನೇಯ ಹಂತಗಳನ್ನು ಈಗಾಗಲೇ ಮಾಡಿದ್ದೀರಿ. ಯೋಜನೆಯ ಮೂರನೇ ಹಂತವನ್ನು ಮಾಡಬೇಕಾಗಿತ್ತು. ಇದಕ್ಕೆ ಸಂಬಂಧಪಟ್ಟಂತೆ ಸಂಪೂರ್ಣ ಚರ್ಚೆ ಮಾಡಿ ಪ್ರಕ್ರಿಯೆಯು ಪೂರ್ಣಗೊಂಡ ನಂತರವೇ ಟೆಂಡರ್‌ನ್ನು ಕರೆಯಲಾಗಿತ್ತು. ಈಗ ತಂಡವನ್ನು ನೆರೆಯ ಕೇರಳ ರಾಜ್ಯಕ್ಕೆ ಕಳುಹಿಸಲಾಗಿದೆ ಎಂದು ಹೇಳಿದ್ದೀರಿ. ಅಲ್ಲಿನ ಜನರು ನಮಗಿಂತ ಹೆಚ್ಚು ಬುದ್ಧಿವಂತರೇ? ಪ್ರಸ್ತುತ ವಿಷಯಕ್ಕೆ ಸಂಬಂಧಪಟ್ಟಂತೆ ಹಲವಾರು ಐ.ಟಿ., ಬಿ.ಟಿ. ಜನರು ನಮ್ಮ

ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬೆಂಗಳೂರು ನಗರಕ್ಕೆ ಭೇಟಿ ನೀಡುತ್ತಾರೆ. ತಂಡವನ್ನು ನೆರೆಯ ರಾಜ್ಯಕ್ಕೆ ಯಾವಾಗ ಕಳುಹಿಸಿಕೊಟ್ಟಿದ್ದೀರಿ? ಇದಕ್ಕೆ ಪ್ರತ್ಯುತ್ತರವಾಗಿ ಅವರು ನೀಡಿರುವ ಉತ್ತರವೇನು? ಪ್ರಾಮುಖ್ಯತೆಯನ್ನು ಬದಿಗಿರಿಸಿ, ಕಲಿಕಾ ಗುಣಮಟ್ಟದ ಅಭಿವೃದ್ಧಿಗೆ ಪೂರಕವಾಗುವಂತೆ ಎಂದು ಲಿಖಿತ ಉತ್ತರದಲ್ಲಿ ಹೇಳಿದ್ದೀರಲ್ಲ ಅದರರ್ಥ ಈವರೆಗಿನ ಕಲಿಕೆಯು ಗುಣಮಟ್ಟಕ್ಕೆ ಪೂರಕವಾಗಿದ್ದಲ್ಲವೇ? ಇದು ತಪ್ಪಲ್ಲವೇ? ಈ ತಪ್ಪಿಗೆ ಯಾರು ಹೊಣೆ? ನಾವು, ನೀವು ಹಾಗೂ ಅಧಿಕಾರಿಗಳೆಲ್ಲಾ ಹೋಗಿ ಬಂದು ಮಾಡುತ್ತೇವೆ. ನೀವು ದಿನಾಂಕ 04/05/2016 ರಂದು 412 ಕೋಟಿ ರೂಪಾಯಿಗಳಿಗೆ ಟೆಂಡರ್‌ನ್ನು ಕರೆದು, 40 ಕೋಟಿ ರೂಪಾಯಿಗಳನ್ನು ಈಗಾಗಲೇ ಖರ್ಚು ಮಾಡಿದ್ದು, 145 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ ನಂತರವೂ ಯೋಜನೆಯನ್ನು ಯಾವ ಕಾರಣಕ್ಕಾಗಿ ನಿಲ್ಲಿಸಿದ್ದೀರಿ? ಇದಕ್ಕಿರುವ ಕಾರಣಗಳನ್ನು ತಿಳಿಸಿ. ಯೋಜನೆಯ ಸ್ಥಗಿತದಿಂದಾಗಿ 30 ಲಕ್ಷ ಮಕ್ಕಳಿಗೆ ತೊಂದರೆಯಾಗಿದೆ. ಇದು ತಮಗೆ ಗೊತ್ತಿರುವ ವಿಚಾರವಾಗಿದೆ. ಈ ಮೂಲಕ ತಮ್ಮ ಗಮನಕ್ಕೆ ತರಬಯಸುವುದೇನೆಂದರೆ, ತಾವು ಎಲ್ಲಿಯಾದರೂ ಭೇಟಿ ನೀಡಿ ಪರಿಶೀಲನೆ ಮಾಡಿ. ಎಷ್ಟೋ ಬ್ಯಾಟರಿಗಳು ತುಕ್ಕು ಹಿಡಿದಿವೆ. ಟೇಬಲ್ ಕುರ್ಚಿಗಳು ಸಿಗುತ್ತವೆ. ಈ ಇಲಾಖೆಯಲ್ಲಿ ಇರುವಂತಹ ಭ್ರಷ್ಟಾಚಾರ ಯಾವ ಇಲಾಖೆಯಲ್ಲಿಯೂ ಇಲ್ಲ. ಈ ಹಿಂದೆ ಟೇಬಲ್ ಕುರ್ಚಿಯ ವಿಚಾರದಲ್ಲಿಯೂ ಸಹ ಭ್ರಷ್ಟಾಚಾರಗಳಾಗಿವೆ. ಎಲ್ಲಿಯಾದರೂ ನೋಡಿ, ಎಲ್ಲೆಲ್ಲಿ ಬ್ಯಾಟರಿ ನೀಡಿದ್ದಾರೆ, ಅವುಗಳು ಬತ್ತಿ ಹೋಗಿವೆ. ಮನುಷ್ಯರಾದಂತಹವರು ಕನಿಷ್ಠ ಪಕ್ಷ ಶಿಕ್ಷಣ ಇಲಾಖೆಯಲ್ಲಿಯಾದರೂ ಸಹ ಭ್ರಷ್ಟಾಚಾರವನ್ನು ಮಾಡಲಾರದಂತಹ ಕೆಲಸವನ್ನು ಮಾಡಲಿ. ಇದು ಒಳ್ಳೆಯದು. ಟೇಬಲ್–ಕುರ್ಚಿ ವಿಚಾರದಲ್ಲಿ ಕೋಟಿ ಕೋಟಿಗಳಷ್ಟು ಹಣವನ್ನು ತಿಂದಿದ್ದಾರೆ. ಟೇಬಲ್–ಕುರ್ಚಿಗಳು ಬಂದು ಆರು ವರ್ಷಗಳು ಕಳೆದಿವೆ. ನೀವು ಸ್ಥಳಕ್ಕೆ ಭೇಟಿ ನೀಡಿ ಅಲ್ಲಿನ ವಾಸ್ತವಾಂಶಗಳನ್ನು ಪರಿಶೀಲನೆ ಮಾಡಿ. ಮಕ್ಕಳಿಗೆ ಕಲಿಸುವಂತಹ ವಿಚಾರದಲ್ಲಿಯೂ ಕೂಡ ಈ ರೀತಿಯ ಅವ್ಯವಹಾರ ಮಾಡಿದರೆ ಸಾರ್ಥಕತೆ ಇದೆಯೇ? ಯೋಜನೆಗಳನ್ನು ಸ್ಥಗಿತಗೊಳಿಸುವುದು ಸರಿಯಲ್ಲ. ಈಗಾಗಿರುವ ತಪ್ಪುಗಳನ್ನು ಸರಿಪಡಿಸಿ.

**(91) 09.02.2017 4.00 MGN-MD**

**ಶ್ರೀ ಬಸವರಾಜ್ ಎಸ್.ಹೊರಟ್ಟಿ (ಮುಂದು):–**

ತಾವೀಗ ಮತ್ತೆ NCERT (National Council of Educational Research and Training)ಅವರಿಗೆ ಕೇಳಿದ್ದೇವೆ, ಸರ್ಕಾರಿ ಶಾಲೆಗಳನ್ನು ಗುರುತು ಮಾಡಿದ್ದೇವೆ ಎನ್ನುವಂತಹ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮತ್ತೊಂದು ವಿಚಾರವನ್ನು ತಿಳಿಸಿದಿರಿ. ನೀವು ಶಾಲೆಗಳನ್ನು ಗುರುತು ಮಾಡದೆ ಹೇಗೆ ಟೆಂಡರ್ ಕರೆದಿದ್ದೀರಿ? ಈ ವ್ಯವಸ್ಥೆಯನ್ನು ಮಾಡಬೇಕಾದರೆ ಒಂದು ಶಾಲೆಗೆ ಇಂತಿಷ್ಟು ಖರ್ಚು ಬರುತ್ತದೆ ಎಂದು ಲೆಕ್ಕಾಚಾರ ಮಾಡದೆ ಹೇಗೆ ಟೆಂಡರ್ ಕರೆದಿದ್ದೀರಿ? Special Increment ಬಗ್ಗೆ ವಿಚಾರ ಬಂದಂತಹ ಸಂದರ್ಭದಲ್ಲಿ ಕೂಡ ಇಲಾಖೆಯವರು ಯಾವ ರೀತಿ ಉತ್ತರ ಕೊಟ್ಟರು ಎಂದರೆ, ಇವರಿಗೂ ಕೊಡಬೇಕೆಂದು ಪ್ರಸ್ತಾವನೆಯನ್ನು ಕಳುಹಿಸಿಬಿಟ್ಟರು. ಹಣಕಾಸು ಇಲಾಖೆಯವರಿಗೆ ಎಷ್ಟು ಜನ ಇದ್ದಾರೆ, ದೈಹಿಕ ಶಿಕ್ಷಕರು, ಕ್ರಾಫ್ಟ್ ಟೀಚರ್ಸ್, ಸಂಗೀತ ಶಿಕ್ಷಕರು ಮುಂತಾದವರೆಲ್ಲಾ ಎಷ್ಟು ಜನರಿದ್ದಾರೆ ಎಂಬ ಬಗ್ಗೆ ಲೆಕ್ಕ ಬೇಕಲ್ಲವೆ. ಆ ವಿಷಯದಲ್ಲಿ ಸರ್ಕಾರವನ್ನು ದೂಷಿಸುವುದಕ್ಕಾಗುವುದಿಲ್ಲ. ಇಷ್ಟು ಮಂದಿ ಟೀಚರ್ಸ್ ಇದ್ದಾರೆ, ಅವರಲ್ಲಿ ಒಬ್ಬರು ರೂ. 60,000 ವೇತನವನ್ನು ಪಡೆದುಕೊಂಡರೆ ಮತ್ತೊಬ್ಬರು ರೂ. 30,000 ವೇತನವನ್ನು ಪಡೆದುಕೊಳ್ಳುತ್ತಿರುತ್ತಾರೆ. ಅವರ ವೇತನ ಶ್ರೇಣಿಗೆ ಅನುಗುಣವಾಗಿ increment ಇರುತ್ತದೆ. ಅದನ್ನು ಲೆಕ್ಕಾಚಾರ ಮಾಡಿ ಕಳುಹಿಸಬೇಕಲ್ಲವೆ. ಇಲಾಖೆಯಲ್ಲಿ ಈ ಅಂಶಗಳನ್ನೆಲ್ಲಾ ಗಮನಿಸಿಕೊಳ್ಳಬೇಕಾಗುತ್ತದೆ.

ಇಂತಹ ವಿಚಾರಗಳಲ್ಲಿ ಇಲಾಖೆಯ ಕಾರ್ಯದರ್ಶಿಯವರು ಅಥವಾ ಬೇರೆ ಒಬ್ಬ ಅಧಿಕಾರಿಯಷ್ಟೇ ಸರಿಯಾಗಿ ಕೆಲಸ ಮಾಡಿದರೆ ಆಗುವುದಿಲ್ಲ. ಇಂತಹ ವಿಚಾರಗಳಲ್ಲಿ ಇಡೀ ಇಲಾಖೆಯಲ್ಲಿ ಸ್ವಲ್ಪ ಕಾಳಜಿ ಬೇಕು. ನಾನು ಸರಳವಾಗಿ ಕೇಳಿಬಿಡುತ್ತೇನೆ. ನೀವು ಏಕೆ ರದ್ದು ಮಾಡಿದಿರಿ, ಏಕೆ ಸ್ಯಾಂಕ್ಷನ್ ಮಾಡಿದಿರಿ, ಏಕೆ ಖರ್ಚು ಮಾಡಿದಿರಿ ಮತ್ತು ಈಗ ಹೊಸದಾಗಿ ನೋಡಿ ಮಾಡುತ್ತೇವೆ ಎಂದರೆ ಈ ಮೊದಲು ಇದನ್ನೆಲ್ಲಾ ಅಧ್ಯಯನ ಮಾಡಿದ್ದಿರೋ, ಇಲ್ಲವೋ? ಯಾರ ಸಲುವಾಗಿಯೋ ಟೆಂಡರ್ ಕರೆದಿದ್ದೀರೇನು? ಇಂತಹ ಅನೇಕ ಸಮಸ್ಯೆಗಳು ಬರುತ್ತವೆ. ಅದಕ್ಕಾಗಿ ಇದರಲ್ಲಿ ಹಿಂದೆ ಆಗಿರುವಂತಹ ಭ್ರಷ್ಟಾಚಾರ ಏನಿದೆ ಅದರ ವಿವರಗಳನ್ನೆಲ್ಲಾ ಪರಿಶೀಲಿಸಿ, ಬೇರೆ ಯಾವುದರಲ್ಲಿಯೂ ಆಗದಿರುವಷ್ಟು scandal ಇದರಲ್ಲಿ ಆಗಿದೆ.

ಕಂಪ್ಯೂಟರ್‌ಗಳನ್ನು ಪೂರೈಕೆ ಮಾಡದೆ ಕೇವಲ ಕಂಪ್ಯೂಟರ್ ಟೇಬಲ್ ಮತ್ತು ಕುರ್ಚಿಗಳನ್ನೇನು ಕೆಲವು ಶಾಲೆಗಳಿಗೆ ಒದಗಿಸಲಾಗಿತ್ತು, ಅದನ್ನು ಅವರು ಈಗಾಗಲೇ ಬೇರೆ ಉದ್ದೇಶಗಳಿಗಾಗಿ ಬಳಕೆ ಮಾಡಿಕೊಂಡಿರುವುದರಿಂದ ಈಗ ನೀವು ಕಂಪ್ಯೂಟರ್‌ಗಳನ್ನು ಸರಬರಾಜು ಮಾಡಿದರೆ ಅದನ್ನು ಅಳವಡಿಸಲು ಅವರು ಮತ್ತೆ ಟೇಬಲ್ ಮತ್ತು ಕುರ್ಚಿಗಳನ್ನು ಕೇಳುವಂತಹ ಪರಿಸ್ಥಿತಿ ಇದೆ. ಬಹಳಷ್ಟು ಶಾಲೆಗಳಲ್ಲಿ ಕಂಪ್ಯೂಟರ್‌ಗಳೇ ಸರಬರಾಜಾಗಿಲ್ಲ. ಅಲ್ಲದೆ ಈ ರೀತಿ ಶಾಲೆಗಳಿಗೆ ಸರಬರಾಜು ಮಾಡುವಂತಹ ಪ್ರತಿಯೊಂದು ಕಂಪ್ಯೂಟರ್‌ಗೆ 30 ರಿಂದ 60 ಸಾವಿರ ರೂಪಾಯಿಗಳಷ್ಟು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವೆಚ್ಚವಾಗುವುದಾಗಿ ಲೆಕ್ಕದಲ್ಲಿ ತೋರಿಸಲಾಗಿದೆ. ಈ ರೀತಿಯ ಪರಿಸ್ಥಿತಿಗಳೇನಿವೆ, ಆ ರೀತಿ ಇದು ಸಹ ಆಗಬಾರದು. ಆ ಉದ್ದೇಶಕ್ಕಾಗಿ ಮತ್ತೊಮ್ಮೆ ಅಧ್ಯಯನ ಮಾಡುವುದಾದರೆ ಸಂತೋಷ, ಅದಕ್ಕಾಗಿ ನಾನು ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ವಿಚಾರದಲ್ಲಿ ನೀವು ಸದನದಲ್ಲಿ ಸ್ಪಷ್ಟವಾದ ಮಾಹಿತಿಯನ್ನು ಕೊಡಿ. ಯಾವ ಕಾರಣಕ್ಕಾಗಿ ರದ್ದು ಮಾಡಿದ್ದೀರಿ, ಈ ರೀತಿ ರದ್ದು ಮಾಡಿರುವುದರ ಹಿಂದೆ ಒಳ್ಳೆಯ ಉದ್ದೇಶವಿದೆಯೇ? ವಿದ್ಯಾರ್ಥಿಗಳಿಗೆ ಒಳ್ಳೆಯದಾಗಬೇಕೆಂಬ ಉದ್ದೇಶದಿಂದ ಈ ರೀತಿ ಮಾಡಿದ್ದೀರೋ ಹೇಗೆ ಎಂಬ ಅಂಶಗಳನ್ನೆಲ್ಲಾ ತಾವು ಸ್ಪಷ್ಟವಾಗಿ ತಿಳಿಸಬೇಕಾಗುತ್ತದೆ. ಟೆಂಡರ್ ಕರೆದ ಮೇಲೆ ಆ ಗುತ್ತಿಗೆದಾರ ಅಲ್ಲಿ ಕೆಲಸ ನಿರ್ವಹಿಸಿದ್ದು, ಬಿಲ್ ಮಂಜೂರಾಗದಿದ್ದರೆ ಆತ ನ್ಯಾಯಾಲಯದ ಮೊರೆ ಹೋಗುತ್ತಾನೆ. ಈ ಎಲ್ಲ ಸಮಸ್ಯೆಗಳು ಎದುರಾಗುವ ಸಾಧ್ಯತೆಗಳಿರುವುದರಿಂದ ನಾನು ಹೇಳಬಯಸುವುದೇನೆಂದರೆ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ನಾವು ಆಲೋಚನೆ ಮಾಡಿ ಮುಂದುವರೆಯಬೇಕಾಗುತ್ತದೆ. ಏಕೆಂದರೆ ಮಕ್ಕಳೇ ಈ ದೇಶದ ಆಸ್ತಿ. ಆ ಮಕ್ಕಳಿಗೆ ಕೆಟ್ಟದಾಗಬಾರದು ಎನ್ನುವ ಉದ್ದೇಶದಿಂದ ನಾವು ಇಂತಹ ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡುತ್ತೇವೆಯೇ ಹೊರತು ಬೇರೇನೂ ಇಲ್ಲ. ಈ ಹಿನ್ನೆಲೆಯಲ್ಲಿ ಮಾನ್ಯ ಸಚಿವರು ಸ್ಪಷ್ಟವಾದ ಮಾಹಿತಿಯನ್ನು ನೀಡಬೇಕು. ಇದನ್ನು ನಿಲ್ಲಿಸಬಾರದು, ತಕ್ಷಣವೇ ಇದನ್ನು ಪ್ರಾರಂಭ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ನಾನುಒತ್ತಾಯವನ್ನು ಮಾಡುತ್ತೇನೆ.

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸಚಿವರಲ್ಲಿ ನೇರವಾದ ಪ್ರಶ್ನೆಯನ್ನು ಕೇಳಬಯಸುತ್ತೇನೆ. ಶಿಕ್ಷಣಕ್ಕೆ ಆದ್ಯತೆಯನ್ನು ಕೊಡಬೇಕು ಎನ್ನುವ ನಿಟ್ಟಿನಲ್ಲಿ ನಾವು ರಾಜಕಾರಣಿಗಳಿರಬಹುದು, ಸಾರ್ವಜನಿಕರಿರಬಹುದು ಎಲ್ಲರೂ ಹೇಳುತ್ತೇವೆ. ನಮ್ಮ ರಾಜ್ಯದಲ್ಲಿ ಕೇಂದ್ರ ಸರ್ಕಾರದಿಂದ ಅದಕ್ಕಾಗಿ ಸಾವಿರಾರು ಲಕ್ಷಗಟ್ಟಲೆ ಹಣವನ್ನು ನೀಡಲಾಗುತ್ತಿದೆ. ಈಗಾಗಲೇ ಸರ್ಕಾರಿ ಶಾಲೆಗಳು ಮುಚ್ಚುವಂತಹ ಹಂತಕ್ಕೆ ಬಂದಿವೆ. ಇಂತಹ ಸಂದರ್ಭದಲ್ಲಿ ಈಗಾಗಲೇ ಏನು ಕಂಪ್ಯೂಟರ್ ತರಬೇತಿಯನ್ನು ಕೊಡಬೇಕೆಂದು ಫೇಸ್–1ರಲ್ಲಿ ಮೊದಲು ಬಂದಿತ್ತು, ಅದನ್ನು ಅವರು ಒಂದು ಕಡೆ ಅದಕ್ಕೆ outsource ನ್ನು ಕೊಟ್ಟು, ಪದವೀಧರ ಶಿಕ್ಷಕರಿಗೆ ಸರ್ಕಾರದಿಂದ ಏನು ವೇತನವನ್ನು ಕೊಡಲಾಗುತ್ತಿತ್ತೋ ಅದರಲ್ಲಿ ಅರ್ಧ ವೇತನವನ್ನು ಪಡೆದುಕೊಂಡು ಅವರ ಜೀವನೋಪಾಯಕ್ಕಾಗಿ ಕೆಲಸ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಕನಿಷ್ಠಪಕ್ಷ ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಶಿಕ್ಷಣವಾದರೂ ಸಿಗುತ್ತಿತ್ತು.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಈಗ ಒಂದು ಕಡೆ 1571 ಪ್ರೌಢಶಾಲೆ ಹಾಗೂ 708 ಪದವಿಪೂರ್ವ ಕಾಲೇಜ್‌ಗಳಲ್ಲಿ ಈಗಾಗಲೇ ಕಂಪ್ಯೂಟರ್ ಶಿಕ್ಷಣವನ್ನು ಕೊಡುವಂತಹ ಒಂದು ಸಾಮರ್ಥ್ಯವನ್ನೇನು ಹೊಂದಿದ್ದರು ಆ ಶಿಕ್ಷಕರು ಸಹ ಪದವೀಧರರಾಗಿದ್ದು, ಬಹಳ ಒಳ್ಳೆಯ ರೀತಿಯಲ್ಲಿ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಶಿಕ್ಷಣವನ್ನು ನೀಡಿದ್ದಾರೆ. ಇಂತಹವರನ್ನು ಒಂದು ಕಡೆ ಬೀದಿಪಾಲು ಮಾಡಿರುವುದರಿಂದ ಅವರು ಜೀವನ ನಡೆಸುವುದೇ ಕಷ್ಟವಾಗಿದೆ. ಮತ್ತೊಂದು ಕಡೆ 'ನಾವೀಗಾಗಲೇ ಟೆಂಡರ್ ಕರೆದು, ಟೆಂಡರ್ ಪ್ರಕ್ರಿಯೆ ನಡೆಯುತ್ತಿದೆ, ಅಧ್ಯಯನಕ್ಕಾಗಿ ಕೇರಳ ರಾಜ್ಯಕ್ಕೆ ಕಳುಹಿಸಿದ್ದೇವೆ' ಎಂದೆಲ್ಲಾ ಮಾನ್ಯ ಸಚಿವರು ತಿಳಿಸುತ್ತಿದ್ದಾರೆ. ಆದರೆ ಇಂದಿನ ಕಂಪ್ಯೂಟರ್ ಯುಗದಲ್ಲಿ ಸರ್ಕಾರಿ ಶಾಲೆಗಳಲ್ಲಿನ ವಿದ್ಯಾರ್ಥಿಗಳಿಗೆ ಪ್ರಾಥಮಿಕವಾಗಿ ಕಂಪ್ಯೂಟರ್ ಶಿಕ್ಷಣವನ್ನು ಕೊಡುವುದಕ್ಕೆ ಟೆಂಡರ್ ಕರೆಯುತ್ತಿದ್ದೇವೆ ಎಂದು ವರ್ಷಾನುಗಟ್ಟಲೆ ತಳ್ಳಿಕೊಂಡು ಹೋದರೆ ಯಾವ ರೀತಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣವನ್ನು ಕೊಡುವುದಕ್ಕೆ ಸಾಧ್ಯವಿದೆ? ಅವರು ಯಾವ ರೀತಿಯಾದ ಗುಣಮಟ್ಟಕ್ಕೆ ಬರುತ್ತಾರೆ? ಆ ವಿದ್ಯಾರ್ಥಿಗಳಿಂದ ಅವರ ತಂದೆ-ತಾಯಿಗಳಿಗಾಗಲಿ, ನಮ್ಮ ರಾಜ್ಯಕ್ಕಾಗಲಿ, ರಾಷ್ಟ್ರಕ್ಕಾಗಲಿ ಅವರ ಕೊಡುಗೆ ಏನು ಸಿಗುತ್ತದೆ? ಮೂಲಭೂತ ಅವಶ್ಯಕತೆಯಾಗಿರುವಂತಹ ವಿದ್ಯಾಭ್ಯಾಸವನ್ನು ಕೊಡುವುದಕ್ಕೆ ಸರ್ಕಾರ ಈ ರೀತಿಯಾದಂತಹ ಬೇಜವಾಬ್ದಾರಿತನವನ್ನು ತೋರಿ, ಈ ರೀತಿ ವರ್ಷಾನುಗಟ್ಟಲೆ ಕಾಲಾವಕಾಶ ತೆಗೆದುಕೊಳ್ಳುವುದು ಸರಿಯಿಲ್ಲ. ಹೀಗಾಗಿ ಕೂಡಲೇ ಸಚಿವರು ಈ ಕ್ಷಣದಿಂದಲೇ ಅದು ಕಾರ್ಯಗತವಾಗುವ ರೀತಿಯಲ್ಲಿ ಉತ್ತರ ಕೊಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ಬಯಸುತ್ತಿದ್ದೇನೆ.

ಮತ್ತೊಂದು ವಿಷಯವೇನೆಂದರೆ, ಶಿಕ್ಷಣ ಕೊಡುವುದರ ಜೊತೆಗೆ ಈಗಾಗಲೇ I.C.T Phase-Iರಲ್ಲಿ ಕಂಪ್ಯೂಟರ್ ಶಿಕ್ಷಣವನ್ನು ನೀಡುತ್ತಿದ್ದಂತಹ ಪರಿಣಿತರೇನು ಇವತ್ತು ಬೀದಿಪಾಲಾಗಿದ್ದಾರೆ, ಅವರಿಗೆ ಈಗಲೂ ಸಹ ಸರ್ಕಾರದಿಂದ ವೇತನವನ್ನು ಇನ್ನೂ ಪೂರ್ತಿಯಾಗಿ ಕೊಟ್ಟಿಲ್ಲ. ಇನ್ನೂ ಅದು ಪೆಂಡಿಂಗ್ ಇದೆ. ಸುಮಾರು ಬಾರಿ ಅವರು ವಿದ್ಯಾರ್ಥಿಗಳನ್ನೆಲ್ಲಾ ಕರೆದುಕೊಂಡು ಬಳ್ಳಾರಿ, ಬೀದರ್ ಮುಂತಾದ ಕಡೆಗಳಿಂದ ಸಹ ಹುಡುಕಾಡಿಕೊಂಡು ಬಂದಿರತಕ್ಕಂತಹ ಉದಾಹರಣೆಗಳಿವೆ. ಅವರು ತಮ್ಮ ಬಳಿ ಕೂಡ ಬಂದಿರುತ್ತಾರೆ. ಅಂತಹ ಅನುಭವಿ ಶಿಕ್ಷಕರ ಸೇವೆಯನ್ನು ಸರ್ಕಾರ ತನ್ನ ಮುಂದಿನ ಕಂಪ್ಯೂಟರ್ ಶಿಕ್ಷಣದಲ್ಲಿ ಬಳಸಿಕೊಳ್ಳಬೇಕೆಂದು ನಾನು ತಮ್ಮಲ್ಲಿ ವಿನಂತಿಸುತ್ತೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಈ ಸಂದರ್ಭದಲ್ಲಿ ನಾನು ಮಾನ್ಯ ಶಿಕ್ಷಣ ಸಚಿವರಲ್ಲಿ ಒಂದೆರಡು ಪ್ರಶ್ನೆಗಳನ್ನಷ್ಟೇ ಕೇಳಬಯಸುತ್ತೇನೆ. ಕಂಪ್ಯೂಟರ್ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ರಾಜ್ಯ ಸರ್ಕಾರದ ನೀತಿ ಏನು ಎಂಬುದನ್ನು define ಮಾಡಲಾಗಿದೆಯೇ?

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಯಾವ ಹಂತದಲ್ಲಿ ಮಕ್ಕಳಿಗೆ ಕಂಪ್ಯೂಟರ್ ಶಿಕ್ಷಣವನ್ನು ಕೊಡಬೇಕು? 1000 ಶಾಲೆಗಳನ್ನು ಯಾವ ಆಧಾರದ ಮೇಲೆ ಆಯ್ಕೆ ಮಾಡಲಾಗಿದೆ? ಹಾಗಾದರೆ ಉಳಿದ ಮಕ್ಕಳಿಗೆ ಕಂಪ್ಯೂಟರ್ ಶಿಕ್ಷಣ ಬೇಡವೆ? ಹಾಗಾಗಿ ಪ್ರಾರಂಭದಲ್ಲಿ ನೀವು ಈ ರಾಜ್ಯದಲ್ಲಿ ಯಾವ ಹಂತದಲ್ಲಿ ಯಾವ ಮಕ್ಕಳಿಗೆ ನಾವು ಕಂಪ್ಯೂಟರ್ ಶಿಕ್ಷಣವನ್ನು ಕೊಡಬೇಕು, ಕಂಪ್ಯೂಟರ್‌ನಲ್ಲಿ ಯಾವ ಶಿಕ್ಷಣವನ್ನು ಹೇಗೆ ಕೊಡಬೇಕು ಎನ್ನುವುದನ್ನು ಮೊದಲು ಸಿದ್ಧಪಡಿಸಬೇಕು. ಪ್ರಾರಂಭದಲ್ಲಿ 'ಮಾಹಿತಿ ಸಿಂಧು', ಅನಂತರ I.C.T Phase-I,I.C.T Phase-II andI.C.T Phase-III ಹೀಗೆ ಸುಮಾರು ಎಂಟು–ಹತ್ತು ವರ್ಷಗಳು ಕಳೆದಿವೆ. ಇಷ್ಟು ವರ್ಷಗಳ ನಂತರ ಈ ಪಾಲಿಸಿಯಲ್ಲಿ ಏನು ಕೊರತೆಗಳಿವೆ ಎನ್ನುವುದು ಸರ್ಕಾರಕ್ಕೆ ಗೊತ್ತಿದೆಯೋ, ಇಲ್ಲವೋ ನನಗಂತೂ ಗೊತ್ತಿಲ್ಲ. ಈಗ ನೀವು ಕೇರಳ ರಾಜ್ಯಕ್ಕೆ ಹೋಗಿ ನೋಡಿಕೊಂಡು ಬರುತ್ತೇವೆ ಎಂದರೆ, ಕಳೆದ ಎಂಟು–ಹತ್ತು ವರ್ಷಗಳಲ್ಲಿ ನೀವು 'ಮಾಹಿತಿ ಸಿಂಧು' ಕಾರ್ಯಕ್ರಮ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ರಾಜ್ಯದ ಶಿಕ್ಷಣ ನೀತಿಯಲ್ಲಿ ಕಂಪ್ಯೂಟರ್ ಶಿಕ್ಷಣವನ್ನು ಹೇಗೆ ಕೊಡಬೇಕು ಎಂದು ನಿರ್ಣಯವನ್ನೇ ಮಾಡಿಲ್ಲ ಎಂಬುದು ಸ್ಪಷ್ಟವಾದಂತಾಯಿತು. ಇದು ಒಂದು ವಿಚಾರವಾದರೆ ಎರಡನೆಯದಾಗಿ ರಾಜ್ಯ ಸರ್ಕಾರವಾಗಿ ಮಕ್ಕಳಲ್ಲಿ ತಾರತಮ್ಯ ಮಾಡುವುದನ್ನು ಯಾವುದೇ ಕಾರಣಕ್ಕೂ ಸಹಿಸಲಿಕ್ಕೆ ಸಾಧ್ಯವಿಲ್ಲ. ಆಯ್ಕೆ ಮಾಡಿರುವ ಆ 1000 ಶಾಲೆಯ ಮಕ್ಕಳೇನಾದರೂ ವಿಶೇಷ ಸವಲತ್ತು ಪಡೆದುಕ್ಕೊಳ್ಳುವಂತಹ ಮಕ್ಕಳೇನು? ಉಳಿದ ಮಕ್ಕಳು ಏನು ತಪ್ಪು ಮಾಡಿದ್ದಾರೆ? ಅವರಿಗೇಕೆ ಕಂಪ್ಯೂಟರ್ ಶಿಕ್ಷಣಕ್ಕೆ ಈಗ ಅವಕಾಶ ಕೊಡುತ್ತಿಲ್ಲ?

**ಶ್ರೀ ರಾಮಚಂದ್ರಗೌಡ(ಪದವೀಧರರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ತಮಿಳಿನಲ್ಲಿ ಒಂದು ಗಾಧೆ ಮಾತಿದೆ. "ಕೂಪ್ಪಿಡ ಅನ್ನೇಕೆ ಅವಳೇ ಇಲ್ಲೇ, ಯೇ ಪುಳ್ಳೆ ಪೇರು ರಾಮಸ್ವಾಮಿ" ಅಂದರೆ, 'ಕರೆಯುವುದಕ್ಕೆ ಹೆಂಡತಿಯೇ ಇಲ್ಲ, ಮಗುವಿಗೆ ಯಾವ ಹೆಸರಿಡಬೇಕೆಂದು ನಿರ್ಧರಿಸಿ ಆಗಿದೆ' ಎಂಬಂತ್ತಾಯಿತು. ಆಯ್ಕೆ ಮಾಡಿರುವ 1000 ಶಾಲೆಗಳ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಶಿಕ್ಷಣವನ್ನು ನೀಡಲು ಹಣವಿಲ್ಲದಿರುವಾಗ ಇನ್ನು ಬೇರೆ ಶಾಲೆಗಳಿಗೆ ಎಲ್ಲಿ ಕೊಡುವುದಕ್ಕೆ ಸಾಧ್ಯವಾಗುತ್ತದೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೇ, ಕಂಪ್ಯೂಟರ್ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ರಾಜ್ಯದ ಶಿಕ್ಷಣ ನೀತಿ ಏನು ಎಂಬುದು ನನ್ನ ಪ್ರಮುಖವಾದ ಪ್ರಶ್ನೆಯಾಗಿದೆ. ಈ ಶಿಕ್ಷಣವನ್ನು ರಾಜ್ಯದ ಎಲ್ಲ ಶಾಲೆಗಳಿಗೂ ಸಮರ್ಪಕವಾಗಿ ಒದಗಿಸುವುದಕ್ಕೆ ಸಾಧ್ಯವಾಗದಿದ್ದರೆ ಅದನ್ನು ಕೊಡುವುದು ಬೇಡ, ಕೊಡುವುದಾದರೆ ಎಲ್ಲರಿಗೂ ಕೊಡಿ. ಕೊಡಬೇಕಾದರೆ ಅದಕ್ಕೆ ಒಂದು ಪಾಲಿಸಿ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿಕೊಳ್ಳಿ. ಕಿಯೋನಿಕ್ಸ್ ಸಂಸ್ಥೆ ಮುಳುಗಿ ಹೋಗುತ್ತಿತ್ತು. ಅವರಿಗೆ outsource ಮಾಡಿದರು. ಆ ಶಿಕ್ಷಕರಿಗೆ ಕೊಡುವ ಹಣದಲ್ಲಿ ಸಂಸ್ಥೆಯವರು ಒಂದಷ್ಟು ಹಣವನ್ನು ತಮ್ಮ ಜೇಬಿಗೆ ಹಾಕಿಕೊಂಡು ಆ ಕಿಯೋನಿಕ್ಸ್ ಸಂಸ್ಥೆ ಉಳಿದಿದೆ. ಈಗ 1000 ಶಾಲೆಗಳಲ್ಲಿ I.C.T Phase-III ನ್ನು ಯಾವಾಗ ಪ್ರಾರಂಭಿಸಲಾಗುತ್ತದೆ, ನಮ್ಮ ಗತಿ ಏನು ಎಂದು ಅವರು ಒದ್ದಾಡುತ್ತಿದ್ದಾರೆ. ಸುಮಾರು ಎಂಟು–ಹತ್ತು ವರ್ಷಗಳ ಕಾಲ 'ಮಾಹಿತಿ ಸಿಂಧು' ಮಾಡಿಕೊಂಡು ನಂತರ I.C.T Phase-III ಕ್ಕೆ ಬಂದವರು ಸರ್ಕಾರ ಇವತ್ತಲ್ಲದಿದ್ದರೆ ನಾಳೆ ಈ ಕಂಪ್ಯೂಟರ್ ಶಿಕ್ಷಣವನ್ನು ಪ್ರಾರಂಭ ಮಾಡುತ್ತದೆ, ನಮಗೆ ಅನುಕೂಲವಾಗುತ್ತದೆ ಎನ್ನುವ ನಿರೀಕ್ಷೆಯಲ್ಲಿದ್ದಾರೆ. ನೀವು ಇವತ್ತು ಕೇರಳ ರಾಜ್ಯಕ್ಕೆ ಹೋಗಿ ನೋಡುತ್ತೇವೆ ಎಂದರೆ, ಕೇರಳ ರಾಜ್ಯದಲ್ಲಿ subject teacher ಮೂಲಕವೇ ಕಂಪ್ಯೂಟರ್ ಶಿಕ್ಷಣವನ್ನು ನೀಡುವಂತಹ ಒಂದು ವ್ಯವಸ್ಥೆಯನ್ನು ಮಾಡಿಕೊಂಡಿದ್ದಾರೆ. ಆ ರೀತಿಯ ವ್ಯವಸ್ಥೆಯನ್ನು ತಂದರೆ, ಇಷ್ಟು ವರ್ಷಗಳಿಂದ ಕೆಲಸ ಮಾಡಿಸಿಕೊಂಡು ಬಂದು ಈಗ ಅವರನ್ನು ಮನೆಗೆ ಕಳುಹಿಸಿದರೆ ಅವರ ಅವಸ್ಥೆ ಏನು? ಹಾಗಾಗಿ ಇಡೀ ರಾಜ್ಯದಲ್ಲಿ ಯಾವ ಹಂತದಲ್ಲಿ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಶಿಕ್ಷಣವನ್ನು ಕೊಡಬೇಕೆಂಬುದನ್ನು ಇಲಾಖೆ ನಿರ್ಣಯ ಮಾಡಿದೆಯೆ, ಇದಕ್ಕೆ ಬೇಕಾದಂತಹ ವ್ಯವಸ್ಥೆಗಳನ್ನು ಮಾಡಿಕೊಳ್ಳಲಾಗಿದೆಯೆ ಎಂಬುದು ನನ್ನ ಮೊದಲನೆಯ ಪ್ರಶ್ನೆಯಾಗಿದೆ.

ಆಯ್ಕೆ ಮಾಡಿದ ಯಾವುದೋ ಕೆಲವು ಶಾಲೆಗಳಿಗೆ ನೀವು ಕಂಪ್ಯೂಟರ್ ಕೊಟ್ಟುಬಿಟ್ಟರೆ, ಈಗ ಮಾನ್ಯ ಬಸವರಾಜ ಹೊರಟ್ಟಿಯವರು ತಿಳಿಸಿರುವಂತೆ, ಕಂಪ್ಯೂಟರ್ ಶಿಕ್ಷಣವನ್ನು ನೀಡುವಂತಹ ಶಿಕ್ಷಕರಿಲ್ಲದೆ ಆ ಕಂಪ್ಯೂಟರ್‌ಗಳು ಉಪಯೋಗಕ್ಕೆ ಬಾರದೆ ಹಾಳಾಗಿ ಮೂಲೆಯಲ್ಲಿ ಬಿದ್ದಿವೆ. ಯುಪಿಎಸ್ ಕೊಟ್ಟಿದ್ದೀರಿ, ಆದರೆ ಆ ಶಾಲೆಗಳಿಗೆ ವಿದ್ಯುತ್ ಸಂಪರ್ಕವೇ ಇಲ್ಲ. ಯುಪಿಎಸ್ ಚಾರ್ಜ್ ಆಗಬೇಕೊ, ಬೇಡವೊ? ಕಂಪ್ಯೂಟರ್ ಶಿಕ್ಷಣಕ್ಕೆ ಬೇಕಾಗುವಂತಹ ಪೀಠೋಪಕರಣಗಳನ್ನು ಕೊಟ್ಟಿದ್ದೀರಿ, ಆ ಶಾಲೆಗಳಿಗೆ ಕಂಪ್ಯೂಟರ್‌ಗಳು ಸರಬರಾಜಾಗಿಲ್ಲ. ಯಾರದೋ ದುಡ್ಡನ್ನು ಎಲ್ಲಿಯೋ ಖರ್ಚು ಮಾಡಿಕೊಂಡು ಈ ರೀತಿ ಮಾಡಿದರೆ ಕೇವಲ ಕಾಟಾಚಾರಕ್ಕಷ್ಟೇ ಮಕ್ಕಳಿಗೆ ಕಂಪ್ಯೂಟರ್ ಶಿಕ್ಷಣ ಕೊಡುತ್ತೇವೆ ಎಂದು ಹೇಳಿದಂತಾಗುತ್ತದೆಯೇ ಹೊರತು ಪ್ರಾಮಾಣಿಕವಾಗಿ ಆ ಗುರಿಯನ್ನು ಮುಟ್ಟುವುದಕ್ಕಾಗುತ್ತಿಲ್ಲ. ಹಾಗಾಗಿ ಸುಮ್ಮನೆ ಯಾರದೋ ಮಾಹಿತಿ ಪಡೆದುಕೊಂಡು ಬರುವುದಕ್ಕಿಂತ 10 ವರ್ಷಗಳ ಕಾಲ ರಾಜ್ಯದಲ್ಲಿ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಶಿಕ್ಷಣವನ್ನು ಕೊಟ್ಟು ಏನೆಲ್ಲಾ ಕೊರತೆಗಳಿವೆ ಎಂಬುದನ್ನು ಇಲಾಖೆಯಲ್ಲಿ ಅನುಭವ ಇರುವಂಥವರಿಂದ ನಮ್ಮ ರಾಜ್ಯಕ್ಕೆ ಬೇಕಾದಂತಹ ಒಂದು ನೀತಿಯನ್ನು ನಿರ್ಮಾಣ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ರಾಮಚಂದ್ರಗೌಡ:-** ಸನ್ಮಾನ್ಯ ಸಭಾಪತಿಯವರೇ, ಪ್ರಮುಖವಾದ ಒಂದು ಪ್ರಶ್ನೆ ಎಂದರೆ, ಯಾವ ಕಾನೂನಿನ ಅಡಿಯಲ್ಲಿ ಟೆಂಡರ್‌ನ್ನು ರದ್ದು ಮಾಡಿದಿರಿ? ಇದನ್ನು ಕಾನೂನುಬಾಹಿರವಾಗಿ ರದ್ದು ಮಾಡಿದ್ದೀರಿ ಎನ್ನುವುದು ಒಂದು ವಿಚಾರವಾದರೆ, 145 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿಸಿಕೊಂಡು 40 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ, ನಿಮಗೆ ಇದನ್ನು ಮಾಡಬೇಕು ಎನ್ನುವಂತಹ ಇಚ್ಛೆ ಇದೆಯೋ, ಇಲ್ಲವೋ? ಇದನ್ನೇನಾದರೂ ಯಾರದೋ ಒತ್ತಡಕ್ಕಾಗಿ ಮಾಡುತ್ತಿದ್ದೀರಾ? ಏಕೆಂದರೆ ವಿಶ್ವದಲ್ಲಿ ಬೆಂಗಳೂರು ಐ.ಟಿ./ಬಿ.ಟಿ. ಯಲ್ಲಿ ಬಹಳ ಪ್ರಮುಖವಾದಂತಹ ಸ್ಥಾನವನ್ನು ಪಡೆದಿದೆ. ಇಲ್ಲಿ ದೊರಕದೆ ಇರುವಂಥದ್ದು ನಿಮಗೆ ಕೇರಳ ರಾಜ್ಯದಲ್ಲಿ ದೊರಕುತ್ತದೆಯೇ? Time bite ಮಾಡುವುದಕ್ಕೆ, ಅಲ್ಲಿಗೆ ಒಂದು ಟೀಮ್ ಕಳುಹಿಸಿ, ಮುಂದಕ್ಕೆ ಹಾಕಿ ನೋಡೋಣ, ನಾಳೆ ಮಾಡೋಣ, ಇವತ್ತು ಮಾಡೋಣ ಎನ್ನುವಂತಹ ಒಂದು ಭ್ರಮೆಯಲ್ಲಿ ಇದನ್ನು ಮಾಡಿರಬಹುದೇನೋ ಎಂಬುದು ನನ್ನ ಅನಿಸಿಕೆಯಾಗಿದೆ. ನೀವು ಆ ರೀತಿ ಮಾಡುವುದಿಲ್ಲ. ನೀವೀಗ ಮೊದಲ ಹಂತದಲ್ಲಿ 1000 ಶಾಲೆಗಳನ್ನು ಆಯ್ಕೆ ಮಾಡಿಕೊಳ್ಳುವುದಕ್ಕೆ ಕಾರಣ ಎಲ್ಲಿ ವಿದ್ಯುತ್ ಸೌಲಭ್ಯವಿದೆ, ಎಲ್ಲಿ ಕೊಠಡಿ ಇದೆ, ಎಲ್ಲಿ ಕಂಪ್ಯೂಟರ್ ಶಿಕ್ಷಣವನ್ನು ನೀಡುವಂತಹ ಶಿಕ್ಷಕರು ಸುಲಭವಾಗಿ ಬರಬಹುದು ಎನ್ನುವುದನ್ನು ಗಮನದಲ್ಲಿಟ್ಟುಕೊಂಡು ಆ ಶಾಲೆಗಳನ್ನು ಆಯ್ಕೆ ಮಾಡಿರುತ್ತೀರಿ ಎಂದು ನಾನು ಭಾವಿಸುತ್ತೇನೆ.

ನಮ್ಮ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಶಿಕ್ಷಣವನ್ನು ನೀಡುವಂತಹ ವ್ಯವಸ್ಥೆ ಬಹಳ ಪ್ರಮುಖವಾಗಿ ಆಗಬೇಕಾಗಿದೆ. NCERT ಪ್ರಕಾರವಾಗಿ ಕಂಪ್ಯೂಟರ್ ಶಿಕ್ಷಣ ನೀಡುವುದು ಕಡ್ಡಾಯವಾಗಿದ್ದು, ಇದಕ್ಕಾಗಿ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಸಾಕಷ್ಟು ಅನುದಾನ ಸಿಗುತ್ತದೆ ಎಂದು ಸಹ ನಾನು ಭಾವಿಸಿದ್ದೇನೆ. ರಾಜ್ಯ ಸರ್ಕಾರ ಕೂಡ ಅದಕ್ಕೆ ಒಂದಿಷ್ಟು ಹಣವನ್ನು ಸೇರಿಸಿ ಈ ಕಾರ್ಯಕ್ರಮವನ್ನು ಜಾರಿಗೊಳಿಸಬೇಕಾಗುತ್ತದೆ. ಎಷ್ಟು ವೇಗದಲ್ಲಿ ಇದನ್ನು ಸರ್ಕಾರ ಕಾರ್ಯರೂಪಕ್ಕೆ ತರುತ್ತದೆ ಎನ್ನುವುದನ್ನು ತಿಳಿಸಿಬಿಟ್ಟರೆ ಸಾಕು.

**(92) 09.02.2017 04.10 SV-AK**

**ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. 2008-09ರಲ್ಲಿ ಕೇಂದ್ರಸರ್ಕಾರದಿಂದ ಅನುಮೋದಿತ ಯೋಜನೆಯಾಗಿತ್ತು. ಇದಕ್ಕಾಗಿ ನಾನು ಮಾನ್ಯ ಸಚಿವರಿಗೆ ಅಭಿನಂದನೆಯನ್ನು ಹೇಳಬಯಸುತ್ತೇನೆ. ಕಾರಣವೇನೆಂದರೆ, ಇದುವರೆವಿಗೂ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಾನು ನೋಡಿರತಕ್ಕಂತಹ 3,800 ಶಾಲೆಗಳಲ್ಲಿ ಅದರಲ್ಲಿಯೂ ಹೈದರಾಬಾದ್ ಕರ್ನಾಟಕ ಭಾಗಗಳಲ್ಲಿ ವಿಶೇಷವಾಗಿ ಭೇಟಿ ಕೊಟ್ಟು photo ತೆಗೆದುಕೊಂಡಿರತಕ್ಕಂತಹದ್ದು. 2008 ರಿಂದ ಐಸಿಟಿ ಫೇಸ್-2ನಲ್ಲಿ ಏನು ಸರಬರಾಜು ಮಾಡುತ್ತಿದ್ದರೋ, ಆಗ rampant corruption has taken place particularly in this project. ಟೇಬಲ್ ಕೊಡಲಾಗಿದೆ, ಕಂಪ್ಯೂಟರ್ ಯೂನಿಟ್ ಕೊಟ್ಟಿರುವುದಿಲ್ಲ. ಕಂಪ್ಯೂಟರ್ ಕೊಡಲಾಗಿದೆ, ಬ್ಯಾಟರಿ ಕೊಟ್ಟಿರುವುದಿಲ್ಲ. ಈಗಲೂ ಸಹ ಮಾನ್ಯ ಸಚಿವರು ಅದನ್ನು ತನಿಖೆಗೆ ಆದೇಶಿಸಿದರೆ, even now all the dead materials are available in the high schools. ಎಲ್ಲಿ ನೋಡಿದರೂ ಇದು ಆಗಿರತಕ್ಕಂತಹದ್ದು ನಿಜ. ಇದರಲ್ಲಿ ಸಾಕಷ್ಟು ಭ್ರಷ್ಟಾಚಾರ ನಡೆದಿದೆ. 2008-09ನೇ ಐಸಿಟಿ ಫೇಸ್ – 2ದಲ್ಲಿ ತನಿಖೆಯಾಗಬೇಕೆಂದು ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಎರಡನೆಯದಾಗಿ ಐಸಿಟಿ ಫೇಸ್-2ದಲ್ಲಿ ಈ ತರಹ ಆಗಬಾರದು ಎನ್ನುವ ಉದ್ದೇಶದಿಂದ ಅವರು ತಡೆದಿರಬಹುದು ಎನ್ನುವ ಭಾವನೆ ಇದೆ. He is a man of very transparent administration. ನಾನು ವೈಯಕ್ತಿಕವಾಗಿ ಅವರ ಕಾರ್ಯವೈಖರಿಯನ್ನು ನೋಡುತ್ತಿದ್ದೇನೆ. He has really taken a wonderful initiative to bring transparency in the education department. ಹಾಗಾಗಿ ಇದನ್ನು ವಿಶೇಷವಾಗಿ ತನಿಖೆಗೆ ಆದೇಶಿಸಬೇಕೆಂದು ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಅರುಣ ಶಹಾಪುರ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು ಕೇಳಿದಂತೆ ಐಸಿಟಿ initiative ಏನಿದೆ? ಮಾನ್ಯ ಸಚಿವರು ಒಂದು ಸಂಗತಿ ಏನು ಹೇಳಿದಿರಿ, 'ತಂತ್ರಜ್ಞಾನ ಬೆಂಬಲಿತ ಕಲಿಕಾ ಕಾರ್ಯಕ್ರಮ' ಹಾಗೆಂದರೇನು ಎಂದು ಸ್ವಲ್ಪ ವಿಶ್ಲೇಷಣೆ ಮಾಡಿ ಅದರ ಬಗ್ಗೆ ವಿವರಣೆಯನ್ನು ಕೊಟ್ಟರೆ ಚೆನ್ನಾಗಿರುತ್ತದೆ. ಎರಡನೆಯದಾಗಿ ಶಿಕ್ಷಕ ಚಾಲಿತ ಕಾರ್ಯಕ್ರಮವನ್ನು ಮರು ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ. ಏನಿತ್ತು ಹಾಗೂ ಏನು ಬದಲಾವಣೆ ಮಾಡಲಾಗಿದೆ? ಮೂರನೆಯ ಸಂಗತಿ ಏನೆಂದರೆ ಈಗ ತರಬೇತಿ ಹೊಂದಿದ ಶಿಕ್ಷಕರ ಶಾಲೆಗೆ ಕಂಪ್ಯೂಟರ್ ಒದಗಿಸಿ ಶಾಲೆಯಲ್ಲಿನ ಮಕ್ಕಳು ಎನ್.ಸಿ.ಇ.ಆರ್.ಟಿ. ನಿಗದಿ ಪಡಿಸಿರುವ ಕೌಶಲ್ಯಗಳನ್ನು ಗಳಿಸುವಂತೆ ಕಂಪ್ಯೂಟರ್ ಶಿಕ್ಷಣವನ್ನು ನೀಡಲಾಗುವುದು. ಇಲ್ಲಿ ಸ್ವಲ್ಪ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಗೊಂದಲವಿದೆ. ಶಿಕ್ಷಣ ಇಲಾಖೆ ನೀಡುತ್ತಿರುವುದು ಕಂಪ್ಯೂಟರ್ ಉಪಯೋಗಿಸಿ ಶಿಕ್ಷಣ ನೀಡುವಂತಹದ್ದೋ ಅಥವಾ ಕಂಪ್ಯೂಟರ್ ಶಿಕ್ಷಣ ನೀಡುವಂತಹದ್ದೋ? ಈ ಎರಡದರ ಬಗ್ಗೆ ಸ್ವಲ್ಪ ವಿವರಣೆಯನ್ನು ಮಾನ್ಯ ಸಚಿವರು ಕೊಡಬೇಕು. ನಾಲ್ಕನೆಯದಾಗಿ ಕೇವಲ ಸಾವಿರ ಸರ್ಕಾರಿ ಶಾಲೆಗಳಲ್ಲಿ ಈ ಕಾರ್ಯಕ್ರಮ ಅನುಷ್ಠಾನಗೊಳಿಸಿ ನಂತರ ರಾಜ್ಯದ ಇತರೆ ಸರ್ಕಾರಿ ಶಾಲೆ ಪದವಿ ಪೂರ್ವ ಕಾಲೇಜುಗಳಿಗೆ ವಿಸ್ತರಿಸಲು ಕ್ರಮ ವಹಿಸಲಾಗುವುದು ಎಂದು ಮಾನ್ಯ ಸಚಿವರು ಹೇಳಿದ್ದಾರೆ. What about the aided institutions? ನೀವು ಸೌಲಭ್ಯಗಳನ್ನು ಕೊಡುವ ವಿಷಯದಲ್ಲಿ ಏನಾದರೂ ಇರಬಹುದು. ಇಲ್ಲಿ ಬಹಳ ಮೇಲೆಯೇ ಸ್ಪಷ್ಟವಾಗಿ ಹೇಳಿರುವುದೇನೆಂದರೆ ಎನ್.ಸಿ.ಇ.ಆರ್.ಟಿ. ಅಧ್ಯಯನದ ಶಿಫಾರಸ್ಸುಗಳು, ಕೇರಳ ರಾಜ್ಯದ ಯಶಸ್ಸಿನ ಅಂಶಗಳನ್ನು ಅಳವಡಿಸಿಕೊಂಡು ಇದೊಂದು ಕಾರ್ಯಕ್ರಮ ರೂಪಿಸಬೇಕಾದಾಗ ರಾಜ್ಯದ ಅನುದಾನಿತ ಮತ್ತು ಅನುದಾನರಹಿತ ಶಾಲೆಗಳನ್ನು ಹೊರಗಡೆ ಇಡಲಾಗಿದೆ. ಆ ಮಕ್ಕಳ ಭವಿಷ್ಯವೇನು ಅವರು ಈ ರಾಜ್ಯದ ಪ್ರಜೆಗಳಲ್ಲವೆ? ಇದರ ಬಗ್ಗೆ ಸಚಿವರು ಬೆಳಕು ಚೆಲ್ಲಬೇಕು. ಏಕೆಂದರೆ ಹಿಂದೆ ಐಸಿಟಿನಲ್ಲಿ ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ ಟೇಬಲ್‌ಗಳು, ಬ್ಯಾಟರಿಗಳು ಹೋಗಿ ಕೊಳೆಯುತ್ತಿರುವುದು ಸಚಿವರ ಗಮನಕ್ಕೆ ಬಂದಿದೆ. ಏಕೆ ಈ ಅನುದಾನಿತ ವ್ಯವಸ್ಥೆಯನ್ನು ಕೈಬಿಡುತ್ತಿದ್ದಾರೆ? ಹಾಗಾಗಿ ಅದನ್ನೂ ಸೇರಿಸಿಕೊಂಡು ಮಾಡುವುದಕ್ಕೆ ಸರ್ಕಾರದ ಯೋಜನೆ ಏನು ಎಂಬುದರ ಬಗ್ಗೆ ನನಗೆ ವಿವರಣೆ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, 'ಮಾಹಿತಿ ಸಿಂಧು' ಎನ್ನುವ ಹೆಸರಿನ ಯೋಜನೆಯಡಿಯಲ್ಲಿ ಶ್ರೀ ಎಸ್.ಎಂ.ಕೃಷ್ಣ ಅವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ನನ್ನ ಜಿಲ್ಲೆಯಾದ ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಕೆಸ್ತೂರು ಗ್ರಾಮದಲ್ಲಿ ದೊಡ್ಡ ಪ್ರಮಾಣದಲ್ಲಿ ಈ ಕಾರ್ಯಕ್ರಮಕ್ಕೆ ಚಾಲನೆಯನ್ನು ಕೊಟ್ಟಿದ್ದರು. ಬಹುಶಃ ರಾಜ್ಯ ಅಷ್ಟೆ ಅಲ್ಲ, ದೇಶದ ಗಮನವನ್ನು ಆ ಯೋಜನೆ ಸೆಳೆಯಿತು. ಮೊದಲ ಹಂತದಲ್ಲಿ ಒಂದು ಸಾವಿರ ಸರ್ಕಾರಿ ಪ್ರೌಢಶಾಲೆಗಳಲ್ಲಿ ತರಬೇತಿ ಪಡೆದಂತಹ ಕಂಪ್ಯೂಟರ್ ಶಿಕ್ಷಕರನ್ನೇ ನೇಮಕ ಮಾಡಿಕೊಂಡು ಕಿಯೋನಿಕ್ಸ್ ಸಂಸ್ಥೆಯ ಮೂಲಕ ಈ ಒಂದು ಸಾವಿರ ಶಾಲೆಗಳಲ್ಲಿ ಅತ್ಯಂತ ವ್ಯವಸ್ಥಿತವಾದ ಒಂದು ಕೊಠಡಿ, ಕಂಪ್ಯೂಟರ್‌ಗಳು, ಅದಕ್ಕೆ ಯುಪಿಎಸ್‌ಗಳು, ಅದಕ್ಕೆ ಸಂಪರ್ಕ, ಶಿಕ್ಷಕರು, ಟೈಮ್‌ಟೇಬಲ್ ಇವೆಲ್ಲವನ್ನೂ ಹಾಕಿ ಪ್ರಾರಂಭ ಮಾಡಲಾಯಿತು. ಬಹುಶಃ ಅವತ್ತು ನಿಮ್ಮ ಸರ್ಕಾರದಲ್ಲಿ ಮಾಹಿತಿ ಸಿಂಧು ಯೋಜನೆಗೆ ಪಡೆದ ಪ್ರಚಾರ ಹೇಳಲಿಕ್ಕೆ ಅಸದಳ. ಒಂದು ಹಂತ ಅತ್ಯಂತ ಯಶಸ್ವಿಯಾಗಿ ಆಯಿತು. ಆದರೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾರೋ ಏಜೆನ್ಸಿಯವರು ಸಂಬಳ ಕೊಡುವ ವಿಚಾರದಲ್ಲಿ ದೊಡ್ಡ ಗಲಾಟೆ, ಹೋರಾಟ ಪ್ರಾರಂಭವಾಯಿತು. ಎರಡನೆಯ ಹಂತ ಪರವಾಗಿಲ್ಲ ಎನ್ನುವ ಮಟ್ಟಕ್ಕೆ ಬಂದಿತು. ಈಗ ಅದನ್ನು ಬದಲಾಯಿಸಿ, ಯೋಜನೆಗೆ ಹೊಸ ಹೆಸರನ್ನು ಕೊಟ್ಟು 'ತಂತ್ರಜ್ಞಾನ ಬೆಂಬಲಿತ ಕಲಿಕಾ ಕಾರ್ಯಕ್ರಮ' ಈ ಐಸಿಟಿ–1,2,3 ಎನ್ನುವ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಮಾಹಿತಿ ಸಿಂಧು ಯಶಸ್ಸಿನ ಹಿನ್ನೆಲೆಯಲ್ಲಿಅವತ್ತೇನಾಗಿತ್ತು? ಎಲ್ಲಿಯವರೆಗೆ ಹೋದರು? ಈ ಮಾಹಿತಿ ಸಿಂಧು ಶಿಕ್ಷಕರನ್ನು ಖಾಯಂ ಮಾಡಬಾರದೇಕೆ? ಹುದ್ದೆಗಳನ್ನು ಸೃಷ್ಟಿ ಮಾಡುವುದಕ್ಕೆ ಡಿ.ಎಸ್.ಇ.ಆರ್.ಟಿ.ಯವರು ಪ್ರಸ್ತಾವನೆಯನ್ನು ಸಲ್ಲಿಸಿ 600 ಹುದ್ದೆಗಳ ಅನುಮೋದನೆಗೆ ಸರ್ಕಾರದ ಹಂತಕ್ಕೂ ಬಂದಿತು. ಏಕೆಂದರೆ ಈಗಿರುವ ಪ್ರೌಢಶಾಲಾ ಸಹಶಿಕ್ಷಕರಿಗೆ workload ಹೆಚ್ಚಾಗಿದೆ. ಅವರು 30 ರಿಂದ 32 ಗಂಟೆ 33 ಗಂಟೆ ಪಾಠ ಮಾಡಲೇಬೇಕು. ಹಾಗಾಗಿ ಮಾಹಿತಿ ಶಿಕ್ಷಣ ಕಲಿಸಲಿಕ್ಕೆ ಪ್ರತ್ಯೇಕ ಶಿಕ್ಷಕರ ನೇಮಕಾತಿಯಾಗಬೇಕೆಂದು ಹೇಳಿ ಸರ್ಕಾರ ನಿರ್ಧಾರ ತೆಗೆದುಕೊಂಡ ಮೇಲೆ ಅದು ನೆನೆಗುದಿಗೆ ಬಿದ್ದಿತು. ಅಂದು ಅವಸಾನ ಆರಂಭವಾದುದು ಎಲ್ಲಿಗೆ ಬಂದು ನಿಂತಿದೆ? ನನ್ನ ಶಾಲೆ ಅನುದಾನಿತ ಶಾಲೆಗೆ ಸರ್ಕಾರ ಟೇಬಲ್ ಕೊಟ್ಟಿದೆ. ಯುಪಿಎಸ್ ಕೊಟ್ಟಿದೆ. ಟೇಬಲ್ ಕೊಟ್ಟ ಎರಡು ವರ್ಷದ ಮೇಲೆ ಯುಪಿಎಸ್ ಬಂದಿತು. ಯುಪಿಎಸ್ ಕೊಟ್ಟು ನಾಲ್ಕು ವರ್ಷವಾಯಿತು. ಈಗೇನು ಮಾಡುವುದು? ಅದನ್ನು ಒಂದು ಕೊಠಡಿಯಲ್ಲಿ ಹಾಕಿ ಬೀಗ ಹಾಕಿಟ್ಟಿದ್ದೇವೆ. ಹಳೆಯ ಕಂಪ್ಯೂಟರ್ ಶಾಲೆಗಳಿಗೂ ಬೀಗ ಹಾಕಿಟ್ಟಿದ್ದೇವೆ. ಎಲ್ಲಾ ಕಂಪ್ಯೂಟರ್ ಕಲಿಕಾ ವ್ಯವಸ್ಥೆಯು ಇವತ್ತು ಸಂಪೂರ್ಣವಾಗಿ ಬೀಗದೊಳಗಿದೆ. ಮಾನ್ಯ ಎಸ್.ಎಂ.ಕೃಷ್ಣ ಅವರ ಕಾಲದಲ್ಲಿ ಆರಂಭವಾದ ಅತ್ಯಂತ ಮಹತ್ವಾಕಾಂಕ್ಷಿ ಯೋಜನೆಗೆ ಇಡೀ ರಾಜ್ಯದಲ್ಲಿ 'ಮಾಹಿತಿ ಸಿಂಧು ಮುಗಿಸಿದರು ಇಂದು' ಎಂಬ ಒಂದು ಘೋಷಣೆ ಆರಂಭವಾಯಿತು. ಕೋಟಿ ಕೋಟಿ ರೂಪಾಯಿಗಳ ಹಣವನ್ನು ಈ ಯೋಜನೆಗೆ ಹಾಕಿ ಆಗಿಹೋಗಿದೆ. ಇವತ್ತಿನ ಶಿಕ್ಷಣ ಕಂಪ್ಯೂಟರ್‌ನ ಹೊರತಾಗಿ ಪೂರ್ಣವಾಗುವುದಿಲ್ಲ. ಖಾಸಗಿ ಶಾಲೆಗಳಲ್ಲಿ ಕಂಪ್ಯೂಟರ್‌ಗಳನ್ನು ತೋರಿಸಿಯೇ ಮಕ್ಕಳನ್ನು ದಾಖಲು ಮಾಡಿಕೊಳ್ಳುತ್ತಾರೆ. ನಾವು ಇದನ್ನು ಕಂಪ್ಯೂಟರ್ ಯುಗ ಎಂದು ಕರೆಯುತ್ತೇವೆ. ಕಂಪ್ಯೂಟರ್ ಆಧಾರಿತ ಶಿಕ್ಷಣ ಕೊಡದಿದ್ದಲ್ಲಿ ಶಿಕ್ಷಣ ಎಲ್ಲಿ ಪೂರ್ಣವಾಗುತ್ತದೆ? ಹೀಗಿರುವಾಗ ಸರ್ಕಾರ ಅರ್ಧ ಯೋಜನೆ, ಕಾಲು ಭಾಗ ಯೋಜನೆ ಎಂದರೆ ಅದು ಏನಾಗುತ್ತದೆ? ಒಂದು ಕೊಠಡಿಯೂ ಆಗಬೇಕು, ಕಂಪ್ಯೂಟರ್ ಪೂರ್ತಾ ಕೊಡಬೇಕು. ಕಲಿಸುವುದಕ್ಕೆ ಟೀಚರ್ ಅನ್ನೂ ಕೊಡಬೇಕು. ಈಗ ಗಣಿತ ಶಿಕ್ಷಕರನ್ನು ರಿಸಲ್ಟ್ ಕೊಡದೆ ಹೋದರೆ ಏನು ಮಾಡುತ್ತಿದ್ದೀರಿ? 80% ಫಲಿತಾಂಶ ಕೊಟ್ಟರೂ ನೋಟೀಸ್ ಕೊಡುತ್ತೀರಿ. 70% ಫಲಿತಾಂಶ ಕೊಟ್ಟರೂ ನೋಟೀಸ್ ಕೊಡುತ್ತೀರಿ. ಅವನು ಗಣಿತವನ್ನು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೇಳುವುದನ್ನು ಬಿಟ್ಟು ಕಂಪ್ಯೂಟರ್ ಹೇಳುವುದಕ್ಕಾಗುವುದಿಲ್ಲ. ವಿಜ್ಞಾನ ಶಿಕ್ಷಕರು ವಿಜ್ಞಾನವನ್ನು ಹೇಳುವುದನ್ನು ಬಿಟ್ಟು ಕಂಪ್ಯೂಟರ್ ಹೇಳುವುದಕ್ಕಾಗುವುದಿಲ್ಲ. ಆಂಗ್ಲ ಶಿಕ್ಷಕರು ಆಂಗ್ಲ ಪಾಠವನ್ನು ಹೇಳುವುದನ್ನು ಬಿಟ್ಟು ಕಂಪ್ಯೂಟರ್ ಹೇಳುವುದಕ್ಕಾಗುವುದಿಲ್ಲ. ಅದೇ ರೀತಿ ಕನ್ನಡ ಶಿಕ್ಷಕರು ಕನ್ನಡ ಪಾಠವನ್ನು ಹೇಳುವುದನ್ನು ಬಿಟ್ಟು ಕಂಪ್ಯೂಟರ್ ಹೇಳುವುದಕ್ಕಾಗುವುದಿಲ್ಲ. ಸರ್ಕಾರ ಕಂಪ್ಯೂಟರ್ ಶಿಕ್ಷಕರನ್ನೇ ನೇಮಕಾತಿ ಮಾಡಬೇಕು. ಹಿಂದೆ ಕಂಪ್ಯೂಟರ್ ಶಿಕ್ಷಣಕ್ಕೆ ಕೊಠಡಿಯನ್ನು ಮಾಡಿದ್ದೀರೋ ಆ ರೀತಿಯಲ್ಲಿಯೇ ಮಾಡಬೇಕು. ಟೈಮ್‌ಟೇಬಲ್ ಅಳವಡಿಸಿಕೊಡಬೇಕು. ಶಿಕ್ಷಕರನ್ನೂ ಕೊಡಬೇಕು. ಇಡೀ ಯೋಜನೆಯನ್ನು ಮಾನ್ಯ ಎಸ್.ಎಂ.ಕೃಷ್ಣ ಅವರ ಕಾಲದಲ್ಲಿ ಹೇಗೆ ಪ್ರಾರಂಭ ಮಾಡಿದರೋ ಹಾಗೆ ಪ್ರಾರಂಭ ಮಾಡದೆ ಹೋದರೆ ಮಕ್ಕಳಿಗೆ ನೀವು ದೊಡ್ಡ ನಷ್ಟವನ್ನು ಮಾಡಿದಂತಾಗುತ್ತದೆ. ಏಕೆಂದರೆ ಅವತ್ತು ಎಷ್ಟರ ಮಟ್ಟಿಗೆ ಮಕ್ಕಳು ವೇಗವಾಗಿ ಕಂಪ್ಯೂಟರ್ ಕಲಿಕೆಯಲ್ಲಿ ಮುಂದೆ ಹೋದರು ಎಂದರೆ ಹೇಳಲಿಕ್ಕೆ ಅಸದಳ. ಇವತ್ತು ಈ ಯೋಜನೆ ನೆಲಕಚ್ಚಿ ಕೂತಿದೆ. ಯಾರು ಈ ಜವಾಬ್ದಾರಿಯನ್ನು ಹೊರುವವರು? ನಾನು ಮಾನ್ಯ ಸಚಿವರ ಮೇಲೆ ಆರೋಪ ಮಾಡುವುದಿಲ್ಲ. ಅವರು ಇತ್ತೀಚೆಗೆ ಬಂದವರು. ಆದರೆ ಆ ಜವಾಬ್ದಾರಿ ಅವರ ಹೆಗಲ ಮೇಲಿದೆ. ಈಗ ನಾವು ಟೇಬಲ್ ಇಟ್ಟುಕೊಂಡು ಕುಳಿತುಕೊಳ್ಳೋಣವೆ ಅಥವಾ ಯುಪಿಎಸ್ ಇಟ್ಟುಕೊಂಡು ಕುಳಿತುಕೊಳ್ಳೋಣವೆ? ಏನು ಮಾಡುವುದು ಹೇಳಿ. ಆ ಟೇಬಲ್ ಅನ್ನು ಏತಕ್ಕಾಗಿ ಬಳಸುವುದು ಹೇಳಿ. ಬೇರೆ ಏನು ಬಳಕೆಗೂ ಬರುವುದಿಲ್ಲ. ಯುಪಿಎಸ್‌ಗಳು ಕಿಲುಬು ಹಿಡಿದು ಹೋಗುತ್ತಿದೆ. ಈಗ ತಾನೇ ನಾನು ನಮ್ಮ ಶಾಲೆಗೆ ಫೋನ್ ಮಾಡಿದ್ದೆನು. ಯುಪಿಎಸ್ ಸಹ ಕೆಟ್ಟಿದೆ ಎಂದು ಹೇಳಿದರು.

**ಉಪಸಭಾಪತಿಯವರು:-** ಮಾನ್ಯ ಶ್ರೀಕಂಠೇಗೌಡರೆ, ಏನು ಮಾಡಬೇಕೆಂಬುದನ್ನು ಹೇಳಿ ಮುಗಿಸಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೆ, ಮಾಹಿತಿ ಸಿಂಧು ಯೋಜನೆಯ ಮೊದಲ ಹಂತದಲ್ಲಿ ಎಷ್ಟರ ಮಟ್ಟಿಗೆ ವ್ಯವಸ್ಥಿತವಾಗಿ ಚಾಲನೆಗೆ ಬಂದಿತೋ ಅದೇ ಮಾದರಿಯಲ್ಲಿ ಇದೂ ಸಹ ಜಾರಿಯಾಗಬೇಕು. ಇದಕ್ಕಾಗಿ ಕೇರಳ ರಾಜ್ಯದವರನ್ನು ಕೇಳಬೇಕಾಗಿಲ್ಲ. ಮಾಹಿತಿ ಸಿಂಧು ಯೋಜನೆಯಡಿಯಲ್ಲಿ ಕೇರಳದವರೆ ನಮ್ಮ ಹತ್ತಿರ ಕಲಿತುಕೊಂಡು ಹೋದರು. ಅಷ್ಟೊಂದು ಯಶಸ್ವಿಯಾಯಿತು. ಆ ಹಾದಿಯಲ್ಲಿ ಮಾನ್ಯ ಸಚಿವರು ಅದಕ್ಕೆ ಹೊಸ ಕಾಯಕಲ್ಪ ಕೊಡುವುದಕ್ಕೆ ಮುಂದಾಗಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ರಮೇಶ್ ಬಾಬು(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಬಹುಶಃ ಯಾವುದೇ ಒಂದು ಸರ್ಕಾರ ಇದ್ದಂತಹ ಸಮಯದಲ್ಲಿ ಮಂತ್ರಿಗಳು ಸರ್ಕಾರದ ಕಾರ್ಯವನ್ನು ಸಮರ್ಥನೆ ಮಾಡಿಕೊಳ್ಳುವಂತಹ ಪ್ರಯತ್ನವನ್ನು ಮಾಡುತ್ತಾರೆ. ಇಲ್ಲಿ ಕೊಟ್ಟಿರತಕ್ಕಂತಹ ಉತ್ತರದಲ್ಲಿ ಸನ್ಮಾನ್ಯ ಶಿಕ್ಷಣ ಸಚಿವರು ಸರ್ಕಾರದ ವೈಫಲ್ಯವನ್ನು ಒಪ್ಪಿಕೊಂಡಿದ್ದಾರೆ. ಅದಕ್ಕಾಗಿ ಅವರಿಗೆ ಅಭಿನಂದನೆಗಳನ್ನು ಹೇಳಬಯಸುತ್ತೇನೆ. ಕಾರಣ ಈ ಕಾರ್ಯಕ್ರಮ 2008–09ರಲ್ಲಿ ಜಾರಿಯಾದಂತಹದ್ದು. 2016–17ರವರೆಗೆ ಇದನ್ನು ಜಾರಿ ಮಾಡುವುದಕ್ಕಾಗುವುದಿಲ್ಲ ಎನ್ನುವ ಸತ್ಯವನ್ನು ಅವರು ಒಪ್ಪಿಕೊಂಡಿದ್ದಾರೆ.

ಇಲ್ಲಿ ಶ್ರೀ ಚೌಡರೆಡ್ಡಿ ತೂಪಲ್ಲಿಯವರು ಮತ್ತು ಶ್ರೀ ಬಸವರಾಜ ಹೊರಟ್ಟಿಯವರು ಎತ್ತಿರತಕ್ಕಂತಹ ಪ್ರಶ್ನೆಯೆಂದರೆ ಸುಮಾರು 140 ಕೋಟಿ ರೂಪಾಯಿಗಳು ಆಗಲೇ ಬಿಡುಗಡೆಯಾಗಿದೆ. 40 ಕೋಟಿ ರೂಪಾಯಿ ಕಾಮಗಾರಿಯಾಗಿದೆ. ಒಂದು ಹಂತದಲ್ಲಿ ಇಷ್ಟು ಹಣ ಖರ್ಚು ಮಾಡಿ ಮಧ್ಯದಲ್ಲಿ ಈ ಕಾರ್ಯಕ್ರಮವನ್ನು ಕೈಬಿಟ್ಟರೆ ಅದರಿಂದ ಆಗುವಂತಹ ದುಷ್ಪರಿಣಾಮವೇನು? ಎರಡನೆಯದು ಇದರ ಆಧಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರ ಭವಿಷ್ಯವೇನು ಎನ್ನುವ ಪ್ರಶ್ನೆಯನ್ನು ಎತ್ತಿದ್ದಾರೆ. ಸರ್ಕಾರ ಈಗಾಗಲೇ ಒಂದು ಹಂತದಲ್ಲಿ ತಮ್ಮ ತಪ್ಪನ್ನು ಒಪ್ಪಿಕೊಂಡಿದೆ. ಇನ್ನೊಂದು ಮಾತನ್ನು ಅವರು ಹೇಳಿದ್ದಾರೆ. ಕೇರಳ ರಾಜ್ಯದಲ್ಲಿ ಈ ಕಾರ್ಯಕ್ರಮ ಯಶಸ್ವಿಯಾಗಿದೆ. ಅಲ್ಲಿಗೆ ಅಧ್ಯಯನ ತಂಡವನ್ನು ಕಳುಹಿಸಿದ್ದೇವೆ, ಅದನ್ನು ಇಂಪ್ಲಿಮೆಂಟ್ ಮಾಡುತ್ತೇವೆಂದು ಹೇಳಿದರು. ಇಂತಹ ಕಾರ್ಯಕ್ರಮಗಳನ್ನು ಜಾರಿ ಮಾಡಬೇಕಾದರೆ ಕರ್ನಾಟಕ ಬೇರೆ ರಾಜ್ಯಗಳಿಗೆ ಮಾದರಿಯಾಗಬೇಕು ಎನ್ನುವುದು ನಮ್ಮ ಕಳಕಳಿ. ಅದನ್ನು ಬಿಟ್ಟು ನೀವು ಇನ್ನೊಂದು ರಾಜ್ಯವನ್ನು ಅನುಸರಣೆ ಮಾಡುವಂತಹದ್ದಲ್ಲ. ಇಲ್ಲಿರತಕ್ಕಂತಹ ಪ್ರಶ್ನೆ ನೀವೇನು ವೈಫಲ್ಯವನ್ನು ಒಪ್ಪಿಕೊಂಡಿದ್ದೀರಿ, ಅದನ್ನು ದಯಮಾಡಿ ಸರಿಮಾಡಿ. ಈಗ ಇಲ್ಲಿ ಶ್ರೀ ಹೊರಟ್ಟಿಯವರಿರಬಹುದು, ಶ್ರೀ ಶ್ರೀಕಂಠೇಗೌಡರರಿಬಹುದು. ಇವರನ್ನೆಲ್ಲಾ ಸೇರಿಸಿ ಒಂದು ಸಮಿತಿ ಮಾಡಿ ಅನುಷ್ಠಾನಗೊಳ್ಳದೆ ಸ್ಥಗಿತಗೊಂಡಿರುವ ಕಾರ್ಯಕ್ರಮವನ್ನು ಮುಂದುವರೆಸುವುದಕ್ಕೆ ಚಾಲನೆ ಕೊಟ್ಟು ಅಲ್ಲಿರತಕ್ಕಂತಹ ಕಂಪ್ಯೂಟರ್ ಶಿಕ್ಷಕರಿಗೂ ತರಬೇತಿ ಸಿಗಬೇಕು. ಮತ್ತು ಕಂಪ್ಯೂಟರ್ ಶಿಕ್ಷಣ ವಿದ್ಯಾರ್ಥಿಗಳಿಗೆ ತಲುಪಬೇಕು. ಆ ಒಂದು ಯೋಜನೆ ಏನು ಇದೆ, ಅದು ವಿಫಲ ಆದರೆ ಅದರಿಂದ ವಿದ್ಯಾರ್ಥಿಗಳಿಗೆ ನಷ್ಟವಾಗುವುದು. ಆ ನಿಟ್ಟಿನಲ್ಲಿ ಸರ್ಕಾರ ಕ್ರಮ ಕೈಗೊಳ್ಳಲಿ. ಇಲ್ಲಿ ಆಗಿರತಕ್ಕಂತಹ ಕಾಮಗಾರಿ reopen ಆಗಲಿ. ಶಿಕ್ಷಕರಿಗೆ ಕೆಲಸದ ಭದ್ರತೆ ಬರಲಿ. ಕಾರ್ಯಕ್ರಮ ಯಶಸ್ವಿಯಾಗಿ ಜಾರಿಗೊಳ್ಳಲಿಕ್ಕೆ ಸರ್ಕಾರ ಪ್ರಯತ್ನ ಪಡಲಿ ಎಂದು ಹೇಳುವುದಕ್ಕೆ ಇಷ್ಟ ಪಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ವ್ಹಿ.ಸಂಕನೂರ(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈಗಾಗಲೇ ಶಾಲಾ–ಕಾಲೇಜುಗಳಿಗೆ ಕಂಪ್ಯೂಟರ್‌ಗಳು, ಕಂಪ್ಯೂಟರ್ ಟೇಬಲ್‌ಗಳನ್ನು ಕೊಟ್ಟಿದ್ದಾಗಿದೆ. ಇದನ್ನು ಒಂದೇ ಸಲ ನಿಲ್ಲಿಸಿ ಬಿಟ್ಟರೆ ಕೊಟ್ಟದ್ದೆಲ್ಲಾ ಹಾಳಾಗುತ್ತದೆ. ಹಾಗಾಗಿ ಹಳೆಯ ಸ್ಕೀಮ್ ಅನ್ನು ಮುಂದುವರೆಸಬೇಕೆಂದು ನಾನು ಹೇಳುತ್ತೇನೆ. ಹೊಸದಾಗಿ ಸಾವಿರ ಶಾಲೆಗಳನ್ನು ಆಯ್ಕೆ ಮಾಡಲಾಗಿದ್ದು, ಉಳಿದ ಶಾಲೆಗಳ ಪರಿಸ್ಥಿತಿಯೇನು? ಕೊಟ್ಟದ್ದು ಹಾಳಾಗಬಾರದು. ಕಂಪ್ಯೂಟರ್ ಶಿಕ್ಷಣ ಅವಶ್ಯವಿದೆ. ದಯವಿಟ್ಟು ಆ ಸ್ಕೀಮ್ ಅನ್ನು ಕಂಪ್ಲೀಟ್ ಮಾಡಬೇಕು.

**(93) 9-02-2017/4-20/RC-AK**

**ಶ್ರೀ ತನ್ವೀರ್ ಸೇಠ್(ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಬಸವರಾಜ ಹೊರಟ್ಟಿಯವರು ಕೇಳಿರುವಂತಹ ಪ್ರಶ್ನೆಗೆ ಮಾನ್ಯ ಎಲ್ಲಾ ಸದಸ್ಯರು ಧ್ವನಿಗೂಡಿಸಿ ಅನೇಕ ವಿಚಾರಗಳನ್ನು ಗಮನ ಸೆಳೆಯುವಂತಹ ಪ್ರಯತ್ನ ಮಾಡಿದ್ದಾರೆ. ಮೊಟ್ಟಮೊದಲಾಗಿ ಮಾಹಿತಿ ಸಿಂಧುವಿನಿಂದ ಪ್ರಾರಂಭವಾಗಿ ICT Phase-1, ICT Phase-2, ICT Phase-3 ಇದೇನು ಬಂದಿದೆ, ಬಹಳ ಸ್ಪಷ್ಟವಾಗಿ ಹೇಳುತ್ತೇನೆ ಇದು ಬಂದಂತಹ ಕಾಲದಿಂದಲೂ ಯಾವುದೇ ಶಿಕ್ಷಕರು ಸರ್ಕಾರದ ಹೊಣೆಯ ಮೇಲೆ ಇರಲಿಲ್ಲ. ಅವರನ್ನು ಗುತ್ತಿಗೆ ಆಧಾರದ ಮೇಲೆ ಬಳಕೆ ಮಾಡಿಕೊಂಡಿದ್ದೆವು. ಅವರ ವೇತನವನ್ನು ಗುತ್ತಿಗೆದಾರರ ಮೂಲಕ ಕೊಡುವಂಥ ಪದ್ಧತಿ ಇತ್ತು. ಇದನ್ನು ಬಹಳ ಸ್ಪಷ್ಟವಾಗಿ ನಾನು ಹೇಳಬಯಸುತ್ತೇನೆ.

ಎರಡನೆಯ ವಿಷಯವೇನೆಂದರೆ, ಮಾನ್ಯ ಸದಸ್ಯರು ಮಾತನಾಡುವಂತಹ ಸಂದರ್ಭದಲ್ಲಿ ಲೋಪಗಳ ಬಗ್ಗೆಯೂ ಅವರೇ ಮಾತನಾಡಿದ್ದಾರೆ, ಅದೇ ರೀತಿ ಈ ಕಾರ್ಯಕ್ರಮ ಯಾವ ದಿಕ್ಕಿನಲ್ಲಿ ಹೋಯಿತು ಎನ್ನುವುದರ ಬಗ್ಗೆಯೂ ಸಹ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಇಲ್ಲಿ ಪ್ರಾರಂಭವಾದುದು ICT Phase-2 ಈಗಾಗಲೇ ಇದು ಸರ್ಕಾರದ ಮುಂದೆ ಒಂದು ವ್ಯಾಜ್ಯವಾಗಿ ಪರಿಗಣಿಸಿದೆ Arbitrator ನ್ನು ಮುಂದಕ್ಕೆ ಹಾಕಿಕೊಂಡು ಸುಮಾರು 26 ಕೋಟಿ ರೂಪಾಯಿಗೆ ಸರ್ಕಾರದ ಜೊತೆ ಸಂಧಾನ ಮಾಡುವಂತಹ ಕಾರ್ಯ ಪ್ರಾರಂಭವಾಗಿದೆ. ICT Phase-3 ವಿಚಾರದಲ್ಲಿ ಈ ಕಾರ್ಯಕ್ರಮ 2008–2009ರಲ್ಲಿ ಪ್ರಾರಂಭವಾಯಿತು ಅಲ್ಲಿಂದ ಪ್ರಾರಂಭವಾಗಿ ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ಅವರು ಕಿಯೋನಿಕ್ಸ್ ವಿಚಾರದಲ್ಲಿ ಮಾತನಾಡಿದರು. ಮುಚ್ಚಿ ಹೋಗುವಂತಹ ಸಂಸ್ಥೆಗೆ

ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನೀವು ಸಹಾಯ ಮಾಡುವಂತಹ ಪ್ರಯತ್ನ ಮಾಡಿದ್ದೀರಿ ಎಂದು. ಮಾನ್ಯ ಸದಸ್ಯರು ಬಹಳ ಸರಿಯಾಗಿ ಹೇಳಿದರು. ಸರ್ಕಾರಿ ಸಾಮ್ಯದ ಒಂದು ಸಂಸ್ಥೆ ಆಗಿದ್ದರೂ ಸಹ ಅದಕ್ಕೆ ರಕ್ಷಣೆ ಕೊಡುವುದಕ್ಕೆ ಈ ರೀತಿ ಮಾಡಿದ್ದೀರಿ ಎಂದು ಹೇಳಿದರು. ಇಲ್ಲಿ ಏನಾಯಿತು ಎಂದರೆ, ಹಿಂದಿನ ಸರ್ಕಾರದಲ್ಲಿ ಕೆಲವೊಂದು ಆತುರದ ನಿರ್ಣಯಗಳನ್ನು ಕೈಗೊಂಡಿದ್ದಾರೆ. ಸತ್ಯ ಹೇಳುವುದಕ್ಕೆ ಯಾವುದೇ ಮುಚ್ಚು ಮರೆ ಮಾಡುವುದಿಲ್ಲ. D.G.S & D (Directorate General of Supplies and Disposal) ಯಿಂದ ಯಾವುದೇ ಮುಂದಾಲೋಚನೆ ಮಾಡದೆ ಸುಮಾರು 94 ಕೋಟಿ ರೂಪಾಯಿಗಳಿಗೆ ಯುಪಿಎಸ್ ಗಳನ್ನು ಟೇಬಲ್ ಗಳನ್ನು ಪ್ರೊಜೆಕ್ಟರ್ ಗಳನ್ನು ಮತ್ತು ಪ್ರಿಂಟರ್ ಗಳನ್ನು ಕೊಂಡು ಕೊಳ್ಳುವುದಕ್ಕೆ ಆದೇಶ ಮಾಡಿದರು. ಆ ಎಲ್ಲವೂ ಎಲ್ಲಾ ಶಾಲೆಗಳಿಗೆ ಬರುವುದಕ್ಕೆ ಪ್ರಾರಂಭವಾಯಿತು. ಕೆಲವು ಕಡೆ ಟೇಬಲ್ ಇದ್ದರೆ ಕುರ್ಚಿ ಇಲ್ಲ, ಕುರ್ಚಿ ಬಂದರೆ ಯುಪಿಎಸ್ ಇಲ್ಲ, ಯುಪಿಎಸ್ ಬಂದರೆ ಪ್ರಿಂಟರ್ ಇಲ್ಲ. ಈ ಗೊಂದಲಗಳು ಮೊದಲನೇ ಹಂತದಲ್ಲಿ ಆಗಿರುವಂಥದ್ದು.

ಎರಡನೆಯದಾಗಿ, ಇಲಾಖಾ ಸಚಿವರಿಗೂ ಮತ್ತು ಸರ್ಕಾರದ ಮಧ್ಯೆ ಸಾಕಷ್ಟು ಸಂಘರ್ಷ ನಡೆದು 2011ನೇ ಸಾಲಿನಲ್ಲಿ ಕ್ಯಾಬಿನೆಟ್ ಮುಂದೆ ತೆಗೆದುಕೊಂಡು ಹೋಗಿ ಕಿಯೋನಿಕ್ಸ್ ಸಂಸ್ಥೆಗೆ ಕೊಡಬೇಕು ಎನ್ನುವಂತಹ ತೀರ್ಮಾನ ಕ್ಯಾಬಿನೆಟ್‌ನಲ್ಲಿ ಆಗಿರುವಂಥದ್ದು ಎಂದು ಬಹಳ ಸ್ಪಷ್ಟವಾದಂತಹ ಮಾಹಿತಿಯನ್ನು ಕೊಡಬಲ್ಲೆ. ಸರ್ಕಾರ ಯಾವುದೇ ಟೆಂಡರ್ ಕರೆದಿಲ್ಲ. ನಮ್ಮ ಜವಾಬ್ದಾರಿಯನ್ನು ಕಿಯೋನಿಕ್ಸ್ ಸಂಸ್ಥೆಗೆ ಕೊಟ್ಟಂತಹ ಸಂದರ್ಭದಲ್ಲಿ ಅವರು ಟೆಂಡರ್ ಕರೆದಂತಹ ಸಂದರ್ಭದಲ್ಲಿ ಯಾವ ಸಂಸ್ಥೆ ನಮ್ಮಲ್ಲಿಗೆ ಬಂದು ಟೆಂಡರ್ ಪಡೆದುಕೊಂಡಿತು. 'Only 10% of the amount has to be given in advance' ಎಂದು ಇರುವಂಥದ್ದು ಅದನ್ನು ಗಾಳಿಗೆ ತೂರಿ, ಅದನ್ನು 50% ಅಡ್ವಾನ್ಸ್ ತೆಗೆದುಕೊಳ್ಳಬೇಕೆಂಬ ನಿಯಮಗಳನ್ನು ಮಾಡಿ, ಯಾವುದೇ ಕೆಲಸ ಮಾಡಿದರೂ ದುಡ್ಡು ತೆಗೆದುಕೊಳ್ಳದ ಕೆಲಸ ಮಾಡಿರುವುದು ನಮ್ಮ ಗಮನಕ್ಕೆ ಬಂದಿಲ್ಲ. ಇದಾದ ಮೇಲೆ ಬಹಳ ಸ್ಪಷ್ಟವಾದಂತಹ ಒಂದು ಚಿತ್ರೀಕರಣ ಕೇಳಿದರು. ICT ನಲ್ಲಿರುವಂತಹ ಅಂಶಗಳೇನು? ಮತ್ತು ನೀವು ಮಾಡುವುದಕ್ಕೆ ಹೊರಟಿರುವುದು ಏನು? ಎಂದು ಕೇಳಿದರು. ಕಂಪ್ಯೂಟರ್ ತರಬೇತಿ ಎಂದ ತಕ್ಷಣ ಮಕ್ಕಳಿಗೆ ಕೇವಲ ಕಂಪ್ಯೂಟರ್ ಪರಿಚಯ ಮಾಡಿಸುವಂಥದ್ದಲ್ಲ. ಮಾಹಿತಿ ತಂತ್ರಜ್ಞಾನದ ಬಳಕೆ ಮಾಡಿ ವಿಷಯಗಳನ್ನು, ಆ ವಿಷಯದ ಶಿಕ್ಷಕರು ಮಕ್ಕಳಿಗೆ ಪಾಠ ಹೇಳುವುದಕ್ಕೆ ಸಹಕಾರಿ ಆಗಬೇಕು ಎಂಬುದು ಬಹಳ ಸ್ಪಷ್ಟವಿದೆ. ಇಲ್ಲಿ ICT Phase-1, ICT Phase-2, ICT Phase-3 ರಲ್ಲಿ ನಮ್ಮ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸರ್ಕಾರಿ ಶಾಲೆಗಳಾಗಲಿ, ಅಥವಾ ಅನುದಾನಿತ ಶಾಲೆಗಳಾಗಲಿ ಶಿಕ್ಷಕರ ಹೊಣೆಗಾರಿಕೆ ಏನು ಇರಲಿಲ್ಲ. ಅವರನ್ನು ಬಳಕೆ ಮಾಡಿಕೊಳ್ಳುವಂತಹ ವಿಧಾನವು ಇರಲಿಲ್ಲ. ಗುತ್ತಿಗೆದಾರ ಯಾರನ್ನು ಕಳಿಸುತ್ತಾರೋ ಕಳಿಸಲಿ ಸರಿ, ಅಥವಾ ಬೇರೆಯವರನ್ನು ಕಳಿಯಿಸಿದರು ಸರಿ. ಈ ರೀತಿಯಲ್ಲಿ ಒಂದು ಕಾರ್ಯಕ್ರಮ ಹಾಕಿಕೊಂಡು ಸ್ಪಷ್ಟತೆ ಇಲ್ಲದೆ ಇರುವಂತಹ ಒಂದು ಮಾಹಿತಿ ನಮ್ಮಲ್ಲಿ ಇದ್ದಂಥದ್ದು. ನಾನು ಸಚಿವನಾಗುವುದಕ್ಕಿಂತಲೂ ಮುಂಚೆಯೇ ಇದು ಕ್ಯಾಬಿನೆಟ್‌ನಲ್ಲಿ ತಂದು ಇದು ತೀರ್ಮಾನ ಆಗಿರುವಂಥದ್ದು. ತದನಂತರ ಏನೇನು ಬೆಳವಣಿಗೆ ಆಯಿತು ಅದನ್ನು ನಾನು ಹೇಳುತ್ತೇನೆ.

ಇದು ಆದಂತಹ ಸಂದರ್ಭದಲ್ಲಿ ಏನು D.G. S & D ಯಿಂದ ಇವರು ಯುಪಿಎಸ್‌ಗಳನ್ನು, ಪ್ರಿಂಟರ್‌ಗಳನ್ನು ಮತ್ತು ಟೇಬಲ್ ಮತ್ತು ಕುರ್ಚಿಗಳನ್ನು ತೆಗೆದುಕೊಳ್ಳುವುದಕ್ಕೆ ಮಾತ್ರ ಮುಂದಾಗಿದ್ದರೆ ಹೊರತು ಎಲ್ಲಿಯೂ ಕಂಪ್ಯೂಟರ್‌ಗಳನ್ನು ಕೊಟ್ಟಿಲ್ಲ. ಪ್ರೊಜೆಕ್ಟ್‌ರ್‌ಗಳನ್ನು ಕೊಟ್ಟಿಲ್ಲ. ICT Phase-1, ICT Phase-2 ನಲ್ಲಿ ಕೊಟ್ಟಿರುವಂತಹ ಯಾವುದೇ ಪೀಠೋಪಕರಣ ಇವತ್ತು ನಮ್ಮಲ್ಲಿ ಅದು ಚಾಲನೆಯಲ್ಲಿ ಇದೆಯೇ ಅಥವಾ ಇಲ್ಲವೇ ಎಂಬುದರ ಬಗ್ಗೆ ಮಾಹಿತಿಯು ಸಹ ಎಲ್ಲಿಯೂ ಇಲ್ಲ. ಕೆಲವು ಮಾನ್ಯ ಸದಸ್ಯರು ಹೇಳಿದರು ಏನೆಂದರೆ, ಸುಭದ್ರವಾಗಿ ಒಂದೊಂದು ಕೊಠಡಿಯನ್ನು ಲಾಕ್ ಮಾಡಿ ಇಟ್ಟುಕೊಂಡಿದ್ದೇವೆ, ಇದು ಸರ್ಕಾರಿ ಆಸ್ತಿ, ಇದನ್ನು ನಾಳೆ ದಿವಸ ಲೆಕ್ಕ ಕೊಡಬೇಕಾದರೆ ಏನು ಮಾಡುವುದು ಎಂದು. ಕೆಲವು ಕಡೆ ಕರೆಂಟ್ ಇತ್ತು, ಕೆಲವು ಕಡೆ ಇರಲಿಲ್ಲ. ಅಂತರಜಾಲದ ಮೂಲಕ ನಾವು ಯಾವುದೇ ಒಂದು content ನ ಶೈಕ್ಷಣಿಕ ಪ್ರಗತಿಗೆ ನಾವು ಕೊಡಬೇಕು ಎಂದು ಹೇಳಿದರೆ ಅಲ್ಲಿ broadband connection ಇರಬೇಕಾದುದು ಬಹಳ ಕಡ್ಡಾಯ. ಈ ಕಾರಣದಿಂದ ನಾವು ತ್ವರಿತಗತಿಯಲ್ಲಿ ಇದಕ್ಕೆ ಚಾಲನೆ ಕೊಡಲೇಬೇಕು, ಅನುಷ್ಠಾನಗೊಳಿಸಲೇಬೇಕು ಎಂಬ ಕಾರಣಕ್ಕಾಗಿ ನಮ್ಮ ಶಿಕ್ಷಕರಿಗೆ ತರಬೇತಿ ಕೊಟ್ಟು, ಇದಕ್ಕೆ ಭಾಗಿದಾರರನ್ನಾಗಿ ಮಾಡಿ ಜವಾಬ್ದಾರಿಯನ್ನು ಕೊಟ್ಟಂತಹ ಸಂದರ್ಭದಲ್ಲಿ ಮಕ್ಕಳಿಗೆ ಆಕರ್ಷಣೀಯವಾಗಿ ಪಠ್ಯಕ್ರಮವನ್ನು ಹೇಳಿ ಕೊಡುವಂಥದ್ದಕ್ಕೆ ಅವಕಾಶ ಆಗಬೇಕು ಎನ್ನುವುದನ್ನು ಮಾಡಿದ್ದೇವೆ. ಈಗ ಇದರಲ್ಲಿ ನ್ಯೂನತೆಗಳೇನಿತ್ತು, ನೀವು ಇಲ್ಲಿ ಆಗಿರುವಂತಹ ಭ್ರಷ್ಟಾಚಾರವನ್ನು ಮನಸ್ಸಿನಲ್ಲಿಟ್ಟುಕೊಂಡು ನೀವು ಕ್ರಮ ತೆಗೆದುಕೊಂಡಿದ್ದರೆ ಅದನ್ನು ನಾವು ಸ್ವಾಗತಿಸುತ್ತೇವೆ ಎಂಬ ಮಾತನ್ನು ಮಾನ್ಯ ಬಸವರಾಜ ಹೊರಟ್ಟಿಯವರು ಹೇಳಿದರು.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾನ್ಯ ಸಭಾಪತಿಯವರೇ, hardware ಎನ್ನುವುದು ಮತ್ತು software ಎನ್ನುವುದು ಎರಡು ಅಂಶಗಳಿವೆ. Hardware ಎಂದಾಗ ಅದಕ್ಕೆ ಪೀಠೋಪಕರಣಗಳು ಬೇಕಾಗುತ್ತದೆ. ಅದು ಕಂಪ್ಯೂಟರ್ ಆಗಿರಬಹುದು, ಪ್ರೊಜೆಕ್ಟರ್ ಆಗಿರಬಹುದು ಅವೆಲ್ಲವನ್ನೂ ಕೊಡಬೇಕಾಗುತ್ತದೆ. ಇದೆಲ್ಲಾ ಆದಮೇಲೆ software ಬರಬೇಕಾಗಿರುವಂಥದ್ದು. Software ಪ್ರಾರಂಭ ಆಗಿದ್ದೆ C.D. ಯಿಂದ. ಆದರೆ software ಎಲ್ಲಿಯೂ ಕೊಟ್ಟಿಲ್ಲ. ಒಂದು C.D. ತಂದು ಪತ್ರ ಕೊಟ್ಟು software ready ಆಗಿದೆ ಎಂದು ಹತ್ತು ಕೋಟಿ ರೂಪಾಯಿಗಳನ್ನು ತೆಗೆದುಕೊಂಡು ಬಿಟ್ಟಿದ್ದಾರೆ. ತೆಗೆದುಕೊಂಡಿರುವವರು ಯಾರೆಂದರೆ ನಮ್ಮ tender document ನಲ್ಲಿ ಯಾವ ಸಂಸ್ಥೆಗೆ ನಾವು ಒಪ್ಪಂದ ಕೊಟ್ಟಿದ್ದೆವು ಅವರು ಮತ್ತೆ sub-contract ಕೊಟ್ಟರು. ಈ ಕಾರಣದಿಂದ ನಾವು ಕಿಯೋನಿಕ್ಸ್ ಮೇಲೆ ಕಠಿಣವಾದಂತಹ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಮುಂದಾಗಿದ್ದೇವೆ. ನಾವು ಏನು ಹಣ ಕೊಟ್ಟಿದ್ದೇವೆ ಆ ಹಣದ ವಸೂಲಾತಿಗೂ ಸಹ ಕ್ರಮ ಜರುಗಿಸುವುದರ ಜೊತೆಗೆ ಪೂರ್ಣ ಪ್ರಮಾಣದ ಒಂದು ತನಿಖೆಯನ್ನು ನಾವು ಈಗಾಗಲೇ initiate ಮಾಡಿದ್ದೇವೆ. ಇದರ ಜೊತೆಗೆ ನಮ್ಮಲ್ಲಿ ಈ ಕಾರ್ಯಕ್ರಮ ಯಶಸ್ವಿಯಾಗಿ ಆಗದೆ ಇರುವುದಕ್ಕೆ ಕಾರಣ ಮಾಹಿತಿ ಸಿಂಧು ಆಗಿರಬಹುದು, ICT Phase-1, ICT Phase-2 ಏನು ಅನುಷ್ಠಾನ ಮಾಡುವಂತಹ ಹಂತಕ್ಕೆ ನಾವು ತಲುಪಿದ್ದರೂ ಸಹ ಈ ಅಂತರಜಾಲದ connectivity ಸರಿ ಇಲ್ಲದೆ ಇರುವುದರಿಂದ ಇದು ಎಲ್ಲಿಯೂ ನಡೆದಿಲ್ಲ. ಮಕ್ಕಳಿಗೆ ಕಂಪ್ಯೂಟರ್ ಕೇವಲ ಆಟ ಆಡುವಂತಹ ಒಂದು ವಸ್ತು ಆಗಿತ್ತು. ಶಿಕ್ಷಣಕ್ಕೆ ಯಾವುದೇ ಸಹಕಾರಿ ಆಗುವಂತಹ ವಿಚಾರ ಬಂದಿರಲಿಲ್ಲ. ನಮ್ಮ ಉದ್ದೇಶವೇನೆಂದರೆ, ನಾವು ಎಷ್ಟು ಶಾಲೆಗಳನ್ನು ಮಾಡಿದ್ದೇವೆ ಎನ್ನುವುದು ಮುಖ್ಯವಲ್ಲ, ನಾವು ಪ್ರಥಮ ಹಂತದಲ್ಲಿ ಶಿಕ್ಷಕರಿಗೆ ತರಬೇತಿ ಕೊಡುವಂಥದ್ದು, ಹೆಚ್.ಎಂ.ಗಳಿಗೆ ತರಬೇತಿ ಕೊಡುವುದಕ್ಕೆ ಪ್ರಾರಂಭ ಮಾಡಿದ್ದೇವೆ. ಇದರಂತೆ ಒಂದು ಸಾವಿರ ಸರ್ಕಾರಿ ಶಾಲೆಗಳನ್ನು ಪ್ರಾರಂಭ ಮಾಡಿ ಮುಂದಿನ ಶೈಕ್ಷಣಿಕ ವರ್ಷದಲ್ಲಿ ನಮ್ಮ ಉದ್ದೇಶ ಏನಾಗಿತ್ತು, ಅನುದಾನಿತ ಶಾಲೆಗಳಿಗೂ ತರಬೇತಿ ಕೊಟ್ಟು ಅಲ್ಲಿ ಪ್ರಾರಂಭ ಮಾಡುವಂಥದ್ದಕ್ಕೆ ನಾವು ಕಾರ್ಯಕ್ರಮವನ್ನು ರೂಪಿಸಿಕೊಂಡಿದ್ದೇವೆ. ಈ ಕಾರ್ಯಕ್ರಮ ಅಲ್ಲಿಗೆ ನಿಲ್ಲಬಾರದು ಎನ್ನುವುದಕ್ಕೆ ಈ ತಕ್ಷಣ ನಾವು laptop ಗಳನ್ನು ಮತ್ತು projector ಗಳನ್ನು ಪಡೆಯುವುದಕ್ಕೆ ನಾವು ಈಗಾಗಲೇ ಟೆಂಡರ್‌ಗಳನ್ನು ಕರೆದಿದ್ದೇವೆ. ಈ ICT Phase-3 ನಲ್ಲಿ ನಮ್ಮ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕಿಯೋನಿಕ್ಸ್‌ನಿಂದ ಮಾಡಿಕೊಂಡ ಒಪ್ಪಂದ ಏನಿತ್ತು, breach of trust ಮಾಡಿರುವುದರಿಂದ ಅವರ ಒಪ್ಪಂದವನ್ನು ನಾವು ರದ್ದು ಮಾಡಿದ್ದೇವೆ. ಅವರು ನಂತರ ಬೇರೆಯವರಿಗೆ ಯಾರಿಗೆ ಟೆಂಡರ್ ಕರೆದಿದ್ದರು ಅಥವಾ ಅವರು ಪುನಃ sub-contract ಗೆ ಬೇರೆಯವರಿಗೆ ಯಾರಿಗೆ ಕೊಟ್ಟಿದ್ದರು ಅದರ ಹೊಣೆಗಾರಿಕೆ ಸರ್ಕಾರದ ಮೇಲೆ ಇಲ್ಲ. ಇಲ್ಲಿ ಖರ್ಚಾಗಿರುವಂತಹ ಹಣವನ್ನು ವಾಪಸ್ಸು ಪಡೆಯುವಂತಹ ಕೆಲಸವನ್ನು ಸಹ ನಾವು ಮಾಡುತ್ತೇವೆ, ಇದರ ಜೊತೆಗೆ ಶಾಲೆಗಳಲ್ಲಿ ಸುರಕ್ಷಿತೆಯನ್ನು ಸಹ ಪರಿಗಣಿಸಬೇಕು. ಇವತ್ತು ಎಲ್ಲೆಲ್ಲಿ table, UPS ಗಳನ್ನು ಕೊಟ್ಟಿದ್ದಾರೆ ಅದನ್ನು ದುರಸ್ಥಿ ಮಾಡುವಂತಹ ಕೆಲಸಕ್ಕೂ ಸಹ ನಾವು annual maintenance ಮಾಡುವಂತಹ ಒಂದು ಪದ್ಧತಿಯನ್ನು ತರಬೇಕೆಂದು ವಿಚಾರ ಮಾಡುತ್ತಿದ್ದೇವೆ. ಕಾರಣ ಯಾರೋ ಬಂದರು ಅದನ್ನು ಬಳಕೆ ಮಾಡಿಕೊಂಡು ಹೋದರು ಎನ್ನುವುದಲ್ಲ.

(94)09.02.2017 ಕೆಜಿ/ಆರ್‌ಎನ್ 4.30

**ಶ್ರೀ ತನ್ವೀರ್ ಸೇಠ್ (ಮುಂದು):**

Duplicacy of programmes, ನಾವು ಬೇರೆ ಕಾರಣದಿಂದ ಗಣಕಯಂತ್ರವನ್ನು ಕೊಡುತ್ತೇವೆ ಅಥವಾ CSR (Corporate Social Responsibility) ಫಂಡಿಗ್‌ನಲ್ಲಿ ಗಣಕಯಂತ್ರಗಳು ಬರುತ್ತಿದೆಯೋ ಅಥವಾ ಯಾರಾದರೂ ದಾನಿಗಳು ಗಣಕಯಂತ್ರವನ್ನು ತೆಗೆದುಕೊಂಡು ಬಂದು ಕೊಡುತ್ತಿದ್ದಾರೋ ಯಾವುದಕ್ಕೂ ಲೆಕ್ಕ ಸಿಗದಂತಹ ಪರಿಸ್ಥಿತಿ ಇರುವುದರಿಂದ ಈ ಒಂದು ಕಾರ್ಯಕ್ರಮವನ್ನು ಬಹಳ ಸ್ಪಷ್ಟವಾಗಿ ರೂಪಿಸಲಾಗಿದೆ. ನಾವು ಏನು ಮಾಡುವುದಕ್ಕೆ ಹೊರಟ್ಟಿದ್ದೇವೆ ಎಂಬುದನ್ನು ಹೇಳುತ್ತೇನೆ. ಇದರ ಜೊತೆಗೆ ಇಲ್ಲಿ ಮಕ್ಕಳಿಗೆ ಶಿಕ್ಷಣದ ಪಠ್ಯ ಕಾರ್ಯಕ್ರಮಗಳ content ಏನಿದೆ ಅದು ನೇರವಾಗಿ ಮಕ್ಕಳಿಗೆ ಅಂತರಜಾಲದ ಮೂಲಕ ನಮ್ಮ ಗಣಕಯಂತ್ರದ ಮೂಲಕ ಈ e-content ಗಳನ್ನು ಸಿಡಿಗಳ ಮೂಲಕ ಕೊಟ್ಟು ಅದನ್ನು ಪಾಠ ಮಾಡುವಂತಹದ್ದು ಶಿಕ್ಷಕರಿಗೆ ತರಬೇತಿ ಕೊಟ್ಟ ಸಂದರ್ಭದಲ್ಲಿ ಮಕ್ಕಳಿಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ವಿಶೇಷಣೆ ಮಾಡಿ ಅವರು ಪಾಠ ಹೇಳುವಂತಹ ಪರಿಸ್ಥಿತಿ ಬರಬೇಕು ಎನ್ನುವುದನ್ನು ಮತ್ತು ಗುಣಮಟ್ಟವನ್ನು ಹೆಚ್ಚಿಸುವಂತಹ ಕಾರ್ಯಕ್ರಮವನ್ನು ಹಾಕಿಕೊಂಡು ಮಾಡುತಿರುವಂತಹದ್ದು. ತಾವು ಸಿಬ್ಬಂದಿಗಳ ವಿಚಾರದಲ್ಲಿ ಏನು ಅನುಕಂಪ ವ್ಯಕ್ತ ಪಡಿಸಿದ್ದೀರಿ ಇವರು ಸರ್ಕಾರದಿಂದ ನೇರ ಹೊಣೆಗಾರಿಕೆಯಲ್ಲಿ ಇಲ್ಲದೇ ಇದ್ದರೂ ಸಹ,

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪ್ರತಿ ತಿಂಗಳು 4,500 ರೂಪಾಯಿಗಳನ್ನು ಪಗಾರವೆಂದು ಕೊಡುತ್ತಿದ್ದೇವೆ. ಅದನ್ನು ಎಲ್ಲೂ ನಿಲ್ಲಿಸಿರುವುದಿಲ್ಲ. ಈ ಕಾರ್ಯಕ್ರಮದಿಂದ ಅದು ಸ್ಥಗಿತಗೊಂಡಿದೆ. ಈಗ ನಮ್ಮ ಮತ್ತು ಅವರ ಸಂಬಂಧ ಕಡಿತಗೊಂಡಿದೆ. ಅದನ್ನು ನಮ್ಮ ಗುತ್ತಿಗೆದಾರರರ ಮೂಲಕ ತೆಗೆದುಕೊಂಡಿರುವಂತಹದ್ದು. ಅವರಿಗೆ ಯಾರು ಗುತ್ತಿಗೆಗೆ ಕೊಟ್ಟಿದ್ದರೂ ಅವರ ಮೂಲಕ ಬಂದು ಅವರು ಹೋದರು. ಈ ಐ.ಸಿ.ಟಿ ಕಾರ್ಯಕ್ರಮದಲ್ಲಿ ಎಲ್ಲಿಯೂ ಸಹ ಸರ್ಕಾರದ ವ್ಯವಸ್ಥೆ ಸರ್ಕಾರಿ ಶಿಕ್ಷಕರನ್ನು ಅಥವಾ ಇಲಾಖೆಯನ್ನು ಪರಿಗಣಿಸಿ ಮಾಡಿರುವಂತಹ ಕಾರ್ಯಕ್ರಮ ಅಲ್ಲ. Head Master ಗಳು ಆಗಿರಬಹುದು, ಬಿ.ಇ.ಓ.ಗಳು ಆಗಿರಬಹುದು ಅಥವಾ ಡಿ.ಡಿ.ಪಿ.ಐ.ಗಳು ಆಗಿರಬಹುದು ಯಾರೂ ಸಹ ಪ್ರಶ್ನೆ ಮಾಡುವಂತಿಲ್ಲ. ಅಂತಹ ಒಂದು ಕಾರ್ಯಕ್ರಮವನ್ನು ರೂಪಿಸಲಾಗಿತ್ತು. ಜೊತೆಗೆ 4,500 ರೂಪಾಯಿಗಳನ್ನು ಪಗಾರವೆಂದು ಕೊಡುತ್ತೇವೆಂದು ಹೇಳಿದಾಗ ನಮಗೆ ಉತ್ತಮವಾದಂತಹ ಗಣಕಯಂತ್ರ ತರಬೇತಿ ಕೊಡುವಂತಹವರು ಯಾರು ಸಿಗುವುದಿಲ್ಲ. ಇಲ್ಲಿ DSERT ಮತ್ತು DIET ಇವರುಗಳಿಗೂ ಮಧ್ಯ ಪ್ರವೇಶ ಇಲ್ಲ. ಎಲ್ಲಾ ಖರ್ಚು ವೆಚ್ಚಗಳು ಏನಿವೆ ನೇರವಾಗಿ ಕೇಂದ್ರಿಕೃತವಾಗಿ ನಮ್ಮ ಇಲಾಖೆ ಕೇಂದ್ರ ಸ್ಥಾನ ಬೆಂಗಳೂರಿನಿಂದಲೇ ಮಾಡುವಂತಹ ಪದ್ದತಿ ಇತ್ತು. ಈ ಕಾರಣದಿಂದ ನಮ್ಮಲ್ಲಿ ಸರಿಯಾದ ಲಾಭಾದಾಯಕವಾದಂತಹ ಫಲಿತಾಂಶ ಬರುವಂತಹದ್ದಕ್ಕೆ ನಮ್ಮ ನಿರೀಕ್ಷೆಗೆ ತಕ್ಕಂತೆ ನಡೆಯಲ್ಲಿಕ್ಕೆ ಅದು ಸಾಧ್ಯವಾಗಿಲ್ಲ. ಇವತ್ತು ICTs School in Karnatakaಎನ್ನುವ ಕಾರ್ಯಕ್ರಮವನ್ನು ಮಾಡಿಕೊಂಡಿದ್ದೇವೆ. ಇದರಲ್ಲಿ ಪ್ರಾರಂಭದಲ್ಲಿ ಶಾಲೆಗಳ ಶಿಕ್ಷಕರ ಮತ್ತು ಹೆಚ್.ಎಂ.ಗಳ ಹೊಣೆಗಾರಿಕೆಗಳನ್ನು ಹೆಚ್ಚಿಸುತ್ತಿದ್ದೇವೆ. ಜೊತೆಗೆ ಈ ವ್ಯವಸ್ಥೆಗೆ ಅವರಿಗೆ ತರಬೇತಿ ಕೊಡುವಂತಹ ವಿಧಾನವನ್ನು ಹಾಕಿಕೊಂಡಿದ್ದೇವೆ. ಮೂರನೆಯದು, ತಂತ್ರಜ್ಞಾನದ ಬಳಕೆ ಶಿಕ್ಷಣದ ಕಲಿಕೆಯಲ್ಲಿ ವ್ಯವಸ್ಥಿವಾಗಿ ಆಗುವಂತಹದ್ದಕ್ಕೆ ಶಿಕ್ಷಕರನ್ನು ಮತ್ತು ಮಕ್ಕಳನ್ನು ಅದನ್ನು ಪರಿಚಯಿಸುವಂತಹ ವಿಧಾನವನ್ನು ಇಟ್ಟುಕೊಂಡಿದ್ದೇವೆ. ನಾಲ್ಕನೆಯದು, ಇಷ್ಟು ಆದ ಮೇಲೆ ಗಣಕಯಂತ್ರಗಳನ್ನು ಆ ಶಾಲೆಗಳಿಗೆ ಕೊಡುವಂತದಹ ವ್ಯವಸ್ಥೆಯನ್ನು ಮಾಡಿಕೊಂಡಿದ್ದೇವೆ. ಐದನೆಯದು, ಅದಕ್ಕೆ ತಕ್ಕಂತೆ ಬೇಕಾಗಿರುವಂತಹ ಸ್ಟಾಟ್‌ವೇರ್‌ಗಳನ್ನು ಕೊಡುವುದಕ್ಕೆ ಈ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಎಲ್ಲೆಲ್ಲಿ ನ್ಯೂನತೈಗಳು ಆಗಿತ್ತು ಅದನ್ನು ಸರಿಪಡಿಸುವಂತಹ ವಿಧಾನಕ್ಕೆ ಈಗಾಗಲೇ ಒಂದು enquiry ಯನ್ನು ಹಾಕಿರುವುದರಿಂದ ಮತ್ತು ವಿನಾಕಾರಣ ಸರ್ಕಾರಿ ಹಣವನ್ನು ವ್ಯಯ ಮಾಡುವಂತಹ ವ್ಯವಸ್ಥೆಯನ್ನು ತಡೆಗಟ್ಟಲು ಒಂದು ಬಿಗಿಯಾದಂತಹ ಕ್ರಮವನ್ನು ತೆಗೆದುಕೊಂಡು enquiry ಯನ್ನು ಈಗಾಗಲೇ ಮಾಡಿದ್ದೇವೆ. ಕೇರಳ ರಾಜ್ಯದಲ್ಲಿ ಏಕೆ? ನಮ್ಮ ರಾಜ್ಯ ಮಾದರಿಯಾಗಬೇಕು ಅವರು ಇಲ್ಲಿಗೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಒಂದು ಕಲಿಯಬೇಕು. ನಾವು ಅಲ್ಲಿಗೆ ಹೋಗಿ ಕಲಿಯುವಂತಹದ್ದು ಏನಿದೆ? ನಮ್ಮಲ್ಲಿ ನಾವು ಏನು ನ್ಯೂನ್ಯತೆಗಳನ್ನು ಮಾಡಿದ್ದೇವೆ ಅದನ್ನು ಸರಿ ಮಾಡಿಲಿಕ್ಕೆ NCERT ಯವರು ಒಂದು ಮಾನದಂಡವನ್ನು ಮತ್ತು ಕೆಲವೊಂದು guidelines ಗಳನ್ನು ಕೊಟ್ಟರು. ಆ guidelines ಆಧಾರದ ಮೇಲೆ ನಮ್ಮ ಒಂದು ತಂಡ ಕೇರಳ ರಾಜ್ಯಕ್ಕೆ ಹೋದಂತಹ ಸಂದರ್ಭದಲ್ಲಿ ಇಡೀ ರಾಷ್ಟ್ರ ವ್ಯಾಪ್ತಿಯಲ್ಲಿ ICTs School in Kerala ಎನ್ನುವುದನ್ನು ಅವರು ವ್ಯವಸ್ಥಿತವಾಗಿ ಮಾಡಿದ್ದರು ಅದೇ ಮಾದರಿಯನ್ನು ನಾವು ಇಲ್ಲಿ ತೆಗೆದುಕೊಳ್ಳುವುದಿಲ್ಲ. ಏಕೆಂದರೆ, ಗಣಕಯಂತ್ರಗಳನ್ನು ಕೂಡುವುದಕ್ಕಿಂತ ಅವರು ಈಗ ಲ್ಯಾಪ್‌ಟ್ಯಾಪ್‌ಗಳನ್ನು ತೆಗೆದುಕೊಂಡಿದ್ದಾರೆ. ಶಾಲೆಯ ಒಂದು ಕೊಠಡಿಯಲ್ಲಿ ಮಕ್ಕಳಿಗೆ ಭೋದನೆ ಮಾಡುವುದಕ್ಕೆ we can shift the hardware. ಜೊತೆಗೆ ಅದರ ಹೊಣೆಗಾರಿಕೆಯನ್ನು ಮುಖ್ಯ ಶಿಕ್ಷಕರಿಗೆ ಕೊಟ್ಟಾಗ ಅದನ್ನು ಜೊತೆಗೆ ತೆಗೆದುಕೊಂಡು ಹೋಗಬಹುದು. ಇದನ್ನು ಒಂದು ಸುರಕ್ಷತೆಯ ದೃಷ್ಟಿಯಿಂದಲೂ ಮಾಡಿದ್ದೇವೆ. ಇದರ ಪೂರ್ಣ ಮಾಹಿತಿ ಕ್ಯಾಬಿನೆಟ್ ಮುಂದೆ ಚರ್ಚೆ ಆಗಿ ಕ್ಯಾಬಿನೆಟ್‌ನಲ್ಲಿ ತೀರ್ಮಾನ ತೆಗೆದುಕೊಂಡು, ಅದನ್ನು ದಿನಾಂಕ 04-05-2016 ರಂದು ಆದೇಶ ಹೊರಡಿಸಿ ರದ್ದು ಮಾಡಿದ್ದೇವೆ. ನಮಗೂ ಈ ವ್ಯವಸ್ಥೆಗೆ ಇರುವ ಸಂಬಂಧ ಕಿಯೋನಿಕ್ಸ್ ಜೊತೆಗೆ. ಕಿಯೋನಿಕ್ಸ್ ಯಾರಿಗೆ ಟೆಂಡರ್ ಕರೆದಿದ್ದರು ಅಥವಾ ಆ ವ್ಯಕ್ತಿ ION International ಎಂದು ಏನಿತ್ತು ಅವರು ಉಪ ಗುತ್ತಿಗೆಯನ್ನು ಯಾರಿಗೆ ಮಾಡಿದ್ದರೂ ಅವರು ರಾಜ್ಯ ಸರ್ಕಾರದ ವಿರುದ್ದ ಒಂದು ವ್ಯಾಜ್ಯ ಹಾಕಿದ್ದರು ಸಹ ನಾವು ಅದನ್ನು ಪರಿಗಣಿಸುವುದಕ್ಕೆ ಆಗುವುದಿಲ್ಲ. ಅದು ನ್ಯಾಯಾಲಯದಲ್ಲಿ ತೀರ್ಪು ಆಗುತ್ತದೆ. ನಮಗೂ ಮತ್ತು ಅವರಿಗೂ ಸಂಪರ್ಕವೆ ಇರುವುದಿಲ್ಲ. ಆ ಕಾರಣದಿಂದ ಮಾನ್ಯ ಬಸವರಾಜ ಹೊರಟ್ಟಿರವರು ಏನು ಪ್ರಶ್ನೆ ಎತ್ತಿದ್ದಾರೆ ಇದನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕು. ಬಂದಂತಹ ಹಣ ಬಳಕೆ ಆಗಬೇಕು ನಮ್ಮ ಮಕ್ಕಳ ಕಲಿಕಾ ಸಾಮರ್ಥ್ಯ ಹೆಚ್ಚಾಗಬೇಕು ಎನ್ನುವುದಕ್ಕೆ ಕೆಲವು ಬಿಗಿಯಾದಂತಹ ಕ್ರಮಗಳನ್ನು ತೆಗೆದುಕೊಳ್ಳುವಂತಹ ಕಾರಣದಿಂದ ಈ ಕ್ರಮಗಳನ್ನು ತೆಗೆಗುಕೊಂಡಿದ್ದೇವೆ. ICTs ಫೇಸ್-3 ನ್ಯೂನ್ಯತೆಗಳೂ ಇದ್ದಂತಹ ಕಾರಣಗಳಿಂದ ನಾವು ಈಗಾಗಲೇ enquiry ಹಾಕಿರುವುದರಿಂದ ಇದನ್ನು ರದ್ದು ಮಾಡಿದ್ದೇವೆ. ಇದಕ್ಕೆ ಪರ್ಯಾಯವಾಗಿ ನಾವು ನಮ್ಮದೆ ಆದ ವ್ಯವಸ್ಥೆಯಲ್ಲಿ ಇದನ್ನು ಜಾರಿಗೊಳಿಸಿದೆ. ಶೈಕ್ಷಣಿಕ ವರ್ಷ ಮುಗಿಯುವುದಕ್ಕಿಂತ ಮುಂಚೆಯೇ ಇದನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನುಷ್ಠಾನಗೊಳಿಸುವಂತಹ ಕಾರ್ಯವನ್ನು ಮಾಡುತ್ತೇವೆ. ಮುಂದಿನ ವರ್ಷದಿಂದ ತರಬೇತಿ ಕೊಟ್ಟು ಇದನ್ನು ಪ್ರಾರಂಭ ಮಾಡುತ್ತೇವೆ.

**(ಗೊಂದಲ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ನಾನು ಕೇಳಿರುವ ಪ್ರಶ್ನೆ ಏನೆಂದರೆ, ದಿನಾಂಕ 16-03-2016 ರಂದು ಯಾವ ಕಾರಣಕ್ಕಾಗಿ terminate ಮಾಡಿದ್ದೀರಿ ಎಂದು ಕೇಳಿದ್ದೇನೆ. ಸರ್ಕಾರ ಅಸ್ಲೆಂಬಿಯಲ್ಲಿ ಕೊಟ್ಟಿರುವ ಉತ್ತರ ಈ ರೀತಿ ಇದೆ. ICTs ಫೇಸ್-3 ಪ್ರಾರಂಭವಾಗಿದ್ದು 2008-2009 ರಲ್ಲಿ. ಆ ಯೋಜನೆಗೆ 75% ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ 25% ಇದೆ. ಈಗ ಅದು 60% ಮತ್ತು 40% ಇದೆ. ಅದರಲ್ಲಿ 1,763 ಸರ್ಕಾರಿ ಶಾಲೆಗಳು ಮತ್ತು 2,633 ಅನುದಾನಿತ ಶಾಲೆಗಳು ಒಟ್ಟು 4,396 ಶಾಲೆಗಳಿಗೆ ಕೊಡುತ್ತೀರೆಂದು ನಾನು ಮತ್ತು ಮಾನ್ಯ ಸದಸ್ಯರಾದ ಅರುಣ ಶಹಾಪುರ ರವರು ತಿಳಿದುಕೊಂಡಿದ್ದೇವು. ಇಲ್ಲಿ ಒಂದು ಮುಖ್ಯ ಪ್ರಶ್ನೆ ಕಿಯೋನಿಕ್ಸ್‌ಗೆ ಟೆಂಡರ್ ಕೊಟ್ಟಿದ್ದೀರಿ. ಅದು ಮೆ॥ಕಿಯೋನಿಕ್ಸ್‌ನವರಿಗೆ 2012 ರಲ್ಲಿ ಇತ್ಯರ್ಥ ಆಗಿತ್ತು. ನಾನು ಮಂತ್ರಿಯಾಗಿದ್ದ ಸಂದರ್ಭದಲ್ಲಿ ಕಿಯೋನಿಕ್ಸ್‌ದವರಿಗೆ ಕೂಡುವುದು ಸತ್ಯ ಎಂದು ಹೇಳಿದ್ದೆ. ಕಿಯೋನಿಕ್ಸ್‌ದವರು ಏನು ಮಾಡುತ್ತಾರೆ ಎಂದರೆ, ಪೇಪರ್‌ನಲ್ಲಿ ಕರೆದು ಉಪ ಗುತ್ತಿಗೆಗೆ ಕೊಡುತ್ತಾರೆ. ಅದು ಕಾನೂನು ಪ್ರಕಾರ ಕ್ರಿಮಿನಲ್ ಕೇಸ್ ಆಗುತ್ತದೆ. ಮಾನ್ಯ ಸಭಾಪತಿಯವರೆ, ಕಿಯೋನಿಕ್ಸ್‌ದವರು ಟೆಂಡರ್ ತೆಗೆದುಕೊಳ್ಳುತ್ತಾರೆ. ಆದರೆ, ಅವರ ಕಡೆ ಏನು ಇರುವುದಿಲ್ಲ. ನಮ್ಮಲ್ಲಿ ಲ್ಯಾಂಡ್ ಆರ್ಮಿ ಇದೆಯಲ್ಲ ಅದೇ ತರಹ. ಅವರು ತೆಗೆದುಕೊಂಡು ಪೇಪರ್‌ನಲ್ಲಿ ಓಪನ್ ಟೆಂಡರ್ ಕರೆಯುತ್ತಾರೆ. ಅದನ್ನು ಆ ರೀತಿ ಕರೆಯಬಾರದು. ಆ ರೀತಿ ಮಾಡುವುದು ಕ್ರಿಮಿನಲ್ ಪ್ರಕರಣವಾಗುತ್ತದೆ. ಆ ರೀತಿ ಕರೆದು ಅವರಿಗೆ ಕೊಡುತ್ತಾರೆ. ಅದನ್ನು ಅವರು ಸಹ ಮಾಡುವುದಿಲ್ಲ. ಮಾನ್ಯ ಕಾಗೇರಿಯವರು ಅಸ್ಲೆಂಬಿಯಲ್ಲಿ ದಿನಾಂಕ 30-3-2016ರ ಈ ಯೋಜನೆ ಯಾವ ಕಾರಣದಿಂದ ವಿಳಂಬವಾಗಿದೆ? ಯಾವ ಕಾರಣದಿಂದ ಯೋಜನೆಯನ್ನು ಅನುಷ್ಠಾನಗೊಳಿಸಿಲ್ಲ? ಇದಕ್ಕೆ ಸರ್ಕಾರ ತಗೆದುಕೊಂಡಿರುವ ಕ್ರಮಗಳೇನು? ಎನ್ನುವ ಬಗ್ಗೆ ಪ್ರಶ್ನೆ ಕೇಳಿದ್ದಾರೆ. ಅದಕ್ಕೆ ತಾವು ICTs phase-3 ಯೋಜನೆಯ ಅನುಷ್ಠಾನವನ್ನು ಮೆ॥ಕಿಯೋನಿಕ್ಸ್ ಸಂಸ್ಥೆಗೆ ವಹಿಸಲಾಗಿತ್ತು. ಸದರಿ ಸಂಸ್ಥೆಯ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿದ್ದರಿಂದ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ವಿಳಂಬವಾಗಿರುತ್ತದೆ ಮತ್ತು ಈ ಕೆಳಗಿನ ಕಾರಣಗಳಿಂದ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ವಿಳಂಬವಾಯಿತು ಎಂದು ಉತ್ತರ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಟ್ಟಿರುತ್ತೀರಿ. ಮೆ॥ಕಿಯೋನಿಕ್ಸ್ ವಿರುದ್ಧ ರಿಟ್ ಅರ್ಜಿಯನ್ನು ಹೂಡಿದ್ದು ಅದು 2012 ರಲ್ಲಿ ಇತ್ಯರ್ಥ್ಯವಾಗಿರುತ್ತದೆ. ಅಲ್ಲಿಗೆ ಆ ಪ್ರಕರಣ ಮುಕ್ತಾಯವಾಗಿರುತ್ತದೆ. ಕಿಯೋನಿಕ್ಸ್ ಸಂಸ್ಥೆಯವರು ಆಹ್ವಾನಿಸಿದ ಟೆಂಡರ್‌ನಲ್ಲಿ ಷರತ್ತುಗಳಿಗಿಂತಲೂ ಮುಂಗಡ ಪಾವತಿ, ವೇಳಾಪಟ್ಟಿ, ಬ್ಯಾಂಕ್ ಗ್ಯಾರಂಟಿ ಮುಂತಾದವುಗಳನ್ನು ಸರ್ಕಾರದಿಂದ ಹೆಚ್ಚು ಅನುಕೂಲಕರವಾದ ಷರತ್ತುಗಳನ್ನು ಬಯಸಿದ್ದು ಕಿಯೋನಿಕ್ಸ್ ಸಂಸ್ಥೆಗಳಿಂದ ಮಾಡಿಕೊಂಡ ಮೂಲ ಒಪ್ಪದಂತೆ ಗಣಕಯಂತ್ರ, hardware and software ಗಳೂ ಹಳೆಯದಾಗಿದ್ದವು. ಮಾನ್ಯ ಸಭಾಪತಿಯವರೆ, ಎಲ್ಲವು ಕಾನೂನು ಬಾಹಿರವೆ.

**ಶ್ರೀ ತನ್ವೀರ್ ಸೇಠ್:–** ಮಾನ್ಯ ಸಭಾಪತಿಯವರೆ, ಹೌದು..

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಹೌದು ಎಂದು ಒಪ್ಪಿಕೊಂಡಿದ್ದಾರೆ. ಮಾನ್ಯ ಸಚಿವರೆ, ಮುಂದೆ ಏನು ಗತಿ?ನಾನುಇದನ್ನುಒಪ್ಪುತ್ತೇನೆ. ಇದನ್ನು ತಾವು ಒಪ್ಪಿಕೊಂಡಿದ್ದೀರಿ. ನಾನು ಒಬ್ಬ ಮಂತ್ರಿಯಾಗಿದ್ದವನು. ತಾವು ತಪ್ಪಾಗಿದ್ದರೆ ಅದನ್ನು ಒಪ್ಪಿಕೊಳ್ಳುವಂತಹ ದೊಡ್ಡ ಗುಣವನ್ನು ತೋರಿಸಿದ್ದೀರಿ. ನಾನು ತಮ್ಮ ದೊಡ್ಡ ಗುಣವನ್ನು ಅಭಿನಂದಿಸುತ್ತೇನೆ. ತಾವು ಮುಂದೆ ಇದನ್ನು ಬಿಟ್ಟು ನಮ್ಮಲ್ಲಿ DSERT ಇದೆ. DSERT ಕಡೆಯಿಂದ ಇದನ್ನು ಏಕೆ ಮಾಡಿಸಬಾರದಾಗಿತ್ತು? ಡಿ.ಸಿ.ಎಸ್.ಆರ್.ಟಿ ರವರ ಮೂಲಕ ಈ ಯೋಜನೆಯನ್ನು ಮಾಡಿ. ನಮ್ಮಲ್ಲಿ ಬೇಕಾದಷ್ಟು ತರಬೇತಿ ಪಡೆದ ಶಿಕ್ಷಕರಿದ್ದಾರೆ. ಆ ಮೇಲೆ ತಮಗೆ ದಿನಾಂಕ 16–01–2016ಕ್ಕೆ ಕೇರಳ ರಾಜ್ಯದವರು ಒಂದು ವರದಿಯನ್ನು ಕೊಟ್ಟಿದ್ದಾರೆ.

***(95) 4.40 09-02-2017 ಸಿವಿಕ್:ಆರ್‌ಎನ್***

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಮುಂದು):–**

ಅಲ್ಲಿಂದ ಇಲ್ಲಿಯವರೆಗೆ ಇದರಲ್ಲಿ ಏನಾದರೂ ಪ್ರೊಗ್ರೆಸ್ ಆಗಬೇಕಲ್ಲವೇ? ಇದರಲ್ಲಿ ಅನೇಕ ಡಿಫೆಕ್ಟ್‌ಗಳಿವೆ. ಸರ್ಕಾರ ಮಾಡುವ ಈ ಡಿಫೆಕ್ಟ್‌ಗಳಿಂದ ಮಕ್ಕಳ ಭವಿಷ್ಯದ ಮೇಲೆ ಸಂಪೂರ್ಣವಾಗಿ ಕರಿನೆರಳನ್ನು ಚೆಲ್ಲಲಾಗಿದೆ. 2012ರ ವಿಚಾರ ಮುಗಿದಿದೆ. ಆದ್ದರಿಂದ ಇದನ್ನು ಯಾವಾಗ ಪ್ರಾರಂಭಿಸಲಾಗುವುದು ಎನ್ನುವುದನ್ನು ಬಹಳ ಸ್ಪಷ್ಟವಾಗಿ ಹೇಳಿಬಿಡಿ. ಈಗಾಗಲೇ ಇಷ್ಟು ಕೋಟಿ ಹಣವನ್ನು ಖರ್ಚು ಮಾಡಲಾಗಿದೆ ಎನ್ನುವುದನ್ನು ಹೇಳಿದ್ದಾರೆ. 4 ರಿಂದ 5 ಲಕ್ಷ ವಿದ್ಯಾರ್ಥಿಗಳ ಕಂಪ್ಯೂಟರ್ ಶಿಕ್ಷಣಕ್ಕಾಗಿ 104.86 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿರುವುದಾಗಿ ಸರ್ಕಾರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಂದು ಕಡೆಯಲ್ಲಿ ಹೇಳಿದೆ. ಇದು ಹೋಗಲಿ ಇನ್ನು ಮುಂದೆ ITC Phase-III ಯನ್ನು ಯಾವಾಗ ಪ್ರಾರಂಭಿಸಲಾಗುವುದು *DSERT (Department of State Educational Research and Training*) ಯಿಂದ ಮಾಡುತ್ತೀರೋ ಇಲ್ಲವೋ ಎನ್ನುವುದನ್ನು ಹೇಳಬೇಕು. ತಕ್ಷಣ ಮಕ್ಕಳಿಗೆ ಕಂಪ್ಯೂಟರ್ ಶಿಕ್ಷಣ ಕೊಡುವ ವ್ಯವಸ್ಥೆ ಮಾಡಬೇಕು. ಈಗಾಗಲೇ ಮಕ್ಕಳಿಗೆ ಪರೀಕ್ಷೆಗಳು ಬಂದಿವೆ. ಇನ್ನು ಮುಂದಿನ ಜೂನ್‌ಗಾದರೂ ಇದನ್ನು ತರಲಾಗುವುದೇ ಮತ್ತು ಮೊದಲೇ ಒಪ್ಪಿಕೊಂಡಿದ್ದನ್ನು ಏಕೆ ರದ್ದು ಮಾಡಿದರು ಎನ್ನುವುದನ್ನು ಹೇಳಬೇಕು. ಫೆಬ್ರವರಿ 15, 2016 ರಲ್ಲಿ ಎಸಿಎಸ್‌ರವರು ಒಂದು ಸಭೆಯನ್ನು ಮಾಡಿದರು. ಆಗ second agreement was not agreed. ದಿನಾಂಕ 16-03-2016ರಲ್ಲಿ ಯಾವ ಕಾರಣಕ್ಕಾಗಿ ಪ್ರಾಜೆಕ್ಟ್ terminate ಮಾಡಿದರು ಎನ್ನುವುದನ್ನು ಹೇಳಲಿಲ್ಲ. ಕಿಯೋನಿಕ್ಸ್ ಬಗ್ಗೆ ಹೇಳಿದರು. ಹೀಗೆಲ್ಲಾ ಮಾಡುವಾಗ ಮಕ್ಕಳ ಗತಿ ಏನು ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕಲ್ಲವೇ? ಈ ಬಗ್ಗೆ ಅಧಿಕಾರಿಗಳಾಗಲಿ, ಸರ್ಕಾರಕ್ಕಾಗಲಿ ಇದರ ಬಗ್ಗೆ ಕನಿಷ್ಠ ಅರಿವು ಬೇಡವೇ? ಇದರ ಬಗ್ಗೆ ಕನಿಷ್ಠ ಜ್ಞಾನ ಆದರೂ ಬೇಡವೇ? ಮಕ್ಕಳ ಶಿಕ್ಷಣದ ವ್ಯವಸ್ಥೆಯಲ್ಲಿ ಈ ರೀತಿಯಲ್ಲಿ ಭ್ರಷ್ಟಾಚಾರವನ್ನು ಮಾಡಿದರೆ ಹೇಗೆ? ಈಗ ಸರ್ಕಾರ ಏನು ಮಾಡಬೇಕೋ ಅದನ್ನೆಲ್ಲ ಮಾಡಿದೆ. ಈಗ ಬರುವ ಜೂನ್ *DSERT* ಮುಖಾಂತರ ಮಾಡುವಿರೋ ಇಲ್ಲವೋ 104 ಕೋಟಿ ರೂಪಾಯಿಗಳ ಟೆಂಡರ್ ಆಗಿರುವುದನ್ನು ಏನು ಮಾಡಬೇಕೆನ್ನುವುದರ ಬಗ್ಗೆ ಸಚಿವರು ವಿಚಾರ ಮಾಡಬೇಕು. ಅವರನ್ನು ಕರೆದು ಕುಳಿತು ಸಮಾಲೋಚಿಸಿ ಜೂನ್ ತಿಂಗಳಿನಿಂದಲಾದರೂ ಮಕ್ಕಳಿಗೆ ಶಿಕ್ಷಣ ಕೊಡಿಸುವ ಬದ್ಧತೆಯನ್ನು ಸರ್ಕಾರ ತೋರಿಸಬೇಕೆಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

**ಶ್ರೀ ಆರ್ .ಚೌಡರೆಡ್ಡಿ ತೂಪಲ್ಲಿ:-** ಮಾನ್ಯ ಸಭಾಪತಿಗಳೇ, ಮೊದಲಿಗೆ outsource ನಿಂದ ಶಿಕ್ಷಕರನ್ನು ನೇಮಿಸಿಕೊಂಡಿರುವ ಬಗ್ಗೆ ನಮಗೆ ಸಂಬಂಧ ಇಲ್ಲವೆಂದು ಸರ್ಕಾರದವರು ಹೇಳುತ್ತಾರೆ. ಆದರೆ ಅಲ್ಲಿ ಶಿಕ್ಷಣ ನೀಡುವ ಶಿಕ್ಷಕರಿಗೆ ವಯಸ್ಸಾಗಿದ್ದು ಅವರಿಗೆ ಬೇರೆ ಕಡೆಗೆ ಹೋಗುವುದಕ್ಕೆ ಆಗುವುದಿಲ್ಲ.

**ಶ್ರೀ ತನ್ವೀರ್ ಸೇಠ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಗಳೇ, ಒಂದು ತಪ್ಪನ್ನು ಮುಚ್ಚಿಡಲು ಮತ್ತೊಂದು ತಪ್ಪನ್ನು ಮಾಡುವುದು ಬೇಡ. ಇಲ್ಲಿ ಈ ಕಾರ್ಯಕ್ರಮವನ್ನು

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನುಷ್ಠಾನಗೊಳ್ಳುವ ಸಂದರ್ಭದಲ್ಲಿ ನಾವು ಏನು ನಿಯಮಗಳನ್ನು ಹಾಕಿಕೊಂಡಿದ್ದೆವು ಅದರಂತೆ ಇದನ್ನು ಕಿಯೋನಿಕ್ಸ್ ಕಂಪನಿಗೆ ಕೊಟ್ಟು, ಅವರು ಯಾರಿಗೆ ಗುತ್ತಿಗೆ ನೀಡಿದ್ದರು ಅವರ ಮೂಲಕ ಮಾಡಿಕೊಂಡದ್ದು. ಈಗ ಅದನ್ನು ನಾವು ರದ್ದು ಮಾಡಿದ್ದೇವೆ. ಈಗಾಗಲೇ 750 ಮುಖ್ಯ ಶಿಕ್ಷಕರುಗಳಿಗೆ ಮತ್ತು 1600 ಶಿಕ್ಷಕರುಗಳಿಗೆ ತರಬೇತಿಯನ್ನು ನೀಡಲಾಗಿದೆ. ಇದನ್ನು ನಾವು ಕೊಟ್ಟಿರುವ 4338 ಶಾಲೆಗಳಲ್ಲಿ ಬಹುತೇಕ ಅನುದಾನಿತ ಶಾಲೆಗಳಿವೆ. ಇದರಲ್ಲಿ ನಾವು ಹೇಳುವುದೇನೆಂದರೆ due procedures have been followed. ನಮ್ಮ ಎಸಿಎಸ್ ಅವರ ನೇತೃತ್ವದಲ್ಲಿ 2-3 ಸಭೆಗಳನ್ನು ನಡೆಸಲಾಗಿದೆ. 3 ನೋಟಿಸ್‌ಗಳನ್ನು ನೀಡಲಾಗಿದೆ. ಈ 3 ನೋಟಿಸ್‌ಗಳಿಗೂ ಸಹ ನಮಗೆ ಯಾವುದೇ ಸರಿಯಾದ ಪ್ರತಿಕ್ರಿಯೆ ಬರದೇ ಇರುವುದರಿಂದ ನಾವು ಈಗಾಗಲೇ enquiry ಯನ್ನು ಹಾಕಿದ್ದೇವೆ. ಸರ್ಕಾರಿ ಹಣವನ್ನು ಪೋಲು ಮಾಡುವುದಕ್ಕೆ ನಾವು ಬಿಡುವುದಿಲ್ಲ. ಇದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಹಯೋಗದ ಯೋಜನೆಯಾಗಿರುವ ಹಿನ್ನಲೆಯಲ್ಲಿ ಕೇಂದ್ರ ಸರ್ಕಾರದ ಆಶಯದಂತೆ ನಮ್ಮ ಉದ್ದೇಶ ಏನಿದೆ, ಅದನ್ನು ಜಾರಿಗೊಳಿಸುವುದಕ್ಕೆ ಈಗಾಗಲೇ projectors ಮತ್ತು ಲ್ಯಾಪ್‌ಟಾಪ್‌ಗಳನ್ನು ಖರೀದಿ ಮಾಡಿದ್ದೇವೆ. ಜೊತೆಗೆ ICTs Phase-I, II & III ನಲ್ಲಿ ಅಲ್ಪಸ್ವಲ್ಪ ಏನು ಶಾಲೆಗಳಿಗೆ ಹಂಚಿಕೆಯನ್ನು ಮಾಡಲಾಗಿದೆ ಅದನ್ನು inventory ಮಾಡುವ ಕೆಲಸವನ್ನು ಕೂಡ ಮಾಡುತ್ತಿದ್ದೇವೆ. ಅದನ್ನು ಮತ್ತೆ ಬಳಕೆ ಮಾಡಿಕೊಳ್ಳುವ ವ್ಯವಸ್ಥೆಯನ್ನು ಮಾಡಿಕೊಂಡು ಆ ನ್ಯೂನ್ಯತೆಗಳನ್ನು ಸರಿಪಡಿಸಿ ಮುಂದಿನ 2-3 ವರ್ಷಗಳಲ್ಲಿ ಎಲ್ಲಾ ಶಾಲೆಗಳನ್ನು ಕವರ್ ಮಾಡುವಂತಹ ಕೆಲಸವನ್ನು ಮಾಡಲಾಗುವುದು. ಪದವಿಪೂರ್ವ ಕಾಲೇಜುಗಳನ್ನು ಕೂಡ ಕವರ್ ಮಾಡಲಾಗುವುದು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ) :-** ಮಾನ್ಯ ಸಭಾಪತಿಗಳೇ, ಈಗ ಪ್ರತಿ ಜಿಲ್ಲಾ ಕೇಂದ್ರಗಳಲ್ಲಿ ಡಯಟ್ ಇದೆ. ಈಗ ಟಿಸಿಹೆಚ್ ನಡೆಯುತ್ತಾ ಇಲ್ಲ, ಅದಕ್ಕೆ ಮಕ್ಕಳು ಬರುತ್ತಿಲ್ಲ. ಪಾಠ ಹೇಳಿಕೊಡುವುದಕ್ಕೆ ಅವರಿಗೆ ಕೆಲಸ ಇಲ್ಲ. 10-15 ಜನ ಉಪನ್ಯಾಸಕರು ಮತ್ತು ಸಂಬಂಧಪಟ್ಟವರು ಪ್ರತಿ ಜಿಲ್ಲಾ ಕೇಂದ್ರಗಳಲ್ಲಿ ಇದ್ದಾರೆ. ಅಲ್ಲಿಯೇ ಅವರಿಗೆ ಕಂಪ್ಯೂಟರ್ ಟ್ರೈನಿಂಗ್ ನೀಡಲಾಗುತ್ತಿದೆ. ಅವರಿಗೆ *DSERT* ಯ ನೇರ ಜವಾಬ್ದಾರಿಯನ್ನು ಕೊಟ್ಟು ಹೊರಟ್ಟಿಯವರು ಹೇಳಿದ ಹಾಗೆ ವ್ಯವಸ್ಥಿತವಾಗಿ ನಿಮ್ಮ ನೇರವಾದ ಕಂಟ್ರೋಲ್‌ನಲ್ಲಿ ಈ ಯೋಜನೆಯನ್ನು ವ್ಯವಸ್ಥಿತವಾಗಿ ಮುಂದುವರೆಸಿ,

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಆ ಬಗ್ಗೆ ಸಚಿವರಿಂದ ನಮಗೆ ಖಚಿತವಾದ ಮಾತು ಬೇಕು. DSERT ಮತ್ತು DIET ಮೂಲಕ ಮುಂದುವರೆಸುವುದಕ್ಕೆ ಏನು ಕ್ರಮ ಎನ್ನುವುದನ್ನು ಹೇಳಬೇಕು.

**ಶ್ರೀ ತನ್ವೀರ್ ಸೇಠ್:–** ಮಾನ್ಯ ಸಭಾಪತಿಯವರೆ, ಇದನ್ನು ಸಂಪೂರ್ಣವಾಗಿ ಇಲಾಖೆಯ ಜವಾಬ್ದಾರಿಯಿಂದಲೇ ನಡೆಸಲಾಗುವುದು. DSERT,DIETಮತ್ತು ನಮ್ಮ ವ್ಯವಸ್ಥೆ ಏನಿದೆ ಅದನ್ನು ಬಲಪಡಿಸುವ ವ್ಯವಸ್ಥೆಯನ್ನು ಮಾಡಲಾಗುವುದು. ಇದನ್ನು ಮತ್ತೊಬ್ಬರಿಗೆ ಗುತ್ತಿಗೆಗೆ ಕೊಡುವ ಕೆಲಸ ಮಾಡುವುದಿಲ್ಲ. ನಮ್ಮ ಇಲಾಖೆಯನ್ನೇ ಬಲಪಡಿಸಿ, ಈ ಕೆಲಸಗಳನ್ನು ಮಾಡಿಸಲಾಗುವುದು.

**ಉಪ ಸಭಾಪತಿಯವರು:–** ರಾಮಚಂದ್ರಗೌಡರ ನಿಯಮ 330ರ ವಿಚಾರಕ್ಕೆ ಸರ್ಕಾರ ಸಮಯ ಕೇಳಿದೆ.

**6. ನಿಯಮ 330 ಮೇರೆಗೆ ಸಾರ್ವಜನಿಕ ಮಹತ್ವವುಳ್ಳ ವಿಷಯದ ಮೇಲೆ ಚರ್ಚೆ**

ವಿಷಯ: ರಾಜ್ಯದ ಸಮಾಜ ಕಲ್ಯಾಣ ಇಲಾಖೆಯ ಅಧೀನದಲ್ಲಿ ನಡೆಯುತ್ತಿರುವ ಬಹುತೇಕ ಬಾಲಕ–ಬಾಲಕಿಯರ ವಸತಿ ನಿಲಯಗಳಲ್ಲಿರುವ ಸಮಸ್ಯೆಗಳ ಬಗ್ಗೆ.

~~~~~

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಗಳೇ, ರಾಜ್ಯದ ಸಮಾಜಕಲ್ಯಾಣ ಇಲಾಖೆಯ ಅಧೀನದಲ್ಲಿ ನಡೆಯುತ್ತಿರುವ ಬಹುತೇಕ ಬಾಲಕ–ಬಾಲಕಿಯರ ವಸತಿ ನಿಲಯಗಳಲ್ಲಿರುವ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಲು ನಿಯಮ 330 ಅಡಿಯಲ್ಲಿ ತಾವು ಅವಕಾಶವನ್ನು ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ತಿಳಿಸುತ್ತಾ, ನಾವು ಸಾಮಾಜಿಕ ನ್ಯಾಯ ಹಿಂದುಳಿದವರು, ಗುಡ್ಡಗಾಡಿನ ಜನಾಂಗ ಅವರಿಗೆಲ್ಲ ಒಳ್ಳೆಯ ಶಿಕ್ಷಣವನ್ನು ನೀಡಬೇಕೆನ್ನುವ ಕಾರಣಕ್ಕಾಗಿ ಮತ್ತು ಅವರು ಇರುವಂತಹ ಪ್ರದೇಶಗಳಲ್ಲಿ ಒಳ್ಳೆಯ ಶಿಕ್ಷಣವನ್ನು ನೀಡಲು ಸಾಧ್ಯವಾಗುವುದಿಲ್ಲ ಎನ್ನುವ ಕಾರಣಕ್ಕಾಗಿ ರಾಜ್ಯದಲ್ಲಿ ಅಲ್ಲಲ್ಲಿ ಬೇರೆ ಬೇರೆ ಹೆಸರಿನಲ್ಲಿ ವಿದ್ಯಾರ್ಥಿ ನಿಲಯಗಳನ್ನು ತೆರೆದಿದ್ದೇವೆ. ಹೆಣ್ಣುಮಕ್ಕಳಿಗಾಗಿ ವಿದ್ಯಾರ್ಥಿ ನಿಲಯ ಇದೆ. ನನಗೆ ತಿಳಿದಿರುವ ಪ್ರಕಾರ ರಾಜ್ಯದಲ್ಲಿ 1342 ಈ ರೀತಿಯ ವಸತಿ ನಿಲಯಗಳಿವೆ. ಈ ವಿಚಾರ ಪತ್ರಿಕೆ ಮತ್ತು ಮಾಧ್ಯಮಗಳಲ್ಲಿ ವರದಿ ಆಗುತ್ತಿದೆ ಎನ್ನುವ ಕಾರಣಕ್ಕಾಗಿ ಸುಮಾರು 35 ದಿವಸಗಳ ಅವಧಿಯಲ್ಲಿ 1632 ಜನ ಮಹಿಳಾ ಸ್ವಯಂ ಸೇವಾ ಕಾರ್ಯಕರ್ತರು ಸುಮಾರು 740 ವಸತಿನಿಲಯಗಳನ್ನು ವಿಸಿಟ್ ಮಾಡಿ 63,500 ವಿದ್ಯಾರ್ಥಿಗಳನ್ನು ಸಂಪರ್ಕಿಸಿ ಒಂದು ವರದಿಯನ್ನು ತಯಾರು ಮಾಡಿದ್ದರು. ಹಿಂದುಳಿದ ವರ್ಗಕ್ಕೆ ಸೇರಿದಂತಹ 181 ವಸತಿನಿಲಯಗಳು,

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು
~~~~~

ಎಸ್‌ಸಿ ಎಸ್‌ಟಿ ವರ್ಗಕ್ಕೆ ಸೇರಿದಂತಹ 68 ವಸತಿನಿಲಯಗಳು, ಸಮಾಜ ಕಲ್ಯಾಣ ಇಲಾಖೆಯ 390 ವಸತಿ ನಿಲಯಗಳು, ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ 38 ಇತರೆ, 63 ವಿದ್ಯಾರ್ಥಿನಿಲಯಗಳಿವೆ. ಈ ರೀತಿಯ ಹಾಸ್ಟೆಲ್‌ಗಳನ್ನು ಅಲ್ಲಿರುವ ವಿದ್ಯಾರ್ಥಿಗಳನ್ನು, ಅಲ್ಲಿರುವ ಸಿಬ್ಬಂದಿಗಳನ್ನು ಭೇಟಿ ಮಾಡಿ, ಅವರಿಂದ ಮಾಹಿತಿಯನ್ನು ಸಂಗ್ರಹಿಸಿ ಒಂದು ಸಣ್ಣ ರಿಪೋರ್ಟ್ ಅನ್ನು compile ಮಾಡಿದ್ದಾರೆ. ಅದರಲ್ಲಿರುವ ಪ್ರಮುಖ ಅಂಶಗಳನ್ನು ಮಾತ್ರ ನಾನಿಲ್ಲಿ ಹೇಳಬಯಸುತ್ತೇನೆ. ಈ 740 ಹಾಸ್ಟೆಲ್‌ಗಳಲ್ಲಿ ಕೇವಲ 433 ಹಾಸ್ಟೆಲ್‌ಗಳಿಗೆ ಮಾತ್ರ ಸ್ವಂತ ಕಟ್ಟಡ ಇದೆ. 307 ವಸತಿ ನಿಲಯಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿವೆ. ಇದಕ್ಕೆ ಇನ್ನೂ ಸಹ ನಿವೇಶನ ಗುರುತಿಸಿಲ್ಲ ಏನನ್ನೂ ಸಹ ಮಾಡಿರುವುದಿಲ್ಲ. ಇವೆಲ್ಲ ನಿರಂತರವಾಗಿ ಬಾಡಿಗೆ ಕಟ್ಟಡಲ್ಲಿಯೇ ನಡೆಯುತ್ತಿವೆ. ಸಮೀಕ್ಷೆ ನಡೆಸಿದಂತಹ ಈ 740 ಹಾಸ್ಟೆಲ್‌ಗಳಲ್ಲಿ ನೂರಕ್ಕೆ ನೂರು ಅವಕಾಶ ಇರುವುದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಇದ್ದಾರೆ. 28% ಹಾಸ್ಟೆಲ್‌ಗಳಲ್ಲಿ 5 ವಿದ್ಯಾರ್ಥಿಗಳಲ್ಲಿ ಇರುವ ಕಡೆಗಳಲ್ಲಿ 30ಕ್ಕೂ ಹೆಚ್ಚು ವಿದ್ಯಾರ್ಥಿಗಳು ಇದ್ದಾರೆ. ಕೆಲವು ಕಡೆಗಳಲ್ಲಿ ಮಕ್ಕಳು ಅವಕಾಶ ಇಲ್ಲದೆ, ಅಡಿಗೆ ಮನೆ, ಊಟದ ಮನೆ ಮತ್ತು ಹಜಾರಗಳಲ್ಲಿ ವಿದ್ಯಾರ್ಥಿಗಳು ಮಲಗುತ್ತಿದ್ದಾರೆ. ಎಲ್ಲಿಂದಲೋ ಮಕ್ಕಳನ್ನು ಹಾಸ್ಟೆಲ್‌ನಲ್ಲಿ ವಸತಿ ಸೌಕರ್ಯ ಕೊಡಿಸುತ್ತೇವೆ ಎಂದು ಹೇಳಿ ಕರೆದುಕೊಂಡು ಬಂದು ಈ ರೀತಿಯ ವ್ಯವಸ್ಥೆಯನ್ನು ಮಾಡಲಾಗಿದೆ. 20 ಕ್ಕೂ ಹೆಚ್ಚು ವಸತಿನಿಲಯಗಳು ಶೋಚನೀಯ ಸ್ಥಿತಿಯಲ್ಲಿವೆ. ಅದಕ್ಕೆ ಒಂದೆರಡು ಉದಾಹರಣೆಗಳನ್ನು ನೀಡುತ್ತೇನೆ. ಹುಬ್ಬಳ್ಳಿ ಧಾರವಾಡ ಜಿಲ್ಲೆಯ ಪೂರ್ವ ಕ್ಷೇತ್ರದ ಘಂಟಿಕೇರಿ ವಿದ್ಯಾರ್ಥಿನಿಲಯ, ದಕ್ಷಿಣಕನ್ನಡ ಜಿಲ್ಲೆಯ ಗೊಂದೇಲ್‌ನಲ್ಲಿರುವ ಸಮಾಜ ಕಲ್ಯಾಣ ಇಲಾಖೆಯ ವಸತಿನಿಲಯ, ರಾಯಚೂರು ಮತ್ತು ಸಿಂಧನೂರು ತಾಲ್ಲೂಕಿನ ಮೆಟ್ರಿಕ್ ನಂತರದ ವೃತ್ತಿಪರ ಬಾಲಕಿಯರ ವಸತಿನಿಲಯ, ಕೊಪ್ಪಳ ಜಿಲ್ಲೆಯ ಮೊರಾರ್ಜಿ ದೇಸಾಯಿ ವಸತಿನಿಲಯ ಮತ್ತು ಕಿತ್ತೂರು ರಾಣಿ ಚೆನ್ನಮ್ಮ ವಸತಿನಿಲಯ, ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿಯ ಸರ್ಕಾರಿ ಸಾರ್ವಜನಿಕ ವಸತಿನಿಲಯ, ಇವು ಅತ್ಯಂತ ಶೋಚನೀಯ ಸ್ಥಿತಿಯಲ್ಲಿರುವ ವಿದ್ಯಾರ್ಥಿನಿಲಯಗಳು, ಉಳಿದವೆಲ್ಲ ಚೆನ್ನಾಗಿವೆ ಎಂದು ನಾನು ಹೇಳುವುದಿಲ್ಲ. ತುಮಕೂರು ಗುಬ್ಬಿ ತಾಲ್ಲೂಕಿನ ಮಾನನಕಟ್ಟೆ ಸರ್ಕಾರಿ ಬಾಲಕಿಯರ ಮೆಟ್ರಿಕ್ ಪೂರ್ವದ ವಿದ್ಯಾರ್ಥಿನಿಲಯ ತಗ್ಗಿನಲ್ಲಿದ್ದು ಮಳೆ ಬಂದಾಗ ಹಾಸ್ಟೆಲ್ ಒಳಗೆ ನೀರು ನುಗ್ಗುತ್ತದೆ.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## (96) 09.02.2017 ಎಂವಿ–ವಿಕೆ 4.50

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್** (ಮುಂದು):

ಮಳೆಗಾಲದಲ್ಲಿ ವಾಸ ಮಾಡುವುದಕ್ಕೆ ಸಾಧ್ಯವಿಲ್ಲ. ಇನ್ನೊಂದು ಮಜಾ ಕೇಳಿ, ಮಧುಗಿರಿ ತಾಲ್ಲೂಕಿನ ವಸತಿ ನಿಲಯದಲ್ಲಿ ಚಿರತೆ ಮತ್ತು ಕರಡಿಗಳ ಕಾಟವಿದೆಯಂತೆ. ಅಂದರೆ ಊರಿನ ಹೊರಗಡೆ ಹೋಗಿ ವಸತಿ ನಿಲಯವನ್ನು ಮಾಡಿದ್ದಾರೆ, ಹೆಣ್ಣು ಮಕ್ಕಳು ವಾರ್ಡನ್ ಇಲ್ಲ, ಕಾಂಪೌಂಡ್ ವಾಲ್ ಇಲ್ಲ, ಅವರ ವಿನಂತಿ ಏನು ಅಂದರೆ ದಯವಿಟ್ಟು ನಮ್ಮನ್ನು ಇಲ್ಲಿಂದ ಟೌನ್‌ಗೆ ಸ್ಥಳಾಂತರ ಮಾಡಿ ಎಂದು ಕೇಳಿಕೊಂಡರು. ದಾವಣಗೆರೆ, ದಕ್ಷಿಣ ಕನ್ನಡ ಮತ್ತು ಬೀದರ್ ಜಿಲ್ಲೆಯ ಹಲವು ವಸತಿ ನಿಲಯಗಳಿಗೆ ರಸ್ತೆ ಸಂಪರ್ಕವೇ ಇರುವುದಿಲ್ಲ.  ಪಾಪ ಆ ವಿದ್ಯಾರ್ಥಿಗಳು ಶಾಲೆಗೆ ಅಲ್ಲಿಂದ ಹೋಗಬೇಕು. ಹುಬ್ಬಳಿ–ಧಾರವಾಡ ಜಿಲ್ಲೆಯ ಕಲಘಟಗಿ ದೇವಿಕೊಪ್ಪ ವಸತಿ ನಿಲಯದ ಪಕ್ಕ ಇರುವಂತಹ ಏನು ವ್ಯವಸ್ಥೆ ಇದೆ, ಅದು ವಿದ್ಯಾರ್ಥಿನಿಯರು ವಾಸಿಸಲಿಕ್ಕೆ ಅನುಕೂಲವಾದಂತಹ ಸ್ಥಳವಲ್ಲ, ಅವರು ಕೈಮುಗಿದು ವಿನಂತಿ ಮಾಡಿ ಬೇಡಿಕೊಂಡರು ನಮ್ಮನ್ನು ದಯವಿಟ್ಟು ಇಲ್ಲಿಂದ ಸ್ಥಳಾಂತರ ಮಾಡಿ, ಇಲ್ಲಿ ತುಂಬಾ ಅವ್ಯವಹಾರ ನಡೆಯುತ್ತ ಇದೆ ಎಂದು ವಿದ್ಯಾರ್ಥಿನಿಯರು ಬೇಡಿಕೊಳ್ಳುತ್ತಿದ್ದಾರೆ. ಕೊಪ್ಪಳದ ಮುರಾರ್ಜಿ ದೇಸಾಯಿ ವಸತಿ ನಿಲಯದಲ್ಲಿ ಭ್ರಷ್ಟಚಾರ ನಡೆಯುತ್ತಿರುವ ಬಗ್ಗೆ ಅಲ್ಲಿನ ವಿದ್ಯಾರ್ಥಿನಿಯರೇ ನಮಗೆ ಹೇಳುತ್ತಾರೆ. ವರುಣಾ ಕ್ಷೇತ್ರ, ಮಾನ್ಯ ಮುಖ್ಯಮಂತ್ರಿಗಳ ಕ್ಷೇತ್ರ ಅಲ್ಲಿ ಒಂದು ಹದಿನಾಳ ಗ್ರಾಮ ಎಂದು ಇದೆ, ಅಲ್ಲಿ ಮೆಟ್ರಿಕ್ ಪೂರ್ವ ಬಾಲಕಿಯರ ವಸತಿ ನಿಯಲದ ವಾರ್ಡನ್ ವಿದ್ಯಾರ್ಥಿನಿಯರಿಗೆ ಗದರಿಸಿ, ಬೆದರಿಸಿರುವುದರಿಂದ ಆ ಇಡೀ ಹಾಸ್ಟೆಲ್‌ನಲ್ಲಿ ವಿದ್ಯಾರ್ಥಿನಿಯರೆ ಇಲ್ಲ, ಎಲ್ಲರೂ ಹೋಗಿ ಬಿಟ್ಟಿದ್ದಾರೆ. ಆದರೆ ಖರ್ಚು–ವೆಚ್ಚ ನಡೆಯುತ್ತಿದೆ.  ಕಲಬುರಗಿ ಜಿಲ್ಲೆಯ ಚಿತ್ತಾಪುರದ ಹಸಗುಂಡಗಿ ವಸತಿ ನಿಲಯದಲ್ಲಿ ಮಕ್ಕಳ ಹಾಜರಾತಿ ತುಂಬಾ ಕಡಿಮೆಯಾಗಿದೆ.  ಗೈರು ಹಾಜರಾಗಿರುವಂತಹ ಮಕ್ಕಳ ಖರ್ಚಿನ ಹಣ ಕೂಡ ದುರುಪಯೋಗವಾಗಿದೆ ಎಂದು ಅಲ್ಲಿ ಉಳಿದಿರುವ ಮಕ್ಕಳು ಹೇಳುತ್ತಾರೆ.  352 ಹಾಸ್ಟೆಲ್‌ಗಳಲ್ಲಿ ಸ್ನಾನ ಗೃಹಗಳು ಮತ್ತು ಶೌಚಾಲಯಗಳು ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಇಲ್ಲ. ಇರುವಂತಹ ಸ್ನಾನ ಗೃಹ ಮತ್ತು ಶೌಚಾಲಯಕ್ಕೆ ಮುರಿದ ಬಾಗಿಲು, ಬಾಗಿಲಿಗೆ ಚಿಲಕವಿಲ್ಲ, ಸ್ನಾನ ಗೃಹ ಮತ್ತು ಶೌಚಾಲಯಕ್ಕೆ ನೀರಿನ ಸಂಪರ್ಕ ಸರಿಯಿಲ್ಲದಿರುವುದರಿಂದ ಸ್ವಚ್ಚವಾಗಿಲ್ಲ. ನಾನು ಇದನ್ನೆಲ್ಲಾ ಏಕೆ ಉಲ್ಲೇಖ ಮಾಡುತ್ತಿದ್ದೇನೆಂದರೆ, ಹಿಂದಿನ ಬಾರಿ ಬಡ್ಜೆಟ್ ಅಧಿವೇಶನ ಆದನಂತರ ತಾವು ಘೋಷಣೆ ಮಾಡಿದ್ದೀರಿ. ಒಂದು ವರ್ಷದಲ್ಲಿ ಇನ್ನೂ 100 ಹಾಸ್ಟೆಲ್ ತೆರೆದುಬಿಡುತ್ತೇವೆ. ನಾನು ಪೂರ್ತಿ ಓದುವುದಿಲ್ಲವೆಂದು ಹೇಳಿದ್ದೆ, ನಾನು ಏಕೆ ಉಲ್ಲೇಖ ಮಾಡುತ್ತೇನೆ ಎಂದರೆ ಗ್ರಾಮಾಂತರದ ಎಸ್.ಸಿ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮತ್ತು ಎಸ್.ಟಿ. ಮಕ್ಕಳನ್ನು ಅದರಲ್ಲೂ ಹೆಣ್ಣು ಮಕ್ಕಳನ್ನು ಕರೆದುಕೊಂಡು ಬಂದು ಹಾಸ್ಟೆಲ್‌ನಲ್ಲಿಡುತ್ತಿದ್ದೇವೆ. ವಾರ್ಡನ್‌ಗಳಿಲ್ಲ, ಒಬ್ಬ ವಾರ್ಡನ್‌ನ್ನು ಔಟ್‌ಸೋರ್ಸ್ ಮಾಡಿದರೆ ನಾಲ್ಕು ಹಾಸ್ಟೆಲ್‌ಗಳಿಗೆ ಇನ್‌ಚಾರ್ಜ್ ಮಾಡುತ್ತಾರೆ. ಇನ್ನು ಮುಂದೆ ಓದಲಿಕೆ ಇದೆ. ಒಂದೊಂದು ಹಾಸ್ಟೆಲ್‌ಗೆ ಒಬ್ಬ ವಾರ್ಡನ್ ಬೇಕು, ಆರು ಹಾಸ್ಟೆಲ್‌ಗೆ ಔಟ್‌ಸೋರ್ಸ್ ಮಾಡಿದಂತಹ ವಾರ್ಡನ್ ಅನ್ನು ಹಾಕುತ್ತಾರೆ. ಆ ಹಾಸ್ಟೆಲ್‌ಗಳಿಗೆ night watchman ಇಲ್ಲ, ಅದು ಹೆಣ್ಣು ಮಕ್ಕಳು ಇರುವಂತಹ ಪ್ರದೇಶ. Day time watchmanಇದ್ದರೆ ಅವನು ಔಟ್‌ಸೋರ್ಸ್ ಅವನು ನಾಲ್ಕು ಹಾಸ್ಟೆಲ್‌ಗಳಿಗೆ ಒಬ್ಬ ಯಾವ ತರಹದಲ್ಲಿ manage ಮಾಡುತ್ತೀರೋ ನನಗೆ ಗೊತ್ತಿಲ್ಲ. 317 ವಸತಿ ನಿಲಯಗಳಲ್ಲಿ ಬಿಸಿನೀರಿನ ವ್ಯವಸ್ಥೆ ಇಲ್ಲ. ಹಾಸ್ಟೆಲ್‌ಗಳಿಗೆ ಸೋಲಾರ್ ವ್ಯವಸ್ಥೆ ಕೊಟ್ಟಿದ್ದೀರಿ ಅವು ಕೆಲಸ ಮಾಡುತ್ತಿಲ್ಲ. 418 ಹಾಸ್ಟೆಲ್‌ಗಳಲ್ಲಿ ಮಂಚದ ವ್ಯವಸ್ಥೆ ಇಲ್ಲ, ಮಕ್ಕಳು ಚಳಿಗಾಲದಲ್ಲೂ ಕೂಡ ನೆಲದಲ್ಲೆ ಕುಳಿತುಕೊಂಡು ಪಾಠ ಓದಬೇಕು, ನೆಲದಲ್ಲೆ ಮಲಗಿಕೊಳ್ಳಬೇಕು. 290 ವಸತಿ ನಿಲಯಗಳಲ್ಲಿ ಮಂಚ ಇದ್ದರೆ, ಹಾಸಿಗೆ ಇಲ್ಲ, ಹಾಸಿಗೆ ಇದ್ದರೆ ಮಂಚವಿಲ್ಲ, ಹಾಸಿಗೆ ಇದ್ದರೆ, ದಿಂಬಿಲ್ಲ, ದಿಂಬು ಕೊಟ್ಟರೆ ಹೊದಿಕೆ ಇಲ್ಲ. ಈಗ ಕೊಟ್ಟಿರುವಂಥದ್ದು ಏನಿದೆ ಅದು ಸ್ವಚ್ಛವಾಗಿಲ್ಲ. ನೋಡಿದರೆ ಅದನ್ನು ಉಪಯೋಗ ಮಾಡುವುದಕ್ಕೆ ಸಾಧ್ಯವಿಲ್ಲ. ಇನ್ನೂ ಓದಿಕೊಂಡು ಹೋಗುತ್ತೇನೆ, ಇದು ರೆಕಾರ್ಡ್ ಅಲ್ಲ, ಸರ್ವೆ ಮಾಡಿರುವಂತಹ ರಿಪೋರ್ಟ್ ಅದಕ್ಕಾಗಿ ಇದನ್ನು ಎತ್ತಿದ್ದೇನೆ.

**ಶ್ರೀ ಸೋಮಣ್ಣ ಮ ಬೇವಿನಮರದ(ವಿಧಾನಸಭೆಯಿಂದ ಚುನಾಯಿತರಾದವರು):**-ಮಾನ್ಯ ಸಭಾಪತಿಯವರೆ, ಎಲ್ಲಾ ಹಾಸ್ಟೆಲ್‌ಗಳ ಸಂಖ್ಯೆ ಕೂಡಿಸಿದರೆ, ಹಾಸ್ಟೆಲ್‌ಗಿಂತ ಜಾಸ್ತಿನೆ ಆಗುತ್ತದೆ. ಅಲ್ಲಿನ ಪರಿಸ್ಥಿತಿ ಏನೆಂದು ಹಾಸ್ಟೆಲ್‌ಗಳಿಗೆ ಹೋದಾಗ ಗೊತ್ತಾಗುತ್ತದೆ.

**ಶ್ರೀ ಕ್ಯಾಪ್ಟನ್ ಗಣೇಶ್ ಕಾರ್ಣಿಕ್:**-ಮಾನ್ಯ ಸಭಾಪತಿಯವರೆ, ನಾನು percentage ಹೇಳುತ್ತಿದ್ದೇನೆ. ಶೇಕಡ 50ರಷ್ಟು ಹಾಸ್ಟೆಲ್‌ಗಳಲ್ಲಿ ಊಟಕ್ಕೆ ಅಕ್ಕಿ ಕೊಡುತ್ತಾರೆ, ಆ ಅಕ್ಕಿಯನ್ನು ತಿನ್ನಲು ಯೋಗ್ಯವಿಲ್ಲವೆಂದು ನಾವು ಸರ್ವೆ ಮಾಡುವುದಕ್ಕೆ ಹೋದಾಗ ಹೇಳುತ್ತಾರೆ. 175 ಹಾಸ್ಟೆಲ್‌ಗಳಲ್ಲಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ಅದರಲ್ಲಿ ಎಲ್ಲಾ ಅಲ್ಲ 740ರಲ್ಲಿ 175 ಮಾತ್ರ. 158 ಹಾಸ್ಟೆಲ್‌ಗಳಲ್ಲಿ ಊಟಕ್ಕೆ ಕೊಠಡಿ ಸೌಲಭ್ಯವಿಲ್ಲ, ಅವರು ತೆಗೆದುಕೊಂಡು ಹೋಗಿ ರೂಮಿನಲ್ಲಿ ಅಥವಾ ಹೊರಾಂಡದಲ್ಲಿ ತಿನ್ನಬೇಕು ಅಥವಾ ಹೊರಗಡೆ ಹೋಗಿ ಜಗಲಿಯಲ್ಲಿ ಕುಳಿತುಕೊಂಡು ತಿನ್ನಬೇಕು. 86 ವಸತಿ ನಿಲಯಗಳಲ್ಲಿ ಅಡುಗೆ ಮನೆಯಿದೆ, ಆದರೆ ಉಗ್ರಾಣವಿಲ್ಲ, ಅಡುಗೆ ಮನೆಯಲ್ಲೆ ಎಲ್ಲಾ ಸೌಲಭ್ಯಗಳು ಅಲ್ಲೇ

ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸ್ಟೋರ್ ಮಾಡುವುದು ಅಲ್ಲೇ ಅಡುಗೆ ಮಾಡುವುದು, ಅಲ್ಲೇ ಸ್ವಚ್ಛ ಮಾಡುವುದು, ಸ್ವಚ್ಛತಾ ಸಿಬ್ಬಂದಿಯ ಬಗ್ಗೆ ಸಂಖ್ಯೆ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಇಲ್ಲದೇ ಇರುವುದು ಗಮನಕ್ಕೆ ಬಂದಿದೆ. ನೀರಿನ ಕೊರತೆಯಿಂದಾಗಿ ಶೇಕಡ 90ರಷ್ಟು ಹಾಸ್ಟೆಲ್‌ಗಳಲ್ಲಿ ಸ್ವಚ್ಛತೆಯ ಬಗ್ಗೆ ಬಾರಿ ಗಮನ ಕೊಡಬೇಕಾಗಿದೆ. ಕಸ ವಿಲೇವಾರಿ ಆಗುತ್ತಿಲ್ಲ. 141 ವಿದ್ಯಾರ್ಥಿ ನಿಲಯದಲ್ಲಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಸಿಗುತ್ತಿಲ್ಲ. ನವೋದಯ ಶಾಲೆಯ ವಿದ್ಯಾರ್ಥಿಗಳು ನಮಗೆ ಕೊಡುತ್ತಿರುವಂತಹ ವಿದ್ಯಾರ್ಥಿ ವೇತನ ತುಂಬಾ ಕಡಿಮೆ ಇದೆ, ಸ್ವಲ್ಪ ಜಾಸ್ತಿ ಮಾಡಿ ಎಂದು ವಿನಂತಿ ಮಾಡಿಕೊಂಡಿದ್ದಾರೆ. 210 ಹಾಸ್ಟೆಲ್‌ಗಳಲ್ಲಿ ದಿನಬಳಕೆಗೆ ಅವರಿಗೆ ಸೋಪು ಎಲ್ಲವನ್ನು ಕೊಡಬೇಕಲ್ಲವೆ, ಅವರಿಗೆ ದಿನಬಳಕೆಯ ವಸ್ತುಗಳು ಸಿಗುತ್ತಿಲ್ಲ. 286 ಹಾಸ್ಟೆಲ್‌ಗಳಲ್ಲಿ day time watchman ಇಲ್ಲ. 106 ಹಾಸ್ಟಲ್‌ಗಳಲ್ಲಿ ರಾತ್ರಿ ಕಾವಲುಗಾರರು ಇಲ್ಲ. 605 ವಸತಿ ನಿಲಯಗಳಲ್ಲಿ ಸಿ.ಸಿ. ಕ್ಯಾಮರ ಹಾಕಿಲ್ಲ. ಕಾನೂನು ಪ್ರಕಾರ ಸಿ.ಸಿ.ಕ್ಯಾಮರ ಹಾಕಬೇಕೆಂದು ತಾವೇ ಆದೇಶ ಹೊರಡಿಸಿದ್ದೀರಿ. 162 ವಸತಿ ನಿಲಯಗಳಿಗೆ ಕಾಂಪೌಂಡ ವಾಲ್ ಇಲ್ಲ. ವಿಜಯಪುರ ಜಿಲ್ಲೆಯ ಸಿಂದಗಿಯ ಘಟನೆ, ಬೀದರ್ ಜಿಲ್ಲೆಯ ಬಾಲ್ಕಿ ಹಾಸ್ಟೆಲ್‌ನಲ್ಲಿ ನಡೆದ ಘಟನೆ, ಅತ್ಯಾಚಾರದ ಎರಡು ಘಟನೆ ವರದಿಯಾಗಿದೆ. ಆದಾದ ಮೇಲೆ ಕೆಲವು ಸುತ್ತೋಲೆ ಹೊರಡಿಸಿದ್ದೀರಿ, ಕೆಲವು ಕ್ರಮ ತೆಗೆದುಕೊಳ್ಳಬೇಕೆಂದು. ಹೆಣ್ಣು ಮಕ್ಕಳನ್ನು ನಾವು ಕರೆದುಕೊಂಡು ಬಂದು ಈ ಹಾಸ್ಟೆಲ್‌ನಲ್ಲಿ ಇಟ್ಟ ಮೇಲೆ ಮೂಲಭೂತ ಸೌಕರ್ಯಗಳನ್ನು ಮತ್ತು ರಕ್ಷಣಾ ವ್ಯವಸ್ಥೆ ಮಾಡಬೇಕಲ್ಲವೆ? ಮಾನ್ಯ ಮಂತ್ರಿಗಳೆ. ನಾನು ಕೇವಲ ಹೇಳುತ್ತಿರುವುದು 1342ರಲ್ಲಿ 742ರ ವರದಿಗಳನ್ನು ಮಾತ್ರ ಹೇಳುತ್ತಿದ್ದೇನೆ, ಉಳಿದವುಗಳನ್ನು ಮಾಡುವುದಕ್ಕೆ ಆಗಿಲ್ಲ. ಒಂದು ಪತ್ರಿಕೆಯಲ್ಲಿ ಏನು ವರದಿ ಮಾಡಿದ್ದಾರೆ ಹೇಳುತ್ತೇನೆ ಕೇಳಿ. 23 ಜಿಲ್ಲೆಗಳಿಂದ ಒಟ್ಟು 116 ಗಿರಿಜನ ಆಶ್ರಮ ಶಾಲೆಗಳು ಕಾರ್ಯನಿರ್ವಹಿಸುತ್ತಿದ್ದು 1952 ರಿಂದ 66 ವರ್ಷಗಳ ಕಾಲ ಈವರೆಗೂ ಈ ಶಾಲೆಗಳಲ್ಲಿ ಕಲಿತ ಯಾವ ವಿದ್ಯಾರ್ಥಿಯೂ ಪದವಿ ಪೂರೈಸಿಲ್ಲ. 66 ವರ್ಷದಲ್ಲಿ ಸರ್ಕಾರಿ ಕೆಲಸವನ್ನು ಪಡೆದ ಒಂದೇ ಒಂದು ದಾಖಲೆ ಇಲ್ಲವೆಂದು ಒಕ್ಕೂಟದ ಅಧ್ಯಕ್ಷ ಶ್ರೀ ದ್ವಾರಕನಾಥ್‌ರವರು ಹೇಳುತ್ತಿರುವಂತಹ ಮಾತು. ಗಿರಿಜನ ಆಶ್ರಮ ಶಾಲೆಗಳು ಅತ್ಯಂತ ಶೋಚನೀಯ ಸ್ಥಿತಿಯನ್ನು ತಲುಪಿವೆ. ಇವುಗಳಲ್ಲಿ ಪಶ್ಚಿಮಘಟ್ಟದ ಮೈಸೂರು, ಕೊಡಗು, ಚಾಮರಾಜನಗರ, ಚಿಕ್ಕಮಗಳೂರು, ಉಡುಪಿ, ದಕ್ಷಿಣ ಕನ್ನಡ, ಶಿವಮೊಗ್ಗ ಮತ್ತು ಹಾಸನ ಜಿಲ್ಲೆಗಳ 83 ಗಿರಿಜನ ಆಶ್ರಮ ಶಾಲೆಗಳಲ್ಲಿ 6573 ಮಕ್ಕಳು ಶೈಕ್ಷಣಿಕ ವರ್ಷದಲ್ಲಿ ದಾಖಲಾಗಿದ್ದಾರೆ. ಆದರೆ ಸರ್ಕಾರದ ಮೂಲ ಉದ್ದೇಶಕ್ಕೆ ಅನುಗುಣವಾಗಿ ಈ ಶಾಲೆಗಳು ಕಾರ್ಯನಿರ್ವಹಿಸುತ್ತಿಲ್ಲ. ಬುಡಕಟ್ಟು ಕೃಷಿಕರ ಸಂಘದ ಅಧ್ಯಕ್ಷ ಶ್ರೀ ಶೈಲೇಂದ್ರ ಕುಮಾರ್‌ರವರು ಮಾತನಾಡಿ ಹೇಳುತ್ತಾರೆ. ಗಿರಿಜನ ಶಾಲೆಗಳಲ್ಲಿ ಕನಿಷ್ಠ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೂಲ ಸೌಕರ್ಯಗಳು ಇಲ್ಲದೆ, ಜೀತದಾಳುಗಳನ್ನು ಸೃಷ್ಟಿಸಲಾಗುತ್ತಿದೆ. ತಾವು ತಪ್ಪು ತಿಳಿಯಬಾರದು ಪತ್ರಿಕೆಗಳಲ್ಲಿ ಬಂದಿರುವ ವರದಿಯನ್ನು ಓದುತ್ತಿದ್ದೇನೆ, ಮಾನ್ಯ ಸಚಿವರಾದಂತಹ ಹೆಚ್.ಆಂಜನೇಯ, ಹಾಡಿಗಳಲ್ಲಿ ವಾಸ ಮಾಡಿ ಬಂದರೂ ಯಾವುದೇ ಸುಧಾರಣೆ ಕಂಡು ಬಂದಿಲ್ಲ. ಬುಡಕಟ್ಟು ಜನರ ಹಾಗೂ ಮಕ್ಕಳ ಸುಧಾರಣೆಯ ಕ್ರಮ ಕೈಗೊಳ್ಳದಿದ್ದರೆ, ನಿರಶನ ನಡೆಸಲಾಗುವುದು, ಇದನ್ನು ನಾನು ಹೇಳುತ್ತಿಲ್ಲ, ಬುಡಕಟ್ಟು ಜನಾಂಗದ ಪ್ರತಿನಿಧಿ ಹೇಳುತ್ತಿರುವಂತಹ ಒಂದು ಮಾತು, ಈ ಎಲ್ಲಾ ಸಂಗತಿಗಳನ್ನು ಮನಸ್ಸಿನಲ್ಲಿಟ್ಟುಕೊಂಡರೆ, ಸಾಮಾಜಿಕ ನ್ಯಾಯವನ್ನು ನಾವು ಬಡವರಿಗೆ ಹೇಗೆ ಮಾಡುತ್ತೇವೆ? ನಿನ್ನೆಯ ದಿವಸ ಮಾತನಾಡಬೇಕಾದರೆ, ಅತ್ಯಂತ ಹೆಚ್ಚು ದುಡ್ಡು ಕೊಟ್ಟಿದ್ದೇವೆ, 19 ಸಾವಿರ ಕೋಟಿ ರೂಪಾಯಿ ಕೊಟ್ಟಿದ್ದೇವೆ ಎಂದು ಹೇಳುತ್ತಾರೆ ಅದು ಎಲ್ಲಿ ಹೋಗುತ್ತಿದೆ. ಏಕೆ ಇದನ್ನು ಸುಧಾರಣೆ ಮಾಡುವುದಕ್ಕೆ ಆಗುತ್ತಿಲ್ಲ, ಇದನ್ನು ಒಂದು ಇಲಾಖೆ ನೋಡಿಕೊಳ್ಳಬೇಕು. ನಾನು ಶಿಕ್ಷಣದ ಗುಣಮಟ್ಟದ ಬಗ್ಗೆ ಮಾತನಾಡುವುದಿಲ್ಲ. ಆ ಬಡ ಹೆಣ್ಣು ಮಕ್ಕಳಿಗೆ ಕೊಡಬೇಕಾದ ಮೂಲಭೂತ ಸೌಕರ್ಯಗಳ ಕೊರತೆಯ ಬಗ್ಗೆ ನಾವು ಇಷ್ಟೊಂದು ಬೇಜವಾಬ್ದಾರಿಯಿಂದ ವರ್ತನೆ ಮಾಡುತ್ತಿದ್ದೇವೆ ಎಂದು ಹೇಳಿದರೆ. ಈ ಹಿಂದೆ ಮಾನ್ಯ ಸದಸ್ಯರಾದ ಟಿ.ಎ.ಶರವಣರವರು ಸದನಕ್ಕೆ ದಿಂಬನ್ನು ತಲೆ ಮೇಲೆ ಇಟ್ಟುಕೊಂಡು ಬಂದಿದ್ದರು, ಆ ಗುಣಮಟ್ಟದ ದಿಂಬಿನ ಬಗ್ಗೆ ಕೆಲವು ಚರ್ಚೆಯಾಗಿತ್ತು. ಆದರೆ ಅದನ್ನು ಈ ದಿವಸ ನೆನಪು ಮಾಡಿಕೊಂಡರೆ, ಅವರು ಹೇಳಿದ ಸಂಗತಿ ವಾಸ್ತವವಿದೆ, ಸತ್ಯವಿದೆ. ನಾವು ಎಲ್ಲೋ ಒಂದು ಕಡೆ ಬಡ ಮಕ್ಕಳಿಗೆ ಅನ್ಯಾಯ ಮಾಡುತ್ತಿದ್ದೇವೆ. ಸರ್ಕಾರದ ಹಣ ದುರುಪಯೋಗವಾಗುತ್ತಿದೆ, ಪೋಲಾಗುತ್ತಿದೆ, ಯಾವ ಸೌಲಭ್ಯಗಳನ್ನು ನಿರಂತರವಾಗಿ ಮಕ್ಕಳಿಗೆ ಕೊಡಬೇಕೋ ಅದನ್ನು ಕೊಡುವುದರಲ್ಲಿ ವಿಫಲರಾಗುತ್ತಿದ್ದೇವೆ. ನೋಡಿ ಸ್ವಾಮಿ ಹೆಣ್ಣು ಮಕ್ಕಳು ಇರುವಂತಹುದು. 365 ವಸತಿ ನಿಲಯಗಳಲ್ಲಿ ಯಾವುದೇ ವೈದ್ಯಕೀಯ ವ್ಯವಸ್ಥೆ ಇಲ್ಲ. ಅವರು ಏನು ಉತ್ತರ ಕೊಡುತ್ತಾರೋ ನೋಡೋಣ. ನೋಡಿ ಸ್ವಾಮಿ ನಾವು ಇರೋದೆ ಹೀಗೆ ಎಂದರೆ ಇದನ್ನು ಸದನ ಖಂಡಿತ ಒಪ್ಪಲಿಕೆ ಸಾಧ್ಯವಿಲ್ಲ. ಮಾನ್ಯ ಸಚಿವರಾದಂತಹ ಹೆಚ್.ಆಂಜನೇಯವರು ಖಂಡಿತ ಹೇಳಲಿಕೆ ಸಾಧ್ಯವಿಲ್ಲ. ಏಕೆಂದರೆ ಹೋದಸಾರಿ ಸದನದಲಿ ಈ ಹಾಸ್ಟೆಲ್ ಬಗ್ಗೆ ಮಾತನಾಡಿದಾಗ, ಈ ವರ್ಷವೇ 100 ಹಾಸ್ಟೆಲ್‌ಗಳನ್ನು ಶುರು ಮಾಡಿಬಿಡುತ್ತೇವೆಂದು ಹೇಳಿದ್ದು ತಾವು ಅಲ್ಲವೆ. ಹೇಳಿದ್ದೀರೋ ಇಲ್ಲವೋ. ನಾನು ವಿನಂತಿ ಮಾಡುತ್ತೇನೆ ಆ 100 ಹಾಸ್ಟೆಲ್‌ಗಳನ್ನು ಶುರು ಮಾಡುತ್ತೀರೋ ಏನೋ ಗೊತ್ತಿಲ್ಲ, ಇರುವಂತಹ ಹಾಸ್ಟೆಲ್‌ಗಳಿಗೆ ಕಾಯಕಲ್ಪ ಕಲ್ಪಿಸಿಕೊಡುತ್ತಾರೆಯೇ?

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ರಾಮಚಂದ್ರಗೌಡ:–**ಮಾನ್ಯ ಸಭಾಪತಿಯವರೆ, ಗಾಡಿ ಕಟ್ಟಿ ಚಾಟಿಯಲ್ಲಿ ಹೊಡೆಯದಿದ್ದರೆ ಎತ್ತುಗಳು ಮುಂದಕ್ಕೆ ಹೋಗುವುದಿಲ್ಲ.

**ಶ್ರೀ ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–**ಮಾನ್ಯ ಸಭಾಪತಿಯವರೆ, ನಾವು 740 ಹಾಸ್ಟೆಲ್‌ಗಳಿಗೆ ಭೇಟಿ ನೀಡಿದ್ದೇವೆ, ಆ 700 ಹಾಸ್ಟೆಲ್‌ಗಳಲ್ಲಿ sanitary pads ಕೊಡುತ್ತಿಲ್ಲ, ಸರ್ಕಾರದ ಕ್ರಮ ಇದೆ. ಕೆಲವೆ ಕೆಲವು ಹಾಸ್ಟೆಲ್‌ಗಳಲ್ಲಿ ಕೊಡುತ್ತಿದ್ದಾರೆ, ಅದರ ಗುಣಮಟ್ಟ ಹೇಳಲಿಕೆ ಪ್ರಯೋಜನವಿಲ್ಲ. ಇದು ವಿದ್ಯಾರ್ಥಿನಿಯರು ಹೇಳುವಂತಹ ಮಾತು. ಇನ್ನು ಬಹಳ ಇದೆ ಓದುತ್ತೇನೆ. ಇದನ್ನು ತಮಗೆ ಕಳುಹಿಸಿಕೊಡುತ್ತೇನೆ, ಇದು ವಸ್ತುನಿಷ್ಟ ವರದಿ. ಯಾವುದೇ ಉದಾಹರಣೆ ಇಟ್ಟುಕೊಂಡು ಮಾಡಿರುವಂಥದ್ದಲ್ಲ. ಇವತ್ತಿನ ದಿವಸ ತಮ್ಮ ಮೂಲಕ ಕೈಮುಗಿದು ಆ ವಿದ್ಯಾರ್ಥಿಗಳ ಪರವಾಗಿ ಪ್ರಾರ್ಥನೆ ಮಾಡುತ್ತೇನೆ. ಯಾವುದೇ ಒಂದು ಒಳ್ಳೆಯ ಉದ್ದೇಶ ಇಟ್ಟುಕೊಂಡು ಆ ಕಾಡಿನಲ್ಲಿರುವಂತಹ, ದೂರದ ಹಾಡಿಯಲ್ಲಿರುವಂತಹ ಮಕ್ಕಳನ್ನು ಕರೆದುಕೊಂಡು ಬಂದು ಶಿಕ್ಷಣ ಕೊಟ್ಟು ಅವರ ಬದುಕಿಗೆ ಒಂದು ಹೊಸ ಬೆಳಕು ಕೊಡಬೇಕು ಎಂದು ಪ್ರಯತ್ನ ಮಾಡಿ, ನಿರಂತರವಾಗಿ ಕಳೆದ ಹತ್ತಾರು ವರ್ಷಗಳಲ್ಲಿ ಈ ಮಕ್ಕಳ ಉದ್ಧಾರಕ್ಕಾಗಿ ಈ ವಿದ್ಯಾರ್ಥಿ ನಿಲಯವನ್ನು ಮತ್ತು ಆಶ್ರಮ ಶಾಲೆಗಳನ್ನು ಪ್ರಾರಂಭ ಮಾಡಿದ್ದೇವೆ. ಆದರೆ ಸರ್ಕಾರ ಅವರಿಗೆ ಕೊಡುವಂತಹ ಸೌಲಭ್ಯದಲ್ಲಿ ಈ ರೀತಿಯ ವಂಚನೆ ಮಾಡಿದರೆ ಹೇಗೆ?

**(97)/9–2–2017/ಎಲ್‌ಎಂ/ವಿಕೆ/5–00**

**ಶ್ರೀ ಕ್ಯಾಪ್ಟನ್ ಗಣೇಶ್ ಕಾರ್ಣಿಕ್** (ಮುಂದು):

ನಮ್ಮ ಆತ್ಮ ವಿಮರ್ಶೆ ಮಾಡಿಕೊಳ್ಳುವಂತಹ ಕಾಲಘಟಕ್ಕೆ ಬಂದಿದ್ದೇವೆ. ಆ ಹೆಣ್ಣು ಮಕ್ಕಳನ್ನು ನಮ್ಮ ಮನೆಯ ಮಕ್ಕಳೆಂದು ನೋಡಿಕೊಳ್ಳಲು ಏಕೆ ಸಾಧ್ಯವಾಗುತ್ತಿಲ್ಲ, ನಮ್ಮ ಮನೆಯ ಹೆಣ್ಣು ಮಕ್ಕಳನ್ನು ಹಾಗೆ ಇರಲು ಬಿಡುತ್ತೇವೆಯೇ? ಅವರಿಗೆ ಸೌಕರ್ಯಗಳನ್ನು ಕೊಡಲು ವಿಫಲರಾಗುತ್ತಿದ್ದೆವೆ. ಯಾರೊ ಗುತ್ತಿಗೆದಾರರಿಗೆ ಕೊಡಲು, ಅವ್ಯವಹಾರ ನಡೆಸಲು, ದುಂದುವೆಚ್ಚ ಮಾಡಲು ಇರುವ ಅವಕಾಶವಲ್ಲ ಇದು. ಆ ಮಕ್ಕಳ ಭವಿಷ್ಯಕ್ಕೆ ಬೆಳಕು ಕೊಡಲು ಈ ಯೋಜನೆಗಳು ಇರುವುದು. ವಿದ್ಯಾರ್ಥಿಗಳ ವಸತಿ ನಿಲಯಗಳ ಬಗ್ಗೆ ಬೇರೆ ಸಮಯದಲ್ಲಿ ಮಾತನಾಡುತ್ತೇನೆ. ಈಗ ಮಾತನಾಡುತ್ತಿರುವುದು ಕೇವಲ ವಿದ್ಯಾರ್ಥಿನೀಯರ ವಸತಿ ನಿಲಯಗಳ ಬಗ್ಗೆ. ಅದೇಲಕ್ಕಿಂತ ಮುಖ್ಯವಾಗಿ ಆಘಾತ ಕೊಡುವಂತಹ ವಿಚಾರ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಎಂದರೆ, ಆ ಹೆಣ್ಣು ಮಕ್ಕಳ ರಕ್ಷಣೆ ಬಗ್ಗೆ ನಾವು ಆಲೋಚನೆ ಮಾಡಲಿಲ್ಲ. ಹಾಸ್ಟೇಲ್ ಮಾಡುವಾಗ ಕನಿಷ್ಠ ಹೆಣ್ಣು ಮಕ್ಕಳ ಹಾಸ್ಟೇಲ್‌ಗಾದರೂ ಸಿಸಿ ಕ್ಯಾಮರಾವನ್ನು ಅಳವಡಿಸಬೇಕು, ವಾರ್ಡ್‌ನ ನೇಮಕ ಮಾಡಬೇಕು, ರಾತ್ರಿ ಹೊತ್ತು ಕಾಯಲು ಕಾವಲುಗಾರರನ್ನು ನೇಮಕ ಮಾಡಲು ಸರ್ಕಾರಕ್ಕೆ ಏನು ಸಮಸ್ಯೆ? ಆ ಎಲ್ಲ ವಿದ್ಯಾರ್ಥಿನೀಯರ ಪರವಾಗಿ ಸರ್ಕಾರಕ್ಕೆ ಕೈ ಮುಗಿದು ವಿನಂತಿ ಮಾಡುವುದೇನೆಂದರೆ, ಈಗ ಹೇಳಿರುವ ಎಲ್ಲ ಸಂಗತಿಗಳನ್ನು ಇನ್ನು 15 ದಿವಸ ಅಥವಾ ಒಂದೆರಡು ತಿಂಗಳಲ್ಲಿ ಯುದ್ಧೋಪಾದಿಯಲ್ಲಿ ಮಾಡುತ್ತೇವೆ ಎನ್ನುವ ಆಶ್ವಾಸನೆಯನ್ನು ಸದನಕ್ಕೆ ಕೊಡಬೇಕು. ವರದಿ ಬಗ್ಗೆ ಸುಮಾರು ದಿವಸಗಳ ಹಿಂದೆಯೇ ಸಚಿವರಿಗೆ ಗೊತ್ತಿದೆ. ಒಂದುವರೆ ತಿಂಗಳಲ್ಲಿ ಏನು ಮಾಡಿದ್ದೀರಿ ಎಂದು ಗೊತ್ತಿಲ್ಲ. ಇವತ್ತು ಸದನಕ್ಕೆ ಈ ಒಂದು ವರದಿ ಆಧಾರದಲ್ಲಿ ನಾವು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ, ವಿದ್ಯಾರ್ಥಿನೀಯರಿಗೆ ರಕ್ಷಣೆ ಒದಗಿಸುತ್ತೇವೆ, ಅವರಿಗೆ ಒಳ್ಳೆಯ ಶೈಕ್ಷಣಿಕ ವಾತಾವರಣ ಕಲ್ಪಿಸುತ್ತೇವೆ, ಏನು ಕೊರತೆ ಇದೆ ಅದೆಲ್ಲವನ್ನು ತುಂಬಿಕೊಳ್ಳುತ್ತೇವೆ, ಬಾಡಿಗೆ ಕಟ್ಟುವಲ್ಲಿ, ಅವ್ಯವಹಾರ ನಡೆಯುತ್ತಿರುವ ಹಾಸ್ಟೇಲ್‌ಗಳು ಅವೇಲ್ಲವಕ್ಕೂ ಒಂದು ಕಾಯಕಲ್ಪವನ್ನು ಒದಗಿಸುತ್ತೇವೆ ಎನ್ನುವ ಭರವಸೆಯನ್ನು ಕೊಡಬೇಕು.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಗಳೆ, ಒಳ್ಳೆಯ ವಿಷಯವನ್ನು ಕ್ಯಾಪ್ಟನ್ ಗಣೇಶ್ ಕಾರ್ಣಿಕರವರು ತಂದಿದ್ದಾರೆ. ನಾನು ಹೆಚ್ಚಿಗೆ ಹೇಳಲು ಹೋಗುವುದಿಲ್ಲ. ನಾನು ಮಂತ್ರಿಗಳಲ್ಲಿ ಕೇಳಿಕೊಳ್ಳುವುದು ಇಷ್ಟೆ, ಮಂತ್ರಿಗಳು ಮೂರು ವರ್ಷದಿಂದ ಹಾಡಿಗಳಲ್ಲಿ ಹೋಗಿ ಉಳಿದುಕೊಂಡು ಅವರ ನಿಜ ಪರಿಸ್ಥಿತಿಯನ್ನು, ಅವರ ಬದುಕನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನ ಮಾಡಿದ್ದಾರೆ. ಅದಕ್ಕಾಗಿ ಅವರಿಗೆ ಅಭಿನಂದಿಸುತ್ತೇನೆ. ಅವರ ಬದುಕನ್ನು ನೋಡಿರುವುದರಿಂದ ಮಳೆಗಾಲದಲ್ಲಿ ಗಿರಿಜನರು ಕೆಲಸ ಮಾಡಲು ಸಾಧ್ಯವಾಗುವುದಿಲ್ಲ ಎಂದು ತಿಳಿದು ಅವರಿಗೆ ಅಕ್ಕಿ–ಬೇಳೆ ಕೊಡುವಂತಹ ಕೆಲಸವನ್ನು ಮಾಡುತ್ತಿದ್ದೀರಿ. ಅದಕ್ಕಿಂತ ಹೆಚ್ಚಾಗಿ ಇವತ್ತು ಮಾನ್ಯ ಗಣೇಶ್ ಕಾರ್ಣಿಕ್‌ರವರು ಹೇಳಿದ ಹಾಗೆ, ಮಕ್ಕಳ ವಿದ್ಯಾಭ್ಯಾಸ ಮತ್ತು ಅವರು ವಾಸಿಸುವಂತಹ ಹಾಸ್ಟೇಲ್ ವ್ಯವಸ್ಥೆಯನ್ನು ಸರಿ ಮಾಡಲು ಹೆಚ್ಚು ಪ್ರಯತ್ನ ಮಾಡಬೇಕು ಮತ್ತು ಅದರ ಬಗ್ಗೆ ತಾವು ಹೆಚ್ಚು ಒಲವನ್ನು ತೋರಿಸಬೇಕು. Day scholar ಗಿಂತ ಹಾಸ್ಟೇಲ್‌ಗಳಲ್ಲಿ ಇರುವ ಮಕ್ಕಳಿಗೆ ಓದಲು ಹೆಚ್ಚಿನ ಅವಕಾಶವಿರುತ್ತದೆ. ವಾರ್ಡ್‌ನ್‌ಗಳು ಅವರಿಗೆ ಎಷ್ಟು ಹೊತ್ತಿಗೆ ಏಳಬೇಕು, ಎಷ್ಟು ಓದಬೇಕು ಎನ್ನುವ ಬಗ್ಗೆ ಮಾನೀಟರ್ ಮಾಡುತ್ತಾರೆ. ಆದರೆ ಅದಕ್ಕೆ ತಕ್ಕಹಾಗೆ ಒಳ್ಳೆಯ ಫಲಿತಾಂಶ ಬರದೆ ಇದ್ದರೆ ನಮಗೆ ದುಃಖ, ಸಂಕಟ ಆಗುತ್ತದೆ. ನೋಡುವವರು ಹೇಳುತ್ತಾರೆ, ಸಮಾಜ ಕಲ್ಯಾಣ ಇಲಾಖೆಯಲ್ಲಿ 19,000 ಕೋಟಿ

ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರೂ.ಗಳನ್ನು ಎಸ್‌ಸಿ/ಎಸ್‌ಟಿ ಜನಾಂಗದವರ ಅಭಿವೃದ್ಧಿಗೆ ಇಟ್ಟಿದ್ದಾರೆ. ಸ್ವಾತಂತ್ರ ಬಂದು ಇಷ್ಟು ವರ್ಷವಾದರೂ ಮೀಸಲಾತಿ ಇದೆ, fund allocation ನಲ್ಲಿ ಮೀಸಲಾತಿ ಇದೆ, ಆದರೂ ಇವರು ಏಕೆ ಸುಧಾರಣೆಯಾಗುತ್ತಿಲ್ಲ ಎಂದು ಬೇರೆಯವರು ವಿಚಾರ ಮಾಡುತ್ತಾರೆ. ಜೊತೆಗೆ ಈ ಜನರಿಗೆ ಇಷ್ಟೊಂದು ಏಕೆ ಕೊಡುತ್ತಾರೆ, ಇನ್ನು ಎಷ್ಟು ವರ್ಷದವರೆಗೆ ಇವರಿಗೆ ಕೊಡುತ್ತಾರೆ ಎಂದು ಸಂಕಟಪಡುತ್ತಾರೆ. ಇದನ್ನು ನಾವು ಅರ್ಥ ಮಾಡಿಕೊಂಡು ಈ ಹಣವನ್ನು ಉಪಯೋಗಿಸಿಕೊಂಡು ಮುಂದೆ ಬರಬೇಕು ಎನ್ನುವ ಛಲ–ಬಲ ನಮಗೆ ಬರಬೇಕಾಗುತ್ತದೆ. ನಮ್ಮ ಹೆತ್ತವರು ಅನಕ್ಷರಸ್ಥರು ಅವರಿಗೆ ಆ ಛಲ–ಬಲ ಬರಲು ಆಗಲಿಲ್ಲ. ನಮ್ಮ ಮಕ್ಕಳಾದರೂ ಆ ಛಲ–ಬಲ ಹೊಂದಬೇಕು, ಅವರಿಗೆ ಇದರ ಬಗ್ಗೆ ಅರಿವು ಬರಬೇಕು. ವಿಶೇಷ ಸೌಲಭ್ಯಗಳು ಇವೆ, ಹಾಸ್ಟೇಲ್, ಪುಸ್ತಕಗಳ ವ್ಯವಸ್ಥೆ ಇದೆ ಆದರೂ ನಾವು ಓದಲು ಬರೆಯಲು ಏಕೆ ಸಾಧ್ಯವಾಗುತ್ತಿಲ್ಲ ಎನ್ನುವುದನ್ನು ಯೋಚಿಸಬೇಕಾಗುತ್ತದೆ. ಅವರು ಅವರ ಹಕ್ಕನ್ನು ಕೇಳಿದ್ದಾರೆ. ನಾನು ವಿದ್ಯಾರ್ಥಿಯಾಗಿದ್ದಾಗ, ಹಾಸ್ಟೇಲ್‌ನಲ್ಲಿ ಓದುವಾಗ ದಿ:ಎಚ್.ಎಲ್.ನಾಗೇಗೌಡರು ನಮ್ಮ ಚಿಕ್ಕಮಗಳೂರು ಡಿಸಿ ಯಾಗಿದ್ದರು ಆಗ. ನಾನು ಸ್ವಲ್ಪ ಮಾತುನಾಡುತ್ತಿದೆ, ಮುಂದೆ ಹೋಗುತ್ತಿದೆ. ಹೀಗಾಗಿ ನಮಗೆ ಕೊಡುತ್ತಿದೆ ಮುದ್ದೆ ಮತ್ತು ತೇಲಾಡುತ್ತಿರುವ ತರಕಾರಿ ಸಾರನ್ನು ತಟ್ಟೆಯಲ್ಲಿ ತೆಗೆದುಕೊಂಡು ಹೋಗಿ ಡಿಸಿ ಯವರಿಗೆ ನಾನು ಮತ್ತು ಸ್ನೇಹಿತರು ತೆಗೆದುಕೊಂಡು ಡಿಸಿ ಯವರಿಗೆ ತೋರಿಸಿ ನೋಡಿ ಸರ್ ಇದನ್ನು ನೀವು ತಿನ್ನುತ್ತೀರಾ, ಇದನ್ನು ತಿನ್ನಲು ಸಾಧ್ಯವೆ ಎಂದು ಕೇಳಿದ್ದೇವು. ಆ ಕಾಲದಲ್ಲಿ ನಮಗೆ ಅನ್ನ ಕೊಡುತ್ತಿರಲಿಲ್ಲ. ಆ ಕಾಲದಲ್ಲಿಯೇ ನಾವು ಪ್ರಶ್ನೆ ಮಾಡಿದ್ದೆವು. ಈ ಕಾಲದಲ್ಲಿ ಇವತ್ತು ಆ ಮಕ್ಕಳು ಪ್ರಶ್ನೆ ಮಾಡುವುದರಲ್ಲಿ ಅರ್ಥವಿದೆ. ಮನೆಗಿಂತ ಒಳ್ಳೆಯ ಸೌಕರ್ಯ ಸಿಗಬೇಕು, ಅವರ ಮನಸ್ಸು ಪರಿಶುದ್ಧವಾಗಬೇಕು, ಓದುವ ಕಡೆಗೆ ಅವರು ಗಮನ ಹರಿಸಬೇಕು ಎನ್ನುವ ಭಾವನೆಯಿಂದ ಈ ವಸತಿ ನಿಲಯಗಳನ್ನು ಮಾಡಲಾಗಿದೆ. ಈ ವ್ಯವಸ್ಥೆಯನ್ನು ಅವರಿಗೆ ಕೊಡದಿದ್ದರೆ, ಹಳ್ಳಿಯಲ್ಲಿನ ಪರಿಸ್ಥಿತಿಯನ್ನೇ ಇಲ್ಲಿಯು ಅನುಭವಿಸಿದ್ದರೆ ಅವರಿಗೆ ಸ್ಪಿರಿಟ್ ಬರಲು ಹೇಗೆ ಸಾಧ್ಯ? ಹೆಚ್ಚಾಗಿ ನಮ್ಮ ಜನಾಂಗದವರೆ ಸಮಾಜ ಕಲ್ಯಾಣ ಸಚಿವರಾಗುತ್ತೇವೆ. ಹಿಂದೆ ಮಾನ್ಯ ಧರ್ಮಸಿಂಗ್‌ರವರು ಸಮಾಜ ಕಲ್ಯಾಣ ಸಚಿವರಾಗಿದ್ದರು, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ದಿ:ದೇವರಾಜ ಅರಸ್‌ರವರ ಕಾಲದಲ್ಲಿ ಸಮಾಜ ಕಲ್ಯಾಣ ಸಚಿವರಾಗಿದ್ದರು. ಮಾನ್ಯ ಎ.ಕೃಷ್ಣಪ್ಪ, ಮಾನ್ಯ ಬಿ.ಶಿವಣ್ಣನವರು ಸಮಾಜ ಕಲ್ಯಾಣ ಸಚಿವರಾಗಿದ್ದರು. ಆ ಸಂದರ್ಭದಲ್ಲಿಯು ಇವೆಲ್ಲ ಚರ್ಚೆಗಳು ಆಗಿವೆ. ಆಗ ನಾನು ಒಂದು ಮಾತನ್ನು ಹೇಳಿದೆ, ಇದಕ್ಕೆ ಒಂದು weightage ಬರಬೇಕು ಎಂದರೆ, ಅಧಿಕಾರಿ Officers ಗಳಿಲ್ಲಿ concern ಬರಬೇಕು, ಭಯ ಬರಬೇಕು, ಇಲಾಖೆಯ ಜವಾಬ್ದಾರಿಯನ್ನು

ಹೊತ್ತಿದ್ದೆವೆ, ಹಾಸ್ಟೇಲ್ ವ್ಯವಸ್ಥೆಯನ್ನು ಸರಿ ಮಾಡಬೇಕು, ಮಕ್ಕಳ ಶಿಕ್ಷಣಕ್ಕೆ ಒತ್ತು ಕೊಟ್ಟು ಅವರಲ್ಲಿ ಆಸಕ್ತಿ ಮೂಡುವಂತೆ ಮಾಡಬೇಕು ಎಂದರೆ ಅಧಿಕಾರಿಗಳಲ್ಲಿ ಭಯ ಇರಬೇಕು. ಗೃಹ ಇಲಾಖೆಯನ್ನು, ಹಣಕಾಸು ಇಲಾಖೆಯನ್ನು ಮಾನ್ಯ ಮುಖ್ಯಮಂತ್ರಿಗಳು ಇಟ್ಟುಕೊಳ್ಳುತ್ತಾರೆ. ಸಮಾಜ ಕಲ್ಯಾಣ ಇಲಾಖೆಯನ್ನು ಏಕೆ ಮಾನ್ಯ ಮುಖ್ಯಮಂತ್ರಿಗಳು ತೆಗೆದುಕೊಳ್ಳಬಾರದು? ನಮ್ಮವರಿಗೆ ಹಣಕಾಸು ಅಥವಾ ಬೇರೆ ಖಾತೆ ಕೊಡಲಿ. ಆಗ ಇದಕ್ಕೆ weightage ಬರುತ್ತದೆ ಎಂದು ಹೇಳುತ್ತಿದ್ದೇನೆ ಅಷ್ಟೆ, ಬೇರೆ ರೀತಿಯಲ್ಲಿ ಅರ್ಥ ಮಾಡಿಕೊಳ್ಳಬಾರದು. ದಿ:ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ, ಮಾನ್ಯ ಬಿ.ಶಿವಣ್ಣನವರು ಸಮಾಜ ಕಲ್ಯಾಣ ಇಲಾಖೆಯ ಸಚಿವರಾಗಿದ್ದಾಗಲೂ ನಾನು ಇದೇ ಮಾತನ್ನು ಹೇಳಿದ್ದೆನೆ. ಇದನ್ನು ಅಪಾರ್ಥ ಮಾಡಿಕೊಳ್ಳದೆ ಈ ವ್ಯವಸ್ಥೆಯಲ್ಲಿ ಸುಧಾರಣೆ ಮಾಡಿದಾಗ ಮಾತ್ರ ಇದಕ್ಕೆ weightage ಬರುತ್ತದೆ ಮತ್ತು ಅಧಿಕಾರಿಗಳಿಗೂ ಭಯ ಇರುತ್ತದೆ. ನಮ್ಮ ಮಕ್ಕಳನ್ನು ನಾವು ಸರಿಪಡಿಸಲು ಆಗದಿದ್ದರೆ ಏನು ಪ್ರಯೋಜನ ಎನ್ನುವುದು ನನ್ನ ಪ್ರಶ್ನೆ. ಆಸ್ಪತ್ರೆಗಳ ವಿಚಾರದಲ್ಲಿ ಸಲಹಾ ಸಮಿತಿ ಮಾಡಲಾಗುತ್ತದೆ, ಶಿಕ್ಷಣಕ್ಕೆ ಸಂಬಂಧಪಟ್ಟ ಹಾಗೆ ಜಿಲ್ಲಾಪಂಚಾಯಿತಿಯಲ್ಲಿ ಸ್ಥಾಯಿ ಸಮಿತಿ ಇದೆ. ಅದೇ ರೀತಿಯಲ್ಲಿ ಹಾಸ್ಟೇಲ್ ಉಸ್ತುವಾರಿಯನ್ನು ನೋಡಿಕೊಳ್ಳಲು ಒಂದು ಸಮಿತಿಯನ್ನು ಆಯಾ ಜಿಲ್ಲೆಯಲ್ಲಿ ಮಾಡಬೇಕು ಎನ್ನುವುದು ನನ್ನ ಅಭಿಪ್ರಾಯ. ಜಿಲ್ಲಾ ಪಂಚಾಯಿತಿಯಲ್ಲಿ ಇರುವುದು ಬೇರೆ. ಆದರೆ ಆಯಾ ಜಿಲ್ಲೆಗಳಲ್ಲಿ ಹಾಸ್ಟೇಲ್ ವ್ಯವಸ್ಥೆಯನ್ನು ನೋಡಿಕೊಳ್ಳಲು ಅಲ್ಲಿ ಸ್ಥಳೀಯವಾದ ಒಂದು ಸಂಸ್ಥೆ ಇರಬೇಕು. ತಹಸೀಲ್ದಾರರ್ ಇದ್ದರೆ ಅವರ ಜೊತೆಯಲ್ಲಿ ಕೆಲವು non official members ಅಥವಾ ಎನ್‌ಜಿಓ ಗಳನ್ನು ಆ ಸಂಸ್ಥೆಯಲ್ಲಿ ಸೇರಿಸಿಕೊಳ್ಳಬೇಕು. ಅವರು ಆಗಾಗ ಹೋಗಿ ಭೇಟಿ ಕೊಟ್ಟು ಸರಿ ಮಾಡಲು ಸಾಧ್ಯವಿದೆ ಎನ್ನುವುದು ನನ್ನ ಭಾವನೆ. ನಿಮ್ಮ ಸಮಯದಲ್ಲಾದರೂ ಇದರಲ್ಲಿ ಸ್ವಲ್ಪ ಸಾಧನೆಯಾಗಲಿ, ಮಕ್ಕಳು ವ್ಯಾಸಂಗದಲ್ಲಿ ಮುಂದೆ ಬರಲಿ ಎನ್ನುವುದು ನನ್ನ ಆಶಯ.

**ಶ್ರೀ ಕೆ.ಬಿ.ಶಾಣಪ್ಪ(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಗಳೆ, ಮಾನ್ಯ ಉಗ್ರಪ್ಪನವರ ಜೊತೆಯಲ್ಲಿ ನಾನು, ಮಟ್ಟೂರ್‌ರವರು, ಅಕ್ಕನವರು, ಗೋಪಾಲರವರು ಮತ್ತು ಅನೇಕ ಶಾಸಕರು ಇಡೀ ಕರ್ನಾಟಕವನ್ನು ಸುತ್ತಾಡಿ, ಪ್ರತಿಯೊಂದು ಜಿಲ್ಲೆಯಲ್ಲಿ ಹೆಣ್ಣು ಮಕ್ಕಳ ಹಾಸ್ಟೇಲ್‌ಗಳನ್ನು ಭೇಟಿ ಮಾಡಿದ್ದೇವೆ. ದುರ್ದೈವದ ಮಾತು ಎಂದರೆ, ಕರ್ನಾಟಕದಲ್ಲಿ ಹಾಸ್ಟೇಲ್‌ನಲ್ಲಿರುವ ಮಕ್ಕಳನ್ನು ತಮ್ಮ ಮಕ್ಕಳಂತೆ ನೋಡಿಕೊಳ್ಳುವ ಗುಣ ಅಧಿಕಾರಿಗಳಲ್ಲಿ ಅಥವಾ ಬೇರೆಯವರಲ್ಲಿ ಬರಲು ಸಾಧ್ಯವಿಲ್ಲ. ಶ್ರೀ ಸಿದ್ದಗಂಗಾ ಮಠದವರು, ಶ್ರೀ ಧರ್ಮಸ್ಥಳದವರು, ಶ್ರೀ ಚನ್ನಬಸವೇಶ್ವರ ಸಂಸ್ಥಾನದವರು, ಹುಬ್ಬಳ್ಳಿ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಂಸ್ಥಾನದಲ್ಲಿ ಅನೇಕ ಶರಣ ಸಂಸ್ಥಾನಗಳನ್ನು ಯಾರು ನಡೆಸುತ್ತಿದ್ದಾರೆ ಅಲ್ಲಿ ಇಂತಹ ಹೊಲಸು, ಸ್ವಾರ್ಥ ಕಣ್ಣಿಗೆಯೇ ಕಾಣುವುದಿಲ್ಲ. ನೀವು 19,000 ಕೋಟಿ ರೂ.ಗಳಲ್ಲ 1.70,000 ಕೋಟಿ ರೂ.ಗಳನ್ನು ಕೊಟ್ಟರು ಅದನ್ನು ತಿಂದು ಹಾಕುತ್ತಾರೆ. ಇದನ್ನು ನಿಮ್ಮ ಕೈಯಲ್ಲಿ ನಡೆಸಲು ಆಗುವುದಿಲ್ಲ. ಇದರಲ್ಲಿ dedication ಬೇಕು, ಇದರಲ್ಲಿ ಸ್ವಾರ್ಥ ಪರಮಾರ್ಥ ಇವುಗಳ ಮಧ್ಯೆದಲ್ಲಿ ಸ್ವಾರ್ಥವನ್ನು ಬದಿಗೆ ಒತ್ತಿ ಪರಮಾರ್ಥವನ್ನು ಮುಖ್ಯವಾಗಿ ಇಟ್ಟುಕೊಳ್ಳಬೇಕು. ಅಂತಹ ವ್ಯಕ್ತಿಗಳನ್ನು ಈ ಸಮಾಜದಲ್ಲಿ ಕಾಣಲು ಆಗುತ್ತದೆಯೇ ಈ ಸಮಾಜದಲ್ಲಿ? ನೀವು ವಾರ್ಡ್ ಹಾಕುತ್ತೇವೆ ಅದು ಇದು ಎಂದು ಎಲ್ಲವನ್ನು ಹೇಳುತ್ತೀರಿ ಆದರೆ ultimately man is a man. ಅಲ್ಲಿ ಹೆಣ್ಣು ಮಕ್ಕಳು ಮಲಗಿರುವ ಕಡೆಯಲ್ಲಿಯೇ ಗಂಡು ಮಕ್ಕಳು ಮಲಗುವಂತಹ ಪರಿಸ್ಥಿತಿ ಇದೆ. ಅವರಿಗೆ private dining hall ಇಲ್ಲ, no latrine ಅವರು ಹೇಳಿರುವುದರಲ್ಲಿ ಏನು ತಪ್ಪಿಲ್ಲ. I was one of the men who visited each and every hostel. ನನ್ನ ಸಲಹೆ ಎಂದರೆ, ಮುಂದಿನ ಬಜೆಟ್‌ನಲ್ಲಿ... ನೀವು ನಿಮ್ಮ ಇಲಾಖೆಯನ್ನು ನಡೆಸಲು ಆಗುವುದಿಲ್ಲ, ಅದಕ್ಕಾಗಿ ಬೇರೆ ವ್ಯವಸ್ಥೆ ಮಾಡಿ, ಈ ದೇಶದಲ್ಲಿ ದೊಡ್ಡ-ದೊಡ್ಡ ಎನ್‌ಜಿಓ ಗಳು ಇದ್ದಾರೆ. ಅವರನ್ನು ಕರೆಯಿಸಿ.

**(98) 09.02.2017 05.10 LL-GR**

**ಶ್ರೀ ಕೆ.ಬಿ.ಶಾಣಪ್ಪ (ಮುಂದು):**

ಶರಣರ ಸಂಸ್ಥಾನಗಳು ಇವೆ, ದೊಡ್ಡ ದೊಡ್ಡ ಶಿಕ್ಷಣ ಸಂಸ್ಥೆಗಳು ಇವೆ. ಅವರಿಗೆ ಈ ಹೆಣ್ಣು ಮಕ್ಕಳ ಹಾಸ್ಟೆಲ್‌ಗಳನ್ನು ಮತ್ತು ಇತರ ಹಾಸ್ಟೆಲ್‌ಗಳನ್ನು ಈ ಪ್ರಕಾರದ ವ್ಯವಸ್ಥೆಯಲ್ಲಿ ಮಕ್ಕಳನ್ನು ತಾವು ನಡೆಸಿ, ಅದಕ್ಕೆ ಅವಶ್ಯಕವಾದಂತಹ ಹಣವನ್ನು ಪ್ರತಿ ವರ್ಷ ನಾವು ಕೊಡುತ್ತೇವೆಂದು ಹೇಳಿ, ಅವರಿಗೆ ಕಾಲಕಾಲಕ್ಕೆ ಹಣ ನೀಡಿ. ಈ ರೀತಿ ಮಾಡಿದರೆ, ಹೀಗಿರುವಂತಹ ಹೊಲಸನ್ನು ಒಂದೇ ವರ್ಷದಲ್ಲಿ ಸರಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆದುದರಿಂದ, This is very fundamental ಮತ್ತು ಇದು ಬಹಳ ಉಪಯುಕ್ತವಾದಂತಹ ಸಲಹೆ. ಅದನ್ನು ಹೊರೆತುಪಡಿಸಿ, ಇಂತಹ ಹಾಸ್ಟೆಲ್‌ಗಳನ್ನು ಸರ್ಕಾರದಿಂದ ಅಥವಾ ಬೇರೆ ಯಾರಿಂದಲೂ ನಡೆಸುವುದಕ್ಕೆ ಸಾಧ್ಯವಿಲ್ಲ. ಆದುದರಿಂದ, ದಯಮಾಡಿ ಈ ರೀತಿಯ ಹಾಸ್ಟೆಲ್‌ಗಳನ್ನು ಮತ್ತೊಬ್ಬರಿಗೆ ಹಣ ನೀಡಿ ನಡೆಸುವುದಕ್ಕೆ ಹೇಳಿದರೆ, they will run it in a proper way.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಹೊರಟ್ಟಿ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವರ್ಷ ಅನೇಕ ಹಾಸ್ಟೆಲ್‌ಗಳನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿದ್ದಾರೆ ಹಾಗೂ ಹೀಗಿರುವಂತಹ ಹಾಸ್ಟೆಲ್‌ಗಳನ್ನು ಸುಧಾರಣೆ ಮಾಡುತ್ತೇವೆಂದು ಹೇಳಿದ್ದಾರೆ. ಅದನ್ನು ಮಾಡಲಿ. ಈ ಹಿಂದಿನ ಅಧಿವೇಶನದಲ್ಲಿ ನಾನು ಹೇಳಿದಂತೆ, ಒಮ್ಮೆ ಹಿರೇಕೆರೂರು ಎಂಬ ಗ್ರಾಮಕ್ಕೆ ಭೇಟಿ ನೀಡಿದ್ದೆನು. ಅಲ್ಲಿ ಒಂದು ಓಣಿಯಲ್ಲಿ ವಿದ್ಯಾರ್ಥಿ ನಿಲಯಕ್ಕಾಗಿ ಒಂದು ಮನೆಯನ್ನು ತೆಗೆದುಕೊಂಡಿದ್ದಾರೆ. ಅದರಲ್ಲಿ ಕುಡಿಯುವುದಕ್ಕೆ ನೀರಿನ ವ್ಯವಸ್ಥೆಯಿಲ್ಲ ಮತ್ತು ಸರಿಯಾದ latrine ಇಲ್ಲ. ಊರಿನ ಗ್ರಾಮಸ್ಥರೆಲ್ಲರೂ ಮಲಗಿದ ನಂತರ ಆ ಹಾಸ್ಟೆಲ್‌ನ ವಿದ್ಯಾರ್ಥಿಗಳು latrineಗೆ ಹೋಗುವುದಕ್ಕಾಗಿ ಹೊರಗೆ ಬರುತ್ತಾರೆ. ಈ ಬಗ್ಗೆ ಆ ಊರಿನ ಗ್ರಾಮಸ್ಥರೆಲ್ಲರೂ ಸಂಬಂಧಪಟ್ಟವರಿಗೆ ದೂರು ನೀಡಿದ್ದರು. ಆ ಹಾಸ್ಟೆಲ್‌ನಲ್ಲಿ ಸರಿಯಾದ ಬಾತ್‌ರೂಮ್ ವ್ಯವಸ್ಥೆ ಇಲ್ಲ. latrine ಒಂದು ಕಡೆ ಇದ್ದು, ಬಾತ್‌ರೂಮ್ ಒಂದು ಕಡೆ ಇದೆ. ಈ ಬಗ್ಗೆ ನಾನು ಹಿಂದಿನ ಅಧಿವೇಶನದಲ್ಲಿ ವಿಷಯ ಪ್ರಸ್ತಾಪ ಮಾಡಿದ್ದೆನು. ಆದರೆ, ಇದುವರೆವಿಗೂ ಅದು ಸುಧಾರಣೆಯಾಗಿರುವುದಿಲ್ಲ. ಅದಕ್ಕಾಗಿ ನಾನು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುವುದೇನೆಂದರೆ, ಮೊದಲು ಈ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಿ ನಂತರ, ಹೊಸ ಹಾಸ್ಟೆಲ್‌ಗಳನ್ನು ಕಟ್ಟುವುದು ಒಳ್ಳೆಯದು ಹಾಗೂ ಮಾನ್ಯ ಸದಸ್ಯರಾದ ಶ್ರೀ ಕೆ.ಬಿ. ಶಾಣಪ್ಪನವರು ಹೇಳಿದಂತಹ ಮಾತು ನೂರಕ್ಕೆ ನೂರರಷ್ಟು ಸರಿಯಿದೆ.

**ಶ್ರೀ ಕೆ.ಬಿ. ಶಾಣಪ್ಪ:–** ಮಾನ್ಯ ಸಭಾಪತಿಯವರೆ, ಒಂದೊಂದು ಜಿಲ್ಲೆಯಲ್ಲಿ ಒಂದೊಂದು ದೊಡ್ಡ ದೊಡ್ಡ ಶರಣರ ಮಠಗಳಿವೆ. ಅಂತಹ ಒಂದೊಂದು ಮಠಗಳಿಗೆ ಒಂದೊಂದು ಜಿಲ್ಲೆಯನ್ನು ಕೊಟ್ಟುಬಿಡಲಿ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಈ ರೀತಿ ಹಾಸ್ಟೆಲ್‌ಗಳನ್ನು ಶ್ರೀ ಸಿದ್ಧಗಂಗಾ ಮಠ ಅಥವಾ ಶ್ರೀ ಧರ್ಮಸ್ಥಳದವರಿಗೆ ಕೊಟ್ಟು, ಈ ಸರ್ಕಾರ ಕನಿಷ್ಠ ಪಕ್ಷ ಒಂದು ಪ್ರಯೋಗವಾದರೂ ಮಾಡಲಿ. ಶ್ರೀಮತಿ ಮೋಟಮ್ಮನವರು ಹೇಳಿದಂತೆ, ಸರ್ಕಾರ ಇಷ್ಟು ದುಡ್ಡು ಖರ್ಚು ಮಾಡಿದರೂ ಸಹ ಅದು ಮಕ್ಕಳಿಗೆ ಹೋಗುವುದಿಲ್ಲ. ಪಾಪ, ಆ ಮಕ್ಕಳಾದರೂ ತಿಂದು ಸ್ವಲ್ಪ ಸುಖವಾಗಿರುತ್ತವೆಯೆಂದರೆ, ಅವರಿಗೂ ಕೂಡ ಸರಿಯಾದ ಊಟ ಕೊಡುವುದಿಲ್ಲ. ಆ ಹಣವನ್ನು ಯಾರ್ಯಾರೋ ತಿಂದು ತೇಗುತ್ತಾರೆ. ನಾನು ಈಗಾಗಲೇ ಹೇಳಿದಂತೆ, ಮಕ್ಕಳು ತಿನ್ನುವಂತಹ ಊಟದ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹಣದಲ್ಲಿಯೂ ಸಹ ಅವ್ಯವಹಾರ ನಡೆದರೆ ಅವರು ಎಲ್ಲಿಗೆ ಹೋಗಬೇಕು? ಅಲ್ಲದೇ, ಈ ಸರ್ಕಾರವು ಬಹಳಷ್ಟು ಆಸಕ್ತಿವಹಿಸಿ ಕೆಲಸ ಮಾಡುತ್ತದೆ. ಆದರೆ, ಸರ್ಕಾರ ಆಸಕ್ತಿವಹಿಸಿ ಕೆಲಸ ಮಾಡುವುದಕ್ಕೆ ಸರಿಯಾದ ರೀತಿಯಲ್ಲಿ ವ್ಯವಸ್ಥೆ ಆಗದಿದ್ದರೆ, ಸುಮ್ಮನೆ ಹಣ ಖರ್ಚು ಮಾಡುವುದರಲ್ಲಿ ಅರ್ಥವಿಲ್ಲ. ಅದಕ್ಕಾಗಿ ಹೀಗಿರುವಂತಹ ಹಾಸ್ಟೆಲ್‌ಗಳಿಗೆ ತಕ್ಷಣವೇ ಇನ್ನು ಎರಡು–ಮೂರು ತಿಂಗಳುಗಳಲ್ಲಿ ಒಂದು ಒಳ್ಳೆಯ ವ್ಯವಸ್ಥೆ ಮಾಡಿ, ಇದಕ್ಕಾಗಿ ಸರ್ಕಾರದ ಹಣ ಸ್ವಲ್ಪ ಹೆಚ್ಚು ಖರ್ಚಾಗುತ್ತದೆ. ಹಣ ಖರ್ಚಾದರೂ ಸರಿ, ಈ ಒಂದು ಪ್ರಯೋಗ ಮಾಡಿ. ಇದರಿಂದ, ಬಡ ಮಕ್ಕಳಿಗೆ ಅನುಕೂಲವಾಗುತ್ತದೆ. ಈ ರೀತಿಯ ವ್ಯವಸ್ಥೆ ಮಾಡುವವರೆಗೂ ಹೊಸ ಹಾಸ್ಟೆಲ್‌ಗಳನ್ನು ಪ್ರಾರಂಭ ಮಾಡಬಾರದೆಂದು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಆರ್. ಪ್ರಸನ್ನಕುಮಾರ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು ನಿಯಮ 330ರಡಿಯಲ್ಲಿ ಹಾಸ್ಟೆಲ್‌ಗಳ ಸುಧಾರಣೆ ಬಗ್ಗೆ ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಗಮನಕ್ಕೆ ತಂದಿರುವಂತಹದ್ದೆಂದರೆ, ಒಂದೊಂದು ವಾರ್ಡನ್ 3–4 ಹಾಸ್ಟೆಲ್‌ಗಳ ಇನ್‌ಚಾರ್ಜ್‌ನಲ್ಲಿ ಇದ್ದಾರೆ. ಇವತ್ತಿನ ದಿನ ವಾರ್ಡನ್‌ಗಳ ಕೊರತೆಯಿದೆ. ಇನ್ನು ಬಹುತೇಕ ಮಹಿಳಾ ಹಾಸ್ಟೆಲ್‌ಗಳಲ್ಲಿ ಪುರಷ ವಾರ್ಡನ್‌ಗಳಿದ್ದಾರೆ. ಇವತ್ತು ಶಿವಮೊಗ್ಗ ಜಿಲ್ಲೆಯಲ್ಲಿ ಒಂದು ಪ್ರಕರಣವಾಗಿದೆ. ಅದೇನೆಂದರೆ, ಒಬ್ಬ ವಾರ್ಡನ್ ಒಂದು ವಿದ್ಯಾರ್ಥಿನಿಯನ್ನು ಲಾಡ್ಜಿಂಗ್‌ಗೆ ಕರೆದುಕೊಂಡು ಹೋಗಿ ಸಿಕ್ಕಿ ಹಾಕಿಕೊಂಡಾಗ ಆತನ ವಿರುದ್ಧ ಪ್ರಕರಣ ದಾಖಲಾಗಿದೆ. ನಮ್ಮ ಸಮಾಜ ಕಲ್ಯಾಣ ಸಚಿವರು ಬೆಳಗಾವಿ ಅಧಿವೇಶನದಲ್ಲಿ ನಮ್ಮ ಒತ್ತಾಯದ ಮೇರೆಗೆ ಅಡಿಗೆ ಸಹಾಯಕರನ್ನು ನೇಮಕ ಮಾಡುವಂತಹ ವಿಚಾರದಲ್ಲಿ ಸ್ವಲ್ಪ ತಾಂತ್ರಿಕ ದೋಷವಿದೆಯೆಂದು ಹೇಳಿದ್ದಕ್ಕಾಗಿ, ಅದನ್ನು ಹಿಂಪಡೆದಿದ್ದರು. ದಯಮಾಡಿ, ಇರುವಂತಹ ತಾಂತ್ರಿಕ ದೋಷವನ್ನು ಸರಿಮಾಡಿಕೊಂಡು ಅಡಿಗೆ ಸಹಾಯಕರನ್ನು ನೇಮಕ ಮಾಡಿಕೊಳ್ಳುವಂತಹ ಕೆಲಸ ಮಾಡಬೇಕಾಗುತ್ತದೆ. ಏಕೆಂದರೆ, ಇಂದು ಮ್ಯಾನ್‌ಪವರ್ ಎಜೆನ್ಸಿ ಕರ್ನಾಟಕದಲ್ಲಿ ಒಂದು ಮ್ಯಾಫಿಯಾವಾಗಿದ್ದು, ಹಾಸ್ಟೆಲ್‌ಗಳಲ್ಲಿನ ಎಲ್ಲಾ ಕೆಲಸವನ್ನು ಮ್ಯಾನ್‌ಪವರ್ ಎಜೆನ್ಸಿಯವರು ನಿರ್ವಹಿಸುತ್ತಿದ್ದಾರೆ. ಇವತ್ತಿನ ದಿವಸ ಮ್ಯಾನ್‌ಪವರ್ ಏಜೆನ್ಸಿಯವರು ಎಲ್ಲಾ ಕಡೆಗಳಲ್ಲಿಯೂ ಇದ್ದು, ಅಲ್ಲಿ ಕೆಲಸ ಮಾಡುವವರಿಗೆ ಸರಿಯಾದ ರೀತಿಯಲ್ಲಿ ವೇತನ ಕೊಡುವುದಿಲ್ಲ, ಇ.ಎಸ್.ಐ. ಕಟ್ಟುವುದಿಲ್ಲ, ಪಿ.ಎಫ್. ಮಾಡಿಸುವುದಿಲ್ಲ ಮತ್ತು ಅವರಿಂದ ಹಣವನ್ನು ವಾಪಸ್ಸು ತೆಗೆದುಕೊಳ್ಳುವಂತಹ ಕೆಲಸ ಸಹ ಮಾಡುತ್ತಿವೆ. ಈ ಒಂದು ಪರಿಸ್ಥಿತಿಯಲ್ಲಿ ಒಂದೊಂದು ಹಾಸ್ಟೆಲ್‌ಗಳಲ್ಲಿ ಮೂರ್‍ನಾಲ್ಕು ಜನ ಕೆಲಸದಲ್ಲಿ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇದ್ದರೆ ಅಲ್ಲಿರುವವರು ಕೇವಲ ಇಬ್ಬರು ಅಥವಾ ಒಬ್ಬರು. ಈ ರೀತಿಯ ಪ್ರಸಂಗಗಳು ಇವೆ. ಅಲ್ಲದೇ, ಹಾಸ್ಟೆಲ್‌ಗಳ ವಾರ್ಡನ್‌ಗಳು ಯಾವ ರೀತಿ ಇದ್ದಾರೆಂದರೆ, ಶಿವಮೊಗ್ಗ ಜಿಲ್ಲೆಯಲ್ಲಿ ಒಬ್ಬ ಮಹಿಳಾ ವಾರ್ಡನ್ ಇದ್ದು, ಅವರು ಆ ಹಾಸ್ಟೆಲ್ ಅನ್ನು ಬಿಟ್ಟು ಹೋಗುವಂತಹ ಪರಿಸ್ಥಿತಿಯಲ್ಲಿಯೇ ಇಲ್ಲ. ಸರ್ಕಾರ ಮಹಿಳೆಯರಿಗೆ ಹೆರಿಗೆ ರಜೆಗಾಗಿ 6 ತಿಂಗಳು ರಜೆ ಕೊಡುತ್ತದೆ. ಆದರೆ, ಆ ವಾರ್ಡನ್ ಒಂದೇ ದಿನ ರಜೆಯೊಳಗೆ ಮತ್ತೆ ಕರ್ತವ್ಯಕ್ಕೆ ಹಾಜರಾಗಿದ್ದಾರೆ. ಅವರು ಶಿವಮೊಗ್ಗದಲ್ಲಿ ಕೆಲಸ ಮಾಡುತ್ತಿದ್ದು. ಅಲ್ಲೆಲ್ಲೋ ಹುಬ್ಬಳ್ಳಿ, ಧಾರವಾಡದಲ್ಲಿ ಹೆರಿಗೆ ಆಗಿ ಮಾರನೆಯ ದಿನ ವಾರ್ಡನ್ ಆಗಿ ಕೆಲಸ ಮಾಡುತ್ತಿದ್ದಾರೆ. ಅಂದರೆ, ಬಿಟ್ಟು ಕೊಡುವುದಕ್ಕೆ ತಯಾರಿಲ್ಲ. ವಾರ್ಡನ್‌ಗಳು ಆ ಹಾಸ್ಟೆಲ್‌ಗಳನ್ನು ಅಲ್ಲೇ ಇದ್ದು ಅವರ ಕೆಲಸಗಳನ್ನು ಮಾಡತಕ್ಕಂತಹ ಪರಿಸ್ಥಿತಿ ಇಂದು ಇದೆ. ಈ ಬಗ್ಗೆ ಪ್ರಕರಣ ದಾಖಲಾಗಿದ್ದು, ತನಿಖೆ ಕೂಡ ಆಗುತ್ತಿದೆ. ದಲಿತ ಹಾಗೂ ಬಡ ಮಕ್ಕಳ ಹಾಸ್ಟೆಲ್‌ಗಳಿಗೋಸ್ಕರ, ವಿದ್ಯಾಭ್ಯಾಸಕೋಸ್ಕರ ನಮ್ಮ ಸರ್ಕಾರ ಮಾಡಿದಷ್ಟು ಖರ್ಚು ಯಾರೂ ಸಹ ಮಾಡಿಲ್ಲ. ಆದರೆ, ಅದು ಕ್ರಮಬದ್ಧವಾಗಿ ಆಗಬೇಕಾಗಿದೆ. ಸನ್ಮಾನ್ಯ ಸಮಾಜ ಕಲ್ಯಾಣ ಸಚಿವರು CC Cameraಗಳನ್ನು ಹಾಕಬೇಕೆಂದು ಹೇಳುತ್ತಿದ್ದಾರೆ. ಅದು ಯುದ್ಧೋಪಾದಿಯಲ್ಲಿ ಆಗಬೇಕು ಮತ್ತು ಅದು ಖಂಡಿತವಾಗಿ ಆಗಲೇಬೇಕು. ಅದರಲ್ಲೂ, ಮೊದಲು ಮಹಿಳಾ ಹಾಸ್ಟೆಲ್‌ಗಳಿಗೆ ತಕ್ಷಣವೇ CC Camera ಹಾಕುವುದು ಹಾಗೂ ಇನ್ನಿತರ ಕಲ್ಯಾಣ ಕ್ರಮಗಳನ್ನು ಕೈಗೊಂಡು ಸಮಾಜ ಕಲ್ಯಾಣ ಸಚಿವರು ಬಡ, ದಲಿತ ಮತ್ತು ಹಿಂದುಳಿದ ವರ್ಗಗಳ ಜನರ ಬಗ್ಗೆ ಅವರಿಗಿರುವ ಬದ್ಧತೆಯನ್ನು ತೋರಿಸಬೇಕೆಂದು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ ಮತ್ತು ಮಾತನಾಡುವುದಕ್ಕೆ ಅವಕಾಶ ನೀಡಿದಕ್ಕಾಗಿ ಧನ್ಯವಾದಗಳು.

**ಶ್ರೀ ಬಸನಗೌಡ ಆರ್. ಪಾಟೀಲ್(ಯತ್ನಾಳ್)(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನಮ್ಮ ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು ನಿಯಮ 330 ರಡಿಯಲ್ಲಿ ತಂದಂತಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಹಾಸ್ಟೆಲ್‌ಗಳ ಬಗ್ಗೆ ಬಹಳ ಗಂಭೀರವಾದ ಮತ್ತು ಗಹನವಾದ ಚರ್ಚೆ ಮಾಡುತ್ತಿದ್ದೇವೆ. ನಮ್ಮ ಹಿರಿಯರಾದಂತಹ ಶ್ರೀ ಕೆ.ಬಿ. ಶಾಣಪ್ಪನವರು ಹೇಳಿದಂತೆ, ಇವತ್ತಿನ ದಿವಸ ಹಾಸ್ಟೆಲ್‌ಗಳನ್ನು ನಿರ್ವಹಿಸುವ ಕೆಲಸ ಸರ್ಕಾರದಿಂದ ಆಗುವಂತಹ ಕೆಲಸವಲ್ಲ. ಸೇವಾ ಮನೋಭಾವ ಇರುವಂತಹ ಸಂಸ್ಥೆಗಳಿಂದ ಸೇವೆ ಮಾಡಲಿಕ್ಕೆ ಸಾಧ್ಯ. ಸಮಾಜದಲ್ಲಿ ಸಮಾನತೆ ತರುತ್ತೇವೆಂದು ನಾವು ಒಂದು ಕಡೆ ಹೇಳುತ್ತೇವೆ. ಹೇಗೆ ಸಮಾನತೆ ತರುತ್ತೇವೆ? ಏಕೆಂದರೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಹಾಸ್ಟೆಲ್‌ಗಳು ಬೇರೆ, ಹಿಂದುಳಿದ ವರ್ಗಗಳ ಹಾಸ್ಟೆಲ್‌ಗಳು ಬೇರೆ, ಅಲ್ಪಸಂಖ್ಯಾತರ ಹಾಸ್ಟೆಲ್‌ಗಳು ಬೇರೆ. ಈ ರೀತಿ ಪ್ರತ್ಯೇಕ ಹಾಸ್ಟೆಲ್‌ಗಳಿದ್ದರೆ ಸಮಾನತೆ ಹೇಗೆ ಬರುತ್ತದೆ?

ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಲ್ಲಾ ವರ್ಗದ ಜನ ಒಂದೇ ಕಡೆ ಕೂಡಿ, ಒಂದೇ ಕಡೆ ಊಟ ಮಾಡಿ, ಒಂದೇ ಕಡೆ ಆಟ ಆಡಿ ಬೆಳೆದರೆ ಮಾತ್ರ ಈ ದೇಶದಲ್ಲಿ ಸಮಾನತೆ ತರುವುದಕ್ಕೆ ಸಾಧ್ಯವಾಗುತ್ತದೆ. ಅದನ್ನು ಹೊರತುಪಡಿಸಿ ಕೇವಲ 19ಸಾವಿರ, 20ಸಾವಿರ ಕೋಟಿ ಖರ್ಚು ಮಾಡಿದರೆ ಸಮಾನತೆ ಬರುವುದಿಲ್ಲ. ನಾನು ಬಹಳ ನೊಂದು ಹೇಳುವುದೇನೆಂದರೆ, ಮಾನ್ಯ ಸಭಾಪತಿಗಳೆ, ಇವತ್ತಿನ ದಿವಸ ಆಹಾರದಲ್ಲಿ ಇಂತಹ ದೊಡ್ಡ ಹಗರಣಗಳು ನಡೆಯುತ್ತಿವೆ. ಆ ಬಡ ಮಕ್ಕಳಿಗೆ ಮತ್ತು ದಲಿತ ಮಕ್ಕಳಿಗೆ ಇಂದು ಒಳ್ಳೆಯ ಆಹಾರ ಸಿಗುತ್ತಿಲ್ಲ. ಹಂದಿಗಳು ಓಡಾಡುವಂತಹ ಜಾಗದಲ್ಲಿ ಕೂತು ಅನ್ನ ತಿನ್ನುವಂತಹ ಪರಿಸ್ಥಿತಿ ಇದೆ. ನಾವುಗಳು ನಮ್ಮ ಭಾಷಣದಲ್ಲಿ ದಲಿತರ, ಹಿಂದುಳಿದ ವರ್ಗಗಳ ಮತ್ತು ಬಡ ಮಕ್ಕಳಿಗಾಗಿ 19,500 ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆಂದು ಮತ್ತು ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಅವರ ಕಲ್ಯಾಣಕ್ಕಾಗಿ ಸಾಕಷ್ಟು ಶ್ರಮಿಸಿದ್ದೇವೆಂದು ಮಾತನಾಡುತ್ತೇವೆ. ಆದರೆ, ಅದು ಎಲ್ಲಿಯೂ ಸಹ ಆಗಿಲ್ಲ. ಏಕೆಂದರೆ, ಬಹಳ ಕೆಟ್ಟ ಪರಿಸ್ಥಿತಿ ನಾನು ನೋಡಿದ್ದೇನೆ. ನಮ್ಮದೊಂದು ಅಂತರಾಷ್ಟ್ರೀಯ ವಸತಿ ಶಾಲೆಯಿದೆ. ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದಾಗ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮಕ್ಕಳು ಯಾವುದೇ ವಸತಿ ಶಿಕ್ಷಣ ಶಾಲೆಗಳಲ್ಲಿ ದಾಖಲಾತಿ ಪಡೆದರೆ 50ಸಾವಿರ ರೂಪಾಯಿಗಳ ಅನುದಾನವನ್ನು ಕೊಡುವಂತಹ ಒಂದು ಕಾರ್ಯಕ್ರಮವನ್ನು ಮಾಡಿದರು. ನಮ್ಮ ಶಾಲೆಯಲ್ಲಿ 95ಸಾವಿರ ರೂಪಾಯಿ ಶುಲ್ಕ ಇತ್ತು. ನಾನು ದಲಿತರ ಸಲುವಾಗಿ ಒಂದು ಒಳ್ಳೆಯ ಕೆಲಸ ಮಾಡಬೇಕೆಂದು ಸುಮಾರು 108 ದಲಿತ ಮಕ್ಕಳಿಗೆ 50ಸಾವಿರ ರೂಪಾಯಿ ಕಡಿಮೆ ಮಾಡಿ ದಾಖಲಾತಿ ಕೊಟ್ಟೆ. ಆದರೆ, ದುರಂತವೇನೆಂದರೆ, ಅಲ್ಲಿರುವಂತಹ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು, ಎರಡು ವರ್ಷಗಳ ನಂತರ ಮತ್ತೊಬ್ಬರು ಆ ಹುದ್ದೆಗೆ ಬಂದರು. ಅವರು ಕೂಡ ದಲಿತರೇ. ಆ ಪುಣ್ಯಾತ್ಮ ನಮ್ಮ ಪ್ರಾಂಶುಪಾಲರಿಗೆ ಏನು ಕೇಳಿದನೆಂದರೆ, "50ಸಾವಿರ ಶುಲ್ಕದಲ್ಲಿ ನನಗೆ 20ಸಾವಿರ ರೂಪಾಯಿ ಕೊಟ್ಟರೆ ಮಾತ್ರ ನಿನ್ನ ಶಾಲೆಗೆ ದಾಖಲಾತಿ ಕೊಡುತ್ತೇನೆ." ಎಂದು ಹೇಳಿದನು. ಆತ ಕೂಡ ಕಷ್ಟದಲ್ಲಿ, ದಲಿತ ಸಮುದಾಯದಲ್ಲಿ ಬಂದಂತಹ ಒಬ್ಬ ಅಧಿಕಾರಿ. ಈ ರೀತಿ ಇದ್ದರೆ ದೇಶದಲ್ಲಿ ಹೇಗೆ ದಲಿತ ಮಕ್ಕಳ ಉದ್ಧಾರವಾಗುತ್ತದೆ? ಈಗ ನಮ್ಮಲ್ಲಿ ಕಲಿತಂತಹ ಮಕ್ಕಳು ಲಿಂಗಾಯಿತರು, ಬ್ರಾಹ್ಮಣರ ಜೊತೆಗೆ ದಲಿತ ಮಕ್ಕಳು ಕೂಡಿದರೆ ಒಳ್ಳೆಯದು.  ನಮ್ಮ ಮಾನ್ಯ ಈಶ್ವರಪ್ಪನವರು, ಮಾನ್ಯ ಬಸವರಾಜ ಹೊರಟ್ಟಿಯವರು ನಮ್ಮ ವಸತಿ ಶಾಲೆಯನ್ನು ನೋಡಿದ್ದಾರೆ. ನಮ್ಮದು ಇಡೀ ಉತ್ತರ ಕರ್ನಾಟಕದಲ್ಲಿ ಬಹಳ ಒಳ್ಳೆಯ ಶಿಕ್ಷಣ ಸಂಸ್ಥೆ. ಸರ್ಕಾರದವರು ರಾಜ್ಯಪಾಲರ ವಂದನಾ ನಿರ್ಣಯದಲ್ಲಿ 125 ವಸತಿ ಶಾಲೆಗಳನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿದ್ದಾರೆ. ಆ ರೀತಿ ಮಾಡುವ ಬದಲಾಗಿ ಮಾನ್ಯ ಶಾಣಪ್ಪನವರು ಹೇಳಿದಂತೆ,

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರಾಜ್ಯದಲ್ಲಿ ಅನೇಕ ಒಳ್ಳೆಯ ವಸತಿ ಶಾಲೆಗಳು ಇವೆ. ದಲಿತ ಮಕ್ಕಳ ಸಲುವಾಗಿ ಏನಾದರೂ ಮಾಡಬೇಕು ಎಂಬ ಮನೋಭಾವ ನಿಜವಾಗಿ ನಿಮಗೆ ಇದ್ದರೆ, ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಉದಾಹರಣೆಗೆ, ಒಮ್ಮೆ ಬಿಜಾಪುರದಲ್ಲಿ ಹಾಸ್ಟೆಲ್‌ಗಳಿಗೆ ಆಹಾರ ಪೂರೈಕೆ ಮಾಡುವ ಬಗ್ಗೆ ಒಂದು ಟೆಂಡರ್ ಪ್ರಕ್ರಿಯೆ ನಡೆಯಿತು.. ನಿಮ್ಮ ಕಡೆ ಸೂಪರ್ ಬಜಾರ್ ಇದೆ. ಒಬ್ಬ ಗುತ್ತಿಗೆದಾರ ನನ್ನ ಬಳಿ ಬಂದು, "ಸರ್, 10 ಕೋಟಿ ರೂಪಾಯಿ ಹಣದ ವಹಿವಾಟು ಇರುವವರೆಗೆ ಟೆಂಡರ್ ಅರ್ಜಿ ಹಾಕುವುದಕ್ಕೆ ಬರುತ್ತದೆ. ತಾವು ಅದಕ್ಕೆ ಅರ್ಹರಿದ್ದೀರಿ, ಅರ್ಜಿ ಹಾಕಿ." ಎಂದು ಹೇಳಿದನು. ನಾನು 10 ಸಾವಿರ ರೂಪಾಯಿ ಕೊಟ್ಟು ಒಂದು ಟೆಂಡರ್ ಅರ್ಜಿಯನ್ನು ತರಿಸಿದೆ. ನಂತರ, ಆ ಗುತ್ತಿಗೆದಾರ ಮತ್ತು ಅಧಿಕಾರಿ ನನಗೆ ಏನು ಹೇಳಿ ಕಳುಹಿಸಿದರೆಂದರೆ, "ಸರ್, ನೀವು ಏನು ಆಹಾರ ಪೂರೈಕೆ ಮಾಡುವುದಿಲ್ಲ. ಸುಮ್ಮನೆ ಬಿಲ್ ಕೊಡಬೇಕು, ನೀವು ಅರ್ಧ ತೆಗೆದುಕೊಳ್ಳಬೇಕು, ನಾವು ಅರ್ಧ ತೆಗೆದುಕೊಳ್ಳಬೇಕು." ಇದು ನಡೆದಂತಹ ಪರಿಸ್ಥಿತಿ. ಯಾವ ಬಡ ಮಕ್ಕಳಿಗೂ ಸರ್ಕಾರ ಕೊಡುವಂತಹ ಗೋಡಂಬಿ ಸಿಗುವುದಿಲ್ಲ, Monaco biscuits ಸಿಗುವುದಿಲ್ಲ. ಸರ್ಕಾರ ಕೊಡುವಂತಹ ಪೌಷ್ಠಿಕ ಆಹಾರವನ್ನು ಈ ಅಧಿಕಾರಿಗಳು ಮತ್ತು ಈ ದಲ್ಲಾಳಿಗಳು ತಿಂದು ತೇಗುತ್ತಾರೆ. ದಲಿತ ಮಕ್ಕಳು ಅದೇ ಸ್ಥಿತಿಯಲ್ಲಿ ಅದೇ ಜೀವನ ಮಾಡುವಂತಹ ಸ್ಥಿತಿಯಿದೆ. ಅದಕ್ಕಾಗಿ ದಯವಿಟ್ಟು ಮಾನ್ಯ ಶಾಣಪ್ಪನವರು ಹೇಳಿದಂತೆ, ರಾಜ್ಯದಲ್ಲಿ ಅನೇಕ ಒಳ್ಳೆಯ ಮಠಗಳಿವೆ. ಅದರಲ್ಲಿ ತಾವು ಜಾತಿ ಮಾಡಬೇಡಿ. ಅಹಿಂದ, ಪಹಿಂದ ಎಲ್ಲವನ್ನು ಬಿಡಿ. ಸಮಾಜದಲ್ಲಿ ಶ್ರೀ ಬಸವಣ್ಣನವರು ಮಾಡಿದಂತಹ ಸಾಧನೆಯನ್ನು ಬಹುಶಃ ಈ ಜಗತ್ತಿನಲ್ಲಿ ಯಾವ ಸತ್ಪುರುಷರು ಮಾಡಿರುವುದಕ್ಕೆ ಸಾಧ್ಯವಿಲ್ಲ. ಅಂತಹ ಒಂದು ಸಮಾನತೆಯನ್ನು ಸಾರಿದಂತಹ ಅನೇಕ ಮಠಗಳಿವೆ. ತುಮಕೂರಿನಲ್ಲಿರುವಂತಹ ಶ್ರೀ ಸಿದ್ದಗಂಗಾ ಮಠ ಇದಕ್ಕೆ ಒಂದು ಉದಾಹರಣೆಯಾಗಿದೆ. ಅದಕ್ಕೆ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಹೊಸ ಹಾಸ್ಟೆಲ್‌ಗಳನ್ನು ಕಟ್ಟುವುದರಿಂದ ಯಾವುದೇ ಪ್ರಯೋಜನವಿಲ್ಲ. ಎಲ್ಲೆಲ್ಲಿ ಇಂತಹ ಒಳ್ಳೆಯ ವಸತಿ ಶಾಲೆಗಳು ಇವೆ, ಅಂತಹ ಮಠಗಳಿಗೆ ಸರ್ಕಾರದಿಂದ ನೀಡುವ ಅನುದಾನವನ್ನು ಕೊಟ್ಟರೆ, ನಿಶ್ಚಿತವಾಗಿ ತಾವು ದಲಿತರಿಗೆ ಮಾಡಿದಂತಹ ದೊಡ್ಡ ಉಪಕಾರವಾಗುತ್ತದೆ. ಇದು ಡಾ|| ಬಿ.ಆರ್. ಅಂಬೇಡ್ಕರ್‌ರವರ ಕನಸು ನನಸು ನಿಜವಾಗಿ ಆಗಿ ಸಮಾನತೆ ಬರಬೇಕಾದರೆ, ಸಮಾನತೆ ಬರುವಂತಹ ಶಿಕ್ಷಣ ವಸತಿ ಶಾಲೆಗಳೇ ಮಕ್ಕಳಿಗೆ ಕಲಿಸುವಂತಹ ಕೆಲಸ ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(099) 09-02-2017(05-20)BSD-GR

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಈ ಚರ್ಚೆ ಬಹಳ ಹಿಂದೆ ಒಂದು ಸಾರಿ ಬಂದಿದ್ದು, ನಾನು ಕೇವಲ ಸರ್ಕಾರವನ್ನು, ಮಂತ್ರಿಗಳನ್ನು ಅಥವಾ ರಾಜಕೀಯ ಪಕ್ಷಗಳನ್ನು ದೂರುವುದಿಲ್ಲ. ನಾವೆಲ್ಲರೂ ಅನೇಕ ಕಡೆ ನೋಡಿರುವಂತೆ ಇದೊಂದು ರೀತಿ ನರಕ ಸದೃಶ್ಯವಾದ ವಾತಾವರಣ. ಹಾಗಾಗಿ ಈ ಸಮಸ್ಯೆಯನ್ನು ಪರಿಹಾರ ಮಾಡುವ ಪೂರ್ಣ ಜವಾಬ್ದಾರಿ ಸದನಕ್ಕೆ ಮತ್ತು ಸರ್ಕಾರಕ್ಕೆ ಇದೆ ಎಂದು ನಾನು ಯೋಚನೆ ಮಾಡುತ್ತೇನೆ. ಕಳೆದ ಸಾರಿ ಚರ್ಚೆಯಾದಾಗ ಒಂದು ಸದನ ಸಮಿತಿಯನ್ನು ಮಾಡುವಂತೆ ವಿನಂತಿ ಮಾಡಿದ್ದೆವು. ಈಗ ಮಾನ್ಯ ಹೊರಟ್ಟಿಯವರು ಹಾಗೂ ಮಾನ್ಯ ಶಾಣಪ್ಪನವರು ಸೇರಿದಂತೆ ಎಲ್ಲರೂ ಸರ್ಕಾರದ ಸಮಾಜ ಕಲ್ಯಾಣ ಇಲಾಖೆ ನಡೆಸುವುದು ಕಷ್ಟವಾಗುತ್ತದೆ. ಯಾವುದಾದರೂ ಧಾರ್ಮಿಕ ಸಂಸ್ಥೆಗಳಿಗೆ ನಡೆಸಲು ಕೊಡಬಹುದು ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಆ ರೀತಿ ಕೊಡುವಾಗ ಸಣ್ಣಪುಟ್ಟ ಸಾಧಕ–ಬಾಧಕಗಳು ಇದ್ದೇ ಇರುತ್ತದೆ. ಎಲ್ಲವೂ ಸರಿಯಾಗುತ್ತದೆ ಎಂದು ಹೇಳಲು ಆಗುವುದಿಲ್ಲ. ಆದ್ದರಿಂದ ಇದನ್ನು ಪೂರ್ಣ ಪ್ರಮಾಣದಲ್ಲಿ ಅಧ್ಯಯನ ಮಾಡಿ, ಇದಕ್ಕೆ ಏನು ಮಾಡಬೇಕೆಂದು ಬರುವ ಬಜೆಟ್‌ನಲ್ಲಿ ಚರ್ಚೆ ಮಾಡಿ, ಶಾಶ್ವತವಾದ ಪರಿಹಾರವನ್ನು ಹುಡುಕುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ದಯವಿಟ್ಟು ನಾನು ಸರ್ಕಾರಕ್ಕೆ ವಿನಂತಿಸುವುದೇನೆಂದರೆ, ಅತ್ಯಂತ ಆಸಕ್ತಿ ಹೊಂದಿರುವ ತಂಡವನ್ನು ಕಳುಹಿಸಬೇಕು. ಇಡೀ ರಾಜ್ಯದಲ್ಲಿ ಬಹಳ ಸಮಸ್ಯೆ ಇದೆ. ನಮ್ಮ ಉಡುಪಿ ಜಿಲ್ಲೆಯ ಹಾಸ್ಟೆಲ್‌ಗಳಲ್ಲಿ ಬೇರೆ ಕಡೆ ಇರುವ ಪ್ರಮಾಣದಲ್ಲಿ ಸಮಸ್ಯೆ ಇಲ್ಲ. ಯಾದಗಿರಿ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ ನೋಡಲು ಸಾಧ್ಯವಿಲ್ಲದಂತಹ ಪರಿಸ್ಥಿತಿಯನ್ನು ನಾನು ಕಣ್ಣಾರೆ ಕಂಡಿದ್ದೇನೆ. ಬೆಳಗಾವಿ ಜಿಲ್ಲೆಯ ಒಂದು ಹಾಸ್ಟೆಲ್ ಬಗ್ಗೆ ಪತ್ರಿಕೆಗಳಲ್ಲಿ ಒಂದು ವಿಚಾರ ಬಂತು. ಹೆಣ್ಣು ಮಕ್ಕಳು ಇರುವ ಹಾಸ್ಟೆಲ್‌ನಲ್ಲಿ ಒಂದು ಹುಡುಗಿ ಸ್ನಾನ ಮಾಡುತ್ತಿದ್ದರೆ ಮತ್ತೊಬ್ಬ ಹುಡುಗಿ ಬಾಗಿಲು ಕಾಯಬೇಕು, ಅವಳು ಸ್ನಾನ ಮಾಡಿಕೊಂಡು ಬಂದ ನಂತರ ಈಕೆ ಸ್ನಾನಕ್ಕೆ ಹೋಗಬೇಕು. ಏಕೆಂದರೆ ಆ ಕೊಠಡಿಗೆ ಬಾಗಿಲೇ ಇಲ್ಲ. ಇಂತಹ ಊಹಿಸಲು ಅಸಾಧ್ಯವಾದ ದಾರುಣ ಪರಿಸ್ಥಿತಿ ಇದೆ. ಇದರ ಬಗ್ಗೆ ಆಸಕ್ತಿ ಇರುವ ತಂಡವನ್ನು ರಚನೆ ಮಾಡಿ, ಒಂದೆರಡು ತಿಂಗಳಲ್ಲಿ ಪೂರ್ಣ ಅಧ್ಯಯನ ನಡೆಸಿ, ಸರ್ಕಾರಕ್ಕೆ ಒಂದು ವರದಿ ಕೊಟ್ಟಿ ಪರಿಹಾರವನ್ನು ಇಡೀ ಸದನ ಒಟ್ಟಾಗಿ ರೂಪಿಸಬೇಕೆಂದು ನನ್ನ ಯೋಚನೆಯಾಗಿದೆ.

**ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಒಳ್ಳೆಯ ವಿಚಾರವನ್ನು ಮಾನ್ಯ ಗಣೇಶ್ ಕಾರ್ಣಿಕ್‌ರವರು ನಿಯಮ 330ರಡಿಯಲ್ಲಿ ಪ್ರಸ್ತಾಪಿಸಿದ್ದಾರೆ. ಮಾನ್ಯ ಕೆ.ಬಿ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಶಾಣಪ್ಪನವರು ಪ್ರಸ್ತಾಪಸಿದಂತೆ ನಾನು ಮತ್ತು ಮಾನ್ಯ ವಿ.ಎಸ್. ಉಗ್ರಪ್ಪನವರು ರಾಜ್ಯದ 32 ಜಿಲ್ಲೆಗಳಲ್ಲಿ ಸಭೆ ಮಾಡಿ ಕಂಡಿರುವ ಜ್ವಲಂತ ಉದಾಹರಣೆಗಳ ವಿಚಾರವನ್ನು ಹೇಳಿದ್ದಾರೆ. ನಾನು ಸ್ವತಃ ಕಣ್ಣಾರೆ ಕಂಡ ವಿಚಾರವನ್ನು ಹೇಳಬಯಸುತ್ತೇನೆ. ನಾನು ಲಿಂಗಸುಗೂರಿನಿಂದ ಬೆಂಗಳೂರಿಗೆ ಹೊರಟಾಗ ಸುಮಾರು ಹನ್ನೊಂದೂವರೆ–ಹನ್ನೆರೆಡರ ಸುಮಾರಿಗೆ ಮಸ್ಕಿ–ಬೆಂಗಳೂರು ರಸ್ತೆಯಲ್ಲಿ ಸುಮಾರು 150 ಅಡಿ ಅಂತರದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಹಾಗೂ ಅಲ್ಪಸಂಖ್ಯಾತರ ಎರಡು ಮೊರಾರ್ಜಿ ಹಾಸ್ಟೆಲ್‌ಗಳು ಇವೆ. ನಾನು ಹೋಗುವಾಗ ಹಾಗೆ ನಿಲ್ಲಿಸಿ, ಅಲ್ಲಿನ ಹುಡುಗರಿಗೆ ಇರಲು ಅವಕಾಶವಿರಲಿಲ್ಲ. ನಾನು ಅಲ್ಲಿ ಸ್ವಲ್ಪ ಮುಂದೆ ಹೋಗಿ ನೋಡಿದಾಗ ಅಲ್ಲಿನ ವಾರ್ಡನ್ ಒಬ್ಬ ಹುಡುಗಿ ಮಾತನಾಡುತ್ತಾ ನಿಂತಿದ್ದರು. ನಾನು ವಾರ್ಡನ್‌ನನ್ನು ಕುರಿತು ' ನೀನು ಯಾರು' ಎಂದು ಕೇಳಿದಾಗ ಆತ ' ನಾನು ವಾರ್ಡನ್ ' ಎಂದು ಉತ್ತರ ಕೊಟ್ಟ. ಆಗ ನಾನು ಆತನಿಗೆ ' ಈಗ ಸಮಯ ಹನ್ನೊಂದೂವರೆ ಆಗಿದ್ದು, ಆ ಹುಡುಗಿಯನ್ನು ಏಕೆ ಮಾತನಾಡಿಸಿಕೊಂಡು ನಿಂತಿದ್ದೀಯಾ?' ಎಂದು ಕೇಳಿದೆ. ಆಗ ಆತನು ' ಇಲ್ಲ ಸಾರ್, ಅವರಿಗೆ ಶಾಲೆ ಅವರಿಗೆ ಶಾಲೆ 12 ಗಂಟೆ ಇದ್ದು, ಕಟ್ಟಡ ಇಲ್ಲದೇ ಇರುವುದರಿಂದ ಬೆಳಿಗ್ಗೆ ಒಂದು ಬ್ಯಾಚ್ ಮತ್ತು ಮಧ್ಯಾಹ್ನ ಒಂದು ಬ್ಯಾಚ್ ಇದೆ ' ಎಂದು ಹೇಳಿದ. ಆಗ ನಾನು ' ಮಕ್ಕಳೆಲ್ಲರೂ ಎಲ್ಲಿದ್ದಾರೆ?' ಎಂದು ಕೇಳಿದ್ದಕ್ಕೆ ಆತ ಮಕ್ಕಳಿರುವ ಜಾಗವನ್ನು ತೋರಿಸಿದ. ಆಗ ನಾನು ಒಳಗೆ ಹೋಗಿ ನೋಡಿದಾಗ 92 ಹುಡುಗರು ಒಂದು ಗೋಡೌನ್‌ನಲ್ಲಿ ಇದ್ದು, ಕೆಲವರು ಮಲಗಿದ್ದು, ಕೆಲವರು ಓದುತ್ತಿದ್ದರು. ಈ ಕಡೆ ಸೂಟ್‌ಕೇಸ್ ಎಂದು ಹೇಳುವಂತೆ ನಮ್ಮಲ್ಲಿ ಟ್ರಂಕ್ ಎಂದು ಹೇಳುತ್ತಾರೆ, ಆ ಟ್ರಂಕ್‌ಗಳನ್ನು ಒಂದರ ಪಕ್ಕ ಒಂದು ಇಟ್ಟುಕೊಂಡು ಆ ಹುಡುಗರೆಲ್ಲರೂ ಇದ್ದರು. ಸ್ವತಃ ನಾನು ಅದನ್ನು ಕಣ್ಣಾರೆ ನೋಡಿ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ಶ್ರೀ ಕಾಳೆ ಎಂಬುವವರಿಗೆ ಆಗಲೇ ದೂರವಾಣಿ ಮೂಲಕ ಮಾತನಾಡಿದ್ದೆ ಹಾಗೂ ಸಿ.ಇ.ಓ ಅವರಿಗೂ ಮಾತನಾಡಿ, ಈ ರೀತಿ ಪರಿಸ್ಥಿತಿ ಇದೆ, ಈ ರೀತಿ ಮಾತನಾಡಿಕೊಂಡು ನಿಂತದ್ದನ್ನು ಹೇಳಿ ಗಮನಿಸಬೇಕೆಂದು ಹೇಳಿದೆ. ಅಲ್ಲದೇ 92 ಮಕ್ಕಳನ್ನು ಒಂದು ಗೋಡೌನ್‌ನಲ್ಲಿ ಹಾಕಿದರೆ ಶೋಭೆ ತರುವ ವಿಚಾರವೇ? ಅವರಿಗೆ ಒಂದು ಜಮಖಾನ ಕೊಟ್ಟಿದ್ದು, ದಿಂಬು ಸಹ ಇಲ್ಲ, ಇಂತಹ ಪರಿಸ್ಥಿತಿಯಲ್ಲಿ ಹುಡುಗರನ್ನು ಏಕೆ ಇಡಲಾಗಿದೆ ಎಂದು ಕೇಳಿದೆ. ನಾವೆಲ್ಲ ರಾಜಕೀಯ ಪಕ್ಷಗಳವರು ಈ ದೇಶದಲ್ಲಿ ದಲಿತರಿಗೆ ಒಳ್ಳೆಯ ಅವಕಾಶ ಸಿಗಬೇಕು, ಅವರು ಎಲ್ಲರ ಸಮಾನರಾಗಿ ಬದುಕಬೇಕು, ಅಂಬೇಡ್ಕರ್ ಆಶಯವು ಈಡೇರಬೇಕೆಂದು ಭಾಷಣ ಮಾಡಿ ಅಧಿಕಾರಕ್ಕೆ ಬರುತ್ತೇವೆ, ಆದರೆ ಆ ಪರಿಸ್ಥಿತಿ ನೋಡಿದರೆ ನಿಜವಾಗಿಯೂ ಎದೆಯೊಡೆಯುವ ವಿಚಾರವಾಗಿತ್ತು. ಆಗ ಆತನು ಇದನ್ನು ಸರಿಪಡಿಸುತ್ತೇನೆ ಎಂದು ಹೇಳಿದ. ಅಲ್ಲಿ ಮೂಲಭೂತ ಸೌಕರ್ಯಗಳು ಇಲ್ಲವೆಂದು

ಸರ್ಕಾರಕ್ಕೆ ಬರೆದುಕೊಟ್ಟರೆ let them stop the hostel. ಕಟ್ಟಡ ಮುಕ್ತಾಯವಾದ ನಂತರ ಪ್ರಾರಂಭ ಮಾಡಲಿ. ಅಲ್ಲಿಂದ 32 ದಿನಗಳ ನಂತರ ಪತ್ರಿಕೆಗಳಲ್ಲಿ ಆ ಹುಡುಗಿ ಅದೇ ಮನುಷ್ಯನ ಕಡೆಯಿಂದ ರೇಪ್‌ಗೆ ಒಳಗಾಗಿದ್ದಳು. ಆತನ ಮೇಲೆ ಕ್ರಿಮಿನಲ್ ಕೇಸ್ ಬುಕ್ ಆಗಿದೆ. Now, he is in judicial custody. There is an FIR registered against that Warden. ಇದನ್ನು ಗಮನಕ್ಕೆ ತಂದೆ. ನಾನು ನೋಡಿ ಬಂದಿದ್ದು ಆಗಿದೆ. ನಾನು ಸಮಾಜ ಕಲ್ಯಾಣ ಇಲಾಖಾಧಿಕಾರಿಯ ಹತ್ತಿರ ಮಾತನಾಡಿದ್ದೆ. ಅದೇರೀತಿ ಹೊಸಪೇಟೆಯ ಬಜಾರ್‌ನಲ್ಲಿ ಒಂದು ಹಾಸ್ಟೆಲ್ ಇದ್ದು, 189 ವಿದ್ಯಾರ್ಥಿಗಳು ಇದ್ದು, ಕೇವಲ 2 ಟಾಯ್ಲೆಟ್ ಇವೆ. ಮಾನ್ಯ ಯತ್ನಾಳ್‌ರವರು ಹೇಳಿದಂತೆ ಮಠದಲ್ಲಿ ರೌಂಡ್ ಆಗಿ ಜಾಗ ಬರಲು ಕಂಭಗಳನ್ನು ಹಾಕಿರುವಂತೆ ಅಲ್ಲಿ ಆ ಮಕ್ಕಳು ಮಲಗಿರುವುದನ್ನು ನಾನು ಸ್ವತಃ ನೋಡಿದೆ. ಅಲ್ಲಿನ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಯನ್ನು ಸ್ಥಳಕ್ಕೆ ಕರೆಸಿದ್ದೇನೆ ಮತ್ತು ಬಳ್ಳಾರಿಯ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗೆ ಮಾತನಾಡಿದ್ದೇನೆ. ಅಲ್ಲಿ ಗಂಡು ಮಕ್ಕಳ ಹಾಗೂ ಹೆಣ್ಣು ಮಕ್ಕಳ ಹಾಸ್ಟೆಲ್‌ಗಳು ಇವೆ. ಆ ಮಕ್ಕಳಿಗೆ ಕಜ್ಜಿ ಎಂದು ಹೇಳುವ ರೀತಿ ರೋಗ ಆಗಿದೆ. ಅವರು ಕೈಹಿಡಿದು ತೋರಿಸಿರುವ ಫೋಟೋಗಳು ಪತ್ರಿಕೆಗಳಲ್ಲಿ ಬಂದಿವೆ. ಇದನ್ನು ಗಮನಕ್ಕೆ ತಂದೆನು. ಇಂತಹ ಪರಿಸ್ಥಿತಿಯಲ್ಲಿ ಹಾಸ್ಟೆಲ್‌ಗಳನ್ನು ನಡೆಸಬೇಕೇ? ನಿನ್ನೆ ಘನತೆವೆತ್ತ ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡುವಾಗ ರೂ.19 ಸಾವಿರ ಕೋಟಿಗಳನ್ನು ಕೊಟ್ಟಿರುವ ಬಗ್ಗೆ ನಾನು ಹೇಳಿದ್ದೇನೆ. ಮಾನ್ಯ ಆಂಜನೇಯರವರ ಬಗ್ಗೆ ನನಗೆ ಗೌರವ ಇದೆ. ಅವರ ರಕ್ಷಣೆಗೆ ಬದ್ಧತೆಯಿರುವ ಸರ್ಕಾರವಾಗಿ ಇಷ್ಟು ದೊಡ್ಡ ಮೊತ್ತದ ಹಣ ಇಟ್ಟಿದ್ದೇವೆ ಎಂದೂ ಸಹ ಹೇಳಿದ್ದೇನೆ. ಆದರೆ ಅದನ್ನು ಜಾರಿಗೊಳಿಸುವ ಹಾಗೂ ನಿರ್ವಹಣೆ ಮಾಡುವ ಇಡೀ ತಾಲ್ಲೂಕು ಮತ್ತು ಜಿಲ್ಲಾ ಅಧಿಕಾರಿಗಳು ಬಹಳ ಭ್ರಷ್ಟರಿದ್ದಾರೆ. ಇಂತಹ ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡದೇ, ಅಂತಹ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳದಿದ್ದರೆ whatever the scheme that is sponsored by the Government of this country will go into the dog's mouth. ಯಾವುದೇ ಪರಿಸ್ಥಿತಿಯಲ್ಲಿ ಈ ದೇಶವನ್ನು ಉದ್ಧಾರ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಬಹಳ ನೋವಿನಿಂದ ಹೇಳುವುದಕ್ಕೆ ಬಯಸುತ್ತೇನೆ. ಇದನ್ನು ನಾನು ಸ್ವತಃ ನೋಡಿದ್ದು, ಅಂತಹ ಅಧಿಕಾರಿಗಳ ಮೇಲೆ ಬಹಳ ಕಠಿಣ ಕ್ರಮ ತೆಗೆದುಕೊಳ್ಳಬೇಕು. ಯೋಜನೆಗಳು ಸರಿಯಾದ ರೀತಿ ಜಾರಿಯಾಗಬೇಕು ಮತ್ತು ನಿರ್ವಹಣೆಯಾಗಬೇಕು. Those who are indulging in corruption activity should be brought under the Criminal Law. Otherwise, we don't have answer to the people and

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

the society. ಯಾವುದೇ ಪಕ್ಷದವರಾದರೂ ಸಹ ಸಮಾಜದ ಮುಂದೆ ಉತ್ತರ ಹೇಳಲು ಆಗುವುದಿಲ್ಲ. It is my challenge to every political party. ಧನ್ಯವಾದಗಳು.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಸಮಾಜ ಕಲ್ಯಾಣ ಇಲಾಖೆಯಿಂದ ನಡೆಸುವ ಬಹುತೇಕ ಬಾಲಕ–ಬಾಲಕಿಯರ ವಸತಿ ನಿಲಯಗಳ ಸಮಸ್ಯೆಗಳ ಬಗ್ಗೆ ಪ್ರಸ್ತಾಪವಾಗುತ್ತಿದ್ದು, ಸಾಮಾನ್ಯವಾಗಿ ನಮ್ಮ ಜಿಲ್ಲೆಯ ವಿಚಾರವಾಗಿ ಹೇಳುವುದಾದರೆ ನಮ್ಮಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿರುವ ಪದವಿ ಪೂರ್ವ ಹಾಸ್ಟೆಲ್‌ಗಳು ಮುಚ್ಚಿ ತಾಲ್ಲೂಕು ಕೇಂದ್ರಗಳತ್ತ ಹೋಗುತ್ತಿವೆ. ಬಹುಶಃ ಇದರರ್ಥ ಏನೆಂದರೆ ಗ್ರಾಮಾಂತರ ಪ್ರದೇಶಗಳಲ್ಲಿ ಹಾಸ್ಟೆಲ್ ನಡೆಸಲು ಬೇಕಾದ ವಾರ್ಡನ್ ಅಥವಾ ಅಡುಗೆಯವರ ಸಮಸ್ಯೆ ಇದ್ದು, ಬಹುಶಃ ಅವರಿಗೆ ಪಟ್ಟಣಗಳಲ್ಲಿಯೇ ಇರುವುದು ಸೂಕ್ತ ಎನ್ನುವ ಭಾವನೆಯ ಹಿನ್ನೆಲೆಯಲ್ಲಿ ಆಗುತ್ತಿದೆ. ಬಹುಶಃ ನಮ್ಮಲ್ಲೇ ಪರಿಸರದಲ್ಲಿರುವ ಎಷ್ಟೋ ಹಾಸ್ಟೆಲ್‌ಗಳು ಮುಚ್ಚಿವೆ. ಲಕ್ಷಾಂತರ ರೂಪಾಯಿಗಳ ವೆಚ್ಚದಲ್ಲಿ ಮಾಡಿರುವ ಹಾಸ್ಟೆಲ್‌ಗಳು ಯಾವುದೇ ಉಪಯೋಗಕ್ಕೆ ಬಾರದ ರೀತಿಯಲ್ಲಿ ಇರುವುದನ್ನು ಕಾಣುತ್ತಿದ್ದೇವೆ. ಅದೇ ರೀತಿ ಒಂದೇ ಕಟ್ಟಡದಲ್ಲಿ ಮೇಲೆ ಹುಡುಗರ ಹಾಸ್ಟೆಲ್ ಮತ್ತು ಕೆಳಗೆ ಹುಡುಗಿಯರ ಹಾಸ್ಟೆಲ್ ಇದ್ದು, ಈ ಕಡೆ ಆಶ್ರಮ ಶಾಲೆ ಇರುವುದನ್ನು ನೋಡಿದ್ದೇವೆ. ಇದು ಮಾನ್ಯ ಶ್ರೀನಿವಾಸ ಪೂಜಾರಿಯವರಿಗೆ ಗೊತ್ತಿದೆ. ಬಹುಶಃ ಒಂದು ಹಾಸ್ಟೆಲ್‌ನ ಸನಿಹದಲ್ಲಿ ರಾತ್ರಿ ಯಕ್ಷಗಾನ ನಡೆಯುವಾಗ ಪ್ರತಿಭಟನೆಗಳು ಬಂತು. ಹಾಸ್ಟೆಲ್‌ಗಳ ಪಕ್ಕದಲ್ಲಿ ರಾತ್ರಿ ಸಮಯದಲ್ಲಿ ಯಕ್ಷಗಾನ ಮಾಡುವುದು ಸರಿಯಲ್ಲ ಎಂಬ ಒಂದು ತೀರ್ಮಾನ ಬಂತು. ಯಕ್ಷಗಾನ ಮಾಡಿ ರಾತ್ರಿಯಿಡಿ ಚಂಡೆ ಹೊಡೆಯುವುದರಿಂದ ಮಕ್ಕಳಿಗೆ ಖುಷಿ ಆಗಬಹುದು. ಆದರೆ ಆ ಪರಿಸರದಲ್ಲಿ ಮಾಡುವುದು ಸೂಕ್ತವಲ್ಲ. ಏಕೆಂದರೆ ಮಹಿಳಾ ಹಾಸ್ಟೆಲ್ ಮತ್ತು ಆಶ್ರಮ ಶಾಲೆ ಎಲ್ಲವೂ ಇರುವುದರಿಂದ ಯಕ್ಷಗಾನ ಮಾಡುವುದು ಬೇಡ ಎಂದಾಯಿತು. ಆದರೆ ಇದಕ್ಕೆ ಯಕ್ಷಗಾನದವರ ವಿರೋಧಗಳು ವ್ಯಕ್ತವಾದವು. ಗಂಡು ಕಲೆ ಯಕ್ಷಗಾನಕ್ಕೆ ಅವಕಾಶ ಕೊಡದೇ ಇರುವುದು ಸರಿಯಲ್ಲ ಎನ್ನುವ ಪ್ರತಿಭಟನೆಗಳು ನಡೆದವು. ಜಿಲ್ಲಾಧಿಕಾರಿಗಳು ಪುನಃ ಅನುಮತಿಯನ್ನು ಕೊಟ್ಟರು. ಬಹುಶಃ ಆ ಪ್ರದೇಶವು 'Silent Zone'ಆಗಿದ್ದು, ಶಿಕ್ಷಣ ಸಂಸ್ಥೆಗಳು, ಆಸ್ಪತ್ರೆಗಳು ಇರುವ ಪ್ರದೇಶಗಳಲ್ಲಿ ರಾತ್ರಿ ಅಥವಾ ಯಾವುದೇ ಸಂದರ್ಭದಲ್ಲಿ ಯಕ್ಷಗಾನ ಅಥವಾ ಯಾವುದೇ ಕಾರ್ಯಕ್ರಮ ಮಾಡಿಕೊಂಡು ಮೈಕ್ ಬಳಸುವಂತಿಲ್ಲ. ಆದರೆ ಅಲ್ಲಿಯೂ ಪರವಾನಗಿ ಕೊಟ್ಟಿರುವುದನ್ನು ಕಾಣುತ್ತೇವೆ. ಇದರರ್ಥ ಏನೆಂದರೆ ಆ ವರ್ಗದ ಜನರಿಗೆ ಏನು ಅನುಕೂಲವಾಗಬೇಕಾಗಿದೆಯೋ, ಅದಕ್ಕೆ ಪೂರಕವಾದ ತೀರ್ಮಾನ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತೆಗೆದುಕೊಳ್ಳಬೇಕಾಗಿತ್ತು. ಆದರೆ ಬಹುಶಃ ಪ್ರತಿಭಟನೆಯಂತಹವುಗಳಿಗೆ ಹೆದರಿಕೊಂಡು ಈ ಪರಿಸ್ಥಿತಿಯನ್ನು ಕಾಣುತ್ತಿದ್ದೇವೆ.

ಇನ್ನು ಮೊರಾರ್ಜಿ ದೇಸಾಯಿ ಹಾಸ್ಟೆಲ್‌ಗಳು ಇನ್ನೂ ಬಾಡಿಗೆ ಕಟ್ಟಡದಲ್ಲಿ ನಡೆಸುತ್ತಿರುವುದನ್ನು ಕಾಣುತ್ತಿದ್ದೇವೆ. ಜಾಗ, ಮೂಲಭೂತ ವ್ಯವಸ್ಥೆ ಎಲ್ಲವೂ ಲಭ್ಯವಿದ್ದರೂ ಕಟ್ಟಡವನ್ನು ಕಟ್ಟುವ ವ್ಯವಸ್ಥೆಯಾಗಿಲ್ಲ. ಬಹುಶಃ ಕುಂದಾಪುರದ ಹಾಸ್ಟೆಲ್ ಬಗ್ಗೆ ಬಹಳಷ್ಟು ವಿಚಾರಗಳನ್ನು ಮಾನ್ಯ ಸಚಿವರ ಬಳಿ ಪ್ರಸ್ತಾಪಿಸಿದ್ದು, ಬರುವ ವರ್ಷ ಅದನ್ನು ಮಾಡಿಸಿಕೊಡಬಹುದು. ಆದರೆ ಮೂಲಭೂತ ವ್ಯವಸ್ಥೆಗಳು ಇದ್ದರೂ ಕಟ್ಟಡವನ್ನು ಕಟ್ಟದೇ ಬಾಡಿಗೆ ಕಟ್ಟಡದಲ್ಲಿ ಇರುವ ವಾತಾವರಣ ಸರಿಯಲ್ಲ. ಬಹುಶಃ ಅದನ್ನು ಆದ್ಯತೆ ಮೇಲೆ ಪರಿಗಣಿಸಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

(100) ವೈಎಲ್-ಎಂಡಿ/09.02.2017/5.30

**ಶ್ರೀ ಬಿ.ಜೆ.ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೆ, ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು ಬಾಲಕಿಯರ ಹಾಸ್ಟೆಲ್ ಬಗ್ಗೆ ಮಾತನಾಡಿದ್ದಾರೆ. ನಾನು ಸಹ ಹಿಂದುಳಿದ ವರ್ಗದ ಅಧ್ಯಕ್ಷನಾದ ಮೇಲೆ ಕೆಲವೊಂದು ಅಂಕಿಅಂಶಗಳನ್ನು ಪಡೆದುಕೊಂಡಿದ್ದೇನೆ. ನಾನು ಸಹ ಪ್ರಸ್ತಾಪ ಮಾಡಬೇಕೆಂದು ಇದ್ದೆ. ಹಾಸ್ಟೆಲ್ ವಿಷಯವೇ ಕೈಗೆತ್ತಿಕೊಂಡಿರುವುದರಿಂದ ಜೊತೆಗೆ ಮಂತ್ರಿಗಳು ಇರುವುದರಿಂದ ನಾನು ಈಗಲೇ ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ. ಹಿಂದುಳಿದ ವರ್ಗಕ್ಕೆ ಸರ್ಕಾರದಿಂದ ಬದ್ಧತೆ ಎನ್ನುವಂತಹದು ಎಷ್ಟರ ಮಟ್ಟಿಗೆ . . .

**ಉಪಸಭಾಪತಿಯವರು:-** ಮಾನ್ಯ ಬಿ.ಜೆ.ಪುಟ್ಟಸ್ವಾಮಿಯವರೆ, ಸುದೀರ್ಘವಾಗಿ ಹೋಗುವುದು ಬೇಡ. ಸಮಯದ ಅಭಾವ ಕಡಿಮೆ ಇರುವುದರಿಂದ ನೀವು ಮತ್ತೆ ವಿವರವಾಗಿ ಹೇಳುವುದಕ್ಕೆ ಹೋಗಬೇಡಿ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಮಾನ್ಯ ಸಭಾಪತಿಯವರೆ, ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಇದರ ಬಗ್ಗೆ ಎಷ್ಟು ಬೇಕೋ ಅಷ್ಟನೇ ಮಾತನಾಡುತ್ತೇನೆ. ಬೇರೆ ಮಾತನಾಡಬೇಕಾದರೆ ಇದಕ್ಕಾಗಿ ಮತ್ತೊಂದು ದಿವಸ ಸಮಯ ವ್ಯರ್ಥವಾಗುತ್ತದೆ ಎನ್ನುವ ದೃಷ್ಟಿಯಿಂದ ಮಾತನಾಡುತ್ತಿದ್ದೇನೆ. ಅದಕೋಸ್ಕರ ನಾನು ಇಡೀ ಕರ್ನಾಟಕ ರಾಜ್ಯದಲ್ಲಿ 30 ಜಿಲ್ಲೆಗಳಲ್ಲಿಯೂ ಸಹ ಅಂಕಿಅಂಶಗಳನ್ನು ಪಡೆದುಕೊಂಡಿದ್ದೇನೆ. ಮಾನ್ಯ ಬೋಸ್‌ರಾಜುರವರು ಈಗ ಇಲ್ಲಿಲ್ಲ. ಗುಲ್ಬರ್ಗಾದ ಒಂದು ಜಿಲ್ಲೆಗೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಂಬಂಧಿಸಿದಂತೆ proof ಕೊಡಬೇಕೆಂದು ಯಾವ ಪರಿಸ್ಥಿತಿ ಇದೆ ಎಂದು ಭಾವಚಿತ್ರಗಳ ಸಮೇತ ಸಂಗ್ರಹಿಸಿದ್ದೇನೆ. ಅಲ್ಲಿ ಯಾವ ರೀತಿಯ ಒಂದು ದುಸ್ಥಿತಿ ಇದೆ ಎಂದು ನೋಡಿದರೆ 1509 ಹಿಂದುಳಿದ ವರ್ಗಗಳ ಹಾಸ್ಟೆಲ್‌ಗಳು ಇದ್ದರೆ, 1,04,000 ವಿದ್ಯಾರ್ಥಿಗಳು ಹಾಸ್ಟೆಲ್‌ಗಳಲ್ಲಿ ಓದುತ್ತಿದ್ದಾರೆ. ಅದರಲ್ಲಿಯೂ 578 ಹಾಸ್ಟೆಲ್‌ಗಳಿಗೆ ಕಟ್ಟಡಗಳ ವ್ಯವಸ್ಥೆಯೇ ಇಲ್ಲದಂತಾಗಿದೆ. ಬಾಡಿಗೆ ಕಟ್ಟಡಗಳಲ್ಲಿ shed ತರಹ ಅಥವಾ ಎಸಿ ಸಿಟಿನಲ್ಲಿ ಹಂದಿಗಿಂತಲೂ ಕಡೆಯದಾಗಿ ವಾಸ ಮಾಡತಕ್ಕಂಥಹ ಪರಿಸ್ಥಿತಿ ಇದೆ. ಆದರೆ ಬಾಡಿಗೆಯನ್ನು ಕೊಡುತ್ತಿದ್ದಾರೆ ಆದರೂ ಅಲ್ಲಿ ಸರಿಯಾದ ಕಟ್ಟಡಗಳು ಇಲ್ಲ. Dormitory ಗಳಲ್ಲಿ ಇರುವಂತೆ ಇದ್ದಾರೆ. ಮಾನ್ಯ ಶರಣಪ್ಪ ಮಟ್ಟೂರ್‌ನವರು ಹೇಳಿದ ಹಾಗೆ 436 ಹಾಸ್ಟೆಲ್‌ಗಳಲ್ಲಿ ಒಂದೇ ಹಾಲಿನಲ್ಲಿ 81 ಜನಕ್ಕಿಂತಲೂ ಹೆಚ್ಚಿಗೆ ಸರಾಸರಿ 81 ಜನಗಳನ್ನು ಕುರಿಗಳ ರೂಪದಲ್ಲಿ ಕೂಡಿ ಹಾಕಿದ್ದಾರೆ. 239 ಹಾಸ್ಟೆಲ್‌ಗಳಿಗೆ ವಾರ್ಡನ್‌ಗಳು ಇಲ್ಲ. ಹಾಗೂ 300 ಹಾಸ್ಟೆಲ್‌ಗಳಲ್ಲಿ ಶೌಚಾಲಯವು ಇಲ್ಲವೆಂದರೆ ವಿದ್ಯಾರ್ಥಿಗಳು ಎಲ್ಲಿ ಹೋಗಬೇಕು? ಹೆಣ್ಣು ಮಕ್ಕಳು ಇರತಕ್ಕಂಥಹ ಹಾಸ್ಟೆಲ್‌ಗಳಲ್ಲಿ ಶೌಚಾಲಯಗಳು ಇಲ್ಲವೆಂದರೆ ಆಶ್ಚರ್ಯವಾಗುತ್ತದೆ ಹಾಗೂ ಹಿಂದುಳಿದ ವರ್ಗಗಳಿಗೂ ಸಹ ಶೌಚಾಲಯಗಳು ಇಲ್ಲ. 540 ಹಾಸ್ಟೆಲ್‌ಗಳಲ್ಲಿ ಕೊಳಚೆ ತುಂಬಿದೆ. ಮೊನ್ನೆ ಟಿ.ವಿ. ಯಲ್ಲಿ ತೋರಿಸುತ್ತಿರುವುದನ್ನು ಮಂತ್ರಿಗಳು ನೋಡಿದ್ದರೋ ಇಲ್ಲವೋ ಗೊತ್ತಿಲ್ಲ. ನಿಮ್ಮ ಅಧಿಕಾರಿಗಳಾದರೂ ಅದನ್ನು ನೋಡಿ ನಿಮ್ಮ ಗಮನಕ್ಕೆ ತರಬೇಕು. ಯಾವ ರೀತಿ ನಾಯಿಗಳು, ಹೆಗಣಗಳು, ಇಲಿಗಳು ಮತ್ತು ಬೇರೆ ಬೇರೆ ರೀತಿಯ ಪ್ರಾಣಿಗಳು ಹಾಸ್ಟೆಲ್‌ನ ಅಡುಗೆ ಮನೆಯಲ್ಲಿ ವಾಸ ಮಾಡತಕ್ಕಂಥದ್ದು ಯಾವ ರೀತಿ ಇತ್ತು ಎನ್ನುವಂಥದ್ದನ್ನು ಟಿ.ವಿ. ಯಲ್ಲಿ ತೋರಿಸುತ್ತಿದ್ದರು. ಇಂತಹ 540 ಹಾಸ್ಟೆಲ್‌ಗಳಿವೆ. ಅಂದರೆ more than 50 percent ಅಲ್ಲಿ ಅಡುಗೆ ಮಾಡುವುದಕ್ಕೆ ಯೋಗ್ಯವಲ್ಲದ ಹಾಸ್ಟೆಲ್‌ಗಳಿವೆ. ಸರಿಯಾದ ಉಗ್ರಾಣಗಳಿಲ್ಲ. 276 ಹಾಸ್ಟೆಲ್‌ಗಳಲ್ಲಿ ಸ್ನಾನಗೃಹಗಳಿಲ್ಲ. ಸ್ನಾನಗೃಹವೂ ಇಲ್ಲದೇ ಇದ್ದರೆ ಅವರು ಸ್ನಾನವನ್ನು ಎಲ್ಲಿ ಮಾಡಬೇಕು? ಹೊರಗಡೆ ಒಂದು ಬಕೆಟ್ ನೀರನ್ನು ಇಟ್ಟುಕೊಂಡು ಬೀದಿಯಲ್ಲಿ ಸ್ನಾನ ಮಾಡುತ್ತಿರುವುದನ್ನು ನಾವು ನೋಡಿದ್ದೇವೆ. 754 ಹಾಸ್ಟೆಲ್‌ಗಳಲ್ಲಿ ಬಿಸಿ ನೀರಿನ ವ್ಯವಸ್ಥೆಗಳನ್ನು ಮಾಡಿಲ್ಲ. 413 ಹಾಸ್ಟೆಲ್‌ಗಳಲ್ಲಿ ಸರಿಯಾದ ಕೊಠಡಿಗಳು ಇಲ್ಲ.

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೆ, ಹಾಸ್ಟೆಲ್‌ಗಳಲ್ಲಿ ಏನು ಸುಧಾರಣೆ ಮಾಡಬೇಕೆಂಬುದರ ಬಗ್ಗೆ ಮಾತನಾಡುವುದಕ್ಕೆ ಹೇಳಿ.

ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ತಿದ್ದುಪಡಿಯಾಗದ ಪ್ರತಿ

**ಶ್ರೀ ಬಿ.ಜೆ.ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೆ, ಇವತ್ತಿನ ಪರಿಸ್ಥಿತಿ ಏನಿದೆ ಎಂದು ಹೇಳಬೇಕಲ್ಲವೇ? ಪರಿಸ್ಥಿತಿ ಬಗ್ಗೆ ಹೇಳಿದರೆ ತಾನೇ ಸುಧಾರಣೆ ಮಾಡುವುದಕ್ಕೆ ಬರುವುದು. 1037 ಹಾಸ್ಟೆಲ್‌ಗಳಿಗೆ ಕಾವಲುಗಾರರು ಇಲ್ಲ. ಇನ್ನು ಎಷ್ಟರ ಮಟ್ಟಿಗೆ ಹುಡುಗರನ್ನು ನೋಡಿಕೊಳ್ಳುತ್ತಾರೆ?

**ಉಪ ಸಭಾಪತಿಯವರು:–** ಮಾನ್ಯ ಬಿ.ಜೆ.ಪುಟ್ಟಸ್ವಾಮಿಯವರೆ, ಈಗಾಗಲೇ ಗಣೇಶ್ ಕಾರ್ಣಿಕ್‌ರವರು ಎಲ್ಲವನ್ನು ನೋಡಿ ಮಾತನಾಡಿದ್ದಾರೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೆ, ಆಯ್ತು ಮುಗಿಸುತ್ತೇನೆ. ಎಲ್ಲರೂ ಮಾತನಾಡಿ ನಾನೊಬ್ಬ ಮಾತನಾಡುವುದಕ್ಕೆ ಹೋದರೆ ಈ ರೀತಿ ಮಾತನಾಡುತ್ತೀರಿ. ನಾನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಬಗ್ಗೆ ಪೂರ್ತಿ ಮಾತನಾಡುತ್ತಿರುವುದು. ಬೇರೆ ಸಮಯದಲ್ಲಿ ಮಾತನಾಡುವುದಕ್ಕಾಗುವುದಿಲ್ಲವೆಂದು ನಾನು ಇದನ್ನು ತೆಗೆದುಕೊಂಡಿದ್ದೇನೆ.

**ಉಪ ಸಭಾಪತಿಯವರು:–** ಹಾಗೆ ಅಲ್ಲ. ಈಗಾಗಲೇ ಗಣೇಶ್ ಕಾರ್ಣಿಕ್‌ರವರು ಇದರ ಬಗ್ಗೆ ಸಂಪೂರ್ಣವಾಗಿ ಹೇಳಿದ್ದಾರೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೆ, ಅವರು ಬಾಲಕಿಯರ ಹಾಸ್ಟೆಲ್ ಬಗ್ಗೆ ಹೇಳಿದ್ದಾರೆ. ನಾನು ಹಿಂದುಳಿದ ವರ್ಗದ ಅಧ್ಯಕ್ಷನಾಗಿ ಇಡೀ ಕರ್ನಾಟಕದ ಸಮಸ್ಯೆಯನ್ನು ಹೇಳುತ್ತಿದ್ದೇನೆ.

**ಉಪ ಸಭಾಪತಿಯವರು:–** ಹಿಂದುಳಿದ ವರ್ಗಗಳ ಹಾಸ್ಟೆಲ್ ಸಮಸ್ಯೆಯನ್ನು ಸೇರಿಸಿಯೇ ಗಣೇಶ್ ಕಾರ್ಣಿಕ್‌ರವರು ಮಾತನಾಡಿದ್ದಾರೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೆ, ಇಲ್ಲ ಅವರು 1000 ಹಾಸ್ಟೆಲ್ ಸಮಸ್ಯೆ ಬಗ್ಗೆ ಹೇಳಿಯೇ ಇಲ್ಲ. ಅವರನ್ನೇ ಕೇಳಿ. ಕೇವಲ ಬಾಲಕಿಯರ ಹಾಸ್ಟೆಲ್ ಬಗ್ಗೆ ಹೇಳಿದ್ದಾರೆ. ಆದ್ದರಿಂದ ನಾನು ಹೇಳುವುದೇನೆಂದರೆ ಹಾಸ್ಟೆಲ್‌ಗಳ ಪರಿಸ್ಥಿತಿ ಇವತ್ತು ದುಸ್ಥಿತಿಯಲ್ಲಿದೆ.

**ಶ್ರೀ ಬಸನಗೌಡ ಆರ್.ಪಾಟೀಲ್ (ಯತ್ನಾಳ್):–** ಮಾನ್ಯ ಸಭಾಪತಿಯವರೆ, ಅವರು ಹಿಂದುಳಿದ ವರ್ಗಗಳ ಅಧ್ಯಕ್ಷರಾಗಿ ಮೇಲಿಂದ ಮೇಲೆ ಏಕೆ ಮಾತನಾಡುತ್ತಿದ್ದಾರೆಂದರೆ ಮಾನ್ಯ ಕೆ.ಎಸ್.ಈಶ್ವರಪ್ಪನವರಿಗೂ ಕೇಳಿಸಬೇಕೆಂದು ಹೇಳುತ್ತಿದ್ದಾರೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಜೆ.ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೆ, ಅವರು ಕೇಳಲಿ ಎಂದು ಅಲ್ಲ. ನಾನು ಮಾಡಿರತಕ್ಕಂತಹ ಕೆಲಸದ ಬಗ್ಗೆ ಹೇಳುತ್ತಿದ್ದೇನೆ. ನಾನು ಅಧ್ಯಕ್ಷನಾದ ಮೇಲೆ ಸರ್ವೇ ಮಾಡಿಸಿದ್ದೇನೆ. ವರದಿಯನ್ನು ಸಲ್ಲಿಸಬೇಕೆಂದು ಇದ್ದೇನೆ. ಅದಕ್ಕಾಗಿ ನಾನು ನಿಮ್ಮ ಗಮನಕ್ಕೆ ತರುವುದೆನೆಂದರೆ ಈ ಹಾಸ್ಟೆಲ್‌ಗಳು ಅತ್ಯಂತ ಶೋಚನೀಯ ಸ್ಥಿತಿಯಲ್ಲಿದೆ. ನೀವು ಕೋಟ್ಯಾಂತರ ರೂಪಾಯಿ ಖರ್ಚು ಮಾಡುತ್ತಿದ್ದೇವೆಂದು ಹೇಳುತ್ತೀರಿ. ಆದರೆ ನೀವು ಖರ್ಚು ಮಾಡತಕ್ಕಂಥ ಹಣವು ಆ ಮಕ್ಕಳಿಗೆ ತಲುಪುವುದಕ್ಕೆ ವ್ಯವಸ್ಥೆ ಇರಬೇಕಲ್ಲವೇ? ಆ ಅವ್ಯವಸ್ಥೆಯನ್ನು ಸರಿ ಮಾಡಿಸದೇ ಸರ್ಕಾರವು ಅಧಿಕಾರಿಗಳಿಗೆ ಹಣವನ್ನು ಕೊಟ್ಟರೆ ಏನು ಪ್ರಯೋಜನಾ? ನಾವೆಲ್ಲರೂ ಹಿಂದುಳಿದ ವರ್ಗಗಳಿಗೆ, ಅಲ್ಪಸಂಖ್ಯಾತರಿಗೆ, ಪರಿಶಿಷ್ಟ ಜಾತಿಯವರಿಗೆ ಅತ್ಯಂತ ಸೌಲಭ್ಯಗಳನ್ನು ಕೊಡುತ್ತೇವೆಂದು ಹೇಳತಕ್ಕಂಥ ಸಂದರ್ಭದಲ್ಲಿ ಈ ರೀತಿಯ ಹಾಸ್ಟೆಲ್‌ಗಳನ್ನು ನಡೆಸುವುದು ಸರಿಯೇ? ಆದ್ದರಿಂದ ಶ್ರೀ ಕೆ.ಬಿ.ಶಾಣಪ್ಪನವರು ಒಳ್ಳೆಯ ಸಲಹೆಯನ್ನು ಕೊಟ್ಟರು. ಇದನ್ನು privatize ಮಾಡಿ. ಇಲ್ಲವೆಂದರೆ ಯಾರು ಖಾಸಗಿಯವರು ಹಾಸ್ಟೆಲ್‌ಗಳನ್ನು ನಡೆಸುತ್ತಾರೆ ಅವರಿಗೆ ಕೊಡಿ, ಅವರಾದರೂ ನಡೆಸಲಿ. ಅದನ್ನು ಬಿಟ್ಟು ಈ ರೀತಿ ಮಕ್ಕಳನ್ನು ಹಾಸ್ಟೆಲ್‌ಗಳಿಗೆ ಸೇರಿಸಿ ಹಂದಿಗಳ ರೀತಿ ಕೂಡಾಕುವುದರಿಂದ ಅವರ ಆರೋಗ್ಯದ ಜೊತೆಗೆ ಹಾಳಾಗುತ್ತದೆ. ವಿದ್ಯಾಭ್ಯಾಸವು ಹಾಳಾಗುವುದು ಸರಿಯಲ್ಲವೆನ್ನತಕ್ಕಂಥ ಮಾತನ್ನು ಹೇಳುತ್ತಿದ್ದೇನೆ.

**ಶ್ರೀ ರಾಮಪ್ಪ ತಿಮ್ಮಾಪೂರ(ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೆ, ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು ಹೇಳುವ ರೀತಿಯಲ್ಲಿ ಹಾಸ್ಟೆಲ್‌ಗಳು ಇದ್ದರೆ ಹಾಗೆಯೇ ಅವರು ಯಾವ ಸರ್ವೇ ಮೂಲಕ ಹಾಸ್ಟೆಲ್‌ಗಳ ಪರಿಸ್ಥಿತಿಯನ್ನು ಮಾಡಿಸಿದ್ದಾರೆಯೋ ಅಥವಾ ತಾವೇ ಸ್ವತಃ ಭೇಟಿ ಮಾಡಿದ್ದಾರೆಯೋ ಎನ್ನುವಂತಹ ವಿಚಾರ ಗೊತ್ತಿಲ್ಲ. ಅವರು ಹೇಳುವ ಸ್ಥಿತಿಯಲ್ಲಿ ಹಾಸ್ಟೆಲ್‌ಗಳು ಇದ್ದರೆ ಬಹಳ ದುರದೃಷ್ಟಕರ ಎನ್ನುವಂತಹ ಭಾವನೆ ನನ್ನದು. ನಾನು ಹೇಳುವುದೇನೆಂದರೆ, ಹಾಸ್ಟೆಲ್‌ನಲ್ಲಿರತಕ್ಕಂಥಹ ಹೆಣ್ಣು ಮಕ್ಕಳಿಗೆ ಹಾಗೂ ಹಾಸ್ಟೆಲ್‌ನಿಂದ ಹೊರಗಡೆ ಇರತಕ್ಕಂಥಹ ಹೆಣ್ಣುಮಕ್ಕಳಿಗೆ ಏನು ವಿದ್ಯಾರ್ಥಿ ವೇತನವನ್ನು ಕೊಡುತ್ತಾರೆ. ಅದೇ ರೀತಿ ಹಾಸ್ಟೆಲ್‌ಗೆ ಎಷ್ಟು ಹಣವು ಕೊಡುತ್ತಾರೆಯೋ ಅದನ್ನು ವಿದ್ಯಾರ್ಥಿ ವೇತನ ರೂಪದಲ್ಲಿ ಕೊಟ್ಟರೆ ಇನ್ನು ಅನುಕೂಲವಾಗುತ್ತದೆ. ಹಾಸ್ಟೆಲ್‌ಗಳಲ್ಲಿಯೇ ಇರಬೇಕೆನ್ನುವಂತಹ ವ್ಯವಸ್ಥೆ ಏನೂ ಇಲ್ಲ. ನಾನು ಸಹ 8ನೇ ತರಗತಿಯಿಂದ ಪಿಯುಸಿ ವರೆಗೂ ಹಾಸ್ಟೆಲ್‌ನಲ್ಲಿಯೇ ವಿದ್ಯಾಭ್ಯಾಸ ಮಾಡಿಕೊಂಡು ಬಂದಿದ್ದೇನೆ. ಅಲ್ಲಿ ಒಬ್ಬ ವಾರ್ಡನ್ ಕೆಟ್ಟವನು ಬಂದರೆ, ಆತನನ್ನು ನಿಯಂತ್ರಣ ಮಾಡುವುದಕ್ಕೆ ಏನಾದರೂ ವ್ಯವಸ್ಥೆ

ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡಬೇಕಾಗುತ್ತದೆ. ಮೇಲ್ವಿಚಾರಕಲ್ಲಿಯೂ ಒಬ್ಬರಿಂದ ಒಬ್ಬರಿಗೆ ವ್ಯತ್ಯಾಸ ಇದೆ. ಅವ್ಯವಹಾರ ಮಾಡತಕ್ಕಂಥ ಮೇಲ್ವಿಚಾರಕರು ಬಂದರೆ ಪ್ರತಿನಿತ್ಯ ನಿಗದಿಪಡಿಸಿರುವಂತಹ ವೇಳಾ ಪಟ್ಟಿಯನ್ನು ಅನುಸರಿಸದೇ, ಅದನ್ನು ಕಿತ್ತು ಹಾಕಿ, ಕೇವಲ ಉಪ್ಪಿಟ್ಟು, ಚಹಾ ಕೊಡತಕ್ಕಂಥ ಪರಿಸ್ಥಿತಿಯನ್ನು ನಾವು ನೋಡಿದ್ದೇವೆ. ಆದರೆ, ಸರ್ಕಾರ ಇಷ್ಟೇಲ್ಲಾ ಹಣ ಖರ್ಚು ಮಾಡುವಂತಹ ಸಂದರ್ಭದಲ್ಲಿ ಆ ಹಾಸ್ಟೆಲ್‌ಗಳ ವ್ಯವಸ್ಥೆ ಸರಿಯಾಗಿದೆಯೋ ಇಲ್ಲವೋ ಮತ್ತು ಎಷ್ಟರ ಮಟ್ಟಿಗೆ ಆ ಜನರ ಮೇಲೆ ಕ್ರಮ ತೆಗೆದುಕೊಂಡಿದ್ದೇವೆಂದು ನೋಡಬೇಕಾಗುತ್ತದೆ. ಹಾಗೂ ಅಲ್ಲಿರತಕ್ಕಂಥಹ ಡಿಸಿ ಹಾಗೂ ಸಿಇಓ ಗಳಿಗೆ ವಾರಕ್ಕೆ ಒಮ್ಮೆಯಾದರೂ ಹಾಸ್ಟೆಲ್‌ನ ವಿದ್ಯಾರ್ಥಿಗಳ ಜೊತೆಯಲ್ಲಿ ಊಟ ಮಾಡಿ ಅಲ್ಲಿಯೇ ಮಳಗುವುದಕ್ಕೆ ಹೇಳಬೇಕು. ಈ ರೀತಿ ಮಾಡುವುದರಿಂದ ಹಾಸ್ಟೆಲ್‌ಗಳನ್ನು ನೋಡಿಕೊಳ್ಳುವಂತವರಿಗೂ ಸ್ವಲ್ಪ ಭಯವಿರುತ್ತದೆ. ಆ ನಿಟ್ಟಿನಲ್ಲಾದರೂ ಹಾಸ್ಟೆಲ್‌ಗಳನ್ನು ಸರಿಯಾದ ರೀತಿಯಲ್ಲಿ ನಡೆಸುತ್ತಾರೆ. ಆದ್ದರಿಂದ ತಾವು ದಯಮಾಡಿ ಹಾಸ್ಟೆಲ್‌ಗಳಿಗೆ ಕೊಡತಕ್ಕಂಥ ಹಣವು ಸರಿಯಾದ ರೀತಿಯಲ್ಲಿ ಸದುಪಯೋಗವಾಗಿದೆಯೋ, ಇಲ್ಲವೋ ಎನ್ನುವುದನ್ನು ನೋಡುವುದಕ್ಕೆ ಒಂದು ಹೊಸ ವ್ಯವಸ್ಥೆಯನ್ನು ತರಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೆ, ನಮ್ಮೆಲ್ಲಾ ಹಿರಿಯ ಸದಸ್ಯರು ಮಾತನಾಡಿದ್ದನು ಬಿಟ್ಟು ನಾನು ಈ ಮಾತನ್ನು ಹೇಳುತ್ತಿದ್ದೇನೆ. ಅದು ಹಾವೇರಿ ಜಿಲ್ಲೆಯ ಜಿಲ್ಲಾಧಿಕಾರಿ ಕಛೇರಿಯಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ಬಿಸಿಎಂ ಸಮಿತಿಯವರು ಬಂದಿದ್ದರು. ಅಲ್ಲಿ ಸನ್ಮಾನ್ಯ ಲೋಬೋರವರು ಪ್ರತಿಯೊಂದು ಹಾಸ್ಟೆಲ್‌ಗಳ ಬಗ್ಗೆ ವಿವರಣೆಯನ್ನು ತೆಗೆದುಕೊಳ್ಳುತ್ತಿದ್ದರು. ಆಗ ಸಮಾಜ ಕಲ್ಯಾಣ ಇಲಾಖೆಯ ಸಮಿತಿಯವರು ಅಲ್ಲಿರತಕ್ಕಂಥ ಸೂಪರಿಂಟೆಂಡೆಂಟ್ ಮತ್ತು ವಾರ್ಡನ್‌ಗೆ ನಿಮ್ಮ ಹಾಸ್ಟೆಲ್‌ನಲ್ಲಿ ಏನೇನೋ ಆಗಿದೆ. 100 ಹುಡುಗರಲ್ಲಿ ಕೇವಲ 25, 28, ಹುಡುಗರು ಮಾತ್ರ ಪಾಸ್ ಆಗಿದ್ದಾರೆ ಏನಿದು ಎಂದು ಕೇಳಿದ್ದರು. ಅದಕ್ಕೆ ಹಾಸ್ಟೆಲ್‌ನ ಸೂಪರಿಂಟೆಂಡೆಂಟ್ ಹೌದು ಇಷ್ಟೇ ಹುಡುಗರು ಪಾಸ್ ಆಗಿರುವುದು ಎಂದು ಹೇಳಿದ್ದರು. ನಂತರ ಸಮಾಜ ಕಲ್ಯಾಣ ಇಲಾಖೆಯ ಸಮಿತಿಯವರು ಮತ್ತೊಂದು ಹಾಸ್ಟೆಲ್‌ನ್ನು ತೆಗೆಯಿಸಿ ಯಾರು ಆ ಹಾಸ್ಟೆಲ್‌ನ ವಾರ್ಡನ್ನು ಹೇಳಿ ಎಂದು ಕೇಳಿದ್ದರು. ಅಲ್ಲಿಯೇ ಇದ್ದಂತಹ ಅದೇ ಹಾಸ್ಟೆಲ್‌ನ ಸೂಪರಿಂಟೆಂಡೆಂಟು ಎದ್ದು ನಿಂತರು. ಆಗ ಇಲಾಖೆಯವರು ಏಕೆ ನಿಮ್ಮ ಹಾಸ್ಟೆಲ್‌ನಲ್ಲಿ ಕೇವಲ 45 ಹುಡುಗರು ಮಾತ್ರ ಪಾಸ್ ಆಗಿದ್ದಾರೆ ಎಂದು ಕೇಳಿದ್ದರು. ಅದಕ್ಕೆ ಆತನು ಹೌದು ನಮ್ಮಲ್ಲಿ 45 ಹುಡುಗರು ಅಷ್ಟೇ ಪಾಸ್ ಆಗಿರುವುದು ಎಂದು ಹೇಳಿದ್ದರು. ಅದೇ ರೀತಿ ಸಮಾಜ ಕಲ್ಯಾಣ

ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇಲಾಖೆಯ ಸಮಿತಿಯವರು 2, 3 ಹಾಸ್ಟೆಲ್‌ಗಳನ್ನು ಕೇಳಿಕೊಂಡು ಬರುತ್ತಿದ್ದಾಗ ಆ ಹಾಸ್ಟೆಲ್‌ನ ವಾರ್ಡನ್ ಪ್ರಶ್ನೆ ಕೇಳುವುದಕ್ಕಿಂತ ಮೊದಲೆ ಎದ್ದು ನಿಂತು ಉತ್ತರವನ್ನು ಹೇಳುತ್ತಿದ್ದರು. ಆಗ ಸಮಾಜ ಕಲ್ಯಾಣ ಇಲಾಖೆಯ ಸಮಿತಿಯವರು ಸೂಪರಿಟೆಂಡೆಂಟು ಮತ್ತು ವಾರ್ಡನ್‌ಗೆ ಏನಪ್ಪ ನಾವೆಲ್ಲ 1500, 2000 ರೂಪಾಯಿಗಳನ್ನು Guest Lecturers ಗೆ ಕೊಡುತ್ತಿದ್ದೇವೆ. ಅವರು ಬಂದು ಪಾಠ ಮಾಡಬೇಕಲ್ಲವೇ ಎಂದು ಕೇಳಿದ್ದರು. ಏಕೆಂದರೆ ದಿನಕ್ಕೆ 30 ರೂಪಾಯಿ ಬರುತ್ತದೆ ಅದು ಅವರ ಪೆಟ್ರೋಲ್‌ಗೂ ಸಹ ಸಾಕಾಗುವುದಿಲ್ಲವೆಂದು ಯಾರು ಬರುತ್ತಿಲ್ಲ ಎಂದು ಹೇಳಿದ್ದರು. ಅದಕ್ಕಾಗಿ ಶೇಕಡಾವಾರು ಅಂಕ ಕಡಿಮೆಯಾಗಿ ಅನುತ್ತೀರ್ಣ ಹೊಂದಿದ್ದಾರೆಂದು ಹೇಳಿದ್ದರು. ಹಾಗೆಯೇ ಮತ್ತೊಂದು ಹಾಸ್ಟೆಲ್‌ನ ಹತ್ತಿರ ಹೋದ್ದರು ಅಲ್ಲಿನ ವಾರ್ಡನ್ ಎದ್ದು ನಿಂತ ಅದಕ್ಕೆ ನಿನಗೆ ಗೊತ್ತಾಗುವುದಿಲ್ಲ. ಮೇಲಾಗಿ ಹಾಸ್ಟೆಲ್‌ನಲ್ಲಿರತಕ್ಕಂಥ ಮಕ್ಕಳಿಗೆ ವಾರ್ಡನ್ನೇ ಗಣಿತ ಮತ್ತು ಇಂಗ್ಲೀಷ್ ಪಾಠವನ್ನು ಹೇಳಿಕೊಡಬೇಕೆಂದು ಇದೆ. ನಿನಗೆ ಗೊತ್ತಿದೆಯೋ, ಇಲ್ಲವೋ ಎಂದು ಕೇಳಿದ್ದರು. ಅದಕ್ಕೆ ಆ ವಾರ್ಡನ್ "ಹೌದು ಸಾರ್ ಗೊತ್ತಿದೆ" ಎಂದು ಹೇಳಿದ. ಅದಕ್ಕೆ ಸಮಾಜ ಕಲ್ಯಾಣ ಸಮಿತಿಯವರು ಮತ್ತೆಕ್ಕೆ ಹಾಸ್ಟೆಲ್‌ನಲ್ಲಿರತಕ್ಕಂಥ ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದಾರೆ ಎಂದು ಕೇಳಿದ್ದರು. ಅದಕ್ಕೆ ಆ ವಾರ್ಡನ್ ನಾನು ಎಸ್‌ಎಸ್‌ಎಲ್‌ಸಿ ಮಾಡಿಕೊಂಡು, ಅದರ ಮೇಲೆ ಬಡ್ತಿ ಹೊಂದಿ, ವಾರ್ಡನ್ ಆಗಿದ್ದೇನೆ ಎಂದು ಹೇಳಿದ್ದ. ನಾನು ಹೇಗೆ ಗಣಿತ ಮತ್ತು ಇಂಗ್ಲೀಷ್ ಪಾಠವನ್ನು ಹೇಳಿಕೊಡುವುದಕ್ಕಾಗುತ್ತದೆ ಎಂದು ಹೇಳಿದ್ದ. ಯಾವ ರೀತಿ ಪರಿಸ್ಥಿತಿ ಇದೆ ಎಂದರೆ, ಎಸ್‌ಎಸ್‌ಎಲ್‌ಸಿ ಓದುತ್ತಿರತಕ್ಕಂಥ ಮಕ್ಕಳಿಗೆ ಗಣಿತ ಮತ್ತು ಇಂಗ್ಲೀಷ್ ಪಾಠವನ್ನು ಎಸ್‌ಎಸ್‌ಎಲ್‌ಸಿ ಮಾಡಿಕೊಂಡಿರತಕ್ಕಂಥ ಒಬ್ಬ ವಾರ್ಡನ್ ಹೇಳಿಕೊಡಬೇಕೆಂದರೆ ಇದು ಸಾಧ್ಯವೇ? ಅಲ್ಲಿ 5-6 ಹಾಸ್ಟೆಲ್‌ಗಳಿಗೆ ಸಂಬಂಧಿಸಿದಂತೆ ಕೇಳಿದರೂ ಸಹ ಅವನೊಬ್ಬನೇ ವಾರ್ಡನ್. 5-6 ಹಾಸ್ಟೆಲ್‌ಗಳನ್ನು ನೋಡಿಕೊಂಡರು ಪಾಪ ಆತನು ಶ್ರೀ ಲೋಬೋರವರ ಹತ್ತಿರ ಬೈಯಿಸಿಕೊಳ್ಳುತ್ತಾನೆ. ಅದಕ್ಕಾಗಿ ಇವತ್ತಿನ ಪರಿಸ್ಥಿತಿ ಹೇಗಿದೆ ಎಂದು ನೀವೇ ನೋಡಬೇಕು.

**ಶ್ರೀ ಐವನ್ ಡಿ'ಸೋಜಾ (ಸರ್ಕಾರಿ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೆ, ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು ತಂದಿರತಕ್ಕಂಥ ನಿಯಮ 330ರ ಅಡಿಯಲ್ಲಿ ಬಹಳ ವಿಸ್ತೃತವಾಗಿ ಚರ್ಚೆಯಾಗಿದೆ. ನಮಗೆ ತಿಳಿಸಿರತಕ್ಕಂಥ ವಿಚಾರವೇನೆಂದರೆ ಇವತ್ತಿನ ದಿವಸ ಎಲ್ಲಾ ಹಾಸ್ಟೆಲ್‌ಗಳಲ್ಲಿ ಬಹಳ ಜನ ವಿದ್ಯಾಭ್ಯಾಸವನ್ನು ಮಾಡಿಕೊಂಡು ದೊಡ್ಡ ದೊಡ್ಡ ಹುದ್ದೆಗಳಿಗೆ ಹೋಗಿದ್ದಾರೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವಿದ್ಯಾಭ್ಯಾಸವನ್ನು ಸಹ ಪಡೆದುಕೊಂಡಿದ್ದಾರೆ. ಹಾಸ್ಟೆಲ್‌ಗಳಲ್ಲಿ ಓದಿರತಕ್ಕಂಥವರು ಏನು ಕಲಿಯಲಿಲ್ಲ. ಯಾವ ವ್ಯವಸ್ಥೆಯೂ ಇರಲಿಲ್ಲ ಎನ್ನುವಂತಹ ಮಾತನ್ನು ನಾವು ಅಲ್ಲಗಳೆಯುವುದಕ್ಕಾಗುವುದಿಲ್ಲ.

**(101) 09.02.2017/5.40/hv.md**

**ಶ್ರೀ ಐವನ್ ಡಿ'ಸೋಜಾ (ಮುಂದು):**

ಸನ್ಮಾನ್ಯ ಸಭಾಪತಿಯವರೇ, ಎಲ್ಲಾ ವಿಚಾರಗಳಲ್ಲಿ ಅನುಕೂಲತೆಗಳು ಅನಾನೂಕೂಲತೆಗಳು ಇದ್ದೇ ಇರುತ್ತವೆ. ನಾನು ವಿದ್ಯಾರ್ಥಿಯಾಗಿದ್ದ ಸಂದರ್ಭದಲ್ಲಿ ಹಾಸ್ಟೆಲ್‌ನಲ್ಲಿ ಇದ್ದು ಓದಿದ್ದೇನೆ. ರಜೆಯಲ್ಲಿ ನಾವು ಮನೆಗೆ ಬಂದಾಗ, 'ಹಾಸ್ಟೆಲ್ ಚೆನ್ನಾಗಿದೆ, ಊಟ ಚೆನ್ನಾಗಿ ಕೊಡುತ್ತಾರೆ, ನಮ್ಮನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದಾರೆ' ಎಂದು ಹೇಳುತ್ತಿರಲಿಲ್ಲ. ಅದಕ್ಕೆ ಬದಲಾಗಿ, 'ಹಾಸ್ಟೆಲ್ ಊಟ, ಅಲ್ಲಿನ ಶಿಕ್ಷಕರು ಮತ್ತು ವಾರ್ಡನ್ ಯಾರು ಚೆನ್ನಾಗಿಲ್ಲ, ಯಾವುದೂ ಚೆನ್ನಾಗಿಲ್ಲ' ಮನೆಯಲ್ಲಿಯೇ ಇರಬೇಕೆಂದು ಸುಳ್ಳು ಹೇಳುತ್ತಿದ್ದೆವು.

ಸನ್ಮಾನ್ಯ ಸಭಾಪತಿಯವರೇ, ಈಗ ನಮ್ಮ ವ್ಯವಸ್ಥೆಯಲ್ಲಿ ಬದಲಾವಣೆ ಆಗಬೇಕಾಗಿದೆ. ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು ಮಾತನಾಡುತ್ತಾ, 'ಹಾಸ್ಟೆಲ್‌ನ ಶೌಚಾಲಯಗಳಿಗೆ ಬಾಗಿಲುಗಳು ಇಲ್ಲ. ಬಾಗಿಲುಗಳು ಇದ್ದರೆ, ಚಿಲಕಗಳು ಇರುವುದಿಲ್ಲ. ಎಷ್ಟೋ ಹಾಸ್ಟೆಲ್‌ಗಳಲ್ಲಿ ವಾರ್ಡನ್‌ಗಳು ಇರುವುದಿಲ್ಲ' ಎನ್ನುವ ಮಾತುಗಳನ್ನು ಹೇಳಿದ್ದಾರೆ. ನಮ್ಮ ವ್ಯವಸ್ಥೆ ಯಾವ ರೀತಿ ಇದೆಯೆಂದರೆ, ಚಿಲಕ ಹಾಳಾದರೆ, ಅದನ್ನು ಹಾಕಿಸುವುದಕ್ಕೆ ಲೋಕೋಪಯೋಗಿ ಇಲಾಖೆಯವರಿಗೆ ಬರೆಯಬೇಕಾಗುತ್ತದೆ. ಲೋಕೋಪಯೋಗಿ ಇಲಾಖೆಯವರು ಅಂದಾಜು ಪಟ್ಟಿ ತಯಾರು ಮಾಡಬೇಕು, ಆ ಅಂದಾಜು ಪಟ್ಟಿ ಅನುಮೋದನೆಗಾಗಿ ಹೋಗಬೇಕು, ಇಷ್ಟೆಲ್ಲ ಪ್ರಕ್ರಿಯೆ ನಡೆದು ಚಿಲಕ ತಂದು ಹಾಕುವುದಕ್ಕೆ ಸುಮಾರು 8 ತಿಂಗಳ ಕಾಲಾವಧಿ ಬೇಕಾಗುತ್ತದೆ. ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು ಹೋಗಿ ನೋಡಿದ ಸಂದರ್ಭದಲ್ಲಿ ಅಲ್ಲಿ ಯಾವುದೋ ಹಾಸ್ಟೆಲ್‌ನ ಶೌಚಾಲಯಕ್ಕೆ ಚಿಲಕ ಇರಲಿಲ್ಲ. ಅವರು ಅದನ್ನು ನೋಡಿಕೊಂಡು ಬಂದು ಪ್ರೆಸ್ ಮುಂದೆ 'ಶೌಚಾಲಯದ ಬಾಗಿಲಿಗೆ ಚಿಲಕ ಇಲ್ಲ' ಎಂದು ಹೇಳಿದರು. ಪತ್ರಿಕೆಗಳಲ್ಲಿ ಅದು ಪ್ರಕಟವಾಯಿತು.

ಸನ್ಮಾನ್ಯ ಸಭಾಪತಿಯವರೇ, ಒಂದು ಹಾಸ್ಟೆಲ್‌ನಲ್ಲಿರುವ ವಾರ್ಡನ್‌ವೊಬ್ಬರು ರಜೆಯ ಮೇಲೆ ಹೋದರೆ, ಬದಲಿ ವಾರ್ಡನ್ ಅವರನ್ನು ತರುವುದಕ್ಕೆ ಸಾಧ್ಯವಾಗುತ್ತದೆಯೇ? ಹಾಸ್ಟೆಲ್‌ನಲ್ಲಿ ಅಡಿಗೆಯವರು ಇಲ್ಲದಿದ್ದರೆ ಊಟ ಬಡಿಸುವವರೇ ಅಡಿಗೆ ಮಾಡಿಕೊಡಬೇಕೆಂದು ಈಗ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಾವುಹೇಳಿದ್ದೇವೆ. ಆದರೆ, ಹಾಸ್ಟೆಲ್‌ಗಳಲ್ಲಿ ಯಾವುದೇ ವ್ಯವಸ್ಥೆಗಳು ಇಲ್ಲವೆಂದು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಬಹಳಷ್ಟು ಸುಧಾರಣೆಗಳು ಆಗುತ್ತಿವೆ.

ಸನ್ಮಾನ್ಯ ಸಭಾಪತಿಯವರೇ, ಉದಾಹರಣೆಗೆ ಹೇಳಬೇಕಾದರೆ ಶಾಸಕರ ಭವನದಲ್ಲಿ ನಮ್ಮ ರೂಂಗಳಿಗೆ ಕೊಟ್ಟಿರುವ ಬಕೆಟ್‌ಗಳ ಗುಣಮಟ್ಟ ಯಾವ ರೀತಿ ಇದೆಯೆಂದರೆ, ನೀರು ತುಂಬಿಸಿ ಮೇಲಕ್ಕೆತ್ತಿದರೆ, ಬಕೆಟ್‌ನ ಹ್ಯಾಂಡಲ್ ಕೈಗೆ ಬರುತ್ತದೆ. ಹಾಸಿಗೆಯ ಮೇಲೆ ಹಾಸಿರುವ ಬೆಡ್‌ಶೀಟ್‌ಗಳು ಮೊದಲ ದಿನ 5 ಅಡಿ ಇದ್ದರೆ, ಮರುದಿನ ಅದರ ಉದ್ದ 4 ಅಡಿಗಳಿಗೆ ಇಳಿದಿರುತ್ತದೆ. ಕಿಟಕಿ ಬಾಗಿಲುಗಳಿಗೆ ಹಾಕಿರುವ ಕರ್ಟನ್‌ಗಳ ಸ್ಥಿತಿಯೂ ಇದೇ ರೀತಿ ಇದೆ. ಆದ್ದರಿಂದ ವ್ಯವಸ್ಥೆಯಲ್ಲಿ ಬದಲಾವಣೆ ಆಗಬೇಕೆಂದು ನಾನು ಹೇಳುತ್ತಿದ್ದೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಸನ್ಮಾನ್ಯ ಸಭಾಪತಿಯವರೇ, ಎಲ್ಲವೂ ಸರಿ ಇದೆ ಏನು ಮಾಡಬಾರದು ಎನ್ನುವುದು ಅವರ ಮಾತಿನ ಅರ್ಥವೇ?

**ಶ್ರೀ ಐವನ್ ಡಿ'ಸೋಜಾ:–** ಸನ್ಮಾನ್ಯ ಸಭಾಪತಿಯವರೇ, ನಾನು ಆ ಅರ್ಥದಲ್ಲಿ ಹೇಳಿಲ್ಲ. ವ್ಯವಸ್ಥೆಯಲ್ಲಿ ಮತ್ತು ಪದ್ಧತಿಗಳಲ್ಲಿ ಬದಲಾವಣೆ ಆಗಬೇಕೆಂದು ನಾನು ಹೇಳುತ್ತಿದ್ದೇನೆ. ಶ್ರೀಮತಿ ಮೋಟಮ್ಮನವರು ಮಾತನಾಡುತ್ತಾ, ಸ್ಥಳೀಯವಾಗಿ ಒಂದು ಸಮಿತಿಯನ್ನು ರಚನೆ ಮಾಡಿ, ಆ ಸಮಿತಿಯು ಇದರ ಮೇಲ್ವಿಚಾರಣೆ ಮಾಡುವಂತಾಗಬೇಕೆಂದು ಹೇಳಿದ್ದಾರೆ. ಮಂಗಳೂರಿನ ಊರ್ವದಲ್ಲಿ ಒಂದು ಗಂಡುಮಕ್ಕಳ ಹಾಸ್ಟೆಲ್ ಇದೆ. ಅಲ್ಲಿ ಮೊದಲನೆಯ ಮಹಡಿಯಲ್ಲಿ ಹೆಣ್ಣುಮಕ್ಕಳು, ನೆಲಮಹಡಿಯಲ್ಲಿ ಗಂಡುಮಕ್ಕಳಿದ್ದಾರೆ. ನಾವು ಇದರ ಬಗ್ಗೆ ಆಕ್ಷೇಪವನ್ನು ವ್ಯಕ್ತಪಡಿಸಿದಾಗ, 'ನಮಗೆ ಬೇರೆ ಜಾಗವಿಲ್ಲ, ನಾವು ಏನು ಮಾಡುವುದು' ಎಂದು ಆ ಹಾಸ್ಟೆಲ್‌ನವರು ನಮ್ಮನ್ನೇ ಕೇಳುತ್ತಾರೆ. ಸ್ಪೋರ್ಟ್ಸ್ ಹಾಸ್ಟೆಲ್‌ನಲ್ಲಿ, ಹೈಸ್ಕೂಲ್ ವಿದ್ಯಾರ್ಥಿಗಳಿಗಾಗಿ ಇರುವಂತಹ ಹಾಸ್ಟೆಲ್‌ನಲ್ಲಿ ಮೊದಲನೆಯ ಮಹಡಿಯಲ್ಲಿ ಹೆಣ್ಣುಮಕ್ಕಳು, ನೆಲಮಹಡಿಯಲ್ಲಿ ಗಂಡುಮಕ್ಕಳಿದ್ದಾರೆ. ಇಂತಹ ಅವ್ಯವಸ್ಥೆಗಳು ಇಲ್ಲವೆಂದು ನಾನು ಹೇಳುವುದಕ್ಕೆ ಬಯಸುವುದಿಲ್ಲ. ಇದು ಇವತ್ತಿನ ಪರಿಸ್ಥಿತಿಯಲ್ಲ, ಬಹಳ ವರ್ಷಗಳಿಂದ ನಡೆದುಕೊಂಡು ಬಂದಿದೆ. ಇದರ ಬಗ್ಗೆ ಮಾನ್ಯ ಸಚಿವರು ಹೆಚ್ಚು ಗಮನ ಕೊಡಬೇಕಾಗಿರುವ ಅನಿವಾರ್ಯತೆ ಇದೆಯೆಂದು ನಾನು ಹೇಳುವುದಕ್ಕೆ ಬಯಸುತ್ತೇನೆ.

ಸನ್ಮಾನ್ಯ ಸಭಾಪತಿಯವರೇ, ಈ ವಿಚಾರದ ಬಗ್ಗೆ ಅನೇಕ ಸದಸ್ಯರುಗಳು ಮಾತನಾಡುತ್ತಿದ್ದ ಸಂದರ್ಭದಲ್ಲಿ ಹಾಸ್ಟೆಲ್‌ಗಳ ನಿರ್ವಹಣೆಯನ್ನು ಎನ್.ಜಿ.ಓ.ಗಳಿಗೆ ನೀಡಬೇಕೆನ್ನುವ ಸಲಹೆಗಳನ್ನು ನೀಡಿದ್ದಾರೆ. ಆ ರೀತಿ ಮಾಡಿದರೂ ಒಳ್ಳೆಯದಾಗುತ್ತದೆ. ಏಕೆಂದರೆ, ತನ್ನದು ಎನ್ನುವ ಭಾವನೆ ಬರದೇ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೋದರೆ, ಸರಿಯಾದ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಮತ್ತು ಹಾಸ್ಟೆಲ್‌ಗಳನ್ನು ಬೆಳೆಸುವುದಕ್ಕೂ ಸಾಧ್ಯವಾಗುವುದಿಲ್ಲ. ಯಾರದೋ ಸ್ವತ್ತು ಎನ್ನುವ ಭಾವನೆಯಿಂದ ಹಾಸ್ಟೆಲ್‌ಗಳನ್ನು ನಡೆಸದೇ ಅಲ್ಲಿರುವ ಮಕ್ಕಳು ನನ್ನ ಸ್ವಂತ ಮಕ್ಕಳು, ಅವರಿಗೆ ಉತ್ತಮ ವಿದ್ಯಾಭ್ಯಾಸ ಸಿಗಬೇಕು ಎನ್ನುವ ಮನೋಭಾವನೆಯಿಂದ ವರ್ತನೆ ಮಾಡುವ ರೀತಿಯಲ್ಲಿ ಸರ್ಕಾರ ಕೆಲಸ ಮಾಡಬೇಕಾಗಿದೆ. ಅಲ್ಲಿನ ಅಧಿಕಾರಿಗಳು ಬಹಳ ಕನಿಷ್ಠ ಮಟ್ಟದಲ್ಲಿ ವರ್ತಿಸುತ್ತಾರೆ. ‘ಆ ಮಕ್ಕಳಿಗೆ 30 ರೂಪಾಯಿಗಳ ಸೋಪು ಕೊಡಿ’ ಎಂದು ಹೇಳಿದರೆ ಅವರು ಮಾರುಕಟ್ಟೆಯಲ್ಲಿ ಸಿಗುವ 7 ರೂಪಾಯಿಗಳ ಸೋಪು ತಂದು ಕೊಡುವಂತಹ ವ್ಯವಸ್ಥೆಯನ್ನು ನಾವು ನೋಡಿದ್ದೇವೆ. ಈ ವ್ಯವಸ್ಥೆಗೆ ಸುಧಾರಣೆ ತರುವುದಕ್ಕೆ ಮಾನ್ಯ ಸಚಿವರು ಕ್ರಮ ತೆಗೆದುಕೊಳ್ಳಬೇಕೆಂದು ನಾನು ವಿನಂತಿ ಮಾಡುತ್ತಿದ್ದೇನೆ.

**ಶ್ರೀ ಹೆಚ್.ಆಂಜನೇಯ(ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು ನಿಯಮ 330ರಡಿಯಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಭಾರತೀಯ ಜನತಾ ಪಕ್ಷದ ಮಹಿಳಾ ಮೋರ್ಚಾದ ಮುಖಂಡರು ಸರ್ವೆ ಮಾಡಿ, ವರದಿಯನ್ನು ತಯಾರು ಮಾಡಿ, ನನ್ನ ಕಛೇರಿಗೆ ಆ ವರದಿಯನ್ನು ಕೊಡಲು ಬಂದಂತಹ ಸಂದರ್ಭದಲ್ಲಿ, ‘ಈ ರೀತಿಯ ನ್ಯೂನತೆಗಳಿವೆ’ ಎಂದು ಹೇಳಿದರು. ಆಗ ನಾನು ‘ತಾವು ಹೋಗಿ ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿರುವ ಹಾಸ್ಟೆಲ್‌ಗಳನ್ನು ನೋಡಿಕೊಂಡು ಬಂದಿದ್ದೀರಿ, ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿರುವ ಹಾಸ್ಟೆಲ್‌ಗಳಿಗೆ ಪೂರ್ಣ ಪ್ರಮಾಣದಲ್ಲಿ ಮೂಲಭೂತ ಸೌಲಭ್ಯಗಳನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಅಲ್ಲಿ ಸ್ವಲ್ಪ ಅವ್ಯವಸ್ಥೆ ಇರಬಹುದು. ಆದರೆ, ಸ್ವಂತ ಕಟ್ಟಡಗಳಲ್ಲಿ ನಡೆಯುತ್ತಿರುವ ಹಾಸ್ಟೆಲ್‌ಗಳು ಏನಿವೆ ಅವುಗಳು ಫೈವ್‌ಸ್ಟಾರ್ ಹೋಟೆಲ್‌ಗಳ ರೀತಿ ಸುಸಜ್ಜಿತವಾಗಿವೆ, ನಿಮ್ಮನ್ನು ಯಾವ ಜಿಲ್ಲೆಗೆ ಬೇಕಾದರೂ ಕರೆದುಕೊಂಡು ಹೋಗಿ ತೋರಿಸುತ್ತೇನೆ.’ ಎನ್ನುವ ಮಾತುಗಳನ್ನು ಹೇಳಿದೆ.

ಸನ್ಮಾನ್ಯ ಸಭಾಪತಿಯವರೇ, ಯಾರಾದರು ಟೀಕೆ ಮಾಡುವ ಸಂದರ್ಭದಲ್ಲಿ ಒಳ್ಳೆಯದರ ಬಗ್ಗೆ ಉಲ್ಲೇಖ ಮಾಡುವುದಿಲ್ಲ. ಮಾಧ್ಯಮದವರಾಗಿರಬಹುದು ಅಥವಾ ಜನಪ್ರತಿನಿಧಿಗಳಾಗಿರಬಹುದು ಸ್ವಲ್ಪ ಪ್ರಮಾಣದಲ್ಲಿ ಯಾವುದು ಕೆಟ್ಟದ್ದಾಗಿರುತ್ತದೆ ಅದರ ಬಗ್ಗೆ ಟೀಕೆ ಮಾಡಿ ಹೆಚ್ಚು ಬೆಳಕು ಚೆಲ್ಲುತ್ತಾರೆ. ನಮ್ಮ ಹಾಸ್ಟೆಲ್‌ಗಳು ಎಷ್ಟು ಚೆನ್ನಾಗಿವೆ ಎನ್ನುವುದನ್ನು ತೋರಿಸುವುದಕ್ಕೆ ಅವರು ಯಾವ ಜಿಲ್ಲೆ ಹೇಳಿದರೆ ಆ ಜಿಲ್ಲೆಗೆ ಕರೆದುಕೊಂಡು ಹೋಗಿ ತೋರಿಸುತ್ತೇನೆ. ಮಾನ್ಯ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅಧಿಕಾರಕ್ಕೆ ಬಂದಮೇಲೆ ಸಮಸ್ಯೆಗಳ ಆಗರವಾಗಿದೆ ಎಂದು ಹೇಳುವುದಲ್ಲ. ಇದು ಹಿಂದಿನಿಂದಲೂ ನಡೆದುಕೊಂಡು ಬಂದಿದೆ.

ಸನ್ಮಾನ್ಯ ಸಭಾಪತಿಯವರೇ, ಹಾಸ್ಟೆಲ್ ಕಟ್ಟಡಗಳ ಅವ್ಯವಸ್ಥೆಗೆ ನಾವು ಕಾರಣರಲ್ಲ. ಹಿಂದಿನ ಸರ್ಕಾರಗಳು ಅಂದರೆ, ನಮ್ಮ ಕಾಂಗ್ರೆಸ್ ಪಕ್ಷದ ಸರ್ಕಾರ ಮತ್ತು ಭಾರತೀಯ ಜನತಾ ಪಕ್ಷದ ಸರ್ಕಾರಗಳು ಬೇಡಿಕೆಯ ಆಧಾರದ ಮೇಲೆ ಹಾಸ್ಟೆಲ್‌ಗಳನ್ನು ಮಂಜೂರು ಮಾಡಿದವು. ಹಾಸ್ಟೆಲ್‌ಗಳನ್ನು ಮಂಜೂರು ಮಾಡುವಾಗ ಕೂಡಲೇ ಕಟ್ಟಡಗಳನ್ನು ಕಟ್ಟಿ ಪೂರ್ಣ ಪ್ರಮಾಣದಲ್ಲಿ ಮೂಲಸೌಲಭ್ಯಗಳನ್ನು ಒದಗಿಸಿಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಬಡ ಮಕ್ಕಳಿಗೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ಬಾಡಿಗೆ ಕಟ್ಟಡಗಳಲ್ಲಿ ಹಾಸ್ಟೆಲ್‌ಗಳನ್ನು ನಡೆಸುತ್ತಿದ್ದೇವೆ. ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿರುವ ಹಾಸ್ಟೆಲ್‌ಗಳಲ್ಲಿ ಮಾತ್ರ ಇಂತಹ ಸಮಸ್ಯೆಗಳಿವೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಸಾಕಷ್ಟು ಹೊಸ ಹಾಸ್ಟೆಲ್‌ಗಳಿಗೆ ಮಂಜೂರಾತಿಯನ್ನು ನೀಡಿದ್ದೇವೆ. ಮಾನ್ಯ ಸದಸ್ಯರು ಹಾಸ್ಟೆಲ್‌ಗಳ ನಿರ್ವಹಣೆಯನ್ನು ಖಾಸಗಿಯವರಿಗೆ ವಹಿಸಿಕೊಡಬೇಕೆನ್ನುವ ಸಲಹೆಯನ್ನು ನೀಡಿದ್ದಾರೆ. ಖಾಸಗಿಯಾಗಿ ಹಾಸ್ಟೆಲ್ ನಡೆಸುವವರಿಗೂ, ಮಠಮಾನ್ಯಗಳು ನಡೆಸುತ್ತಿರುವ ಹಾಸ್ಟೆಲ್‌ಗಳಿಗೂ ಸಹ ನಾವು ಅನುದಾನವನ್ನು ನೀಡುತ್ತಿದ್ದೇವೆ. ಈ ಹಾಸ್ಟೆಲ್‌ಗಳಲ್ಲಿ ಮಕ್ಕಳಿಗೆ ಊಟದ ಜೊತೆಗೆ ಶಿಕ್ಷಣವನ್ನು ಸಹ ನೀಡಲಾಗುತ್ತಿದೆ. ಅದಕ್ಕೂ ಸಹ ನಾವು ಅನುದಾನವನ್ನು ನೀಡುತ್ತಿದ್ದೇವೆ. ಅನುದಾನಿತ ಶಿಕ್ಷಣ ಸಂಸ್ಥೆಗಳು ಇರುವ ರೀತಿಯಲ್ಲಿ ಅನುದಾನಿತ ಹಾಸ್ಟೆಲ್‌ಗಳು ಇವೆ.

ಸನ್ಮಾನ್ಯ ಸಭಾಪತಿಯವರೇ, ನನಗೂ ಸಹ ಹಾಸ್ಟೆಲ್‌ಗಳ ಸ್ಥಿತಿಗತಿಯ ಬಗ್ಗೆ ಅರಿವಿದೆ. ನಮ್ಮ ಹುಡುಗನೊಬ್ಬನಿಗೆ ಒಂದು ಹಾಸ್ಟೆಲ್‌ನಲ್ಲಿ ಪ್ರವೇಶ ಪಡೆದುಕೊಳ್ಳುವುದಕ್ಕಾಗಿ ತಾಲ್ಲೂಕು ಕಛೇರಿಯ ಮುಂದೆ ಮತ್ತು ಸಮಾಜ ಕಲ್ಯಾಣ ಅಧಿಕಾರಿಗಳ ಕಛೇರಿಯ ಮುಂದೆ ಹೋರಾಟ ಮಾಡಿದ್ದೇನೆ. ಆ ಹುಡುಗನಿಗೆ ಒಂದು ಹೊತ್ತಿನ ಊಟ ಶಿಕ್ಷಣ ದೊರೆತರೆ ಮುಂದೆ ಅವನು ಉತ್ತಮ ಅಧಿಕಾರಿಯಾಗಬಹುದು ಎನ್ನುವ ದೃಷ್ಟಿಯಿಂದ ಆ ದಿನ ಹಾಸ್ಟೆಲ್ ಪ್ರವೇಶಕ್ಕಾಗಿ ಹೋರಾಟವನ್ನು ನಡೆಸಿದ್ದ ನಾನು, ಸಮಾಜ ಕಲ್ಯಾಣ ಸಚಿವನಾದ ಮೇಲೆ ನಾನು ಅನುಭವಿಸಿದ ಎಲ್ಲ ತೊಂದರೆಗಳನ್ನು ಗಮನದಲ್ಲಿಟ್ಟುಕೊಂಡು ಅದಕ್ಕೆ ಪರಿಹಾರವನ್ನು ಸಾಕಾರಗೊಳಿಸಬೇಕೆನ್ನುವ ದೃಷ್ಟಿಯಿಂದ ಹಲವಾರು ಕ್ರಮಗಳನ್ನು ತೆಗೆದುಕೊಂಡಿದ್ದೇನೆ. ಒಂದು ಹಾಸ್ಟೆಲ್‌ನಲ್ಲಿ 50 ಜನ ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶಾವಕಾಶ ಎಂದು ಇತ್ತು. ಅಲ್ಲಿ 50 ಜನರನ್ನು ಮಾತ್ರ ಸೇರಿಸಿಕೊಳ್ಳಬೇಕಾಗಿತ್ತು. ನನ್ನ ಅಧಿಕಾರಾವಧಿಯ ಮೊದಲನೆಯ ವರ್ಷದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಎಷ್ಟು ಜನ ಬಂದು ಹಾಸ್ಟೆಲ್‌ನಲ್ಲಿ ಪ್ರವೇಶ ಕೇಳುತ್ತಾರೋ ಅವರೆಲ್ಲರಿಗೂ ಪ್ರವೇಶಾವಕಾಶವನ್ನು ನೀಡಬೇಕು, ಯಾರೂ ಕೂಡ ಯಾವುದೇ ರಾಜಕಾರಣಿಯ ಮನೆ ಬಾಗಿಲನ್ನು ತಟ್ಟಬಾರದು, ಅವರ ಮನೆ ಬಾಗಿಲನ್ನು ಕಾಯಬಾರದು, ವಿದ್ಯಾರ್ಥಿಗಳು ನೇರವಾಗಿ ಹಾಸ್ಟೆಲ್‌ಗೆ ಹೋಗಿ ಪ್ರವೇಶ ಕೇಳಿದರೆ, ಅವರಿಗೆ ಪ್ರವೇಶ ಕೊಡಬೇಕು, ಕೊಡದಿರುವಂತಹ ಪ್ರಕರಣ ಕಂಡು ಬಂದರೆ, ಆ ಹಾಸ್ಟೆಲ್‌ನ ವಾರ್ಡನ್ ಅನ್ನು ಜೈಲಿಗೆ ಕಳುಹಿಸಲಾಗುತ್ತದೆ ಮತ್ತು ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ ಎನ್ನುವ ನಿರ್ದೇಶನವನ್ನು ನೀಡಿದ್ದೇನೆ. ಯಾವುದೇ ಅರ್ಹ ವಿದ್ಯಾರ್ಥಿ ಹಾಸ್ಟೆಲ್ ಪ್ರವೇಶದಿಂದ ಹೊರಗುಳಿಯಬಾರದು ಎನ್ನುವ ಆದೇಶವನ್ನು ನಾನು ನೀಡಿದ್ದೇನೆ. ಆ ಆದೇಶ ಹೊರಬಂದ ಮೇಲೆ ಹಳ್ಳಿಗಳಲ್ಲಿ ಇದಂತಹ ಬಡ ವಿದ್ಯಾರ್ಥಿಗಳು, ಓದಬೇಕೆನ್ನುವ ಹಂಬಲ ಇದ್ದಂತಹ ಮಕ್ಕಳು, ನಗರದಲ್ಲಿ ಬಂದು ಒಂದು ರೂಂ ಮಾಡಿಕೊಂಡು ಊಟ ಮಾಡಿಕೊಳ್ಳುವುದಕ್ಕೆ ಆಗದೇ ಇರುವವರು ನಮ್ಮ ಹಾಸ್ಟೆಲ್‌ಗೆ ಬಂದು ಪ್ರವೇಶವನ್ನು ಪಡೆದುಕೊಂಡಿದ್ದಾರೆ. ಇದರಿಂದ ಸಾವಿರಾರು ಜನರಿಗೆ ಅನುಕೂಲವಾಗಿದೆ. ಕೇವಲ 50–100 ಜನ ವಿದ್ಯಾರ್ಥಿಗಳ ಸಂಖ್ಯಾಬಲಕ್ಕೆ ಸೀಮಿತವಾಗಿದ್ದ ಹಾಸ್ಟೆಲ್‌ಗಳಲ್ಲಿ ಇಂದು ವಿದ್ಯಾರ್ಥಿಗಳ ಸಂಖ್ಯೆ 150–200ಕ್ಕೆ ಹೆಚ್ಚಳವಾಗಿದೆ. ಯಾವುದೇ ಹಾಸ್ಟೆಲ್‌ಗಳಲ್ಲಿ ಇಷ್ಟೊಂದು ಜನ ವಿದ್ಯಾರ್ಥಿಗಳಿಗೆ ಸ್ಥಳಾವಕಾಶವಿಲ್ಲವೆಂದರೆ, ಪಕ್ಕದಲ್ಲಿ ಒಂದು ಬಾಡಿಗೆ ಕಟ್ಟಡವನ್ನು ತೆಗೆದುಕೊಳ್ಳುವುದಕ್ಕೆ ನಾನು ಆದೇಶವನ್ನು ಸಹ ನೀಡಿದ್ದೇನೆ. ಯಾವುದೇ ವಿದ್ಯಾರ್ಥಿಗಳು ಹಾಸ್ಟೆಲ್ ಸೌಲಭ್ಯದಿಂದ ವಂಚಿತರಾಗಬಾರದು ಎಂದು ನಾನು ಹೇಳಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳು ಎಲ್ಲೆಲ್ಲಿ ಮೂಲಸೌಲಭ್ಯಗಳು ಇಲ್ಲವೆಂದು ಹೇಳುತ್ತಿದ್ದಾರೆ. ಅವುಗಳೆಲ್ಲ ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿರುವ ಹಾಸ್ಟೆಲ್‌ಗಳಾಗಿವೆ. ಬಾಡಿಗೆ ಕಟ್ಟಡಗಳಲ್ಲಿರುವ ಹಾಸ್ಟೆಲ್‌ಗಳಿಗೆ ಪೂರ್ಣ ಪ್ರಮಾಣದ ಸೌಲಭ್ಯಗಳನ್ನು ನೀಡುವುದಕ್ಕೆ ಸಾಧ್ಯವಾಗುವುದಿಲ್ಲ. ಎಲ್ಲೆಲ್ಲಿ ನಮಗೆ ನಿವೇಶನ ದೊರೆತಿದೆ ಅಲ್ಲಿ ಸ್ವಂತ ಕಟ್ಟಡವನ್ನು ಕಟ್ಟುವ ಪ್ರಯತ್ನ ಮಾಡುತ್ತಿದ್ದೇವೆ. ಎಲ್ಲೆಲ್ಲಿ ಬಾಡಿಗೆ ಕಟ್ಟಡಗಳಲ್ಲಿ ಹಾಸ್ಟೆಲ್‌ಗಳು ನಡೆಯುತ್ತಿವೆ ಅಲ್ಲಿ ಸ್ವಂತ ಕಟ್ಟಡ ಕಟ್ಟಿಕೊಳ್ಳುವುದಕ್ಕೆ ನಿವೇಶನವನ್ನು ಪಡೆದುಕೊಂಡು ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭ ಮಾಡಿ, ಸಾವಿರಾರು ಕೋಟಿ ರೂಪಾಯಿಗಳನ್ನು ವ್ಯಯ ಮಾಡುತ್ತಿದ್ದೇವೆ. ಇರುವಂತಹ ಹಾಸ್ಟೆಲ್‌ಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದಕ್ಕಾಗಿ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಉತ್ತಮ ಗುಣಮಟ್ಟದ ಆಹಾರಗಳನ್ನು ನೀಡುತ್ತಿದ್ದೇವೆ. ಆಹಾರ ಸರಬರಾಜನ್ನು ಬಹಳ ಪಾರದರ್ಶಕವಾಗಿ ಮಾಡಲಾಗುತ್ತಿದೆ. ಆಹಾರ ಸರಬರಾಜಿಗಾಗಿ ಟೆಂಡರ್ ಕರೆಯುವಂತಹ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ನೀಡಲಾಗಿದೆ. ಹಿಂದೆ ಆಹಾರ ಪದಾರ್ಥಗಳನ್ನು

ತಿದ್ದುಪಡಿಯಾಗದ ಪ್ರತಿ: ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರಬರಾಜು ಮಾಡುವಂತಹ ಗುತ್ತಿಗೆದಾರ ತಾಲ್ಲೂಕು ಮಟ್ಟದಲ್ಲಿ ಇದ್ದುಕೊಂಡು ಹಾಸ್ಟೆಲ್ ವಾರ್ಡನ್‌ನನ್ನು ಕರೆದು ಪದಾರ್ಥಗಳನ್ನು ಕೊಡುತ್ತಿದ್ದ. ಆ ವಾರ್ಡನ್ ಹಾಸ್ಟೆಲ್‌ಗೆ ಆಹಾರ ಪದಾರ್ಥಗಳನ್ನು ತೆಗೆದುಕೊಂಡು ಹೋಗುತ್ತಿದ್ದನೋ ಅಥವಾ ಕಾಳಸಂತೆಯಲ್ಲಿ ಮಾರಾಟ ಮಾಡಿಕೊಂಡು ಹೋಗುತ್ತಿದ್ದನೋ ನಮಗೆ ಗೊತ್ತಾಗುತ್ತಿರಲಿಲ್ಲ.

**(102) 09-02-2017 SK-AK 5.50**

**ಶ್ರೀ ಹೆಚ್.ಆಂಜನೇಯ** (ಮುಂದು):

ಸನ್ಮಾನ್ಯ ಸಭಾಪತಿಯವರೇ, ಈಗ ನಾವು ಏನು ಮಾಡಿದ್ದೇವೆಂದರೆ, ಟೆಂಡರ್ ಷರತ್ತಿಗೆ ಒಳಪಡಿಸಿದ್ದೇವೆ. ಯಾರು ಸರಬರಾಜು ಮಾಡಲು ಟೆಂಡರ್‌ನ್ನು ಪಡೆದುಕೊಳ್ಳುವ ಗುತ್ತಿಗೆದಾರರಿದ್ದಾರೋ ಅವರು ಹಾಸ್ಟೆಲ್‌ಗೆ door delivery ಕೊಡಬೇಕು. ಹಾಸ್ಟೆಲ್ ವಾರ್ಡನ್‌ನವರು ಮತ್ತು ಮಕ್ಕಳು ಸ್ಟೋರ್ ರೂಮ್‌ಗೆ ಹೋಗಿ, ಆ ರೇಷನ್‌ನ್ನು ನೋಡಿಕೊಂಡು ಬಂದ ನಂತರ ಆ ರೇಷನ್‌ನ್ನು ಖರ್ಚು ಮಾಡಬೇಕೆಂದು ಹೇಳಿದ್ದೇವೆ. ಅಷ್ಟೇ ಅಲ್ಲದೇ, ಅವರ ಕೈಗೆ ಸ್ಟೋರ್ ರೂಮಿನ ಇನ್ನೊಂದು ಕೀ ಕೊಡಬೇಕೆಂಬ ಒಂದು ಯೋಚನೆಯನ್ನು ಮಾಡುತ್ತಿದ್ದೇವೆ. ಈ ಹಿಂದೆ ಹಾಸ್ಟೆಲ್ ಭತ್ಯೆ 900 ರೂಪಾಯಿಗಳಿತ್ತು. ಅದನ್ನು 1,400 ರೂಪಾಯಿಗಳಿಗೆ ಹೆಚ್ಚು ಮಾಡಿ ಆಹಾರವನ್ನು ವೆಚ್ಚ ಮಾಡಿ ಒಳ್ಳೆಯ ಊಟವನ್ನು ಕೊಡುತ್ತಿದ್ದೇವೆ. ಯಾವ್ಯಾವ ದಿನ ಏನೇನು ಅಡುಗೆ ಮಾಡಬೇಕೆನ್ನುವ ಮೆನುವನ್ನು ಇವತ್ತು ಎಲ್ಲಾ ಹಾಸ್ಟೆಲ್‌ಗಳಲ್ಲಿ ಪ್ರಕಟಣೆ ಮಾಡಿದ್ದೇವೆ ಮತ್ತು ಆ ಮೇನು ಇರಲೇಬೇಕಾಗುತ್ತದೆ. ಅದನ್ನು ತಪ್ಪಿದರೆ ನಿಮ್ಮ ಮೇಲೆ ಕ್ರಮ ಕೈಗೊಳ್ಳುತ್ತೇವೆಂದು ಹೇಳಿದ್ದೇವೆ. ಎಲ್ಲಾ ಹಂತಗಳಲ್ಲಿ ಸುಧಾರಣೆ ಮಾಡುವುದಕ್ಕೆ ಯಾವ ಯಾವ ಕ್ರಮಗಳು ತೆಗೆದುಕೊಳ್ಳಬೇಕೋ ಅದನ್ನೆಲ್ಲಾ ಕೈಗೊಂಡಿದ್ದೇವೆ.

ಸನ್ಮಾನ್ಯ ಸಭಾಪತಿಯವರೇ, ಹಾಸ್ಟೆಲ್‌ಗಳ ಸ್ಥಿತಿಗತಿಗಳ ಬಗ್ಗೆ ವರದಿ ನೀಡಲು ಮಹಿಳೆಯರು ಬಂದಾಗಲೂ ಕೂಡ "ಹೌದು ಕೆಲವು ಸೌಲಭ್ಯಗಳು ಇವೆ ಮತ್ತು ಕೆಲವು ಇಲ್ಲ. ಸುಧಾರಣೆಗಳನ್ನು ನೀವು ಮಾಡಿದ್ದೀರಿ ಇಲ್ಲವೆಂದು ಹೇಳುತ್ತಿಲ್ಲ" ಎಂದು ಹೇಳಿದರು. ಆಗ ನಾನು "ಇನ್ನು ಸುಧಾರಣೆಗಳನ್ನು ಮಾಡಬೇಕೆಂದು ತಾವು ಹೇಳಿದರೆ ಮಾಡೋಣ. ಸೌಲಭ್ಯಗಳನ್ನು ಒದಗಿಸುವುದಕ್ಕೆ ಹಣದ ಕೊರತೆ ಇಲ್ಲ. ರಾಜಕೀಯ ಇಚ್ಛಾಶಕ್ತಿ ಕೊರತೆಯಂತು ಮೊದಲು ಇಲ್ಲವೇ ಇಲ್ಲ. ನಾನು ಬಹಳ ಕಳಕಳಿಯಿಂದ ಎಷ್ಟು ಸಾಧ್ಯವೋ ಅಷ್ಟು ಈ ಕೆಟ್ಟ ವ್ಯವಸ್ಥೆಯಲ್ಲಿ ಸುಧಾರಣೆ ಮಾಡಬೇಕು ಮತ್ತು ಹಾಸ್ಟೆಲ್‌ಗೆ ಕಾಯಕಲ್ಪ ನೀಡಬೇಕೆನ್ನುವ ನಿಟ್ಟಿನಲ್ಲಿ ಪ್ರಯತ್ನಿಸುತ್ತಿದ್ದೇನೆ" ಎಂದು ಹೇಳಿದೆ. ನನಗೆ ಬೇರೆ ಇನ್ನೇನು ಕೆಲಸವಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾನು ರಾತ್ರಿ ಹೊತ್ತು ಎಲ್ಲೋ ಹೋಗಬೇಕು ಎನ್ನುವುದಿಲ್ಲ. ಅಕೌಂಟ್ ನೋಡಿಕೊಳ್ಳಬೇಕು ಮತ್ತು ಫ್ಯಾಕ್ಟರಿ ಏನಾಯಿತು ಎಂಬುದರ ಬಗ್ಗೆ ಚಿಂತೆ ಇಲ್ಲ. ಇದೇ ನನ್ನ ಫ್ಯಾಕ್ಟರಿ, ಮನೆ, ಮತ್ತು ಈ ಜನರೇ ನಮ್ಮವರು ಎಂದು ನಾನು ತಿಳಿದುಕೊಂಡಿದ್ದೇನೆ. ಈ ಇಲಾಖೆಯ ಸುಧಾರಣೆಗೋಸ್ಕರ ನನ್ನ ಸಮಯವನ್ನು ಬಳಸಿಕೊಂಡು ಹೋಗುವ ಕೆಲಸವನ್ನು ಮಾಡುತ್ತಿದ್ದೇನೆ. ನಾನು 'ಹಾಡಿ' ವಾಸ್ತವ್ಯವನ್ನು ಮಾಡಿದ್ದೇನೆ. ಇಡೀ ಭಾರತದಲ್ಲಿಯೇ ಯಾರೊಬ್ಬ ಸಮಾಜ ಕಲ್ಯಾಣ ಸಚಿವರು ಕೂಡ ಅಲ್ಲಿಗೆ ಹೋಗಿಲ್ಲ.

**ಶ್ರೀ ಕೆ.ಬಿ. ಶಾಣಪ್ಪ:–** ಸನ್ಮಾನ್ಯ ಸಭಾಪತಿಯವರೇ, ............

**ಶ್ರೀ ಎಚ್. ಆಂಜನೇಯ:–** ಸನ್ಮಾನ್ಯ ಸಭಾಪತಿಯವರೇ, ಅವರು ಕೇಳುವುದಾದರೆ ಕೇಳಲಿ. ಅವರಿಗೆ ಹೇಳಿಬಿಡಿ ಇಲ್ಲವಾದರೆ ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕು ಮತ್ತು ಮಾತನಾಡುತ್ತಿರುವಾಗ ಯಾರು ಅಡ್ಡ ಬರಬಾರದು. ಚರ್ಚೆಗೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ.

**(ಗೊಂದಲ)**

ಸನ್ಮಾನ್ಯ ಸಭಾಪತಿಯವರೇ, ಅವರು ಕೇಳುವುದಾದರೆ ಕೇಳಲಿ. ನಾನು ಸಲಹೆಯ ಬಗ್ಗೆ ಮಾತನಾಡುತ್ತಿದ್ದೇನೆ.

**(ಗೊಂದಲ)**

**ಶ್ರೀ ಕೆ.ಬಿ. ಶಾಣಪ್ಪ:–** ಸನ್ಮಾನ್ಯ ಸಭಾಪತಿಯವರೇ, ಅವರು ತಾಳ್ಮೆಯಿಂದ ಕೇಳಿಕೊಳ್ಳಬೇಕು. ಅವರು ಹೇಳಿದ್ದನ್ನು ನಾವು ಕೇಳಿದ್ದೇವೆ. ತಾಳ್ಮೆಯನ್ನು ಕಳೆದುಕೊಳ್ಳುವುದುಬೇಡ.Being a minister, you must have patience. *...(Interruptions)...* We are not able to talk. ಅವರು ಬಹಳ ತಾಳ್ಮೆಯಿಂದ ಕೇಳಿಕೊಳ್ಳಬೇಕು. You are representing the government. ಅವರು ಆರೂವರೆ ಕೋಟಿ ಜನರ ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಳಾಗಿದ್ದಾರೆ. ನಾನು ಮಾತನಾಡಿದ್ದಕ್ಕೆ ಇಷ್ಟು ಸಿಟ್ಟು ಬಂತು. ಆರೂವರೆ ಕೋಟಿ ಜನರು ಬಂದು ಕೇಳಿದರೆ....

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಚ್. ಆಂಜನೇಯ:–** ಸನ್ಮಾನ್ಯ ಸಭಾಪತಿಯವರೇ, ನಾನು ಮಾತನಾಡುವುದನ್ನು ಅವರು ತಾಳ್ಮೆಯಿಂದ ಕೇಳಲಿ.

**(ಗೊಂದಲ)**

**ಶ್ರೀ ಕೆ.ಬಿ. ಶಾಣಪ್ಪ:–** ಸನ್ಮಾನ್ಯ ಸಭಾಪತಿಯವರೇ, ನಾವು ಸಲಹೆಗಳನ್ನು ಕೊಟ್ಟಿದ್ದೇವೆ. ಅದರ ಬಗ್ಗೆ ಏನಾಯಿತು ಎಂದು ಕೇಳಿದ್ದೇವೆ.

**(ಗೊಂದಲ)**

**ಉಪ ಸಭಾಪತಿಯವರು:–** ಶ್ರೀ ಕೆ.ಬಿ. ಶಾಣಪ್ಪನವರೇ ........

**ಶ್ರೀ ಎಚ್. ಆಂಜನೇಯ:–** ಸನ್ಮಾನ್ಯ ಸಭಾಪತಿಯವರೇ, ಅವರು ಮಾತನಾಡಲೀ, ಇವತ್ತು ಇಡೀ ದಿನವೆಲ್ಲಾ ಚರ್ಚೆಯಾಗಲಿ. ನಾನು ಅನಂತರ ಮಾತನಾಡುತ್ತೇನೆ.

**ಶ್ರೀ ಕೆ.ಬಿ. ಶಾಣಪ್ಪ:–** ಸನ್ಮಾನ್ಯ ಸಭಾಪತಿಯವರೇ, ನಾವು ಅವರ ಮಾತಿಗೆ ಅಡ್ಡ ಬಂದಿಲ್ಲ.ಕೆಲವು ಸಲಹೆಗಳನ್ನು ಕೊಟ್ಟಿದ್ದೇವೆ ಅಷ್ಟೇ.

**(ಗೊಂದಲ)**

**ಉಪ ಸಭಾಪತಿಯವರು:–** ಸಚಿವರೇ, ಶ್ರೀ ರಾಮಚಂದ್ರಗೌಡರೇ,

**ಶ್ರೀ ರಾಮಚಂದ್ರಗೌಡ:–** ಸನ್ಮಾನ್ಯ ಸಭಾಪತಿಯವರೇ, ಮಧ್ಯದಲ್ಲಿ ಅವರು clarifications ಕೇಳುತ್ತಾರೆ.

**ಉಪ ಸಭಾಪತಿಯವರು:–** ಶ್ರೀ ಕೆ.ಬಿ. ಶಾಣಪ್ಪನವರೇ ಅವರ ಉತ್ತರ ಮುಗಿದ ಮೇಲೆ ಸ್ಪಷ್ಟೀಕರಣ ಕೇಳಿ.

**ಶ್ರೀ ಎಚ್. ಆಂಜನೇಯ:–** ಸನ್ಮಾನ್ಯ ಸಭಾಪತಿಯವರೇ, ಸ್ವಾಮಿ ದಯಮಾಡಿ ಅವರಿಗೆ ಹೇಳಿ. ವಿಷಯ ಬಂದಮೇಲೆ ಮಾತನಾಡುತ್ತಾರೋ ಅಥವಾ ಆ ವಿಷಯದ ಮೇಲೆ ಮಾತನಾಡುತ್ತಾರೆಯೇ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉಪ ಸಭಾಪತಿಯವರು:–** ನೋಡಿ ಸಚಿವರೇಅವರು ಏನೇನು ಸಲಹೆಗಳನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ಏನು ಕ್ರಮ ಕೈಗೊಂಡಿದ್ದೀರಿ ಎಂದು ನೇರವಾಗಿ ಕೇಳುತ್ತಿದ್ದಾರೆ. ನೀವು ಸಚಿವರಾಗಿದ್ದೀರಿ, ನೀವು ಸಿಟ್ಟು ಮಾಡಿಕೊಳ್ಳಬಾರದು. ಅವರು ಹಿರಿಯರು ಮತ್ತು ಅವರ ಅನುಭವದಲ್ಲಿ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ಉತ್ತರವನ್ನು ಕೊಡಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–**ಸನ್ಮಾನ್ಯ ಸಭಾಪತಿಯವರೇ, ಅವರ ಕಾಳಜಿ ಮತ್ತು ಬದ್ಧತೆಯ ಬಗ್ಗೆ ನಾವು ಪ್ರಶ್ನೆ ಮಾಡಿಲ್ಲ. ನಾವು ಈ ಸಮಸ್ಯೆಗಳನ್ನು ಪರಿಹಾರ ಮಾಡುವುದಕ್ಕೆ ಏನು ಮಾಡಬಹುದು. ಅದನ್ನು ಅವರು ಹೇಳಬೇಕಲ್ಲವೇ? ನಾವೆಲ್ಲರೂ ಪಕ್ಷಾತೀತವಾಗಿ ಇಡೀ ಸದನದಲ್ಲಿ ಬಹಳ ಕಾಳಜಿಯಿಂದ ಮಾತನಾಡುತ್ತಿದ್ದೇವೆ. .........

**(ಗೊಂದಲ)**

**ಉಪ ಸಭಾಪತಿಯವರು:–** ಸಚಿವರೇ ನನ್ನ ಕಡೆಗೆ ನೋಡಿ ಮಾತನಾಡಿ.

**ಶ್ರೀ ಎಚ್. ಆಂಜನೇಯ:–**ಸನ್ಮಾನ್ಯ ಸಭಾಪತಿಯವರೇ, ನಾನು ಒಬ್ಬ ಸಮಾಜ ಕಲ್ಯಾಣ ಸಚಿವನಾಗಿ **'ಹಾಡಿ'** ವಾಸ್ತವ್ಯ ಮಾಡುವುದಕ್ಕೆ ಅಲ್ಲಿಗೆ ಹೋಗಿದ್ದವನು. ಸ್ವಾತಂತ್ರ್ಯ ಬಂದು 70 ವರ್ಷವಾಗಿದೆ. ಆರು ಜಿಲ್ಲೆಗಳಲ್ಲಿ ಮಳೆ ಬರದೇ ಸಂದರ್ಭದಲ್ಲಿ ತಿನ್ನುವುದಕ್ಕೆ ಆಹಾರವಿಲ್ಲ, ನಾವು ನರಳುತ್ತಿದ್ದೇವೆ ನೀವು ಏನು ಮಾಡುತ್ತಿದ್ದೀರಿ ಎಂದು ಕೇಳಿದರು. ನಾನು ಕೂಡಲೇ ಆದೇಶ ಮಾಡಿ ಮತ್ತು ಸರ್ವೇ ಮಾಡಿ ಅವರೆಲ್ಲಾರಿಗೂ ಆಹಾರವನ್ನು ಒದಗಿಸುವಂತಹ ಕೆಲಸವನ್ನು ಮಾಡಿದ್ದೇನೆ. ಕಳೆದ ವಾರ ಮುಖ್ಯ ಮಂತ್ರಿಗಳ ಜೊತೆಯಲ್ಲಿ ಹೋಗಿ ಅದನ್ನು ವಿತರಣೆ ಮಾಡಿ ಬಂದಿದ್ದೇನೆ. ನಮಗೆ ಕಾಳಜಿ ಇದ್ದುದರಿಂದ ಅಲ್ಲಿ ಹೋಗಿದ್ದೆ. ಈಗ ನಾನೇ ಹಾಸ್ಟೆಲ್‌ಗೆ ಹೋಗುತ್ತಿದ್ದೇನೆ.

**ಶ್ರೀ ರಾಮಚಂದ್ರಗೌಡ:–**ಸನ್ಮಾನ್ಯ ಸಭಾಪತಿಯವರೇ, ಅವರಿಗೆ ಕಾಳಜಿ ಇಲ್ಲ ಎಂದು ಯಾರು ಹೇಳಲಿಲ್ಲ. ಅವರಿಗೆ ಬೇಕಾದಷ್ಟು ಕಾಳಜಿ ಇದೆ.

**ಶ್ರೀಮತಿ ತಾರಾಅನೂರಾಧ:–** ಸನ್ಮಾನ್ಯ ಸಭಾಪತಿಯವರೇ, ನಾವು ನೀಡುವ ಸಲಹೆಗಳನ್ನು ಅವರು ಸಕಾರಾತ್ಮಕವಾಗಿ ತೆಗೆದುಕೊಳ್ಳಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಚ್. ಆಂಜನೇಯ:–**ಸನ್ಮಾನ್ಯ ಸಭಾಪತಿಯವರೇ, ಬರೀ ಅಷ್ಟೇ ಅಲ್ಲ. ನಾನು ಹಾಸ್ಟೆಲ್‌ಗೆ ಹೋಗಿ ಮಕ್ಕಳ ಜೊತೆಯಲ್ಲಿ ಊಟ ಮಾಡಿ ಅಲ್ಲಿಯೇ ಮಲಗಿದ್ದೇನೆ. ನೀವು ನಂಬುತ್ತೀರೋ ಇಲ್ಲವೋ ಗೊತ್ತಿಲ್ಲ. ಬೆಳಗಾವಿ ಅಧಿವೇಶನದಲ್ಲಿ ನಾನು ಎಲ್ಲಿ ಊಟ ಮಾಡಿದ್ದು ಹೇಳಿ ನೋಡೋಣ, ಹಾಸ್ಟೆಲ್‌ನ ಮಕ್ಕಳು ಆ ಊಟವನ್ನು ತಿನ್ನುತ್ತಾರಲ್ಲಾ, ನನಗೆ ಆ ಮಕ್ಕಳ ಊಟವನ್ನೆ ನೀವು ತಂದು ಕೊಡಬೇಕು. ನಾನು five star hotel ನಲ್ಲಿದ್ದರೂ ಸಹ ನಾನು ಆ ಊಟವನ್ನು ತರಿಸಿಕೊಂಡು ಊಟ ಮಾಡಿದ್ದೇನೆ. ಒಂದು ದಿನ ಹಾಸ್ಟೆಲ್ ಮಕ್ಕಳ ಜೊತೆಗೆ ಹೋಗಿ ಊಟವನ್ನು ಮಾಡಿಕೊಂಡು ಬರುತ್ತೇನೆ. ಕಾರಣವೇನೆಂದರೆ, ಅಲ್ಲಿಗೆ ನಾವೆಲ್ಲಾ ಹೋಗಿ ಊಟ ಮಾಡಿದರೆ ವ್ಯವಸ್ಥೆ ಸರಿಯಾಗುತ್ತದೆ ಎನ್ನುವ ದೃಷ್ಟಿಯಿಂದ.

**ಸೋಮಣ್ಣ ಮ. ಬೇವಿನಮರದ:–** ಸನ್ಮಾನ್ಯ ಸಭಾಪತಿಯವರೇ, ಅವರು 'ಹಾಸ್ಟೆಲ್‌ಗೆ ಬರುತ್ತೇನೆಂದು' ಹೋಗಿರಬಹುದು.

**ಶ್ರೀ ಎಚ್. ಆಂಜನೇಯ:–**ಸನ್ಮಾನ್ಯ ಸಭಾಪತಿಯವರೇ, ಇಲ್ಲ ಹೇಳದೇ ಹೋಗಿದ್ದೇನೆ.

**ಸೋಮಣ್ಣ ಮ. ಬೇವಿನಮರದ :–** ಸನ್ಮಾನ್ಯ ಸಭಾಪತಿಯವರೇ, ಅವರು ಮೊದಲೇ ಯಾಕೆ ಹೇಳಿಲಿಲ್ಲ. ಅವರು ಮೊದಲೇ ಹೇಳಿ ಹೋಗಿದ್ದಿರೋ ಅಥವಾ ಹೇಳದೇ ಹೋಗಿದ್ದಿರೋ?

**ಶ್ರೀ ಎಚ್. ಆಂಜನೇಯ:–**ಸನ್ಮಾನ್ಯ ಸಭಾಪತಿಯವರೇ, ಬನ್ನಿ ನಿಮ್ಮನ್ನು ಕರೆದುಕೊಂಡು ಹೋಗುತ್ತೇನೆ.

**ಸೋಮಣ್ಣ ಮ. ಬೇವಿನಮರದ :–** ಸನ್ಮಾನ್ಯ ಸಭಾಪತಿಯವರೇ, ಒಬ್ಬ ಮಿನಿಸ್ಟರ್ ಬಂದು ಊಟ ಮಾಡುತ್ತಾರೆಂದು ತರಿಸಿರಬಹುದು ಎಂದು ನಾವು ಕೇಳುತ್ತಿರುವುದು.

**ಶ್ರೀ ಕವಟಗಿ ಮಹಂತೇಶ ಮಲ್ಲಿಕಾರ್ಜುನ:–**ಸನ್ಮಾನ್ಯ ಸಭಾಪತಿಯವರೇ, Let us be very frank about what practically the Hon'ble Minister has done. ಹಾಸ್ಟೆಲ್‌ಗಳ ಬಗ್ಗೆ ಮತ್ತು ಅಲ್ಲಿರುವ ವಿದ್ಯಾರ್ಥಿಗಳ ಬಗ್ಗೆ ತಮ್ಮ ಕಳಕಳಿ ಮತ್ತು ಬದ್ಧತೆಯ ಬಗ್ಗೆ ಎರಡು ಮಾತಿಲ್ಲ. ತಾವು ದಯವಿಟ್ಟು ಗಮನಿಸಬೇಕು.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಚ್. ಆಂಜನೇಯ:–** ಸನ್ಮಾನ್ಯ ಸಭಾಪತಿಯವರೇ, ಆಯಿತು ನೇರವಾಗಿ ವಿಷಯಕ್ಕೆ ಬರುತ್ತೇನೆ. ನಮ್ಮ ಹಿರಿಯ ಸದಸ್ಯರು ಮತ್ತು ಮಾಜಿ ಕೇಂದ್ರದ ಸಚಿವರಾದಂತಹ ಮಾನ್ಯ ಬಸವನಗೌಡ ಯತ್ನಾಳ್‌ರವರು ಹೇಳಿದರು. ಪ್ರತಿಷ್ಠಿತ ಶಾಲೆಯಲ್ಲಿ ಓದುತ್ತಿರುವ ಮಕ್ಕಳಿಗೆ ಅನ್ಯಾಯವಾಯಿತು, ನಾನು ಕೊಡುತ್ತಿದ್ದೆ ಎಂದು ಹೇಳಿದರು. ಎಲ್ಲೆಲ್ಲಿ ಪ್ರತಿಷ್ಠಿತ ಶಾಲೆಗೆ ಮಕ್ಕಳನ್ನು ಅಡ್ಮಿಷನ್ ಮಾಡಿಕೊಳ್ಳುತ್ತಾರೋ ನಿಮ್ಮ ಜೊತೆ negotiation ಮಾಡಿ, ಅದನ್ನು ಕೊಡುವಂತಹ ಕೆಲಸವನ್ನು ಕೂಡ ಮಾಡುತ್ತಿದ್ದೇವೆ. ಪಾರದರ್ಶಕವಾಗಿ ಆಹಾರ ಪದಾರ್ಥಗಳನ್ನು ತರುವ ಮತ್ತು ಸರಬರಾಜು ಮಾಡುವುದಕ್ಕೆ ಬಹಳ ಕಠಿಣವಾದ ಕ್ರಮಗಳನ್ನು ಮಾಡಿದ್ದೇವೆ. ಇನ್ನು ಹಾಸ್ಟೆಲ್‌ಗಳಲ್ಲಿ ಹಾಸಿಗೆ, ಸಿಸಿ ಕ್ಯಾಮರಾಗಳು ಮತ್ತು ಸಿಬ್ಬಂದಿಗಳಿಲ್ಲ ಎಂದು ಹೇಳುತ್ತಿದ್ದಾರೆ. ಹಾಸ್ಟೆಲ್ ವಾರ್ಡನ್ ಆಗುವುದಕ್ಕೆ ಬಿ.ಎಸ್ಸಿ, ಬಿ.ಎಡ್ ಆಗಿರಬೇಕು. ಅವರು ಪಾಠವನ್ನು ಹೇಳಬೇಕು ಎನ್ನುವ ದೃಷ್ಟಿಯಿಂದ ಖಾಲಿಯಿರುವ ಎಲ್ಲಾ ಹುದ್ದೆಗಳನ್ನು ತುಂಬುವುದಕ್ಕೆ ಕ್ರಮವನ್ನು ಕೈಗೊಂಡಿದ್ದೇವೆ. ಮುಂದಿನ ಶೈಕ್ಷಣಿಕ ವರ್ಷದೊಳಗಾಗಿ ಹಾಸ್ಟೆಲ್ ವಾರ್ಡನ್‌ಗಳ ಕೊರತೆ ಏನಿದೆ ಅದನ್ನು ಪೂರ್ಣವಾಗಿ ನಿವಾರಿಸುತ್ತೇವೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಹಾಸ್ಟೆಲ್‌ಗಳಲ್ಲಿ ಸಿಸಿ ಕ್ಯಾಮರಾಗಳಿಲ್ಲ ಎಂದೂ ಹೇಳಿದ್ದಾರೆ. ಸಿಸಿ ಕ್ಯಾಮರಾಗೆ ಈಗಾಗಲೇ ಆರ್ಡರ್ ಕೊಟ್ಟಿದ್ದೇವೆ. ಅದನ್ನು ಕೂಡ ಮುಂದಿನ ಶೈಕ್ಷಣಿಕ ವರ್ಷದಲ್ಲಿ ಸಿಸಿ ಕ್ಯಾಮರಗಳ ಕೊರತೆಯಿಲ್ಲದಂತೆ ಒದಗಿಸಲಾಗುತ್ತದೆ.

**ಶ್ರೀ ರಾಮಚಂದ್ರಗೌಡ:–**ಸನ್ಮಾನ್ಯ ಸಭಾಪತಿಯವರೇ, ಎನ್‌ಜಿಓಗಳಿಗೆ ಕೊಟ್ಟಿದ್ದೀರಾ. ...

**ಶ್ರೀ ಎಚ್. ಆಂಜನೇಯ:–**ಸನ್ಮಾನ್ಯ ಸಭಾಪತಿಯವರೇ, ಇಲ್ಲ ಇಲ್ಲ ಅದನ್ನೆಲ್ಲಾ ಕೊಡುವುದಕ್ಕೆ ಆಗುವುದಿಲ್ಲ. ಎನ್‌ಜಿಓಗಳು ಏನು ಸತ್ಯ ಹರಿಶ್ಚಂದ್ರರಲ್ಲ. ಈಗ ಅವರು ಮಠ ಮಾನ್ಯಗಳಿಗೆ ಹೇಳಿದ್ದೀರಾ. ಈಗಾಗಲೇ ಮಠ ಮಾನ್ಯಗಳಿಗೆ ಅನುದಾನವನ್ನು ಕೊಡುತ್ತಿದ್ದೇವೆ. ಎಲ್ಲಾ ಮಠ ಮಾನ್ಯದವರು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮತ್ತು ಸಮಾಜ ಕಲ್ಯಾಣ ಇಲಾಖೆಯಿಂದ ಮಕ್ಕಳನ್ನು ಅಡ್ಮಿಷನ್ ಮಾಡಿಕೊಂಡು, ಊಟ ಮತ್ತು ವಸತಿಯನ್ನು ಕೊಡುತ್ತಾರೋ ಅವರಿಗೆ ನಾವು ಅನುದಾನವನ್ನು ಕೊಡುತ್ತಿದ್ದೇವೆ. ಅದಲ್ಲದೇ ಹೆಚ್ಚಾಗಿರುವ ಮಕ್ಕಳಿಗೆ ಸರ್ಕಾರದ ವಿದ್ಯಾರ್ಥಿ ನಿಲಯವನ್ನು ತೆರೆದು ಅವರಿಗೆ ಊಟ, ವಸತಿ ಮಾಡಿಕೊಡುತ್ತಿದ್ದೇವೆ. ಆದುದರಿಂದ, ಈ ವಿಚಾರವಾಗಿ ನನ್ನ ಬಳಿ ಬಂದಂತಹ ಅವರ ಪಕ್ಷದ ಮಹಿಳಾ ಘಟಕದವರನ್ನು ಬಹಳ ಹೊತ್ತು ಕೂರಿಸಿಕೊಂಡು, ಅವರ ಹತ್ತಿರ ಚರ್ಚೆ ಮಾಡಿದ್ದೇನೆ. ತಾವು ನೋಡಿಕೊಂಡು ಬಂದಿರುವುದು ಬಾಡಿಗೆ ಕಟ್ಟಡ. ಆ ಬಾಡಿಗೆ ಕಟ್ಟಡಕ್ಕೆ ಸರಿಯಾದ ಮೂಲಭೂತ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸೌಕರ್ಯವನ್ನು ಕೊಡುವುದಕ್ಕೆ ಆಗುವುದಿಲ್ಲ ಮತ್ತು ಕಡಿಮೆ ವಿಸ್ತೀರ್ಣದ ಕಟ್ಟಡದಲ್ಲಿ ಅವರು ವಾಸ ಮಾಡುತ್ತಿದ್ದಾರೆ ಮತ್ತು ಅಲ್ಲಿ ಅನಾನುಕೂಲವಾಗುತ್ತಿದೆ. ಈಗಾಗಲೇ ನಿವೇಶನವನ್ನು ಪಡೆದಿದ್ದೇವೆ. ಮುಂದಿನ ದಿನಗಳಲ್ಲಿ ಸ್ವಂತ ಕಟ್ಟಡಗಳನ್ನು ಕಟ್ಟಿ, ಮಕ್ಕಳಿಗೆ ಎಷ್ಟೋ ಸಾಧ್ಯವೋ ಅಷ್ಟು ಮೂಲಭೂತ ಸೌಕರ್ಯಗಳು ಮತ್ತು ಒಳ್ಳೆಯ ವಾತವಾರಣವನ್ನು ನಿರ್ಮಾಣ ಮಾಡುತ್ತೇನೆ. ಅವರು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಕ್ಕಾಗಿ, ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇವತ್ತು ಅವರು ಎಲ್ಲೆಲ್ಲಿ ನ್ಯೂನತೆಗಳಿವೆ ಎನ್ನುವುದರ ಬಗ್ಗೆ ಮತ್ತು ಈ ಸದನದ ಎಲ್ಲಾ ಸದಸ್ಯರುಗಳು ಕೊಟ್ಟಂತಹ ಸಲಹೆಗಳನ್ನು ನಾನು ಬಹಳ ಗೌರವಪೂರ್ವಕವಾಗಿ ಸ್ವೀಕಾರ ಮಾಡುತ್ತೇನೆ. ನಾನು ಅವರೆಲ್ಲರ ಸಲಹೆ ಸೂಚನೆಯಂತೆ, ತ್ವರಿತಗತಿಯಲ್ಲಿ ಅದಕ್ಕೆ ಒಂದು ಕಾಯಕಲ್ಪ ನೀಡುವ ಕೆಲಸವನ್ನು ನಿರ್ವಹಿಸುತ್ತೇನೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ವಿನಯಪೂರ್ವಕವಾಗಿ ನಾನು ತಮ್ಮ ಮುಖಾಂತರ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಾವು ಸುಮಾರು 18 ಕೋಟಿ ರೂಪಾಯಿಗಳ ಹಣವನ್ನು ಕೇವಲ ಹಾಸ್ಟೆಲ್‌ಗಳಿಗೆ ಮಾತ್ರ ಖರ್ಚು ಮಾಡುವುದಿಲ್ಲ. ಈಗ ಉದಾಹರಣೆಗೆ ಕೃಷಿ ಇಲಾಖೆಯಲ್ಲಿ SCP/TSP ಅಡಿಯಲ್ಲಿ ಸುಮಾರು 500 ಕೋಟಿ ರೂಪಾಯಿಗಳ ಹಣ ಬರುತ್ತದೆ.

**(103) 9.2.2017 6.00 ಪಿಕೆ:ಎಕೆ**

**ಶ್ರೀ ಹೆಚ್.ಆಂಜನೇಯ** (ಮುಂದು):

ಮಾನ್ಯ ಸಭಾಪತಿಯವರೇ, ನೀರಾವರಿ ಇಲಾಖೆಯಲ್ಲಿ ರೂ.10 ಸಾವಿರ ಕೋಟಿ ಇದೆ. ಅವರು ರೂ.10 ಸಾವಿರ ಕೋಟಿಯಲ್ಲಿ ರೂ.2000 ಕೋಟಿಗಳನ್ನು ಕೊಡುತ್ತಾರೆ. ಅದರಿಂದ, ಕೊಳವೆ ಬಾವಿಗಳನ್ನು ಕೊರೆಸುವುದಕ್ಕೆ, ಹರಿಜನರ ಕೇರಿಗಳನ್ನು ಸಿಸಿ ರಸ್ತೆ ಮಾಡುವುದಕ್ಕೆ, ಹರಿಜನರು ಹೆಚ್ಚಿನ ಜಮೀನನ್ನು ಹೊಂದಿದ್ದರೆ ಏತ ನೀರಾವರಿ ಮಾಡುವುದಕ್ಕೆ ಬಳಕೆ ಮಾಡಲಾಗುತ್ತದೆ. ಹೀಗೆ 33 ಇಲಾಖೆಗಳಿಗೆ ರೂ.19 ಸಾವಿರ ಕೋಟಿಗಳು ಹಂಚಿ ಹೋಗುತ್ತದೆ. ಅಷ್ಟೂ ಹಣ ನಮ್ಮ ಹತ್ತಿರ ಇರುವುದಿಲ್ಲ.

**ಶ್ರೀ ಕೆ.ಬಿ.ಶಾಣಪ್ಪ:–** ನಮಗೆ ರೂ.19 ಸಾವಿರ ಕೋಟಿ ಪೂರ್ತಿ ಹಣ ಸಿಗುವುದಿಲ್ಲ, ಸುಮಾರು ರೂ.6 ಸಾವಿರ ಕೋಟಿ ಹಣ ಮಾತ್ರ ಸಿಗುತ್ತದೆ ಎಂದು ಹೇಳಿಬಿಡಿ.

**ಶ್ರೀ ಹೆಚ್.ಆಂಜನೇಯ:–** ಮಾನ್ಯ ಸಭಾಪತಿಯವರೇ, ನಮ್ಮಲ್ಲಿ ಹಣದ ಕೊರತೆ ಇಲ್ಲ. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಮಾತ್ರ ಹಣದ ಕೊರತೆ ಇದೆ. ಎಸ್‌ಸಿ–ಎಸ್‌ಟಿ ಅವರಿಗೆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಂಬಂಧಪಟ್ಟಂತೆ ಹಾಸ್ಟೆಲ್ ಕಟ್ಟುವುದಕ್ಕೆ, ಅವರಿಗೆ ಬೇಕಾದ ಮೂಲಭೂತ ಸೌಕರ್ಯಗಳನ್ನು ನೀಡುವುದಕ್ಕೆ ಹಣದ ಕೊರತೆ ಇಲ್ಲ. ಎಲ್ಲಾ ಸಮಸ್ಯೆಗಳನ್ನು ನೀಗಿಸುತ್ತೇವೆ. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟಂತೆ ಕೊರತೆ ಇದೆ. ಈ ಕುರಿತು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೇವೆ. ಇಂತಿಷ್ಟು ಬಾಡಿಗೆ ಕಟ್ಟಡಗಳಿವೆ, 50 ಶಾಲೆಗಳಿಗೆ ಸಂಬಂಧಪಟ್ಟಂತೆ ನಿವೇಶನ ಪಡೆದುಕೊಂಡಿದ್ದೇವೆ, ಅಲ್ಲಿ ಸ್ವಂತ ಕಟ್ಟಡವನ್ನು ಕಟ್ಟಬೇಕು, ಹಿಂದುಳಿದ ವರ್ಗಗಳಿಗೆ ಸಂಬಂಧಿಸಿದ ಮೊರಾರ್ಜಿ ದೇಸಾಯಿ ಮತ್ತು ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳು ಏನಿವೆ ಅವು ಸಣ್ಣ ಸಣ್ಣ ಕಟ್ಟಡಗಳನ್ನು ಹೊಂದಿವೆ, ಈ ವಸತಿ ಶಾಲೆಗಳಿಗೂ ಸ್ವಂತ ಕಟ್ಟಡ ಕಟ್ಟುವ ನಿಟ್ಟಿನಲ್ಲಿ ಬಹಳಷ್ಟು ದುಡ್ಡ ಬೇಕಾಗುತ್ತದೆ ಎನ್ನುವ ಬೇಡಿಕೆಯನ್ನು ಮುಖ್ಯಮಂತ್ರಿಗಳ ಮುಂದೆ ಇಟ್ಟಿದ್ದೇವೆ. ಅವರು, ಈ ಸಲದ ಬಜೆಟ್‌ನಲ್ಲಿ ಹಣ ಒದಗಿಸುತ್ತೇನೆ ಎಂದು ಹೇಳಿದ್ದಾರೆ. ಹಾಗಾಗಿ, ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಹಾಸ್ಟೆಲ್‌ಗಳ ಸುಧಾರಣೆಗೆ ಮತ್ತು ಅವರ ಅಭಿವೃದ್ಧಿಗೆ ನಮ್ಮಲ್ಲಿ ಸಾಕಷ್ಟು ಹಣ ಇದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸಿಬ್ಬಂದಿಗಳ ಕೊರತೆ ಬಗ್ಗೆ ಹೇಳಿದ್ದೀರಿ. ವಾಚ್‌ಮೆನ್‌ಗಳ ನೇಮಕದ ಬಗ್ಗೆ ಹೇಳಿದರು. ಹೊರಗುತ್ತಿಗೆ ಆಧಾರದ ಮೇಲೆ ವಾಚ್‌ಮೆನ್‌ಗಳನ್ನು ನೇಮಿಸಿಕೊಂಡಿದ್ದು ಅವರು ಕಾರ್ಯನಿರ್ವಹಿಸುತ್ತಿದ್ದಾರೆ. ವಾಚ್‌ಮೆನ್‌ಗಳನ್ನು ಖಾಯಂ ಆಗಿ ತೆಗೆದುಕೊಳ್ಳಬೇಕು ಎನ್ನುವುದು ನಮ್ಮ ಉದ್ದೇಶ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್**:- ಮಾನ್ಯ ಸದಸ್ಯರು, ಒಂದು ಹಾಸ್ಟೆಲನ್ನು ಒಬ್ಬನೇ ನೋಡಿಕೊಳ್ಳದೇ 3-4 ಹಾಸ್ಟೆಲ್‌ಗಳನ್ನು ನೋಡಿಕೊಳ್ಳುತ್ತಿದ್ದೇನೆ ಎಂದು ಹೇಳಿದರು.

**ಶ್ರೀ ಹೆಚ್.ಆಂಜನೇಯ:-** ಮಾನ್ಯ ಸದಸ್ಯರಾದ ಸೋಮಣ್ಣ ಬೇವಿನಮರದರವರು, ವಾರ್ಡನ್‌ಗಳ ಕೊರತೆ ಇದೆ, ಇದರಿಂದ ಒಬ್ಬ ವಾರ್ಡನ್ 3-4 ಹಾಸ್ಟೆಲ್‌ನ ಕೆಲಸವನ್ನು ನಿರ್ವಹಣೆ ಮಾಡುತ್ತಿದ್ದೇನೆ ಎಂದು ಹೇಳಿದರು. ಹೌದು, ಒಬ್ಬ ವಾರ್ಡನ್ 3-4 ಹಾಸ್ಟೆಲ್‌ಗಳನ್ನು ನೋಡಿಕೊಳ್ಳುತ್ತಿದ್ದಾನೆ ಎಂದು ನಾನೇ ಹೇಳುತ್ತಿದ್ದೇನೆ. ವಾರ್ಡನ್‌ಗಳ ಕೊರತೆಯಿಂದ ಹೀಗಾಗುತ್ತಿದೆ. ಈ ಸಮಸ್ಯೆಯನ್ನೂ ಮುಂದಿನ ದಿನಗಳಲ್ಲಿ ನೀಗಿಸುತ್ತೇವೆ.

**ಶ್ರೀ ಸೋಮಣ್ಣ ಮ.ಬೇವಿನಮರದ:-** ಮಾನ್ಯ ಸಭಾಪತಿಯವರೇ, ನಾನೂ ಕೂಡ ಆ ಸಮಿತಿಯಲ್ಲಿ 2 ವರ್ಷಗಳ ಕಾಲ ಸದಸ್ಯನಾಗಿ ಕೆಲಸ ಮಾಡಿದ್ದೇನೆ. ಖಾಯಂ ಆಗಿ ವಾರ್ಡನ್ ಇಲ್ಲ ಎಂದು ಹೇಳುತ್ತಾರೆ. ಎಸ್‌ಎಸ್‌ಎಲ್‌ಸಿ ಹುಡುಗರ ಪರ್ಸೆಂಟೇಜ್ ಕಡಿಮೆ ಆಗುವುದರಿಂದ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಎಸ್‌ಎಸ್‌ಎಲ್‌ಸಿಯವನೇ ಅಲ್ಲಿ ಹೋಗಿ ಪಾಠ ಹೇಳಿದರೆ ಆಗುವುದಿಲ್ಲ. ಮತ್ತೆ, ನೀವು ಕೊಡುವ ರೂ.1000 ಅಥವಾ ರೂ.1500ಕ್ಕೆ ಬಿಎಸ್‌ಸಿ, ಬಿಎಡ್, ಮಾಡಿಕೊಂಡವನು ಬರುವುದಿಲ್ಲ. ಮುಂದಿನ ಶೈಕ್ಷಣಿಕ ವರ್ಷದಿಂದ ಸೂಕ್ತ ವ್ಯಕ್ತಿಗಳನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತಿದ್ದೀರಿ. ಹಾಗಾದರೆ ಈ ವರ್ಷ ಏನು 1 ಲಕ್ಷ 4 ಸಾವಿರ ಹುಡುಗರು ಕಲಿಯುತ್ತಿದ್ದಾರೋ ಅವರೆಲ್ಲರೂ ಅನುತ್ತೀರ್ಣರಾಗಬೇಕೇ? ಈ ಪರಿಸ್ಥಿತಿಯನ್ನು ತಪ್ಪಿಸಲು ಬೇರೆ ಏನಾದರೂ ವ್ಯವಸ್ಥೆ ಮಾಡಿ. ಬಿಎಸ್‌ಸಿ, ಬಿಎಡ್ ಆದವರನ್ನು ಕರೆಸಿ ಟ್ಯೂಷನ್ ಹೇಳಿಸುವಂತಹ ವ್ಯವಸ್ಥೆಯಾಗಲಿ ಎನ್ನುವುದನ್ನು ಕಳಕಳಿಯಿಂದ ಹೇಳುತ್ತಿದ್ದೇನೆ. ರೂ. 19000 ಕೋಟಿ ಅಥವಾ ರೂ.6000 ಕೋಟಿ ಎಂದು ಏನು ಹೇಳುತ್ತಿದ್ದೀರೋ ಅದರ ಜೊತೆ ಇನ್ನೊಂದು ಸಾವಿರ ಕೋಟಿ ರೂಪಾಯಿಗಳನ್ನು ಸೇರಿಸಿ ಸೂಕ್ತ ವ್ಯವಸ್ಥೆ ಮಾಡಿಸಿ. ರೂ. 1000 ಕೋಟಿ ಉಳಿಸುವುದಕ್ಕೆ ಹೋಗಿ ಇಟ್ಟಿರುವ ರೂ.6000 ಕೋಟಿ ವ್ಯರ್ಥವಾಗುವುದು ಬೇಡ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ಮನೆಯಲ್ಲಿ ಓದುವ ವ್ಯವಸ್ಥೆ ಚೆನ್ನಾಗಿಲ್ಲ ಎಂದು ಆ ಮಕ್ಕಳು ಇಲ್ಲಿದ್ದರೆ ಹಾಸ್ಟೆಲ್, ಊಟ, ವಸತಿ ಎಲ್ಲವನ್ನೂ ಕೊಡುತ್ತೇವೆ ಎಂದು ಮನೆಯಿಂದ ಕರೆದುಕೊಂಡು ಬರುತ್ತೇವೆ. ಹಾಗೆ ಕರೆದುಕೊಂಡು ಬಂದಮೇಲೆ ಅವರನ್ನು ನೋಡಿಕೊಳ್ಳುವ ಜವಾಬ್ದಾರಿ ನಮ್ಮದು ಹೌದೋ ಅಲ್ಲವೋ? ನಮ್ಮ ಮನೆಯ ಮಗುವನ್ನು ಕಳುಹಿಸುವಾಗ ನಾವು ಹೇಗೆ ಯೋಚನೆ ಮಾಡುತ್ತೇವೆ? ಕಾವಲುಗಾರನ ನೇಮಕ ಮಾಡುವುದಕ್ಕೆ ಸಮಸ್ಯೆ ಇದೆ, ವಾರ್ಡನ್ ನೇಮಕ ಮಾಡುವುದಕ್ಕೆ ಸಮಸ್ಯೆ ಇದೆ, ಶಿಕ್ಷಕನನ್ನು ನೇಮಕ ಮಾಡುವುದಕ್ಕೆ ಸಮಸ್ಯೆ ಇದೆ, ಒಳ್ಳೆಯ ಕಟ್ಟಡ ಕಟ್ಟುವುದಕ್ಕೆ ಸಮಯಬೇಕು, ಹಣದ ಕೊರತೆ ಇದೆ ಎಂದು ಹೇಳುತ್ತೀರಿ, ಒಪ್ಪಿಕೊಳ್ಳುತ್ತೇವೆ. ಹಾಗಾದರೆ ಆ ಮಕ್ಕಳನ್ನು ಏಕೆ ಕರೆದುಕೊಂಡು ಬರಬೇಕು? ನಿಮ್ಮ 433 ಹಾಸ್ಟೆಲ್‌ಗಳಿಗೆ ಮತ್ತು 307 ಖಾಸಗಿ ಕಟ್ಟಡಗಳಲ್ಲಿರುವ ಹಾಸ್ಟೆಲ್‌ಗಳಿಗೆ ಭೇಟಿ ಕೊಟ್ಟಿದ್ದಾರೆ. ಮಾನ್ಯ ಶಾಣಪ್ಪನವರು ಹೇಳಿದ ಹಾಗೆ, ಉತ್ತಮ ವ್ಯವಸ್ಥೆ ಇಲ್ಲದೇ ಇರುವಂತಹ ಖಾಸಗಿ ಕಟ್ಟಡಗಳಲ್ಲಿರುವ ಹಾಸ್ಟೆಲ್‌ಗಳನ್ನಾದರೂ ಪೈಲೆಟ್ ಪ್ರಾಜೆಕ್ಟ್ ಆಗಿ ಬೇರೆಯವರಿಗೆ ಕೊಟ್ಟು ನೋಡಲಿ. ಖಾಸಗಿ ಕಟ್ಟಡಗಳಲ್ಲಿರುವ ಹಾಸ್ಟೆಲ್‌ಗಳಿಗೆ ಸಂಬಂಧಪಟ್ಟಂತೆ ಸಮಸ್ಯೆಗಳಿವೆ ಎಂದು ನೀವೇ ಒಪ್ಪಿಕೊಳ್ಳುತ್ತೀರಿ. ಸರಿಯಾದ ಕಟ್ಟಡ ಸಿಕ್ಕಿಲ್ಲ, ವಾರ್ಡನ್ ಇಲ್ಲ, ಶಿಕ್ಷಕ-ಸಿಬ್ಬಂದಿಗಳನ್ನು ಕೊಡುವುದಕ್ಕಾಗುತ್ತಿಲ್ಲ ಎಂದು ಹೇಳಿದ್ದೀರಿ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಹೆಚ್.ಆಂಜನೇಯ:-**ಮಾನ್ಯ ಸಭಾಪತಿಯವರೇ, ಎಸ್‌ಸಿ, ಬಿಎಡ್ ಮಾಡಿಕೊಂಡಿರುವವನು ಸಂಜೆ ಹೊತ್ತು ಪಾಠ ಮಾಡಬೇಕು ಎನ್ನುವುದು ನಮ್ಮ ಉದ್ದೇಶ. ಬಹಳ ಡಲ್ ಆಗಿರುವಂತಹ ವಿದ್ಯಾರ್ಥಿಗಳನ್ನು ಪ್ರತ್ಯೇಕವಾಗಿ ಟ್ಯೂಷನ್ ಕೊಡುವುದಕ್ಕೆ ಖಾಸಗಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಬೇಕು ಎನ್ನುವುದು ನಮ್ಮ ಉದ್ದೇಶವಾಗಿದೆ. ಎಷ್ಟು ಹಾಸ್ಟೆಲ್‌ಗಳಿವೆ, ಎಷ್ಟು ಮಕ್ಕಳು ಓದುತ್ತಿದ್ದಾರೆ ಈ ಎಲ್ಲದರ ಕುರಿತು ಒಂದು ಶ್ವೇತಪತ್ರವನ್ನೇ ಹೊರಡಿಸುತ್ತೇನೆ.

**ಕ್ಯಾಪ್ಟನ್ ಗಣೇಶ್ ಕಾಣಿಕ್:-** ಒಂದು ಸದನ ಸಮಿತಿ ಮಾಡಿ ಎಂದು ನಾವು ಮನವಿ ಮಾಡಿಕೊಂಡೆವು. ನೀವು ಶ್ವೇತಪತ್ರವನ್ನು ನಂತರ ಹೊರಡಿಸಿ . . .

**ಶ್ರೀ ಹೆಚ್.ಆಂಜನೇಯ:-** ಮಾನ್ಯ ಸಭಾಪತಿಯವರೇ, ದಯವಿಟ್ಟು ನನ್ನ ಮಾತುಗಳನ್ನು ಕೇಳಿ. ನಾನು ಮಾತನಾಡುತ್ತಿರುವಾಗ ಮಧ್ಯದಲ್ಲಿ ನೀವು ಎದ್ದು ನಿಂತು ಮಾತನಾಡಿದರೆ ನನ್ನ ಭಾಷಣದ ಹರಿವು ನಿಂತುಹೋಗುತ್ತದೆ. ನೀವು ಮಾತನಾಡುವಾಗಲೂ ಕೂಡ ಬೇರೆಯವರು ಹೀಗೆ ಎದ್ದು ಮಾತನಾಡಬಾರದು. ನಿರಂತರವಾಗಿ ಮಾತನಾಡುವುದಕ್ಕೆ ಅವಕಾಶ ಕೊಟ್ಟರೆ ಬೇಗ ಉತ್ತರ ಕೊಟ್ಟು ಮುಗಿಸಬಹುದು, ಇಲ್ಲದೇ ಇದ್ದರೆ ಬೆಳಕು ಹರಿಯುವವರೆಗೆ ಮಾತನಾಡಬೇಕಾಗುತ್ತದೆ. ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರ ಕಳಕಳಿ ನನಗೆ ಅರ್ಥವಾಗುತ್ತದೆ. ಕಳಪೆ ಫಲಿತಾಂಶ ಬರುತ್ತದೆ ಎನ್ನುವ ಕಲ್ಪನೆ ನಿಮಗೆ ಇದೆ. ನಮ್ಮ ಹಾಸ್ಟೆಲ್‌ಗಳು ಎಷ್ಟಿವೆ ಎನ್ನುವುದನ್ನು ನಾನು ಹೇಳುತ್ತೇನೆ. 4 ಇಲಾಖೆಗಳ ವತಿಯಿಂದ ಹಾಸ್ಟೆಲ್‌ಗಳು ನಡೆಯುತ್ತಿವೆ. ಸಮಾಜ ಕಲ್ಯಾಣ ಇಲಾಖೆಯಿಂದ ನಡೆಸುವ ಹಾಸ್ಟೆಲ್‌ಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ನಡೆಸುವ ಹಾಸ್ಟೆಲ್‌ಗಳು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಯಿಂದ ನಡೆಸುವ ಹಾಸ್ಟೆಲ್‌ಗಳು ಮತ್ತು ರೆಸಿಡೆನ್ಶಿಯಲ್ ಶಾಲೆ. ಇದಲ್ಲದೇ ಪರಿಶಿಷ್ಟ ವರ್ಗಗಳ ಇಲಾಖೆಯಿಂದ ನಡೆಸುವಂತಹ ಶಾಲೆಗಳು ಹಾಗೂ ಆಶ್ರಯ ಶಾಲೆಗಳು ಇವೆ. ಎಷ್ಟು ಶಾಲೆಗಳಿವೆ, ಎಷ್ಟು ಮಕ್ಕಳಿದ್ದಾರೆ, ಏನೇನು ವೆಚ್ಚ ಮಾಡುತ್ತಿದ್ದೇವೆ, ಅವರ ಫಲಿತಾಂಶ ಎಷ್ಟು ಬರುತ್ತದೆ ಎನ್ನುವ ಮಾಹಿತಿಯನ್ನು ಸದನದ ಗಮನಕ್ಕೆ ತರುತ್ತೇನೆ. ನಮ್ಮ ಹಾಸ್ಟೆಲ್‌ಗಳಲ್ಲಿ ಓದುವ ಮಕ್ಕಳಿಗೆ ಸಂಬಂಧಪಟ್ಟಂತೆ ಕ್ರಾಂತಿಕಾರಕ ಕಾರ್ಯಕ್ರಮವನ್ನು ಮಾಡಿದ್ದೇವೆ. ಮಾನ್ಯ ಸಿದ್ಧರಾಮಯ್ಯನವರು ಓದುತ್ತಿದ್ದ ಸಂದರ್ಭದಲ್ಲಿ ಒಂದು ರೂಮ್‌ನಲ್ಲಿ ಇದ್ದು ತಾವೇ ಅಡಿಗೆ ಮಾಡಿಕೊಳ್ಳುತ್ತಿದ್ದರು. ಬೇರೆಯವರಿಗೆ ಇಂತಹ ಅವಕಾಶ ಸಿಗಲಿಲ್ಲ. ಈ ರೀತಿ ಅವಕಾಶ ಸಿಗಲಿ ಎನ್ನುವ ದೃಷ್ಟಿಯಿಂದ "ವಿದ್ಯಾಶ್ರೀ" ಎನ್ನುವ ಹೊಸ ಕಾರ್ಯಕ್ರಮವನ್ನು ಪರಿಚಯ ಮಾಡಿದ್ದೇವೆ. ವಿದ್ಯಾರ್ಥಿಯೇ ಊಟ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಸತಿಯನ್ನು ಕಲ್ಪಿಸಿಕೊಳ್ಳುವುದಕ್ಕಾಗಿ ಪ್ರತಿ ತಿಂಗಳು ನೇರವಾಗಿ ಆತನಿಗೆ ರೂ.1500 ಕೊಡುತ್ತೇವೆ. ನಾಲ್ಕೈದು ಜನ ಸೇರಿ ಒಂದು ರೂಮ್ ಮಾಡಿಕೊಂಡು, ಅಡಿಗೆ ಮಾಡಿಕೊಂಡು ಇರಬಹುದು. ಇದು ಹಿಂದುಳಿದ ವರ್ಗದವರಿಗೆ ಅನ್ವಯಿಸುತ್ತದೆ. ಆದರೆ ನಮ್ಮ ಮಕ್ಕಳು ಯಾರಾದರೂ ಹೋಗಿ ರೂಮ್ ಕೇಳಿದರೆ ಕೊಡುವುದಿಲ್ಲ, ಆದ್ದರಿಂದ ಅವರನ್ನು ನಮ್ಮ ಹಾಸ್ಟೆಲ್‌ಗಳಲ್ಲೇ ಇಟ್ಟುಕೊಳ್ಳಬೇಕಾಗುತ್ತದೆ. ಅಲ್ಲದೇ ಇವರು 5 ಜನ ಸೇರಿಕೊಂಡು ಒಂದು ಕಡೆ ರೂಮ್ ಮಾಡಿ ಇರಲು ಶಕ್ತಿ ಕೂಡ ಇರುವುದಿಲ್ಲ. ಹಾಗಾಗಿ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಈ ಒಂದು ಯೋಜನೆ ಮಾಡಿ, ತಾವೇ ಸ್ವತಃ ವ್ಯವಸ್ಥೆ ಮಾಡಿಕೊಂಡು ಓದಬೇಕು. ಈ ವರ್ಷ ಇಂತಹ ಸುಮಾರು ಒಂದು ಲಕ್ಷ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಟ್ಟಿದ್ದೇವೆ. ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಇದೊಂದು ಬಂಪರ್ ಕೊಡುಗೆಯಾಗಿದೆ. ಈ ರೀತಿ ವ್ಯವಸ್ಥೆಯನ್ನು ನಮ್ಮ ಜನಕ್ಕೆ ಮಾಡಿಕೊಡುವುದಕ್ಕೆ ಆಗುವುದಿಲ್ಲ, ಏಕೆಂದರೆ ಆ ಶಕ್ತಿ ಅವರಲ್ಲಿ ಇರುವುದಿಲ್ಲ. ಆದ್ದರಿಂದ ಇವರ ಹಾಸ್ಟೆಲ್‌ಗಳನ್ನು ಬಲಪಡಿಸುವುದಕ್ಕೆ ಎಲ್ಲಾ ಕ್ರಮ ಕೈಗೊಳ್ಳುತ್ತೇವೆ. ಮುಂದಿನ ದಿನಗಳಲ್ಲಿ, ನಾವು ಬಂದಮೇಲೆ ನಮ್ಮ ಇಲಾಖೆಯಲ್ಲಿ ಏನೇನು ಸುಧಾರಣೆ ಮಾಡಿದ್ದೇವೆ, ಯಾವ ಯಾವ ಹಾಸ್ಟೆಲ್‌ಗಳು ಯಾವ ಯಾವ ಸಂದರ್ಭದಲ್ಲಿ ತೆರೆಯಲಾಗಿದೆ, ಎಷ್ಟು ಮಕ್ಕಳು ಇದ್ದಾರೆ, ಅವರು ಏನು ಓದುತ್ತಿದ್ದಾರೆ, ಫಲಿತಾಂಶ ಎಷ್ಟು ಬರುತ್ತಿದೆ, ಇರುವಂತಹ ಕೊರತೆ ಏನು, ಇವುಗಳನ್ನು ಸುಧಾರಣೆ ಮಾಡುವುದಕ್ಕೆ ಕೈಗೊಂಡ ಕ್ರಮಗಳೇನು ಎನ್ನುವ ಮಾಹಿತಿಯನ್ನು ಒಳಗೊಂಡ ಒಂದು ಪುಸ್ತಕವನ್ನು ಮಾಡಿ ಎರಡೂ ಸದನಗಳಲ್ಲಿ ಮಂಡಿಸುತ್ತೇನೆ, ಆ ಮೂಲಕ ನಾಡಿನ ಜನರ ಗಮನಕ್ಕೂ ತರುತ್ತೇನೆ. ಮಾನ್ಯ ಸದಸ್ಯರುಗಳಿಗೆ ಎಲ್ಲೆಲ್ಲಿ ಸಾಧ್ಯವಾಗುತ್ತದೆಯೋ ಅಲ್ಲಿ ಇರುವಂತಹ ಹಾಸ್ಟೆಲ್‌ಗಳಿಗೆ ಭೇಟಿ ಮಾಡಿ, ಅಲ್ಲಿರುವ ಮಕ್ಕಳ ಜೊತೆ ನೀವೂ ಊಟ ಮಾಡಿ. ಅಲ್ಲೇನಾದರೂ ಕೊರತೆ ಇದ್ದರೆ ನನಗೆ ಹೇಳಿ. ಎಷ್ಟು ಮಕ್ಕಳಿದ್ದಾರೆ, ಎಷ್ಟು ದುಡ್ಡು ಬಂದಿದೆ, ಎಷ್ಟು ರೇಷನ್ ಬಂದಿದೆ, ಎಷ್ಟು ಖರ್ಚಾಗಿದೆ, ಎಷ್ಟು ಸ್ಟಾಕ್ ಇದೆ, ಎಷ್ಟು ಉಪಯೋಗವಾಗಿದೆ ಎಂದು ಅಲ್ಲಿ ಯಾರು ಜವಾಬ್ದಾರ ವ್ಯಕ್ತಿ ಇರುತ್ತಾನೋ ಅವನನ್ನು ಕೇಳಬಹುದು. ಜಿಲ್ಲಾಧಿಕಾರಿಗಳು ಎಲ್ಲೆಲ್ಲಿ ಹೋಗುತ್ತಾರೋ ಅಲ್ಲಿ ಇರುವಂತಹ ಹಾಸ್ಟೆಲ್‌ಗಳಿಗೆ ಅವರು ಒಂದು ಸಲವಾದರೂ ಭೇಟಿ ಮಾಡಿ ಅಲ್ಲೇ ಊಟ ಮಾಡಬೇಕು ಎಂದು ಮಾನ್ಯ ಮುಖ್ಯಮಂತ್ರಿಗಳು ಕೂಡ ಹೇಳಿದ್ದಾರೆ. ಒಟ್ಟಿನಲ್ಲಿ ಈ ಕೆಲಸವನ್ನು ನಾವೂ-ನೀವೂ ಎಲ್ಲರೂ ಕೂಡಿ ಮಾಡಬೇಕಿದೆ. ಮಕ್ಕಳು ಓದುವುದಕ್ಕೆ ಬೇಕಾದ ಒಳ್ಳೆಯ ವಾತಾವರಣವನ್ನು ನಿರ್ಮಾಣ ಮಾಡೋಣ ಎನ್ನುವ ಮಾತನ್ನು ಹೇಳಿ, ಮಾನ್ಯ ಸದಸ್ಯರು ಕೊಟ್ಟಿರುವ ಅತ್ಯಮೂಲ್ಯ ಸಲಹೆಗಳನ್ನು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸ್ವೀಕಾರ ಮಾಡಿ, ಅವುಗಳ ಅನುಷ್ಠಾನಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಹೇಳಬಯಸುತ್ತೇನೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನೊಂದು ಕ್ಲ್ಯಾರಿಫಿಕೇಷನ್ ಕೇಳುವುದೇನೆಂದರೆ, ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಹಾಸ್ಟೆಲ್‌ಗಳ ಕಟ್ಟಡ ಕಟ್ಟುವುದಕ್ಕೆ ನೀವು ದುಡ್ಡು ಕೊಡುತ್ತೀರಿ. ಕಟ್ಟಡ ಕಟ್ಟಿದ್ದರೆ ಅವರಿಗೆ ಅನುದಾನ ಕೊಡಲು 2 ವರ್ಷ ಮಾಡುತ್ತೀರಿ. ಇದನ್ನು ರಿಲ್ಯಾಕ್ಸ್ ಮಾಡಿ, ಕಟ್ಟಡ ಇದ್ದ ಕಡೆ ತಕ್ಷಣ ದುಡ್ಡು ಕೊಡುವುದರಿಂದ ನಿಮಗೆ ಬಾಡಿಗೆ ದುಡ್ಡು ಉಳಿತಾಯವಾಗುವುದಿಲ್ಲವೇ? ಇದರಿಂದ ವಿದ್ಯಾರ್ಥಿಗಳಿಗೂ ಅನುಕೂಲವಾಗುತ್ತದೆ ಮತ್ತು ವಸತಿ ಕೂಡ ಸಿಗುತ್ತದೆ. ಈಗ, ಎರಡು ವರ್ಷದವರೆಗೆ ನೀವು ಅನುದಾನ ಕೊಡುತ್ತಿಲ್ಲ. ಈಗಾಗಲೇ ಕಟ್ಟಡ ಇದ್ದರೆ ಮೊದಲೇ ಅನುದಾನ ಕೊಡಬೇಕು, ಹಾಗೆ ಮಾಡಿದರೆ ಬಾಡಿಗೆ ಕೊಡುವುದು ಉಳಿಯುತ್ತದೆ.

**(104) 09.02.2017 ಟಿ.ಸಿ.ಹೆಚ್/ಆರ್‌ಎನ್**

**ಶ್ರೀ ಬಿ.ಜೆ.ಪುಟ್ಟಸ್ವಾಮಿ** (ಮುಂದು):-

ಈಗ ಯಾರ‍್ಯಾರೋ ನೊಣಬರ ಸಂಘ, ಈಡಿಗರ ಸಂಘ, ಕುರುಬರ ಸಂಘಮತ್ತು ಆದಿಜಾಂಬವರ ಸಂಘ ಇಂತಹ ಸಂಘಗಳ ಆ ಜಾತಿ ಜನಾಂಗದವರು ಸಂಘಗಳನ್ನು ಮಾಡಿಕೊಂಡಿದ್ದಾರೆ. ಸ್ವಾಮಿಗಳು ಸಂಘಗಳನ್ನು ಮಾಡಿಕೊಂಡಿದ್ದಾರೆ. ಅವರು ಹಿಂದೆ ಏನು ಹಾಸ್ಟೆಲ್‌ಗಳು ಮಾಡಿದ್ದರು ಅವುಗಳು ಈಗ ನಡೆಯುತ್ತಿವೆ. ಹೊಸದಾಗಿ ಹಾಸ್ಟೆಲ್ ತೆರೆಯಲು ಮುಂದೆ ಬರುತ್ತಿಲ್ಲ. ಹಾಗೇನಾದರೂ ಹಾಸ್ಟೆಲ್‌ಗಳನ್ನು ತೆರೆಯಲು ಅವರು ಮುಂದೆ ಬಂದರೆ, ಅದನ್ನು ನಾವು ಪರಿಶೀಲನೆ ಮಾಡುತ್ತೇವೆ. ನಿಮಗೆ ಎಲ್ಲವೂ ಗೊತ್ತಿದೆ ಅಲ್ಲವೇ? ಅಷ್ಟೇ ಅಲ್ಲದೇ, ನಮ್ಮ ಸರ್ಕಾರದಿಂದ ಅನುದಾನವನ್ನು ಪಡೆದು ಯಾರ‍್ಯಾರು ಖಾಸಗಿ ವಿದ್ಯಾರ್ಥಿ ನಿಲಯಗಳನ್ನು ನಡೆಸುತ್ತಿದ್ದಾರೆ ಅವರಿಗೆ ಅಲ್ಲಿ ಹಾಸ್ಟೆಲ್ ಕಟ್ಟಡದ ಕೊರತೆ, ಡೈನಿಂಗ್ ಹಾಲ್‌ನ ಕೊರತೆ, ಹಾಗೂ ಶೌಚಾಲಯದ ಕೊರತೆ ಇದ್ದರೆ, ಅವರಿಗೆ ಸುಮಾರು 50 ಲಕ್ಷ ರೂಪಾಯಿಗಳ ಅನುದಾನವನ್ನು ಕೊಡುತ್ತಿದ್ದೇವೆ. ಅಷ್ಟೇ ಅಲ್ಲದೇ, ಇತ್ತೀಚೆಗೆ ಒಂದು ಆದೇಶವನ್ನು ಇಲಾಖೆಯಲ್ಲಿ ಮಾಡುತ್ತಿದ್ದೇವೆ. ತಾವು ಹಾಸ್ಟೆಲ್‌ಗಳನ್ನು ನಡೆಸುತ್ತಿದ್ದರೆ, ಅಲ್ಲಿ ಶುದ್ಧವಾದ ಕುಡಿಯುವ ನೀರನ್ನು ಒದಗಿಸಲು ಶುದ್ಧ ಕುಡಿಯುವ ನೀರಿನ ಘಟಕವನ್ನು ಮಾಡಿಕೊಳ್ಳಬೇಕು. ಅಲ್ಲಿನ ವಿದ್ಯಾರ್ಥಿಗಳಿಗೆ ಉತ್ತಮವಾದಂತಹ ಟೇಬಲ್ ವ್ಯವಸ್ಥೆ ಮಾಡಬೇಕು. ವಿದ್ಯಾರ್ಥಿಗಳು ಊಟ ಮಾಡಲು ಒಳ್ಳೆಯ ತಟ್ಟೆಯನ್ನು ಕೊಡಬೇಕು. ಅಡಿಗೆ ಮನೆ ಶುದ್ಧವಾಗಿರುವುದಕ್ಕೆ ಅಗತ್ಯವಾಗಿ ಏನೇನು ಬೇಕಾಗಿರುತ್ತದೆಂದು

one time grant ಎಂದು ಅವರಿಗೆ ಒಂದೊಂದು ಹಾಸ್ಟಲ್‌ಗೆ ಐದು ಲಕ್ಷ ರೂಪಾಯಿಗಳು ಅನುದಾನವನ್ನು ಕೊಡತ್ತಿದ್ದೇನೆ. ಮಾನ್ಯ ಸದಸ್ಯರುಗಳಿಗೆ ಗೊತ್ತಿರುವಂತಹ ಯಾವುದಾದರೂ ಹಾಸ್ಟೆಲ್‌ಗಳು ಇದ್ದರೆ ನಮಗೆ ತಿಳಿಸಿ, ನಾವು ಅವರೆಲ್ಲರಿಗೂ ಅನುದಾನವನ್ನು ಕೊಡುತ್ತೇವೆ. ಈ ರೀತಿ ಹಾಸ್ಟೆಲ್‌ಗಳ ಸುಧಾರಣೆಗೆ ಏನೇನು ಬೇಕು ಅವುಗಳನ್ನು ನಾವು ಮಾಡುತ್ತಿದೇವೆ. ನಾವೆಲ್ಲರೂ ಸೇರಿ ಈ ಹಾಸ್ಟೆಲ್‌ಗಳನ್ನು ಸುಧಾರಣೆ ಮಾಡಬೇಕಾಗಿರುತ್ತದೆ. ಮಾನ್ಯ ಈಶ್ವರಪ್ಪರವರು ಒಂದು ದಿನ ಹೇಳಿದರು. ನಮ್ಮವರೆಲ್ಲರೂ ಹಾಸ್ಟೆಲ್‌ಗಳಿಗೆ ಭೇಟಿ ನೀಡಲು ಹೋಗುತ್ತಾರೆ. ಅದಕ್ಕೆ ತಾವು ಅವಕಾಶ ಕಲ್ಪಿಸಿಕೊಡಬೇಕು ಎಂದು ತಿಳಿಸಿರುತ್ತಾರೆ. ತಾವು ಯಾರು ಬೇಕಾದರೂ ಹಾಸ್ಟೆಲ್‌ಗಳಿಗೆ ಹೋಗಿ ಭೇಟಿ ನೀಡಿ, ವರದಿ ನೀಡಿದರೆ, ಅದನ್ನು ನಾವು ಸ್ವೀಕಾರ ಮಾಡುತ್ತೇವೆ. ಮಹಿಳಾ ಮೋರ್ಚಾದವರೆಲ್ಲರೂ ಹಾಸ್ಟೆಲ್‌ಗೆ ಭೇಟಿ ನೀಡಿದ್ದರು. ಅವರುಗಳನ್ನು ನಾನು ಕುಳ್ಳಿರಿಸಿ ಸಮಾಧಾನದಿಂದ ಕೇಳಿ, ಅವರ ವರದಿಯನ್ನು ತೆಗೆದುಕೊಂಡು, ಅದೆಲ್ಲವನ್ನೂ ನಾನು ಸುಧಾರಣೆ ಮಾಡುತ್ತೇನೆಂದು ಹೇಳಿ ಕಳುಹಿಸಿರುತ್ತೇನೆ. ಅದಕ್ಕೆ ಅವರು ಬಹಳ ಸಂತೋಷದಿಂದ ಅಲ್ಲಿಂದ ಹೋಗಿದ್ದಾರೆ. ಮಾನ್ಯ ಸದಸ್ಯರಾದಂತಹ ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು ಅದನ್ನು ಏಕೆ ತಂದಿದ್ದಾರೋ ಗೊತ್ತಿಲ್ಲ. ಅವರಿಗೆ ನಾನು ಹೇಳಿದ್ದೆ. ಅದರ ಬಗ್ಗೆ ಸದನದಲ್ಲಿ ಎಲ್ಲರೂ ಮಾತನಾಡತ್ತಾರೆ ಅದಕ್ಕೆ ನನಗೆ ಸಂತೋಷ. ಅದನ್ನು ಸುಧಾರಣೆ ಮಾಡಲು ಏನೇನು ಬೇಕು ಎಂಬ ಬಗ್ಗೆ ಮಾನ್ಯ ಸದಸ್ಯರಗಳ ಸಲಹೆ ಪಡೆಯುತ್ತೇನೆ. ಇದು ಕೇವಲ ಬರೀ ಪ್ರಶ್ನೆ ಮಾಡಿಕೊಂಡು, ಕೇವಲ ಸುದ್ದಿಗಾಗಿ ಮಾತನಾಡುವುದು ಬೇಡ. ಮಾನ್ಯ ಸದಸ್ಯರುಗಳು ಯಾವ ಹಾಸ್ಟೆಲ್‌ಗೆ ಕರೆಯುತ್ತಾರೆ ನಾನು ಬರುತ್ತೇನೆ. ಅಲ್ಲಿಯೇ ಮಾನ್ಯ ಸದಸ್ಯರುಗಳು ಅವರ ಸಲಹೆ ಸೂಚನೆಗಳನ್ನು ನೀಡಲಿ.

**ಉಪಸಭಾಪತಿಯವರು:–** ನಿಯಮ 330ರ ಮೇಲಿನ ಚರ್ಚೆ ಮುಕ್ತಾಯಗೊಂಡಿದೆ. ಈಗ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಬಗ್ಗೆ ಚರ್ಚೆ ಮುಂದುವರೆಯುತ್ತದೆ.

**7. ಘನತೆವೆತ್ತ ರಾಜ್ಯಪಾಲರು ವಿಧಾನ ಮಂಡಲದ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾಡಿದ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಮುಂದುವರೆದ ಚರ್ಚೆ:–**

**ಶ್ರೀ ರಾಮಚಂದ್ರಗೌಡ (ಪದವೀಧರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳು. ಘನತೆವೆತ್ತ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲೆ ಮಾಡಬೇಕಾಗಿರುವುದು ಒಂದು ರೂಢಿಯಾಗಿರುತ್ತದೆ. ಆ ರೂಢಿ ಪ್ರಕಾರವಾಗಿ ನಾವು ಅದನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿಕೊಂಡು ಬರುತ್ತಿದ್ದೇವೆ. ಈ ವರ್ಷ ವಿಶೇಷವಾಗಿ ಡಾ॥ಬಿ.ಆರ್.ಅಂಬೇಡ್ಕರ್‌ರವರ 125ನೇ ವರ್ಷವಾಗಿರುತ್ತದೆ. ಡಾ॥ಬಿ.ಆರ್.ಅಂಬೇಡ್ಕರ್‌ರವರ 125ನೇ ವರ್ಷದ ದಿನಾಚರಣೆಯನ್ನು ನಮ್ಮ ಸರ್ಕಾರ "ಜ್ಞಾನ ದರ್ಶನ" ದಿನವನ್ನಾಗಿ ಆಚರಿಸಲು ಉದ್ದೇಶಿಸಿದೆ. ಅದಕ್ಕಾಗಿ ನಾನು ಸರ್ಕಾರಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಇದು ಒಳ್ಳೆಯ ವಿಚಾರವಾಗಿರುತ್ತದೆ. ಘನತೆವೆತ್ತ ರಾಜ್ಯಪಾಲರ ಭಾಷಣ ಸುಮಾರು 30 ಪುಟಗಳಿವೆ. ಅದರಲ್ಲಿ 16ನೇ ಪುಟದ ಬಗ್ಗೆ ಮಾತ್ರ ನಾನು ಮಾತನಾಡುತ್ತೇನೆ. ಜಾಸ್ತಿ ಏನನ್ನು ಮಾತನಾಡುವುದಕ್ಕೆ ಹೋಗುವುದಿಲ್ಲ. ಉನ್ನತ ಶಿಕ್ಷಣ ಅಕಾಡೆಮಿಯನ್ನು ಬಲಪಡಿಸುವ ಪ್ರಸ್ತಾಪವನ್ನು ಬಿಟ್ಟರೆ, ಬೇರೆಲ್ಲೂ "ಶಿಕ್ಷಕ" ಎನ್ನುವಂತಹ ಪದವನ್ನು ಇಡೀ ಆ 30 ಪುಟದ ಪುಸ್ತಕದಲ್ಲಿ ಇರುವುದಿಲ್ಲ. ನಮ್ಮ ರಾಜ್ಯದಲ್ಲಿ 3,71,089 ಸರ್ಕಾರಿ ಶಿಕ್ಷಕರು ಇದ್ದಾರೆ. 63531 ಅನುದಾನಿತ ಶಿಕ್ಷಕರು ಇದ್ದಾರೆ. ಶಿಕ್ಷಕರ ಸಮಸ್ಯೆಗಳು ಇಷ್ಟೊಂದು ಇದೆ. ಮುಂದಿನ ಪೀಳಿಗೆಯನ್ನು ಭದ್ರಪಡಿಸುವವರು ಶಿಕ್ಷಕರು. ನಮ್ಮ ಕಾಲ ಮುಗಿಯುತ್ತಾ ಬಂತು. ನಾವು Now, we are out going.ಮುಂದೆ ಸರಿಯಾದಂತಹ ಜನ ಈ ದೇಶದಲ್ಲಿ ಬರಬೇಕಾಗಿದೆ. ಈ ರಾಜ್ಯದಲ್ಲಿ ಬರಬೇಕಾಗಿದೆ. ಮಾನವ ಸಂಪನ್ಮೂಲವನ್ನು ಕ್ರೂಢೀಕರಿಸಬೇಕಾದಂತಹ ವರ್ಗ ಶಿಕ್ಷಕರು. ಶಿಕ್ಷಕರ ಸಮಸ್ಯೆಗಳು ಒಂದೇ, ಎರಡೇ, ಮೂರೇ ಮತ್ತು ನಾಲ್ಕೇ. ಒಂದು ಹಂತದಲ್ಲಿ ಏನಾಯಿತು ಎಂದರೆ, ಶಿಕ್ಷಕರು ನಿವೃತ್ತಿ ಆದನಂತರ, ಅವರನ್ನು ನೇಮಕಾತಿ ಮಾಡಿಕೊಳ್ಳುವುದನ್ನೇ ನಿಲ್ಲಿಸಿಬಿಟ್ಟರು. ನೇಮಕಾತಿ ಮಾಡಿಕೊಳ್ಳುವುದನ್ನು ನಿಲ್ಲಿಸಿದ ನಂತರ, ಅತಿಥಿ ಶಿಕ್ಷಕರು, ಪ್ರೈವೇಟ್ ಶಿಕ್ಷಕರು, ಹೀಗೆ ನೂರೆಂಟು ಹೆಸರನ್ನು ಮಾಡಿಕೊಂಡು ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳಲೇ ಇಲ್ಲ. ಅದು ಯಾವ ಸರ್ಕಾರ ಬಂತು ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆ ಸರ್ಕಾರಕ್ಕೆ ನಮ್ಮದು ಬೆಂಬಲವಿತ್ತು. ಹೀಗಾಗಿ, ಶಿಕ್ಷಕರನ್ನು ಸರಿಮಾಡಿಕೊಳ್ಳದೇ ಹೋದರೆ.., they are pillars of this country.ಆ ಪಿಲ್ಲರ್‌ಗಳನ್ನು ಸರಿಯಾಗಿ ನೋಡಿಕೊಳ್ಳದೇ ಹೋದರೆ ಕಟ್ಟಡ ಕುಸಿದು ಹೋಗುತ್ತದೆ. ಇವರ ಸಮಸ್ಯೆಗಳೇನೆಂದರೆ, ವೇತನ ತಾರತಮ್ಯ, ವಿಶೇಷ ಭತ್ಯೆ ನೀಡಿಕೆ. ಇದರ ಬಗ್ಗೆ ಇಲ್ಲಿ ಉಲ್ಲೇಖವೇ ಇರುವುದಿಲ್ಲ. ಮಾನ್ಯ ಉಚ್ಚ ನ್ಯಾಯಾಲಯ ಒಂದು ತೀರ್ಪನ್ನು ಕೊಟ್ಟಿದೆ. 1:30, 30 ವಿದ್ಯಾರ್ಥಿಗಳಿಗೆ ಒಬ್ಬರು ಶಿಕ್ಷರು ಇರಬೇಕು ಎಂದು ಹೇಳಿದೆ. ನಮ್ಮ ರಾಜ್ಯದಲ್ಲಿ ಶಿಕ್ಷಕರು ಹೆಚ್ಚಾಗಿ ಇರುತ್ತಾರೆ. ಹೀಗಾಗಿ, ಶಿಕ್ಷಕರನ್ನು ನಾವು ಕೊಡುವುದಕ್ಕೆ ಆಗುವುದಿಲ್ಲ. ನಾವು ಶಿಕ್ಷಕರನ್ನು ತೆಗೆಯುತ್ತಿದ್ದೇವೆಂದು ಹೇಳುತ್ತಿದ್ದಾರೆ. ಈ ಅನುಪಾತ ಸರ್ಕಾರದಿಂದ ಆದೇಶವಾಗಿರುವುದಿಲ್ಲ. ಮಾನ್ಯ ಸುಪ್ರೀಂ ಕೋರ್ಟ್ ತೀರ್ಪನ್ನು ಕೊಟ್ಟ ನಂತರ, ಸರ್ಕಾರದಿಂದ ಈ ಆದೇಶ ಆಗಬೇಕಾಗಿತ್ತು. ಆದರೆ ಈ ಆದೇಶ ಆಗಲಿಲ್ಲ. 1202 ಸರ್ಕಾರಿ ಪದವಿ

ಪೂರ್ವ ಕಾಲೇಜುಗಳಲ್ಲಿ 319 ಪ್ರಾಂಶುಪಾಲರ ಹುದ್ದೆಗಳು ಖಾಲಿ ಇವೆ. I am speaking this for our people. " ದೇವಸ್ಥಾನದಲ್ಲಿ ವಿಗ್ರಹವೇ ಇಲ್ಲದೇ ಇದ್ದರೆ, ಅಲ್ಲಿ ಯಾರಿಗೆ ಪೂಜೆ ಮಾಡುತ್ತಾರೆ". ಆ ರೀತಿ ಇದು. ಕಾಲೇಜುಗಳಿಗೆ ಪ್ರಾಂಶುಪಾಲರು ಬೇಕೇ ಬೇಕಲ್ಲವೇ. ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಸುಮಾರು 12718 ಉಪನ್ಯಾಸಕರ ಹುದ್ದೆಗಳು ಮಂಜೂರಾಗಿರುತ್ತವೆ. ಈ ಮಂಜೂರಾಗಿರುವ ಉಪನ್ಯಾಸಕರ ಹುದ್ದೆಗಳಲ್ಲಿ 1938 ಉಪನ್ಯಾಸಕರ ಹುದ್ದೆಗಳು ಖಾಲಿ ಇವೆ. ಇಷ್ಟೋತ್ತು ನಾವು ಸದನದಲ್ಲಿ ಹಾಸ್ಟೆಲ್‌ಗಳ ವಿಷಯದ ಬಗ್ಗೆ ಮಾತನಾಡಿದೆವು. ಶಾಲೆಗಳು ಹಾಗೂ ಕಾಲೇಜುಗಳಲ್ಲಿ ಸಮಸ್ಯೆಗಳಿವೆ. ಈ ಪದವಿಪೂರ್ವ ಕಾಲೇಜುಗಳಲ್ಲಿ "ಡಿ" ದರ್ಜೆ ನೌಕರರುಗಳೇ ಇರುವುದಿಲ್ಲ. ಪದವಿಪೂರ್ವ ಕಾಲೇಜುಗಳಲ್ಲಿ ಪ್ರಾಂಶುಪಾಲರಿಗೆ ಅಥವಾ ಉಪನ್ಯಾಸಕರಿಗೆ ಒಂದು ಕೊಠಡಿಯಿಂದ ಇನ್ನೊಂದು ಕೊಠಡಿಗೆ ಏನೋ ಒಂದು ಮೆಸೇಜ್ ಅನ್ನು ತಿಲುಪಿಸಬೇಕೆಂದರೆ, ಅಲ್ಲಿ ಕಸತೆಗೆಯಲು ಇನ್ನಿತರೆ ಕೆಲಸವನ್ನು ಮಾಡಲು ಒಬ್ಬ "ಡಿ" ದರ್ಜೆ ನೌಕರರು ಬೇಕೇ ಬೇಕಲ್ಲವೇ? ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ 238 "ಡಿ" ದರ್ಜೆ ಹುದ್ದೆಗಳು ಖಾಲಿ ಇವೆ. ಪಿ.ಹೆಚ್.ಡಿ ಮಾಡಿಕೊಂಡು ಅತಿಥಿ ಉಪನ್ಯಾಸಕರಾಗಿ ಕೆಲಸ ಮಾಡುತ್ತಿರುವಂತಹ ಜನ ಇನ್ನೂ 11,500/- ರೂಪಾಯಿಗಳ ಸಂಬಳವನ್ನು ಪಡೆದುಕೊಳ್ಳುತ್ತಿದ್ದಾರೆ.

**(105) 9-2-2017ಡಿಎಸ್:ಆರ್‌ಎನ್6.20**

**ಶ್ರೀ ರಾಮಚಂದ್ರಗೌಡ (ಮುಂದು):**

ನಮ್ಮ ಡ್ರೈವರ್‌ಗೆ 14,000-15,000 ರೂಪಾಯಿ ಸಂಬಳ ಕೊಡುತ್ತಿದ್ದೇವೆ. ಇವತ್ತು ಡ್ರೈವರ್‌ಗೆ 11,000-15,000 ರೂಪಾಯಿ ಸಂಬಳ ಕೊಡುತ್ತೇವೆಂದರೂ ಬರುವುದಿಲ್ಲ. ಪಿಹೆಚ್‌ಡಿ ಮಾಡಿಕೊಂಡವರಿಗೆ ಅತಿಥಿ ಉಪನ್ಯಾಸಕರು ಎಂದು ತೆಗೆದುಕೊಳ್ಳುತ್ತಿದ್ದಾರೆ. ಅವರಿಗೆ 11,500 ರೂಪಾಯಿ ಸಂಬಳ ಕೊಟ್ಟರೆ ಹೇಗೆ? ಸಾಮಾನ್ಯ ಉಪನ್ಯಾಸಕರಿಗೆ 9,000 ರೂಪಾಯಿ ಸಂಬಳ. ಪಿಹೆಚ್‌ಡಿ ಮಾಡಿರುವವರಿಗೆ 11,500 ರೂಪಾಯಿ ಸಂಬಳ ಕೊಡುತ್ತಿದ್ದಾರೆ. It is an exploitation from the government. ನಾನು ದೊಡ್ಡ ವಿದ್ಯಾವಂಥರನ್ನು exploit ಮಾಡುತ್ತಿದ್ದೇವೆ. Is it, right? What right we have to ask other people? ನಮ್ಮ ರಾಜ್ಯದಲ್ಲಿ ಸಿ.ಪಿ.ಡಿ. ದೈಹಿಕ ಶಿಕ್ಷಣವನ್ನು ಮುಗಿಸಿದಂಥ ಪದವೀಧರರುಗಳು ಸುಮಾರು 80,000 ಜನರು ಇದ್ದಾರೆ. ಸಾವಿರಾರು ದೈಹಿಕ ಶಿಕ್ಷಕರ ಹುದ್ದೆಗಳು

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಖಾಲಿ ಇವೆ. ಆ ಹುದ್ದೆಗಳನ್ನು ಭರ್ತಿ ಮಾಡಲಿಲ್ಲ. ಆ ಹುದ್ದೆಗಳನ್ನು ಭರ್ತಿ ಮಾಡುವ ಅವಶ್ಯಕತೆ ಇದೆ. ಇದರ ಬಗ್ಗೆ ಯಾವುದೇ ಮಾತನ್ನು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಹೇಳಿಲ್ಲ. ರಾಜ್ಯಪಾಲರು ಏನು ಹೇಳಿಲ್ಲ ಅದರ ಬಗ್ಗೆ ಮಾತ್ರ ನಾನು ಮಾತನಾಡುತ್ತಿದ್ದೇನೆ. ಅವರು ಹೇಳಿರುವ ಬಗ್ಗೆ ನಾನು ಮಾತನಾಡುವುದಿಲ್ಲ. ಅದರ ಬಗ್ಗೆ ರಾಜ್ಯಪಾಲರು ಮಾತನಾಡಬೇಕಾಗಿತ್ತು. ಇವರು ಮಾತನಾಡಿಸಲಿಲ್ಲ, ಇದು ಇವರ ಬುದ್ಧಿವಂತಿಕೆ.

ಮಾನ್ಯ ಸಭಾಪತಿಯವರೆ, 'ಮಡಿಲು ಕಿಟ್' ಎನ್ನುವ ಯೋಜನೆಯನ್ನು ಹೊಸದಾಗಿ ತೆಗೆದುಕೊಂಡು ಬಂದರು. ಶಿಶು ಮರಣ ಪ್ರಮಾಣವನ್ನು ಕಡಿಮೆ ಮಾಡುವುದಕೋಸ್ಕರವಾಗಿ, ಬಾಣಂತಿಯ ಮರಣ ಪ್ರಮಾಣವನ್ನು ಕಡಿಮೆ ಮಾಡಲು ಬದ್ಧರಾಗಿದ್ದೇವೆ ಎಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಅದಕ್ಕೆ 'ಮಡಿಲು ಕಿಟ್' ಎಂಬ ಯೋಜನೆಯನ್ನು ತಂದರು. ಒಂದು ತಿಂಗಳೊಳಗಾಗಿ ಎಲ್ಲಾ ಕಿಟ್‌ಗಳು ಖಾಲಿಯಾಗಿಬಿಟ್ಟಿವೆ. 'No Stock'. ಅದೆಲ್ಲಾ ಪತ್ರಿಕೆಯಲ್ಲಿ ವರದಿ ಬಂದಿದೆ. ಆ ಪತ್ರಿಕೆಯನ್ನು ನಾನು ತಂದಿದ್ದೇನೆ. ಅದನ್ನು ಹೇಳುವ ಅವಶ್ಯಕತೆ ಇಲ್ಲ. ಏಕೆಂದರೆ, ನನಗೆ ಹೆಚ್ಚು ಸಮಯ ತೆಗೆದುಕೊಳ್ಳುವುದಕ್ಕೆ ಇಷ್ಟವಿಲ್ಲ. It has exhausted. ದೇವಸ್ಥಾನಗಳಲ್ಲಿ ಸುತ್ತಲು ದಶದಿಕ್ಕುಗಳಿಗೆ ಕಲ್ಲು ಇಟ್ಟಿರುತ್ತಾರೆ. ಪೂಜೆ ಮಾಡುವುದಕ್ಕಿಂತ ಮುಂಚೆ ಅಲ್ಲಿಗೆ ಹೋಗಿ ಎಲ್ಲಾ ಕಡೆ ಎಡೆ ಇಟ್ಟು ಬರುತ್ತಾರೆ. ಆ ತರಹ ಮಾಡಿದರೆ ಆಗುವುದಿಲ್ಲ. ಕಿಟ್ ಕೊಡುತ್ತೇವೆ ಎಂದ ಮೇಲೆ ಎಲ್ಲಾ ಬಾಣಂತಿಯರಿಗೂ ಕೊಡಬೇಕು. ಮಕ್ಕಳು ಆದವರೆಲ್ಲರಿಗೂ ಕೊಡಬೇಕು. ಅದನ್ನು ಮತ್ತೆ ಕೊಳ್ಳಲು ಇನ್ನೂ ಟೆಂಡರ್ ಪ್ರಕ್ರಿಯೆ ಪ್ರಾರಂಭ ಮಾಡಲಾಗಿದೆ. ಅದನ್ನು ಮತ್ತೆ ತೆಗೆದುಕೊಳ್ಳಬೇಕಾದರೆ ಟೆಂಡರ್ ಆಗಬೇಕಲ್ಲ? ಟೆಂಡರ್ ಹಾಕಿ ಮುಂಚೆಯೇ ತೆಗೆದುಕೊಂಡಿರುತ್ತಾರೆ. ಹಾಗಾದರೂ ತೆಗೆದುಕೊಳ್ಳಬೇಕು. ಈಗ ಇನ್ನು ಟೆಂಡರ್ ಪ್ರಕ್ರಿಯೆ ಮಾಡಿಲ್ಲ. ಹೀಗಿರುವಾಗ ಬಾಣಂತಿ ಹಾಗೂ ಶಿಶುವಿನ ಆರೋಗ್ಯ ರಕ್ಷಣೆಗೆ ಬದ್ಧತೆ ಎಲ್ಲಿದೆ? ನಾವು ಮೇಲೆ ಹೇಳಿಬಿಟ್ಟಿದ್ದೇವೆ, ಅದನ್ನು ಕಡಿಮೆ ಮಾಡುವುದಕೋಸ್ಕರ ಮಾಡುತ್ತಿದ್ದೇವೆಂದು ಹೇಳಿದ್ದಾರೆ. There is no stock, what action you have taken and you have not made any tender? ಟೆಂಡರ್ ಕರೆಯಲಿಲ್ಲ.

ಮತ್ತೊಂದು ಸಮಸ್ಯೆ ಏನೆಂದರೆ, demonetisation ಆದ ಮೇಲೆ ಸ್ವಲ್ಪ ಸಮಸ್ಯೆ ಆಗಿದೆ. ನಮ್ಮ ಸರ್ಕಾರ ರೈತರ ಪರವಾಗಿದೆ ಎಂದು ಹೇಳಿಕೊಂಡಿದ್ದಾರೆ. ರೈತರ ಸಾಲ ಮತ್ತು ಬಡ್ಡಿ ಪಾವತಿಸಲು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಾಜ್ಯ ಸರ್ಕಾರ ಕನಿಷ್ಠ 3 ತಿಂಗಳು ವಿನಾಯಿತಿ ನೀಡಬೇಕು. ಸಾಲ ಮತ್ತು ಬಡ್ಡಿ ಕಟ್ಟಲು ಮೂರು ತಿಂಗಳು ಯಾರನ್ನು ಕೇಳಬೇಡಿ ಎಂದು ಕೇಂದ್ರ ಸರ್ಕಾರ ಸಡಿಲ ಮಾಡಿದೆ. ನಮ್ಮ ರಾಜ್ಯ ಸರ್ಕಾರದವರು ಸಾಲ ಮನ್ನಾ ಮಾಡದಿದ್ದರೂ ಪರವಾಗಿಲ್ಲ, ಆದರೆ ಮೂರ್‍ನಾಲ್ಕು ತಿಂಗಳು ಸಾಲ ಕಟ್ಟುವುದಕ್ಕೆ ಕಾಲಾವಕಾಶ ಕೊಡಲಿ ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸಾಲ ಮನ್ನಾ ಮಾಡಿ ಎಂದು ನಾನು ಹೇಳುವುದಿಲ್ಲ. ಮಾಡುವುದಕ್ಕಾದರೆ ಮಾಡಿ, ಇಲ್ಲದಿದ್ದರೆ ಬಿಡಿ. ಕೇಂದ್ರ ಸರ್ಕಾರದವರು ಕೊಟ್ಟ ಮೇಲೆ ಮಾಡುತ್ತೇವೆ ಎನ್ನುವುದಾದರೆ ಹಾಗೆ ಮಾಡಿ. ಆದರೆ ಈಗ demonetisation ಆಗಿ ಹಣ ಓಡಾಡುತ್ತಿಲ್ಲ. ಬಹಳ ಕಷ್ಟವಾಗುತ್ತಿದೆ. ಇದನ್ನು ನಾನು ಅನುಭವಿಸಿದ್ದೇನೆ. ನಿಜ ಹೇಳುವುದಾದರೆ, ನನಗೆ ಹಣ ಸಿಗುತ್ತಿಲ್ಲ. ವಾರಕ್ಕೆ 24,000 ರೂಪಾಯಿ ಕೊಡುತ್ತಿದ್ದಾರೆ. To be honest, it is not sufficient for me. ಏಕೆಂದರೆ, ಇನ್ನು ಮುಂದೆ ಒಳ್ಳೆಯ ದಿವಸಗಳು ಬರುತ್ತವೆ ಎಂದು ನಾನು ಅದನ್ನು ಸಹಿಸಿಕೊಳ್ಳುತ್ತಿದ್ದೇನೆ. No problem. 2015-2016ನೇ ಸಾಲಿನಲ್ಲಿ ಬಿಡುಗಡೆಯಾದ ಬೆಳೆ ಪರಿಹಾರ ಸಮರ್ಪಕವಾಗಿ ಹಂಚಿಕೆಯಾಗಿದೆ. ಹಲವಾರು ವಿದ್ಯಾರ್ಥಿಗಳಿಗೆ, ಜಮೀನು ಇಲ್ಲದವರಿಗೆ ಒಂದೇ ಕುಟುಂಬದ ಐದಾರು ಜನರಿಗೆ ನೀಡಲಾಗಿದೆ. ಉದಾಹರಣೆಗೆ ಬೆಳಗಾವಿ ಜಿಲ್ಲೆ, ರಾಮದುರ್ಗ ತಾಲ್ಲೂಕಿನಲ್ಲಿ ಗಂಡ-ಹೆಂಡತಿ, ಮಗ-ಮಗಳು, ಸಹೋದರ-ಸಹೋದರಿ, ವಿದ್ಯಾರ್ಥಿಗಳ ಹೆಸರಿನಲ್ಲೂ ಪರಿಹಾರ ನೀಡಲಾಗಿದೆ. ಇದರಲ್ಲಿ ಭ್ರಷ್ಟಾಚಾರ ನಡೆದಿದೆ. ಪರಿಹಾರ ನೀಡುವಾಗ ಒಂದೇ ಮನೆಯಲ್ಲಿ ಎಲ್ಲರಿಗೂ ಕೊಟ್ಟಿದ್ದಾರೆ. Finger print ಐದು ಬೆರಳಲ್ಲೂ ಹಾಕಿಸಿಕೊಂಡು ಬಿಡುತ್ತಾರೆ.

ಮಾನ್ಯ ಸಭಾಪತಿಯವರೆ, ನಮಗೆ ಗೊತ್ತಿದೆ, ಕುಡಿಯುವ ನೀರಿಗೆ ಬಹಳ ಸಮಸ್ಯೆ ಇದೆ. ನಮಗೇನಾದರೂ ಕುಡಿಯುವುದಕ್ಕೆ ನೀರು ಬೇಕಾದರೆ ಹೊಸದಾಗಿ ಆಗಬೇಕೆನ್ನುವ ಇಚ್ಛೆ ಇದ್ದರೆ ಸಮುದ್ರದ ನೀರನ್ನು ಕನ್‌ವರ್ಟ್ ಮಾಡಿ ಕುಡಿಯುವ ನೀರಿಗೆ ಉಪಯೋಗಿಸಿಕೊಳ್ಳುವ ಸಂದರ್ಭ ಏನಾದರೂ ಬಂದರೆ ಅದಕ್ಕೊಂದು ಒಳ್ಳೆಯ ಸಮಿತಿಯನ್ನು ಮಾಡಿ. ಏಕೆಂದರೆ, ನಾವು ಎತ್ತಿನಹೊಳೆ, ಆ ಹೊಳೆ, ಈ ಹೊಳೆ ಎಂದು ಕೈಗೆ ಬಳೆ ಹಾಕಿಕೊಳ್ಳುತ್ತಿದ್ದೇವೆ. ಏನೂ ಆಗುತ್ತಿಲ್ಲ. ಬಳೆ ಎಂದರೆ ಪೋಲೀಸ್‌ನವರ ಬಳೆ. ಗಲಾಟೆ ಮಾಡಿದ್ದಕ್ಕೆ ಅವರ ಕೈಗೆ ಬಳೆ ಹಾಕಿ ಕರೆದುಕೊಂಡು ಹೋಗುತ್ತಾರೆ.

ಮಾನ್ಯ ಸಭಾಪತಿಯವರೆ, ಬಹಳ ಪ್ರಮುಖವಾದ ವಿಚಾರವೇನೆಂದರೆ, ನಮ್ಮ ದೇಶದ ಜನಸಂಖ್ಯೆಯಲ್ಲಿ 50 ಪರ್ಸೆಂಟ್ ಮಹಿಳೆಯರು ಇದ್ದಾರೆ. ಇತ್ತೀಚೆಗೆ ಪೋಲೀಸ್ ಇಲಾಖೆಯಲ್ಲಿ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನೇಮಕಾತಿ ಮಾಡಿಕೊಂಡರು. ಶೇಕಡ 5 ರಷ್ಟು ಮಹಿಳಾ ಪೊಲೀಸರು ಮಾತ್ರ ಇದ್ದಾರೆ. ಇದು ಸಮಂಜಸವೆ? ಬೆಳಗ್ಗೆ ನಮ್ಮ ಸ್ನೇಹಿತರೊಬ್ಬರು ಹೋಂ ಗಾರ್ಡ್ಸ್‌ಗೆ ಎಷ್ಟು ಸಂಬಳ ಕೊಡುತ್ತಿದ್ದಾರೆ ಎಂದು ಪ್ರಶ್ನೆ ಕೇಳಿದರು. 300 ಕೊಡುತ್ತಿದ್ದರು, 400 ಮಾಡುತ್ತೇವೆ ಎಂದು ಹೇಳಿದರು, ಹಳ್ಳಿಗಳ ಕಡೆ 200 ಕೊಡುತ್ತೇವೆ, ಅವರಿಗೆ ಈಗ 350 ಕೊಡುತ್ತೇವೆ, ಬೆಂಗಳೂರಿನಲ್ಲಿ 400 ರೂಪಾಯಿ ಕೊಡುತ್ತೇವೆ ಎಂದು ಹೇಳಿದರು. ಹೋಂ ಗಾರ್ಡ್ಸ್ ಈಗ ಬಂದಿರುವುದಲ್ಲ. ನಾನು ಹೈಸ್ಕೂಲ್ ಓದುತ್ತಿದ್ದಾಗಲೇ ಹೋಂ ಗಾರ್ಡ್ಸ್ ಸಿಸ್ಟಮ್ ಇತ್ತು. ಏಕೆ ಇತ್ತು ಎಂದರೆ, ಬೇರೆ ಎಲ್ಲಾದರೂ ಸಂದರ್ಭಗಳಲ್ಲಿ ಕಷ್ಟ ಆದಾಗ ಅವರನ್ನು ಉಪಯೋಗಿಸಿಕೊಳ್ಳುತ್ತಿದ್ದರು. ಆದರೆ ಇವತ್ತು ಹೋಂ ಗಾರ್ಡ್ಸ್ ರವರನ್ನು ಉಪಯೋಗಿಸುತ್ತಿರುವುದು it is one more exploitation. ಅವರು ಬೆಳಗ್ಗೆಯಿಂದ ಸಂಜೆವರೆಗೆ ಟ್ರಾಫಿಕ್ ನಿಯಂತ್ರಣ ಮಾಡುತ್ತಿದ್ದಾರೆ. ಪೊಲೀಸರು ಎಲ್ಲಾದರೂ ಗಲಾಟೆಯಾದರೆ ಅಲ್ಲಿಗೆ ಹೋಗಿಬಿಡುತ್ತಾರೆ. ರಸ್ತೆಗಳಲ್ಲಿ ಹೋಂ ಗಾರ್ಡ್ಸ್ ಇರುತ್ತಾರೆ. ನಾವು ಹವಾನಿಯಂತ್ರಿತ ಕಾರಿನಲ್ಲಿ ಹೋಗುತ್ತೇವೆ. ಒಂದೇ ಒಂದು ದಿವಸ ಸ್ಕೂಟರ್‌ನಲ್ಲಿ ಹೋಗಿಬಿಟ್ಟರೆ ನಮಗೆ ನೆಗಡಿ, ಕೆಮ್ಮು, ಎಲ್ಲಾ ಬಂದುಬಿಡುತ್ತವೆ. ಅಷ್ಟು ಧೂಳು ಬೆಂಗಳೂರಿನಲ್ಲಿದೆ. ಅದು ನಮಗೆ ಗೊತ್ತಾಗುವುದಿಲ್ಲ. ನಮಗೆ ಬೆಂಗಳೂರಿನಲ್ಲಿ ನಡೆದುಕೊಂಡು ಹೋದರೆ ಗೊತ್ತಾಗುತ್ತದೆ, ಸಂಜೆಯೊಳಗೆ ನಮಗೆ ಕಾಯಿಲೆ ಬಂದುಬಿಡುತ್ತದೆ. ಹೋಂ ಗಾರ್ಡ್ಸ್ ಹೆಣ್ಣುಮಕ್ಕಳು ಬೆಳಿಗ್ಗೆಯಿಂದ ಸಂಜೆವರೆಗೆ ವಿಶಲ್ ಇಟ್ಟುಕೊಂಡು ಟ್ರಾಫಿಕ್ ನಿಯಂತ್ರಣ ಮಾಡುವ ಕೆಲಸ ಮಾಡುತ್ತಿದ್ದಾರೆ. 400 ರೂಪಾಯಿ ಕೊಟ್ಟರೆ ಆಗುತ್ತದೆಯೇ? 500 ರೂಪಾಯಿ ಕೊಡಿ. ಅವರು ಬಟ್ಟೆ ಒಗೆದುಕೊಂಡು ಹೇಗೆ ಬರುತ್ತಾರೆಂದರೆ ಪೊಲೀಸ್‌ನವರಿಗಿಂತ ಚೆನ್ನಾಗಿ ಬರುತ್ತಾರೆ. ಪೊಲೀಸ್ ಇಲಾಖೆಯಲ್ಲಿ ಒಂದು ಹೊಸ ಕಾನೂನು ಮಾಡಿದ್ದಾರೆ. ಅವರಿಗೆ weekly holidays ಇರಲಿಲ್ಲ. ಈಗ weekly holidays ಕೊಡುತ್ತೇವೆ ಎಂದು ಹೇಳಿದರು. Weekly holidays ಇಲ್ಲದಿದ್ದಾಗ ಅವರಿಗೆ ಏನು ಕೊಡುತ್ತಿರಲಿಲ್ಲ.

**(106) 09.02.2017 ಕೆಹೆಚ್/ವಿಕೆ 06.30**

**ಶ್ರೀ ರಾಮಚಂದ್ರಗೌಡ (ಮುಂದು):**

ಮಾನ್ಯ ಸಭಾಪತಿಯವರೇ, ಈಗ ವಾರದ ರಜೆಯನ್ನು ಡಿಕ್ಲೇರ್ ಮಾಡಿದ ಮೇಲೆ ಕೆಲಸ ಮಾಡಿಸಿಕೊಂಡರೆ ಪಗಾರ ಕೊಡುವುದಿಲ್ಲ. ಏಕೆಂದರೆ ವಾರದ ರಜೆಯನ್ನು ಮಾಡಿದ್ದಾರೆ. ನೌಕರರೇ ಇಲ್ಲ. ಅದಕ್ಕೆ ಕೆಲಸ ಮಾಡು ಎಂದು ಹೇಳುತ್ತಾರೆ. ಈ ಪರಿಸ್ಥಿತಿಯಲ್ಲಿ ಪೊಲೀಸರು ಇದ್ದಾರೆ. ವಿಶೇಷವಾಗಿ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಟ್ರಾಫಿಕ್‌ನಲ್ಲಿ ಕೆಲಸ ಮಾಡುವಂತಹ ಪೊಲೀಸನವರನ್ನು ನೋಡಿದರೆ ನಿಜವಾಗಿಯೂ ಹೊಟ್ಟೆ ಉರಿದು ಹೋಗುತ್ತದೆ. ಈ ವಿದೇಶಿ ವಿದ್ಯಾರ್ಥಿಗಳು ಬಂದಿದ್ದಾರೆ. ಇಲಾಖೆಯವರಿಗೆ ನೈಜೇರೀಯಾ ಮತ್ತು ಉಗಾಂಡದಿಂದ ಬಂದವರ ವಿದೇಶಿ ಅಟ್ಟಹಾಸವನ್ನು ಇನ್ನು ಸರಿಮಾಡುವುದಕ್ಕಾಗುತ್ತಿಲ್ಲ. ಅವರ passport expiry ಯಾಗಿದೆ. ಏಕೆ ಅವರನ್ನು ಹೊರಗಡೆ ಕಳುಹಿಸಬಾರದು. ಕೇಂದ್ರ ಸರ್ಕಾರದಿಂದ ಏನಾದರೂ passport expiryಯಾದರೂ ಅವರು ಇರಬಹುದು ಎಂದು ಇದೆಯೇ? ಅವರನ್ನು ಕಳುಹಿಸಬೇಕೆಂಬ ಬಗ್ಗೆ ಒಂದು ಕಠಿಣವಾದ ನಿಲುವುವನ್ನು ಏಕೆ ತೆಗೆದುಕೊಳ್ಳಲಿಲ್ಲ. ಅವರು ಮಾಫಿಯಾ ಗ್ಯಾಂಗ್ ಮಾಡುವುದಕ್ಕೆ ಬಂದಿರುವುದು. ಅಫೀಮು, ಮಣ್ಣು, ಮಸಿ ಎಲ್ಲ ಕೊಡುತ್ತಾರೆ ಎಂದು ಬೆಳಗ್ಗೆ ಹೇಳಿದರು ಮತ್ತು ಅವರು ದಾಖಲಾತಿಗೆ ಬಂದಾಗ out of your experience you must check up. ಅವರು ಎಲ್ಲಿಂದ ಬಂದಿದ್ದಾರೆ. ಅವರು ಏಕೆ ಬಂದಿದ್ದಾರೆ. ಅವರ ದೇಶದಿಂದ ಅನುಮತಿ ಇದೆಯೇ? ಹಿಂದೆ ಮುಂದೆ ಏನು ನೋಡದೆ ಕಾಲೇಜಿನಲ್ಲಿ ದಾಖಲಾತಿ ಮಾಡಿಕೊಳ್ಳಬೇಕಾದರೆ ಅವರನ್ನು ಎಲ್ಲ ರೀತಿಯಿಂದ verify ಮಾಡಬೇಕು. ಕಾಲೇಜುನವರ ರೀತಿ passport ತೆಗೆದುಕೊಳ್ಳುತ್ತಾರೆ ಮತ್ತು ಇಟ್ಟುಕೊಳ್ಳುತ್ತಾರೆ. Passport expiry ಯಾದರೆ ಕಾಲೇಜುನವರು ಸರ್ಕಾರದ ಗಮನಕ್ಕೆ ತರಬೇಕು. Colleges are responsible to bring that information to the Government. ಪೆಟ್ರೋಲ್ ಬಂಕ್‌ಗಳಲ್ಲಿ, ಸಣ್ಣಪುಟ್ಟ ಅಂಗಡಿಗಳಲ್ಲಿ cashless payment system ಅಳವಡಿಸಿದೆ. ಆದರೆ ರಾಜ್ಯ ಸರ್ಕಾರದ ಕಂದಾಯ ಕಛೇರಿಗಳಲ್ಲಿ, ಜಿಲ್ಲಾ ಆಸ್ಪತ್ರೆಗಳಲ್ಲಿ, ಮುಜರಾಯಿಗೆ ಸೇರಿದ ಪ್ರಮುಖ ದೇವಸ್ಥಾನಗಳಲ್ಲಿ ಈ ವ್ಯವಸ್ಥೆ ಜಾರಿಗೆ ತಂದರೆ ಒಳ್ಳೆಯದಾಗಬಹುದು. ದೇವಸ್ಥಾನದಲ್ಲಿ ಯಾರಾದರೂ ದುಡ್ಡು ಕೊಡಬೇಕಾದರೆ ಆ ವ್ಯವಸ್ಥೆಯನ್ನು ಜಾರಿಗೆ ತರುವುದು ಒಳ್ಳೆಯದು. ಅನೇಕ ಕಛೇರಿಗಳಲ್ಲಿ ಈ ವ್ಯವಸ್ಥೆ ಇಲ್ಲ. ನಾನು ಮೊನ್ನೆಯ ದಿವಸ ದೆಹಲಿಗೆ ಹೋಗಿದ್ದೆ. ದೆಹಲಿಯಲ್ಲಿ ಬಿಲ್ಲು ಕೊಟ್ಟರು. ನನ್ನ ಹತ್ತಿರ ದುಡ್ಡು ಇಲ್ಲ. ಕಾರ್ಡ್ ಗೀಚುತ್ತೇನೆ ಎಂದು ಹೇಳಿದರೆ, ಅವರು ಚೆಕ್ ಕೊಡಿ ಎಂದರು. ನಾನು ಚೆಕ್ ಕೊಟ್ಟು ಬಂದೆ. ನನಗೆ ಇನ್ನೇನು ಮಾಡುವುದಕ್ಕಾಗಲಿಲ್ಲ. ಜಲಾನಯನ ಪ್ರದೇಶದಲ್ಲಿ ಐವತ್ತೆಂಟು ಸಾವಿರದ ಐನೂರ ಎಂಭತ್ತಾರು ಎಕರೆಗಳು ಮಳೆ ಆಶ್ರಿತ ಪ್ರದೇಶದಲ್ಲಿ ಅರವತ್ತಮೂರು ಲಕ್ಷ ಎಕರೆ ಜಲಾನಯನ ಪ್ರದೇಶವನ್ನು ಅಭಿವೃದ್ಧಿಪಡಿಸಲಾಗಿದೆ. ಒಂಭೈನೂರ ಇಪ್ಪತ್ತೊಂದು ಕೆರೆಗಳನ್ನು ಭರ್ತಿ ಮಾಡುವ ಯೋಜನೆಗಳನ್ನು ಒಂದೇ ವರ್ಷದಲ್ಲಿ ಪೂರ್ತಿಗೊಳಿಸಿದ್ದೇವೆ ಎಂದು ಹೇಳಿದ್ದೀರಿ. ಆದರೆ ಇದ್ಯಾವುದು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾಣಿಸುತ್ತಿಲ್ಲ. ಐವತ್ತೆಂಟು ಸಾವಿರದ ಐನೂರ ಎಂಭತ್ತಾರು ಎಕರೆಗಳು ಜಲಾನಯನ ಪ್ರದೇಶದಲ್ಲಿರುವಂಥದ್ದು, ಅರವತ್ತಮೂರು ಲಕ್ಷ ಎಕರೆ ಜಲಾನಯನ ಪ್ರದೇಶವನ್ನು ಅಭಿವೃದ್ಧಿಪಡಿಸಿದ್ದೇವೆಂದು ಹೇಳುತ್ತಾರೆ. ಒಂಭೈನೂರ ಇಪ್ಪತ್ತೊಂದು ಕೆರೆಗಳನ್ನು ಕಟ್ಟಿದ್ದೇವೆಂದು ಹೇಳುತ್ತಾರೆ ಮತ್ತು ಒಂದೇ ವರ್ಷದಲ್ಲಿ ಮಾಡಿದ್ದೇವೆಂದು ಭಾಷಣದಲ್ಲಿ ಹೇಳುತ್ತಾರೆ. ಎಲ್ಲಿ ಮಾಡಿದ್ದಾರೆ ಏನು ಎಂಬ ಮಾಹಿತಿಯನ್ನು ಕೊಟ್ಟರೆ ಒಳ್ಳೆಯದಾಗಬಹುದು. ಐ.ಟಿ/ಬಿ.ಟಿಯಲ್ಲಿ ಕೆಲಸ ಮಾಡುವಂತಹವರಿಗೆ ಕಾರ್ಮಿಕ ನೀತಿಯನ್ನು ಬದಲಾವಣೆ ಮಾಡಬೇಕು. ಐ.ಟಿ/ಬಿ.ಟಿಯಲ್ಲಿ ಕೆಲಸ ಮಾಡುವಂತಹವರು ಬೇರೆ ಇಲಾಖೆಗಳಲ್ಲಿ ಕೆಲಸ ಮಾಡುವ ರೀತಿಯಲ್ಲಿ ದೀರ್ಘವಾಗಿ ಕೆಲಸ ಮಾಡುವುದಕ್ಕಾಗುವುದಿಲ್ಲ. ಅವರು ಕಂಪ್ಯೂಟರ್ ಮುಂದೆ ಕುಳಿತುಕೊಂಡರೆ ಬೆನ್ನು ನೋವು ಬರುತ್ತದೆ. ಕಣ್ಣಿನ ದೃಷ್ಟಿಯನ್ನು ಕಳೆದುಕೊಳ್ಳುತ್ತಾರೆ. ನರ ಸೇದುಕೊಂಡು ಬಿಡುತ್ತದೆ. ಅವರು ಎಷ್ಟು ಗಂಟೆ ಕೆಲಸ ಮಾಡಬಹುದೆಂದು ನಮ್ಮ ಕಾರ್ಮಿಕ ಇಲಾಖೆಯಿಂದ ಹೊಸ ಯೋಜನೆಯನ್ನು ತರಬೇಕು. ನಾನು ನೋಡಿದ ಹಾಗೆ ಸುಮಾರು 15 ವರ್ಷಗಳಾದ ಮೇಲೆ ಅವರು ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ. ಅಂತಹ ಪರಿಸ್ಥಿತಿ ಬರಬಹುದು. Their period of working is only 15 to 20 years ಅಷ್ಟೆ. ಅವರು ಕೆಲಸ ಮಾಡುವುದಕ್ಕಾಗುವುದಿಲ್ಲ. ವಿಶೇಷವಾದ ಕಾರ್ಮಿಕ ನೀತಿಯನ್ನು ತೆಗೆದುಕೊಂಡು ಬಂದರೆ ಬಹಳ ಒಳ್ಳೆಯದಾಗುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಬಹಳ ಪ್ರಮುಖವಾಗಿ ಸರ್ಕಾರವು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಕ್ರೀಡೆಗಳಲ್ಲಿ ಗೆದ್ದು ಬಂದ ಪಟುಗಳಿಗೆ ಸರ್ಕಾರದಿಂದ ಹಣ ಕೊಡುತ್ತೇವೆಂದು ಹೇಳಿದರು. 2014 ರಿಂದ 14.5 ಕೋಟಿ ರೂಪಾಯಿ ಮೊತ್ತ ಬಾಕಿ ಇದೆ.

**ಶ್ರೀ ಕೆ.ಗೋವಿಂದರಾಜ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಬಿಡುಗಡೆ ಮಾಡಿದ್ದೇವೆ, ಮುಂದಿನ ತಿಂಗಳು ಬಿಡುಗಡೆ . . .

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೆ, ಬಿಡುಗಡೆಯಾದರೆ ಏನು ಪ್ರಯೋಜನ. ಬ್ಯಾಂಕ್‌ನಲ್ಲಿ ದುಡ್ಡು ಇದ್ದರೆ ನನ್ನ ಕೈಗೆ ಬಂದಿದೆಯೇ, ಚೆಕ್ ಕೊಟ್ಟರೆ ನನ್ನ ಕೈಗೆ ದುಡ್ಡು, ಅವನು ಟೋಕನ್–16 ಎಂದು ಕರೆಯಬೇಕು. ಅವನು ಕರೆದರೆ ದುಡ್ಡು, ಇಲ್ಲ ಎಂದರೆ ಇಲ್ಲ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೆ, Knowing is not doing. Doing is doing ಅಲ್ಲವೇ? ಅಲ್ಲಿ ಗೊತ್ತಿದೆ ಎಂದರೆ ಏನು ಪ್ರಯೋಜನ?

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೆ, 14.5 ಕೋಟಿ ರೂಪಾಯಿಗಳು ಕಡಿಮೆ ಮೊತ್ತವಲ್ಲ.

**ಶ್ರೀ ಕೆ. ಗೋವಿಂದರಾಜ್:–** ಮಾನ್ಯ ಸಭಾಪತಿಯವರೆ, ಬಿಡುಗಡೆಯಾಗಿದೆ. ಮುಂದಿನ ತಿಂಗಳು ಅದರ ಸಮಾರಂಭವಿದೆ.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೆ, ನೀವು ಆ ಕ್ಷೇತ್ರದಲ್ಲಿರುವವರು ಅದಕ್ಕಾಗಿ ನೀವು ಹೇಳುತ್ತೀರಿ.

**ಶ್ರೀ ಕೆ. ಗೋವಿಂದರಾಜ್:–** ಮಾನ್ಯ ಸಭಾಪತಿಯವರೆ, ಅದಕ್ಕೆ ಸ್ಪಷ್ಟವಾಗಿ ತಿಳಿದುಕೊಂಡು ಹೇಳುತ್ತಿದ್ದೇನೆ.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೆ, ಅನೇಕ ಪ್ರಮುಖ ವಿಚಾರಗಳ ಬಗ್ಗೆ ಸನ್ಮಾನ್ಯ ರಾಜ್ಯಪಾಲರು ಏನು ಹೇಳಿಲ್ಲ. ಸುಮ್ಮನೆ ಲೋಕರೂಢಿಯಾಗಿ ಭಾಷಣ ಮಾಡಬೇಕು. ಮಾಡಿ ಹೋಗಿದ್ದಾರೆ. ಆದರೂ ಒಂದು ವಿಚಾರವನ್ನು ಹೇಳುತ್ತೇನೆ. There is a commitment from the Government. I do not deny it. ಶ್ರೀ ಸಿದ್ದರಾಮಯ್ಯನವರಾಗಬಹುದು. ಇಲ್ಲಿ ಕುಳಿತುಕೊಂಡತಂಹ ಶ್ರೀ ಆಂಜನೇಯರವರಾಗಬಹುದು. ಅವರಿಬ್ಬರ ವಿಚಾರದಲ್ಲಿ commitment ಇದೆ.ಅವರು ಮಾಡಿದ್ದಾರೆ. ಲೋಕೋಪಯೋಗಿ ಇಲಾಖೆಯೊಳಗೆಮೊನ್ನೆಯ ದಿವಸ ನಮ್ಮ ನಾಯಕರು ಶ್ರೀ ಈಶ್ವರಪ್ಪನವರು ಚರ್ಚೆ ಮಾಡಿದರು. ಶ್ರೀ ಬಿ.ಜೆ.ಪುಟ್ಟಸ್ವಾಮಿಯವರಿಗೆ ಉತ್ತರ ಕೊಡುವಂತಹ ಸಂದರ್ಭದಲ್ಲಿ ಅವರು ಹೇಳಿದ್ದಾರೆ. ಜಲಸಂಪನ್ಮೂಲ ಇಲಾಖೆಗೆ 2013–14ನೇ ಸಾಲಿನಲ್ಲಿ ಬಿಡುಗಡೆಯಾದ ಹಣ 6934.62 ಕೋಟಿ ರೂಪಾಯಿಗಳು, 2014–15ನೇ ಸಾಲಿನಲ್ಲಿ ಬಿಡುಗಡೆಯಾದ ಹಣ 9383.55 ಕೋಟಿ ರೂಪಾಯಿಗಳು, 2015–16ನೇ ಸಾಲಿನಲ್ಲಿ 9050.02 ಕೋಟಿ ರೂಪಾಯಿಗಳು ಬಿಡುಗಡೆಯಾಗಿದೆ. ಒಟ್ಟಾರೆಯಾಗಿ ಮೂರು ವರ್ಷಗಳಿಂದ ನೀಡಲಾದ ಅನುದಾನ 37097.17 ಕೋಟಿ ರೂಪಾಯಿ ವೆಚ್ಚವಾಗಿದೆ. ನೀರಾವರಿ ಇಲಾಖೆಗೆ ಕಳೆದ ಮೂರು ವರ್ಷಗಳಲ್ಲಿ ನೀಡಲಾದ ಅನುದಾನ37097.17 ಕೋಟಿ ರೂಪಾಯಿ. ಬಿಡುಗಡೆಯಾದ ಹಣ 34451.00 ಕೋಟಿ ರೂಪಾಯಿ. ಮೂರು ವರ್ಷಗಳಲ್ಲಿ ಖರ್ಚು ಮಾಡಿರುವ ಹಣ 21714.00 ಕೋಟಿ ರೂಪಾಯಿ. ಆದರೆ ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೆ 20000.00 ಕೋಟಿ ರೂಪಾಯಿಮೊತ್ತವನ್ನು ಖರ್ಚೇ ಮಾಡಿಲ್ಲ. ಮುಂಬಯಿನಲ್ಲಿ ಕೆಲಸಕ್ಕೆ ಹೋಗುವವರು ಮನೆ ಬೆಳಗ್ಗೆ 5.00 ಗಂಟೆಗೆ ಬಿಟ್ಟರೆ ರಾತ್ರಿ 11–00 ಗಂಟೆಗೆ ಬರುತ್ತಾರೆ. ರೈಲಿನಲ್ಲಿ ಹೋಗಿ ಬರುತ್ತಾರೆ. ಮನೆಯಲ್ಲಿರುವ ಮಗು ರಜೆಯ ದಿನ ಅಪ್ಪನಿಗೆ ನನಗೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

geometry box ತಂದು ಕೊಡು ಎಂದು ಹೇಳುತ್ತಾನೆ. Geometry box ತರುತ್ತೇನೆ ಎಂದು ಹೇಳುತ್ತಾನೆ. ಆ ಮಗು ಬೆಳಗ್ಗೆ ಏಳುವಷ್ಟರಲ್ಲಿ ಕೆಲಸಕ್ಕೆ ಹೋಗಿರುತ್ತಾನೆ. ಆ ಮಗು ಮಲಗಿದ ಮೇಲೆ ಮನೆಗೆ ಬರುತ್ತಾನೆ. ಅವನು ಜೇಬಿನಲ್ಲಿ ಕೈ ಇಡುತ್ತಾನೆ. ದುಡ್ಡು ಇರುವುದಿಲ್ಲ. ತರುತ್ತೇನೆ, ತರುತ್ತೇನೆ ಎಂದು ಹೇಳುತ್ತಾನೆ. ಮಾಡುತ್ತೇನೆ, ಮಾಡುತ್ತೇನೆ ಎಂದು ಹೇಳುತ್ತೇವೆ ಮಾಡುವುದಿಲ್ಲ. ದುಡ್ಡು ಇಟ್ಟಿದ್ದೇವೆ ಇಟ್ಟಿದ್ದೇವೆ ಎಂದು ಹೇಳುತ್ತಾರೆ ಇಟ್ಟಿರುವುದಿಲ್ಲ. ಬ್ಯಾಂಕಿನಲ್ಲಿ ದುಡ್ಡು ಇರಬಹುದು. ಮೊನ್ನೆಯ ದಿವಸ ನಿಮ್ಮ ಇಲಾಖೆಯವರು ಎಲ್ಲ ನೋಡಿದರು. ಅನಧಿಕೃತವಾಗಿ ಬ್ಯಾಂಕುಗಳಲ್ಲಿ ಹಣವಿಟ್ಟು, ಅದರ ಮೇಲೆ ಕಮಿಷನ್ ತೆಗೆದುಕೊಂಡ ಅಧಿಕಾರಿಗಳು ಇದ್ದಾರೆ.

**107/09-02-2017/6-40/bkp-vk**

**ಶ್ರೀ ರಾಮಚಂದ್ರಗೌಡ (ಮುಂದು):**

ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಈ ಒಂದು ಕೆಲಸ ನಡೆಯಿತು. ಅದು ಒಂದೇ ಇಲಾಖೆ ಅಲ್ಲ. ಎಲ್ಲಾ ಇಲಾಖೆಯಲ್ಲಿ ನಡೆಯಿತು. ನಾನು ಹಿಂದುಳಿದ ವರ್ಗಗಳ ಕಲ್ಯಾಣ ಸಮಿತಿಯ ಸದಸ್ಯನಾಗಿದ್ದ ಸಂದರ್ಭದಲ್ಲಿ ಹಾಸ್ಟೆಲ್‌ಗಳಿಗೆ ಭೇಟಿ ನೀಡಿದ್ದೇನೆ. ದನದ ಕೊಟ್ಟಿಗೆಗಳು ಏನಿವೆ, ಅಂತಹ ಕೊಟ್ಟಿಗೆಗಳಲ್ಲಿ ಹಾಸ್ಟೆಲ್‌ಗಳನ್ನು ನಡೆಸುತ್ತಿದ್ದಾರೆ. ಅದಕ್ಕೂ ಬಾಡಿಗೆಯನ್ನು ಕೊಟ್ಟು ನಡೆಸುತ್ತಿದ್ದಾರೆ. ಬರ್ಹೀದೆಸೆಗೆ ಹೋಗಲಿಕ್ಕೆ ಜಾಗವಿಲ್ಲ. ಮತ್ತೆ ನಮ್ಮ ಸಮಿತಿ ವತಿಯಿಂದ ಎಲ್ಲಾ ಜಿಲ್ಲೆಗಳಿಗೆ ಕಾಗದ ಬರೆದಿದ್ದೇವೆ. ಸರ್ಕಾರ ಹೊಸದಾಗಿ ಹಾಸ್ಟೆಲ್‌ಗಳನ್ನು ಕಟ್ಟಬೇಕಾಗಿದೆ. ದಯಮಾಡಿ, ನಿಮ್ಮ ಜಿಲ್ಲೆಯಲ್ಲಿ, ನಿಮ್ಮ ತಾಲ್ಲೂಕಿನಲ್ಲಿ ಯಾವುದಾದರು ಸರ್ಕಾರದ ಜಮೀನು ಇದ್ದರೆ ಕೊಡಿ ಎಂದು ಹೇಳಿದರೆ ಎಲ್ಲಾ ತಹಶೀಲ್ದಾರ್‌ಗಳು, ಜಿಲ್ಲಾಧಿಕಾರಿಗಳು ಸರ್ಕಾರಿ ಜಾಗವಿಲ್ಲವೆಂದು ಕಾಗದ ಬರೆಯುತ್ತಾರೆ. ಅವರಿಗೆ ಕಮಿಟ್‌ಮೆಂಟೇ ಇಲ್ಲ. ಹಾಸ್ಟೆಲ್‌ಗಳನ್ನು ಕಟ್ಟಬೇಕು, ಮಕ್ಕಳಿಗೆ ಓದಲಿಕ್ಕೆ ಜಾಗ ಮಾಡಬೇಕು. ಅದಕ್ಕೆ ಅವರು ಏನು ಮಾಡುತ್ತಾರೆಂದರೆ ಖಾಸಗಿ ಜಾಗವನ್ನು ಹುಡುಕುತ್ತಾರೆ. ಒಂದಕ್ಕೆ 10 ರಷ್ಟು, 15 ರಷ್ಟು ದುಡ್ಡು ಕೊಟ್ಟು ಖಾಸಗಿ ಜಾಗದಲ್ಲಿ ಹಾಸ್ಟೆಲ್‌ಗಳನ್ನು ಸರ್ಕಾರ ನಡೆಸಲಿಕ್ಕೆ ಆಗುತ್ತದೆಯೇ? ಯಾರಾದರೂ ಖಾಸಗಿಯವರು ಕಾಲೇಜು ನಡೆಸುವಂತಹವರು ಅಥವಾ ಮಠ ಮಾನ್ಯದವರನ್ನು ಕೇಳಿದರೆ 10 ಎಕರೆ, 20 ಎಕರೆ, 25 ಎಕರೆ ಈ ರೀತಿಯಲ್ಲಿ ನೂರಾರು ಎಕರೆ ಜಮೀನನ್ನು ಕೊಟ್ಟು ಬಿಡುತ್ತಾರೆ. ಸರ್ಕಾರ ನಡೆಸುವಂತಹ ಹಾಸ್ಟೆಲ್‌ಗಳನ್ನು ಕಟ್ಟಲಿಕ್ಕೆ ಜಾಗ ಕೊಡಿ ಎಂದು ಕೇಳಿದರೆ ಜಿಲ್ಲಾಧಿಕಾರಿಗಳು,

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತಹಶೀಲ್ದಾರ್‌ರವರು ಸರ್ಕಾರಿ ಜಾಗವಿಲ್ಲವೆಂದು ಹೇಳುತ್ತಾರೆ. ಅವರಿಗೆ ಬೇಕಾದವರು ಅರ್ಜಿಯನ್ನು ಹಾಕಿದರೆ ಜಮೀನನ್ನು ಕೊಡುತ್ತಾರೆ. ಈ ಪರಿಸ್ಥಿತಿಯನ್ನು ತಾವು ಗಮನಿಸಿದ್ದೀರಾ. ನಾವು ಇದನ್ನು ಕಂಡು ಹಿಡಿದಿದ್ದೇವೆ. I don't want to mention it. ಆದರೆ, ಇದು ನಡೆಯುತ್ತಿದೆ. ಸರ್ಕಾರಕ್ಕೆ ಭೂಮಿ ಬೇಕೆಂದರೆ ಸಿಗುವುದಿಲ್ಲ. ಬೇರೆ ಯಾರೋ ಖಾಸಗಿಯವರಿಗೆ ಬೇಕೆಂದರೆ ಜಾಗ ಸಿಕ್ಕುತ್ತದೆ. ಯಾವರೀತಿಯಲ್ಲಿ ಸರ್ಕಾರ ಇದೆ? ಸುಮಾರು ಎರಡು ವರ್ಷಗಳ ಹಿಂದೆ ಆ ಸಮಿತಿಯಲ್ಲಿ ನಾನು ಕೆಲಸ ಮಾಡುತ್ತಿದ್ದೆ. ಸುಮಾರು 7–8 ಜಿಲ್ಲೆಗಳಿಗೆ ನಾನು ಪ್ರವಾಸ ಮಾಡಿದ್ದೇನೆ. ಅವರುಗಳನ್ನು ನಾವು ಕರೆದು ಚರ್ಚೆ ಮಾಡಿದ್ದೇವೆ. ಆಗ ಅವರು ಹಾಸ್ಟೆಲ್ ಕಟ್ಟಲಿಕ್ಕೆ, ಸ್ಕೂಲ್ ಕಟ್ಟಲಿಕ್ಕೆ ಜಾಗವಿಲ್ಲವೆಂದು ಹೇಳಿದರು. ನಮ್ಮ ರೆವಿನ್ಯೂ ಇಲಾಖೆ ಈ ನಿಟ್ಟಿನಲ್ಲಿ ಸರಿಯಾಗಿ ಕೆಲಸ ಮಾಡಬೇಕಾಗಿದೆ. ಇಲ್ಲದಿದ್ದರೆ ಕಷ್ಟವಾಗುತ್ತದೆ.

ಇತ್ತೀಚೆಗೆ ಉಪನ್ಯಾಸಕರುಗಳು ಮುಷ್ಕರ ಮಾಡುತ್ತಿದ್ದಾರೆ. ನಿನ್ನೆ ನಾವು ಅಲ್ಲಿಗೆ ಹೋಗಿದ್ದೆವು. ಅವರು ಅಮರಣ ಉಪವಾಸ ಮಾಡುತ್ತಿದ್ದಾರೆ. ನಾವು ಅವರಿಗೆ ವಿನಂತಿ ಮಾಡಿದೆವು. ದಯವಿಟ್ಟು ಅಮರಣ ಉಪವಾಸವನ್ನು ನೀವು ಮಾಡಬೇಡಿ, batch wise batch ಮಾಡಿ ಎಂದವರಿಗೆ ನಾವು ಹೇಳಿದೆವು. ಏಕೆಂದರೆ, ನಿಮ್ಮ ಜೀವನ ಬಹಳ ಪ್ರಮುಖವಾದುದು. ನಿಮ್ಮಿಂದ ಮಕ್ಕಳು ಅನೇಕ ವಿಚಾರಗಳನ್ನು ಕಲಿಯಬೇಕು. We are not afford to lose you. ನಿಮ್ಮನ್ನು ನಾವು ಕಳೆದುಕೊಳ್ಳುವುದಕ್ಕೆ ತಯಾರಿಲ್ಲ. ಎನ್ನುವಂತಹ ಮಾತನ್ನು ನಾವು ಹೇಳಿ ಬಂದಿದ್ದೇವೆ. ಬಹುಶ: ಶ್ರೀಯುತ ಹೊರಟ್ಟಿಯವರು ಅಲ್ಲಿಗೆ ಇವತ್ತು ಹೋಗಿ ಬಂದಿರಬಹುದು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಹೌದು ನಾನು ಅಲ್ಲಿಗೆ ಇವತ್ತು ಹೋಗಿ ಬಂದಿದ್ದೇನೆ.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೇ, ಅವರು ಕೆಲವು ಬೇಡಿಕೆಗಳನ್ನಿಟ್ಟಿದ್ದಾರೆ. ಕಾಯಂ ಉಪನ್ಯಾಸಕರ ನಿಯೋಜನೆ, ವರ್ಗಾವಣೆ, ಹಾಗೂ ಹೊಸದಾಗಿ ನೇಮಕಾತಿಯಾಗಿ ಬಂದಂತಹ ಸಂದರ್ಭದಲ್ಲಿ ಅತಿಥಿ ಉಪನ್ಯಾಸಕರಲ್ಲಿ ವಯೋಮಿತಿ ಮತ್ತು ಸೇವಾ ಹಿರಿತನವನ್ನು ಪರಿಗಣಿಸಿ, ಅವರನ್ನು ಸೇವೆಯಲ್ಲಿ ಮುಂದುವರಿಸಲು ಸ್ಪಷ್ಟ ಆದೇಶ ಹೊರಡಿಸಬೇಕು. ಈಗ ಹೊಸದಾಗಿ ಯಾರನ್ನಾದರೂ ತೆಗೆದುಕೊಳ್ಳುವಾಗ ಇವರನ್ನು ತೆಗೆದುಕೊಳ್ಳಿ. ಇಷ್ಟು ವರ್ಷಗಳಿಂದ ಇವರು ಕೆಲಸ ಮಾಡಿಕೊಂಡು ಬಂದಿದ್ದಾರೆ, ಸಂಬಳ 9,000 ರೂಪಾಯಿಗಳನ್ನು ಕೊಡುತ್ತಿದ್ದೀರಿ. ಇನ್ನು ಕೆಲವರಿಗೆ 15,100 ರೂಪಾಯಿಗಳನ್ನು ಕೊಡುತ್ತೀರಿ, ಅವರನ್ನು ಕಾಯಂ ಆಗಿ ಕೆಲಸ

ತೆಗೆದುಕೊಂಡರೆ ಅವರಿಗೆ 30–40 ಸಾವಿರ ರೂಪಾಯಿಗಳ ಸಂಬಳ ಕೊಡಬಹುದು. ಅವರೂ ಬದುಕುತ್ತಾರೆ, ಅವರ ಹೆಂಡತಿ–ಮಕ್ಕಳು ಬದುಕುತ್ತಾರೆ. PhD, NET, SLET ಪರೀಕ್ಷೆಗಳಿಗೆ ಸಮನಾಗಿ M.Phil ಪದವಿಯನ್ನು ಪರಿಗಣಿಸಿ, ಸಮಾನ ವೇತನವನ್ನು ನೀಡಬೇಕು. ದೈಹಿಕ ಶಿಕ್ಷಕರುಗಳಿಗೆ ಅದೇ ರೀತಿಯ ವ್ಯವಸ್ಥೆಯನ್ನು ಮಾಡಬೇಕು. ಸುಪ್ರೀಂ ಕೋರ್ಟ್ ಆದೇಶದಂತೆ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು. ಇಲ್ಲಿ ಶಿಕ್ಷಕರ ವಿಚಾರದಲ್ಲಿ ಮಾತ್ರ ಪರಿಗಣಿಸಿಲ್ಲ. ಬೇರೆ ಎಲ್ಲಾ ಕ್ಷೇತ್ರಗಳಲ್ಲೂ ಮಾಡುತ್ತಿದ್ದೀರಿ. ಶಿಕ್ಷಕರ ವಿಚಾರದಲ್ಲೂ ಸಹ ಈ ವಿಚಾರವನ್ನು ಗಮನಿಸಬೇಕಾಗುತ್ತದೆ. ದೆಹಲಿ, ಹರಿಯಾಣ, ಕೇರಳ, ತೆಲಾಂಗಣ ಮತ್ತು ಆಂದ್ರಪ್ರದೇಶಗಳ ಮಾದರಿಯಲ್ಲಿ ಮಾಸಿಕ ಕನಿಷ್ಠ 25,000 ರೂಪಾಯಿಗಳ ವೇತನವನ್ನು ಪ್ರತಿ ತಿಂಗಳು ಅತಿಥಿ ಶಿಕ್ಷಕರುಗಳಿಗೆ ನೀಡಬೇಕು. ಈಗ ಏನು 9,000, 15,100 ರೂಪಾಯಿಗಳ ವೇತನವನ್ನು ಕೊಡುತ್ತಿದ್ದೀರಿ, ಅದನ್ನು ಹೆಚ್ಚು ಮಾಡಬೇಕೆಂದು ಏನು ಬೇಡಿಕೆ ಇಟ್ಟಿದ್ದಾರೆ, ಅದಕ್ಕೆ ಅವರಿಗೆ 25,000 ರೂಪಾಯಿಗಳನ್ನು ಕೊಡಬೇಕೆಂದು ಅವರ ಪರವಾಗಿ ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ. ನಮ್ಮ ಶಿಕ್ಷಣ ಇಲಾಖೆಯ ಮಂತ್ರಿಗಳು ಅಲ್ಲಿಗೆ ಹೋಗಿ ಅವರನ್ನು ಭೇಟಿ ಮಾಡಿದರೆ ಒಳ್ಳೆಯದಾಗುತ್ತದೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಅವರು ಅಲ್ಲಿಗೆ ಹೋಗಿ ಬಂದಿದ್ದಾರೆ.

**ಶ್ರೀ ರಾಮಚಂದ್ರಗೌಡ:–** ಹೌದು, ಅವರು ಅಲ್ಲಿಗೆ ಹೋಗುತ್ತಾರೆ, ಅವರ ಮೇಲೆ ನಮಗೆ ನಂಬಿಕೆ ಇದೆ. ಹಿರಿತನದ, ವಯೋಮಿತಿ ಆಧಾರದ ಮೇರೆಗೆ ಅವರೆಲ್ಲರನ್ನೂ ಹಂತ–ಹಂತವಾಗಿ ಸರ್ಕಾರದ ಕೆಲಸಕ್ಕೆ ತೆಗೆದುಕೊಳ್ಳುವಂತಹ ವ್ಯವಸ್ಥೆಯನ್ನು ಮಾಡಬೇಕು. ಇದಕ್ಕೆ ಬೇಕಾದರೆ ಒಂದು ಕಮಿಟಿಯನ್ನು ಮಾಡಿ. ಸದನ ಸಮಿತಿಯನ್ನು ಮಾಡಿ. ಎರಡು ಸದನಗಳ ಸದನ ಸಮಿತಿಯನ್ನು ಮಾಡುವುದು ಅವಶ್ಯಕತೆ ಇಲ್ಲವೆಂದೆನಿಸುತ್ತದೆ. ಬೇಕಾದರೆ ಮಾಡಬಹುದು ಅಥವಾ ನಮ್ಮ ಸದನದಲ್ಲಿ ಒಂದು ಸಮಿತಿಯನ್ನು ಮಾಡಿ, ಈ ಸಮಸ್ಯೆಯನ್ನು ಹೇಗೆ ಬಗೆಹರಿಸಬಹುದು ಎನ್ನುವಂತಹ ದಿಕ್ಕಿನಲ್ಲಿ ಮನ್ನಣೆಬೇಕೆನ್ನುವ ಮಾತನ್ನು ಹೇಳಿ ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಂತಹ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಉಪ ಸಭಾಪತಿಯವರು:–** ಶ್ರೀಯುತ ಬಸವರಾಜ ಹೊರಟ್ಟಿಯವರು ಮಾತನಾಡಬೇಕು.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಯಾರಿಗೆ ನಾವುಗಳು ಮಾತನಾಡಬೇಕು? ಈಗ ಸದನದಲ್ಲಿ ಒಬ್ಬರೇ ಮಂತ್ರಿಗಳಿದ್ದಾರೆ, ಅಧಿಕಾರಿಗಳಿಲ್ಲ. ಪತ್ರಕರ್ತರು ಹೋಗಿದ್ದಾರೆ. ನಿಮಗೊಬ್ಬರಿಗೆ ಮಾತನಾಡಬೇಕೆಂದರೆ, ಅವರು ಮಾತನಾಡುತ್ತಾರೆ. ರಾಜ್ಯಪಾಲರ ಬಗ್ಗೆ ಈ ಸದನವನ್ನು ಏತಕ್ಕೆ ನಡೆಸಬೇಕು, ಚಟಕ್ಕೋಸ್ಕರ ಮಾತನಾಡಬೇಕೇ?

**(ಗೊಂದಲ)**

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ:–** ಯಾವ ಪುರಷಾರ್ಥಕ್ಕಾಗಿ ಅಧಿವೇಶನವನ್ನು ನಡೆಸುತ್ತಾರೆನ್ನುವುದನ್ನು ಎಲ್ಲಾ ಮಾಧ್ಯಮಗಳು ಉಲ್ಲೇಖ ಮಾಡಿವೆ. ದಯವಿಟ್ಟು ಸದನವನ್ನು ಕ್ಲೋಸ್ ಮಾಡುವುದಿದ್ದರೆ ಮಾಡಿಬಿಡಿ. Let us make a resolution and close the session.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ನಾವು ತಮ್ಮ ಪೀಠಕ್ಕೆ ಗೌರವ ಕೊಡುತ್ತೇವೆ. ಅವರಿಗೆ ನೀವು ವಾರನ್ ಮಾಡಿ. ಅಧಿವೇಶನವನ್ನು ಏತಕ್ಕೆ ಕರೆಯಬೇಕು, ರಾಜ್ಯಪಾಲರ ಹತ್ತಿರ ಏತಕ್ಕೆ ಭಾಷಣ ಮಾಡಿಸಬೇಕು. ಕಟಾಚಾರಕ್ಕೆ ಅಧಿವೇಶನ, ಕಟಾಚಾರಕ್ಕೆ ರಾಜ್ಯಪಾಲರ ಭಾಷಣ, ನಾವು ಉದ್ಯೋಗವಿಲ್ಲದೆ, ಇಲ್ಲಿ ಬಂದು ಕುಳಿತುಕೊಳ್ಳುತ್ತೇವೆಯೇ?

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ:–**ಮಾನ್ಯ ಸಭಾಪತಿಯವರೆ, ಇಲ್ಲಿ ನಾವು ಯಾರಿಗೋಸ್ಕರ ಭಾಷಣ ಮಾಡಬೇಕೆಂದು ಹೇಳಿ. ಯಾವ ಇಲಾಖೆ ಬಗ್ಗೆ ಮಾತನಾಡಬೇಕು ಮತ್ತು ಯಾರನ್ನು ಉದ್ದೇಶಿಸಿ ಭಾಷಣ ಮಾಡಬೇಕೆಂದು ಕೇಳಿ. ಇವತ್ತು ರಾಜ್ಯದ ಜನರಿಗೆ ತಪ್ಪು ಸಂದೇಶ ಹೋಗುತ್ತದೆ. ಮಾಧ್ಯಮದಲ್ಲಿ ಫೋಟೋ ಸಮೇತ ಹೇಗೆ ನಡೆಯುತ್ತಿದೆ ಎಂದು ಪತ್ರಿಕೆಗಳಲ್ಲಿ ಉಲ್ಲೇಖ ಮಾಡಿದ್ದಾರೆ, ಆದರೂ ಸಹ ಈ ವಿಚಾರದಲ್ಲಿ ಇನ್ನೂ ಸುಧಾರಣೆಯಿಲ್ಲ. It is not required.

**(ಗೊಂದಲ)**

**ಉಪ ಸಭಾಪತಿಯವರು:–** ಎಲ್ಲರೂ ಕುಳಿತುಕೊಳ್ಳಿ. ಸದನವನ್ನು . .

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಒಂದೇ ಒಂದು ನಿಮಿಷ. ನಾನು ಅದಕ್ಕೋಸ್ಕರ ಹೇಳಿದೆ. ಸದನವನ್ನು ಮುಂದೂಡಿ, ಸರ್ಕಾರಕ್ಕೆ ಗೌರವವನ್ನು ಕೊಡುತ್ತೀರಿ, ನಾನು ಇಲ್ಲವೆಂದು ಹೇಳುವುದಿಲ್ಲ. ನಾವು ಸಹ ಸರ್ಕಾರಕ್ಕೆ ಗೌರವವನ್ನು ಕೊಡುತ್ತೇವೆ.

**ಸದನದಲ್ಲಿ ಕಡ್ಡಾಯವಾಗಿ ಉಪಸ್ಥಿತರಿದ್ದು ಉತ್ತರಿಸಬೇಕಾದ ಮಾನ್ಯ ಸಚಿವರುಗಳು**

1. ಶ್ರೀ ಆರ್.ವಿ.ದೇಶಪಾಂಡೆ
2. ಡಾ|| ಹೆಚ್.ಸಿ. ಮಹದೇವಪ್ಪ
3. ಶ್ರೀ ಡಿ.ಕೆ.ಶಿವಕುಮಾರ್
4. ಶ್ರೀ ಕೃಷ್ಣಬೈರೇಗೌಡ
5. ಶ್ರೀ ಎಸ್.ಎಸ್. ಮಲ್ಲಿಕಾರ್ಜುನ
6. ಶ್ರೀ ಜಾರಕಿಹೋಳಿ, ರಮೇಶ್ ಲಕ್ಷ್ಮಣ್‌ರಾವ್
7. ಶ್ರೀ ಬಸವರಾಜ ರಾಯರೆಡ್ಡಿ
8. ಶ್ರೀ ಎ. ಮಂಜು
9. ಶ್ರೀ ರುದ್ರಪ್ಪ ಮಾನಪ್ಪ ಲಂಬಾಣಿ
10. ಶ್ರೀ ಎಂ. ಕೃಷ್ಣಪ್ಪ
11. ಶ್ರೀ ಈಶ್ವರ ಬಿ. ಖಂಡ್ರೆ
12. ಶ್ರೀ ಪ್ರಮೋದ್ ಮಧ್ವರಾಜ್

ನೀವು ನಾಳೆಗೆ ಸದನವನ್ನು ಮುಂದೂಡಿ, ನಾನು ಬೇಡವೆಂದು ಹೇಳುವುದಿಲ್ಲ. ಮುಂದೂಡಲಿಕ್ಕೋಸ್ಕರ ನಾವು ನಿಮಗೆ ಹೇಳುತ್ತಿಲ್ಲ. ಅವರಿಗೆ ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕೆಂದು ಸೂಚನೆಯನ್ನು ನೀವು ಕೊಡಲಿಕ್ಕೆ ಆಗುತ್ತದೆಯೇ, ಈ ಪೀಠಕ್ಕೆ ಆ ಒಂದು ಶಕ್ತಿ ಇದೆ ಅಲ್ಲವೇ? ದಯವಿಟ್ಟು ಆ ಒಂದು ಕೆಲಸವನ್ನು ಮಾಡುತ್ತೀರೋ ಇಲ್ಲವೋ ಹೇಳಿ.

**ಉಪ ಸಭಾಪತಿಯವರು:-** ವಿರೋಧ ಪಕ್ಷದ ನಾಯಕರು ಕುಳಿತುಕೊಳ್ಳಬೇಕು. ಮಾನ್ಯ ಸಚಿವರು ಇಲ್ಲಿ ಗಮನಿಸಬೇಕು. ನಾಳೆ ಇದೇ ರೀತಿಯ ಪರಿಸ್ಥಿತಿ ಬಂದರೆ ಇದು ಸರ್ಕಾರಕ್ಕೆ ಗೌರವ ತರುವಂತಹ ವಿಚಾರವಲ್ಲ. ಈ ಸದನದ ಗೌರವವನ್ನು ಕಾಪಾಡುವಂತಹದ್ದು ಬಹಳ ಮುಖ್ಯ. ಎಲ್ಲರ ಪ್ರತಿನಿಧಿಯಾಗಿ ಸಚಿವರಾದ ತಾವು ಸದನದಲ್ಲಿದ್ದಿರಿ. ಅಧಿಕಾರಿಗಳೂ ಕೂಡ ಎಲ್ಲರೂ ಇಲ್ಲ. ಈ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂಪ್ರದಾಯವನ್ನು ದಯಮಾಡಿ ರದ್ದು ಮಾಡಬೇಕು. ನಾಳೆಯಿಂದ ಈ ರೀತಿ ಆಗದ ರೀತಿಯಲ್ಲಿ ನೋಡಿಕೊಳ್ಳಬೇಕು.

**ಶ್ರೀ ಎಂ. ಕೃಷ್ಣಪ್ಪ(ವಸತಿ ಸಚಿವರು):-** ಖಂಡಿತವಾಗಿಯೂ ಸಹ ನಾಳೆಯಿಂದ ಈ ರೀತಿ ಆಗದಂತೆ ನೋಡಿಕೊಳ್ಳುತ್ತೇವೆ. ಅದರೂ ಸಹ ವಿರೋಧ ಪಕ್ಷದ ನಾಯಕರಲ್ಲಿ ಒಂದು ಮನವಿ. ಅವರು ಯಾರ್‍ಯಾರು ಏನೇನು ಮಾತನಾಡಿದ್ದಾರೆ, ಅದೆಲ್ಲವನ್ನು ನಾನು ನೋಟ್ ಮಾಡಿಕೊಂಡಿದ್ದೇನೆ. ನಮ್ಮ ಶ್ರೀಯುತ ರಾಮಚಂದ್ರಗೌಡರವರು . . .

**(108) 09-02-2017 ಎಸ್‌ಪಿಆರ್/ಜಿಆರ್ 6.50**

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಸಚಿವರು ಬರೆದುಕೊಂಡಿರುವ ಬಗ್ಗೆ ನನ್ನ ಪ್ರಶ್ನೆ ಇಲ್ಲ. ನಾಳೆಯಿಂದ ನಾವೂ ಸಹ ಬರೆದುಕೊಂಡು ನಿಮಗೆ ಕೊಟ್ಟು ಬಿಡುತ್ತೇವೆ. ಅದನ್ನು ಸಚಿವರಿಗೆ ತಿಳಿಸಿ. ನಮ್ಮ ಸದನವನ್ನು ರದ್ದುಗೊಳಿಸಿ.

**(ಈ ಹಂತದಲ್ಲಿ ಸಭಾನಾಯಕರು ಸದನವನ್ನು ಪ್ರವೇಶಿಸಿದರು)**

**ಶ್ರೀ ಎಂ.ಕೃಷ್ಣಪ್ಪ (ವಸತಿ ಸಚಿವರು):-** ಮಾನ್ಯ ಸಭಾಪತಿಯವರೆ, ವಿರೋಧ ಪಕ್ಷದ ನಾಯಕರು ಹೇಳಿರುವ ಅಂಶಗಳಲ್ಲಿ ಸತ್ಯವಿದೆ. ನಮ್ಮ ಎಲ್ಲಾ ಸಚಿವರು ಸದನದಲ್ಲಿ ಇರಬೇಕಾಗಿತ್ತು. ಆದರೆ ಸರ್ಕಾರದ ಪರವಾಗಿ ನಾವು, ಸಭಾನಾಯಕರು ಸದನದಲ್ಲಿ ಉಪಸ್ಥಿತರಿದ್ದೇವೆ. ತಾವೂ ಏನೇ ಸೂಚಿಸಿದರೂ ನಾವು ಅದನ್ನು ಖಂಡಿತವಾಗಿಯೂ ಪಾಲಿಸುತ್ತೇವೆ. ಈ ಸಂಗತಿಯು ಮುಂದಿನ ದಿನಗಳಲ್ಲಿ ಪುನರಾವರ್ತನೆಗೊಳ್ಳದಿರುವಂತೆ ನಾವು ನೋಡಿಕೊಳ್ಳುತ್ತೇವೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಸದನದಲ್ಲಿ ಹಾಜರಿದ್ದ ಮಂತ್ರಿಗಳು ಬರೆದುಕೊಳ್ಳುವುದನ್ನು ನಾವು ಪ್ರಶಂಸೆ ಮಾಡುತ್ತೇವೆ. ಎಲ್ಲಾ ಮಂತ್ರಿಗಳು ಎಲ್ಲಿಗೆ ಹೋಗಿದ್ದಾರೆ? ವಿರೋಧ ಪಕ್ಷದ ನಾಯಕರು ಓದಿರುವ ಪಟ್ಟಿಯಲ್ಲಿನ ಮಂತ್ರಿಗಳು ಬೀಗರ ಮನೆಗೆ ಬರುವ ಹಾಗೆ ಬರುತ್ತಾರೆ, ಹೋಗುತ್ತಾರೆ. ಇದು ಸದನ. ಇದಕ್ಕೆ ಘನತೆ ಗೌರವ ಬೇಡವೇ? ಸಭಾನಾಯಕರು ಈಗಲೇ ಹೇಳಿರುವಂತೆ ಮಂತ್ರಿಗಳು ತಮಗೆ ಕೊಟ್ಟಿರುವ ಜವಾಬ್ದಾರಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿಭಾಯಿಸಬೇಕಲ್ಲವೇ? ಜನರಿಗೆ ಏನು ಉತ್ತರವನ್ನು ನಾವು ನೀಡಬೇಕು? ಈಗ ನಾವು ನೀವು ಮಾತನಾಡುತ್ತಿದ್ದೇವೆ. ಮಾಧ್ಯಮ ಸ್ನೇಹಿತರಿಗೆ ಸ್ವಲ್ಪ ಹೆದರುತ್ತೀರಿ. ಇಷ್ಟೆಲ್ಲಾ ತಯಾರಿ ಮಾಡಿಕೊಂಡು ಬಂದಿರುವ ನಾನು ಮಾತನಾಡಲು ತಯಾರಿದ್ದೇನೆ. ನೀವು ನನಗೆ ಮಾತನಾಡಲು ಹೇಳುತ್ತಿದ್ದೀರಿ. ನಾನು ಯಾರಿಗೆ ಏನು ಅಂತ ಮಾತನಾಡಲಿ? ಈ ಸಂಗತಿಗಳೆಲ್ಲಾ ಪತ್ರಿಕೆಯಲ್ಲಿ ಬರುತ್ತದೆ. ಸಭಾನಾಯಕರಾದ ತಾವು ಈ ಸದನದಲ್ಲಿರುತ್ತೀರಿ. ನಾವು ನೀವೆಲ್ಲಾ ಕುಳಿತು ಚರ್ಚೆ ಮಾಡಿರುವಂತೆ ಸದನದಲ್ಲಿ ಅಜೆಂಡಾ ಮುಗಿಯುವವರೆಗೆ ಎಲ್ಲರೂ ಉಪಸ್ಥಿತರಿರಬೇಕು. ಸಂಬಂಧಪಟ್ಟ ಮಂತ್ರಿಗಳು ಸದನದಲ್ಲಿ ಇರಲಿಲ್ಲವೆಂದರೆ ಹೇಗೆ? ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಸ್ವಲ್ಪ ಮಟ್ಟಿಗಾದರೂ ಹೊರಗಿನ ಜಗತ್ತಿಗೆ ಹೆದರಬೇಕು. ಜನರೆಲ್ಲಾ ನಮ್ಮ ಮೇಲೆ ವಿಶ್ವಾಸವನ್ನಿಟ್ಟಿದ್ದಾರೆ. ಆ ಜನರಿಗಾದರೂ ಹೆದರಿಕೊಂಡು ಮರ್ಯಾದೆಯಿಂದ ಸದನದಲ್ಲಿ ಕುಳಿತುಕೊಳ್ಳುವಂತೆ ಮಂತ್ರಿಗಳಿಗೆ ಹೇಳಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

**ಡಾ॥ ಜಿ.ಪರಮೇಶ್ವರ್ (ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ಈ ಸಂಗತಿಯನ್ನು ನಾನೂ ಕೂಡ ಒಪ್ಪಿಕೊಳ್ಳುತ್ತೇನೆ. ಸದನದಲ್ಲಿ ಮಂತ್ರಿಗಳು ಗೈರುಹಾಜರಾಗುವುದು ಒಳ್ಳೆಯ ಸಂಪ್ರದಾಯವಲ್ಲ. ಸಚಿವರು ಈ ಸದನದಲ್ಲಿ ವಿಷಯಗಳ ಬಗ್ಗೆ ಚರ್ಚೆಯಾಗುವಂತಹ ಸಂದರ್ಭದಲ್ಲಿ ಅದರಲ್ಲೂ ವಿಶೇಷವಾಗಿ ಅವರ ಇಲಾಖೆಗಳಿಗೆ ಸಂಬಂಧಪಟ್ಟ ವಿಷಯಗಳು ಚರ್ಚೆಯಾಗುವಂತಹ ಸಂದರ್ಭದಲ್ಲಿ ಹಾಜರಿರಬೇಕು. ಮಂತ್ರಿಗಳಿಗೂ ಸಹ ಸದನದಲ್ಲಿ ಕಡ್ಡಾಯವಾಗಿ ಹಾಜರಿರುವ ಬಗ್ಗೆ ರೋಸ್ಟರ್‌ಗಳನ್ನು ಹಾಕಲಾಗಿದ್ದು, ಇದನ್ನು ಅವರುಗಳಿಗೆ ತಿಳಿಸಲಾಗಿರುತ್ತದೆ. ಆದಕಾರಣ ಸಚಿವರುಗಳು ಸದನದಲ್ಲಿ ಹಾಜರಿರಲೇಬೇಕು. ನಾನು ನಿನ್ನೆಯ ದಿವಸ ಮಾನ್ಯ ಮುಖ್ಯಮಂತ್ರಿಗಳು ಹಾಗೂ ನಾನು ಇಬ್ಬರೂ ಸಹ ಇದೇ ವಿಷಯಕ್ಕೆ ಸಂಬಂಧಪಟ್ಟಂತೆ ನಮ್ಮ ಶಾಸಕಾಂಗ ಪಕ್ಷದ ಸಭೆಯಲ್ಲಿಯೂ ಸಹ ಮಂತ್ರಿಗಳಿಗೆ, ಶಾಸಕರಿಗೆ ಕಡ್ಡಾಯವಾಗಿ ಸೂಚನೆಗಳನ್ನು ಕೊಟ್ಟಿದ್ದೇವೆ. ಈಗ ನಾನು ಕೆಳಗಡೆ ಮನೆಯಿಂದ ಬಂದಿದ್ದೇನೆ. ಅಲ್ಲಿ Calling Attention matters ಇತ್ತು. ಅಲ್ಲಿ ಕೆಲವು ಸಚಿವರು ಹಾಜರಿದ್ದಾರೆ. ಮತ್ತೆ ಕೆಲವು ಸಚಿವರು ತಮ್ಮ ತಮ್ಮ ಸಭೆಗಳಿಗೆ ಹೋಗಿದ್ದಾರೆ. ಯಾವ ಶಾಸಕರೂ ಕೂಡ ಸದನ ನಡೆಯುವಂತಹ ಸಂದರ್ಭಗಳಲ್ಲಿ unless it is a briefing ಯಾವುದೇ ರೀತಿಯ ಸಭೆಗಳನ್ನು ಹಾಕಿಕೊಳ್ಳಬಾರದೆಂದು ನಾವು ಸೂಚನೆಗಳನ್ನು ಕೊಟ್ಟಿದ್ದೇವೆ. ಈ ರೀತಿ ಮುಂದಾಗದಂತೆ ನಾವು ನೋಡಿಕೊಳ್ಳುತ್ತೇವೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ಈಗ ನಾನು ಕೆಳಗಡೆ ಮನೆಗೆ ಹೋಗಿದ್ದೆನು. ಆ ಸದನದಲ್ಲಿಯೂ ಸಹ ನಾಲ್ಕು ಸಚಿವರು ಮಾತ್ರವೇ ಹಾಜರಿದ್ದು, ಇನ್ನುಳಿದವರು ಹಾಜರಿರಲಿಲ್ಲ.

**ಡಾ|| ಜಿ.ಪರಮೇಶ್ವರ್:-** ಮಾನ್ಯ ಸಭಾಪತಿಯವರೆ, ಅಲ್ಲಿಯೂ ಸಹ ಕೆಲವು ಸಚಿವರು ಹಾಜರಿದ್ದು, ಇನ್ನು ಕೆಲವರು ಹಾಜರಿಲ್ಲ. ನಾನು ಅವರುಗಳನ್ನು ಸಮರ್ಥನೆ ಮಾಡಿಕೊಳ್ಳುತ್ತಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ನಾನು ನಿಮ್ಮನ್ನು ಕೇಳುವುದಕ್ಕೆ ಬರುವುದಿಲ್ಲ. ಏಕೆಂದರೆ, ನೀವೇ ಈ ಸದನದಲ್ಲಿ ಸಚಿವರು ಹಾಜರಿರಬೇಕೆಂದು ಪಟ್ಟಿಯನ್ನು ಕೊಟ್ಟಿದ್ದೀರಿ. ಕೆಳಮನೆಯಲ್ಲಿ ಇರಬೇಕೆಂದು ಹೇಳಿಲ್ಲ. ಹೀಗಿದ್ದಾಗ ಸಚಿವರು ಅಲ್ಲಿಗೆ ಏಕೆ ಹೋಗುತ್ತಾರೆ?

**ಡಾ|| ಜಿ.ಪರಮೇಶ್ವರ್:-** ಮಾನ್ಯ ಸಭಾಪತಿಯವರೆ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಇಲ್ಲಿದ್ದರು. ಆದರೆ, ಅವರಿಗೆ ಅಲ್ಲಿ Calling Attention matter ಬಂತು. ನಾನು ಕೆಳಮನೆಯಲ್ಲಿದ್ದಾಗಲೇ ಅವರೂ ಸಹ ಅಲ್ಲಿಗೆ ಬಂದರು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ಆದರೆ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಹೆಸರು ಈ ಪಟ್ಟಿಯಲ್ಲಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಹೆಸರು ಈ ಪಟ್ಟಿಯಲ್ಲಿಲ್ಲ. ನೀವು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಹೋಗಬೇಡಿ. ನೀವು ಅವರನ್ನು ಡಿಫೆಂಡ್ ಮಾಡಿದರೆ, ಅವರುಗಳಿಗೆ ಬಹಳ ಖುಷಿಯಾಗುತ್ತದೆ. ಮಲಗಿಕೊಳ್ಳುವವರಿಗೆ, ತುಕುಡಿಸುವವರಿಗೆ ಹಾಸಿಗೆ ಹಾಸಿಕೊಟ್ಟ ಹಾಗೆ ಆಗುತ್ತದೆ.

**ಡಾ|| ಜಿ.ಪರಮೇಶ್ವರ್:-** ಮಾನ್ಯ ಸಭಾಪತಿಯವರೆ, ನಾನು ಸಮರ್ಥನೆ ಮಾಡಿಕೊಳ್ಳುತ್ತಿಲ್ಲ. ನಾನು ಒಪ್ಪಿಕೊಂಡಿದ್ದೇನೆ. ಮುಂದೆ ಈ ರೀತಿಯಾಗದಂತೆ ನಾನು ನೋಡಿಕೊಳ್ಳುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ಒಂದು ಸಂಗತಿಯನ್ನು ನಾನು ತಮಗೆ ಹೇಳಬಯಸುತ್ತೇನೆ. ಈ ಹಿಂದೆ ನಾನು ಕಾನೂನು ಮತ್ತು ಸಂಸದೀಯ ವ್ಯವಹಾರಗಳ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಂತ್ರಿಯಾಗಿದ್ದಾಗ ವಿಧಾನಸಭೆಯಲ್ಲಿ ಮಾನವ ಹಕ್ಕುಗಳಿಗೆ ಸಂಬಂಧಿತ ಒಂದು ವಿಧೇಯಕವು ಬಂದಿತ್ತು. ಆಗ ನಾನು ನಮ್ಮ ಕೆ.ಎಲ್.ಎ. ರವರ ಒಂದು ಕಾರ್ಯಕ್ರಮಕ್ಕೆ ಸಂಜೆ 6.30 ಗಂಟೆಗೆ ಬರುವುದಾಗಿ ಒಪ್ಪಿಕೊಂಡಿದ್ದೆ. ಆ ಸಂದರ್ಭದಲ್ಲಿ ನಾನು ಸಭಾಧ್ಯಕ್ಷರಾದ ಶ್ರೀಯುತ ಕೃಷ್ಣರವರಿಗೆ ವಿಷಯವನ್ನು ನಾಳೆಗೆ ತೆಗೆದುಕೊಳ್ಳಿ ಎಂದು ಬರೆದು ಕಳುಹಿಸಿದೆ. ಅದಕ್ಕೆ ಅವರು, ಮಂತ್ರಿಗಳಾಗಿ ನಿಮಗೆ ಸದನಗಳಿದ್ದಾಗ ಕಾರ್ಯಕ್ರಮಗಳನ್ನು ಒಪ್ಪಿಕೊಳ್ಳಬಾರದು ಎಂಬ ತಿಳುವಳಿಕೆ ಇಲ್ಲ ಎನ್ನುವುದಾದರೆ, ನೀವು ಏಕೆ ಮಂತ್ರಿಗಳಾದಿರಿ ಎಂದು ಬರೆದು ಕಳುಹಿಸಿದ್ದರು. ಹೀಗಾಗಿ ಸದನಗಳು ಮುಕ್ತಾಯವಾಗುವವರೆಗೆ ಮಂತ್ರಿಗಳು ಸದನದಲ್ಲಿರಬೇಕು ಎನ್ನುವುದು ಒಳ್ಳೆಯದು. ಸದನಗಳು ಮುಗಿದ ಮೇಲೆ ಕಾರ್ಯಕ್ರಮಗಳನ್ನು ಮಾಡಿಕೊಳ್ಳಲಿ. ಆದ್ದರಿಂದ ದಯಮಾಡಿ ತಾವು ನಾಳೆಯಿಂದಾದರೂ ಸಹ ಈ ಸಂಗತಿಗಳು ಪುನರಾವರ್ತನೆಗೊಳ್ಳದಿರುವಂತೆ ನೋಡಿಕೊಳ್ಳಿ. ನಾವುಗಳು ಮಾತನಾಡುವಾಗ ಮಂತ್ರಿಗಳು ಹಾಜರಿದ್ದರೆ ಟೀಕೆ ಮಾಡುವುದಕ್ಕೆ ಅವಕಾಶವಿರುತ್ತದೆ. ಇಲ್ಲದಿದ್ದರೆ ಸದನವು ಡಲ್ ಆಗಿರುತ್ತದೆ. ಏನೂ ಉಪಯೋಗವಾಗುವುದಿಲ್ಲ. ಆದ್ದರಿಂದ ತಾವು ದಯಮಾಡಿ ಸಸ್ಪೆಂಡ್ ಮಾಡಿಕೊಳ್ಳುವುದರ ಬದಲು ನಾಳೆಯಿಂದ ಕಡ್ಡಾಯವಾಗಿ ಸದನದಲ್ಲಿ ಹಾಜರಿರಬೇಕು ಎಂಬುದಾಗಿ ಹೇಳಿ.

**ಉಪ ಸಭಾಪತಿಯವರು:–** ಸಭಾನಾಯಕರೇ ಕೇವಲ ಮಂತ್ರಿಗಳು ಮಾತ್ರವಲ್ಲ ಇಲಾಖೆಯ ಅಧಿಕಾರಿಗಳೂ ಸಹ ಸದನಕ್ಕೆ ಬರುವುದಿಲ್ಲ ಎನ್ನುವುದಾದರೆ ಇದು ಬಹಳ ಕೆಟ್ಟ ಪರಿಸ್ಥಿತಿಯಾಗಿದೆ. ಆದ್ದರಿಂದ ದಯಮಾಡಿ ನಾಳೆಯಿಂದ ಹೀಗಾಗದಂತೆ ನೋಡಿಕೊಳ್ಳಿ.

**ಡಾ॥ ಜಿ.ಪರಮೇಶ್ವರ್:–** ಮಾನ್ಯ ಸಭಾಪತಿಯವರೆ, ನಾನು ಅದನ್ನು ಒಪ್ಪಿಕೊಳ್ಳುತ್ತೇನೆ.

**ಉಪ ಸಭಾಪತಿಯವರು:–** ಈಗ ಸಭೆಯು ಮುಕ್ತಾಯವಾಗಿ ನಾಳೆ ಬೆಳಿಗ್ಗೆ 11.00 ಗಂಟೆಗೆ ಸೇರುವುದು.

**(ಸದನವು ಸಂಜೆ 6 ಗಂಟೆ 55 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 10 ನೇ ಫೆಬ್ರವರಿ 2017 ರ ಶುಕ್ರವಾರದಂದು ಬೆಳಿಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಿತು)**

<><><>

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"